ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆತಿಥೇಯರಿಗೆ ಸೋಲು

ಅಹಮದಾಬಾದ್‌ನಲ್ಲಿ ದ.ಆಫ್ರಿಕಾ ವಿರುದ್ಧ ನಡೆದ 8ರ ಘಟ್ಟದ ಮೊದಲ ಪಂದ್ಯದಲ್ಲಿ ಭಾರತ 76 ರನ್‌ಗಳಿಂದ ಸೋಲು ಅನುಭವಿಸಿದ್ದು, ಸೆಮಿ ಪ್ರವೇಶಕ್ಕೆ ಇನ್ನುಳಿದ ಎರಡು ಪಂದ್ಯ ಗೆಲ್ಲುವುದು ಅನಿವಾರ್ಯವಾಗಿದೆ. ಇನ್ನೊಂದು ಪಂದ್ಯದಲ್ಲಿ ಆತಿಥೇಯ ಶ್ರೀಲಂಕಾ ತಂಡ ಇಂಗ್ಲೆಂಡ್ ವಿರುದ್ಧ ಹೀನಾಯವಾಗಿ ಸೋತಿದೆ.

ಎನ್.ಆರ್.ಪುರದಲ್ಲಿ 5 ದಿನಗಳ ಅಂತರದಲ್ಲಿ ಇಬ್ಬರು ವಲಸೆ ಕಾರ್ಮಿಕರು ಆನೆ ದಾಳಿಗೆ ಬಲಿ

ರಾಜ್ಯ ಹೆದ್ದಾರಿ ತಡೆದು ಗ್ರಾಮಸ್ಥರ ಪ್ರತಿಭಟನೆ, ಲಾಠಿ ಪ್ರಹಾರ, ನೂರಾರು ಮಂದಿ ವಶಕ್ಕೆ

ಕಾಡಾನೆ ದಾಳಿಗೆ ಮಹಿಳೆ ಬಲಿ: ಊರೇ ರಣರಂಗ

ಚಿಕ್ಕಮಗಳೂರು: ಕೇವಲ ಐದು ದಿನಗಳ ಅಂತರದಲ್ಲಿ ಇಬ್ಬರು ವಲಸೆ ಕೂಲಿ ಕಾರ್ಮಿಕರು ಕಾಡಾನೆ ದಾಳಿಗೆ ತುತ್ತಾದ ಘಟನೆಯಿಂದ ಆಕ್ರೋಶಿತರಾದ ಮಲೆನಾಡಿಗರು ಭಾನುವಾರ ಬಾಳೆಹೊನ್ನೂರು ಸಮೀಪದ ಕಡಬಗೆರೆಯಲ್ಲಿ ರಸ್ತೆ ತಡೆ ನಡೆಸಿ ಭಾರೀ ಪ್ರತಿಭಟನೆ ನಡೆಸಿದ್ದು, ಆರು ಗಂಟೆಗಳ ಸಂಚಾರ ಅಸ್ತವ್ಯಸ್ತ ಗೊಂಡಿತ್ತು.

ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್.ಪುರ ತಾಲೂಕಿನ ಹುಣಸೇಹಳ್ಳಿಯಲ್ಲಿ 5 ದಿನಗಳ ಹಿಂದಷ್ಟೇ ವಲಸೆ ಕಾರ್ಮಿಕರೊಬ್ಬರನ್ನು ಬಲಿ ಪಡೆದಿದ್ದ ಪುಂಡಾನೆ ಇದೇ ಗ್ರಾಮ ದಲ್ಲಿ ಭಾನುವಾರ ಮತ್ತೊಬ್ಬ ವಲಸೆ ಕಾರ್ಮಿಕ ಮಹಿಳೆಯನ್ನು ಬಲಿ ಪಡೆದಿದೆ.

ಕೂಡ್ಲಿಗಿ ತಾಲೂಕಿನ ಗೆದ್ದಲಗಟ್ಟೆ ಕಾಮಯ್ಯನಹಟ್ಟಿ ಗ್ರಾಮದ ಬಯ್ಯಪ್ಪರ ನಾಗರಾಜ ಅವರ ಪತ್ನಿ ಬೋರಮ್ಮ (41) ದುರ್ದೈವಿ ಕೂಲಿ ಕಾರ್ಮಿಕ ಮಹಿಳೆ. ಮಹಿಳೆಯ ಮೃತದೇಹ ಸಾಗಿಸುತ್ತಿದ್ದ ವಾಹನವನ್ನು ಬಾಳೆಹೊನ್ನೂರು ತಾಲೂಕಿನ ಕಡಬಗೆರೆ ಗ್ರಾಮದಲ್ಲಿ ಸ್ಥಳೀಯರು ತಡೆದು ಆಕ್ರೋಶ ವ್ಯಕ್ತಪಡಿಸಿದರು. ಸುಮಾರು ಆರು ಗಂಟೆಗಳ ಕಾಲ ರಾಜ್ಯ ಹೆದ್ದಾರಿಯಲ್ಲಿ ಶವ ಇಟ್ಟು ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಆಗಮಿಸಿದ ಶಾಸಕರನ್ನೂ ಉದ್ರಿಕ್ತರು ತಳ್ಳಾಡಿದರು.

ಅಂತಿಮವಾಗಿ ಪೊಲೀಸರು ಲಾಠಿ ಪ್ರಹಾರ ನಡೆಸಿ ಪ್ರತಿಭಟನಾಕಾರರನ್ನು ಚದುರಿಸಿ ದರು. ಘಟನಾ ಸ್ಥಳದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಈ ನಡುವೆ ಇಬ್ಬರ ದಾಳಿಗೆ ಕಾರಣವಾದ ಮದವೇರಿದ ಆನೆಯನ್ನು ಕೊನೆಗೂ ಸೆರೆ ಹಿಡಿಯಲಾಗಿದೆ. → 4

3 ತಾಲೂಕು ಬಂದ್ ಇಂದು

ಚಿಕ್ಕಮಗಳೂರು: ಪ್ರತಿಭಟನಾಕಾರರ ಮೇಲೆ ಪೊಲೀಸರ ಲಾಠಿ ಚಾರ್ಜ್ ಖಂಡಿಸಿ ಸೋಮವಾರ ಎನ್.ಆರ್.ಪುರ, ಕೊಪ್ಪ, ಶೃಂಗೇರಿ ಸೇರಿ ಮೂರು ತಾಲೂಕಿನಲ್ಲಿ ಬಂದ್‌ಗೆ ಕರೆ ನೀಡಲಾಗಿದೆ. ಮಲೆನಾಡು ನಾಗರಿಕ ರಕ್ಷಣಾ ವೇದಿಕೆ ಮತ್ತು ರೈತ ಸಂಘಟನೆಗಳ ಒಕ್ಕೂಟದಿಂದ ಸ್ವಯಂ ಪ್ರೇರಿತ ಬಂದ್‌ಗೆ ಕರೆ ನೀಡಲಾಗಿದೆ.

ಪುಂಡಾನೆ ಕೊನೆಗೂ ಸೆರೆ

ಇಬ್ಬರನ್ನು ಬಲಿ ಪಡೆದಿದ್ದ ಕಾಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಕೊನೆಗೂ ಸೆರೆ ಹಿಡಿದಿದ್ದಾರೆ. ಹುಣಸೆಹಳ್ಳಿ ಸಮೀಪದ ಪುರದ ಬಳಿ ಮಹಿಳೆಯನ್ನು ಬಲಿ ಪಡೆದ ಅರ್ಧ ಗಂಟೆಯಲ್ಲೇ ಕಾಡಾನೆಯನ್ನು ಸೆರೆ ಹಿಡಿಯಲಾಯಿತು.

ಶಾಸಕ ರಾಜೇಗೌಡ ವಿರುದ್ಧ ಆಕ್ರೋಶ

ಸ್ಥಳಕ್ಕೆ ಆಗಮಿಸಿದ ಶೃಂಗೇರಿ ಶಾಸಕ ಟಿ.ಡಿ. ರಾಜೇಗೌಡ ಅವರು ಬಿಜೆಪಿ ಕಾರ್ಯಕರ್ತ ವಿನೋದ್ ಬೊಗಸೆ ಮೇಲೆ ಕೈ ಮಾಡಿದ್ದಾರೆ ಎಂದು ಆರೋಪಿಸಿ ಉದ್ರಿಕ್ತರು ಶಾಸಕರನ್ನೇ ನೂಕಾಡಿ, ತಳ್ಳಾಡಿದರು.

ಪರಿಸ್ಥಿತಿ ಕೈಮೀರುತ್ತಿರುವುದನ್ನು ಕಂಡು ಪೊಲೀಸರು ಲಾಠಿ ಪ್ರಹಾರ ನಡೆಸಿದರು. ಪ್ರತಿಯಾಗಿ ಆಕ್ರೋಶಿತರು ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಸ್ಥಳದಲ್ಲೀಗ ಹೆಚ್ಚಿನ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ.

ನೂರಕ್ಕೂ ಹೆಚ್ಚು ಮಂದಿ ವಶಕ್ಕೆ

ಪೊಲೀಸರು ಬಲ ಪ್ರಯೋಗ ಮಾಡಿ, ಆಂಬ್ಯುಲೆನ್ಸ್‌ಗೆ ಅಡ್ಡ ನಿಂತಿದ್ದ ಪ್ರತಿಭಟನಾಕಾರರನ್ನು ತಳ್ಳಿ ಮೃತದೇಹವನ್ನು ಆಸ್ಪತ್ರೆಗೆ ರವಾನಿಸಿದ್ದಾರೆ.

ಈ ವೇಳೆ ನಡೆದ ಸಂಘರ್ಷದಲ್ಲಿ ಪೊಲೀಸರು ಮಾಜಿ ಶಾಸಕ ಡಿಎನ್ ಜೀವರಾಜ್, ಜೆಡಿಎಸ್ ಮುಖಂಡ ಸುಧಾಕರ್ ಶೆಟ್ಟಿ ಸೇರಿ ದಂತೆ 100ಕ್ಕೂ ಹೆಚ್ಚು ಪ್ರಮುಖ ಹೋರಾಟಗಾರರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪ್ರಸ್ತುತ ಕಡಬಗೆರೆ ಯಲ್ಲಿ ಪೊಲೀಸ್ ಬಿಗಿ ಪಹರೆ ಮುಂದುವರಿದಿದೆ.

5 ವರ್ಷದಿಂದ ಜೀವಾವಧಿ ತನಕ ಶಿಕ್ಷೆ ಅವಕಾಶ

ಜಾತಿ ಸಂಕೋಲೆಗೆ ಬ್ರೇಕ್ ಮರ್ಯಾದೆಗೇಡು ಹತ್ಯೆಗೆ ಕಠಿಣ ಕಾನೂನು

ವಿಶ್ವವಾಣಿ ವಿಶೇಷ ಬೆಂಗಳೂರು

ಮರ್ಯಾದೆಗೇಡು ಹತ್ಯೆ ತಡೆಗಟ್ಟಲು ಕಠಿಣ ಕಾನೂನು ತರುವುದಾಗಿ ಘೋಷಿಸಿದ್ದ ರಾಜ್ಯ ಸರಕಾರ, ಮುಂದಿನ ಬಜೆಟ್ ಅಧಿವೇಶನದಲ್ಲಿ ಈ ವಿಧೇಯಕ ಮಂಡಿಸಲು ಸಿದ್ಧತೆ ನಡೆಸಿಕೊಂಡಿದ್ದು, ಪ್ರಕರಣಕ್ಕೆ ಭಾಗಿಯಾದವರಿಗೆ, ಕುಮ್ಮಕ್ಕು ನೀಡಿದವರಿಗೆ ಐದು ವರ್ಷದಿಂದ ಜೀವಾವಧಿವರೆಗೆ ಶಿಕ್ಷೆ ವಿಧಿಸುವ ಅವಕಾಶವನ್ನು ನೀಡಲಾಗಿದೆ.

ರಾಜ್ಯ ಸರಕಾರ ಹೊರಟಿರುವ ಈ ವಿಧೇಯಕಕ್ಕೆ 'ಮದುವೆಯಲ್ಲಿ ಮುಕ್ತ ಆಯ್ಕೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಅಪರಾಧಗಳ ತಡೆ ಹಾಗೂ ನಿಷೇಧ ಕಾಯಿದೆ-2026' ಎಂದು ಹೆಸರಿಡುವ ಮೂಲಕ ಬಸವಣ್ಣನವರ 'ಇವ ನಮ್ಮವ' ಎನ್ನುವ ಸಮಾನ ತೆಯ ತತ್ವ, ಅಂಬೇಡ್ಕರ್ ಸಾಮಾಜಿಕ ನ್ಯಾಯದ ಆಶಯದಂತೆ ಈ ಕಾನೂನನ್ನು ರೂಪಿಸ ಲಾಗಿದೆ. ಪ್ರಸ್ತಾವಿತ ವಿಧೇಯಕದಲ್ಲಿ ಯಾವುದೇ ಇಬ್ಬರು ವಯಸ್ಕರು ತಮ್ಮ ಆಯ್ಕೆಯ ಸಂಗಾತಿಯನ್ನು ಮದುವೆಯಾಗಲು ಪೋಷಕರು, ಕುಟುಂಬ, ಜಾತಿಯ ಒಪ್ಪಿಗೆ ಕಡ್ಡಾಯವಲ್ಲ. ಜತೆಗೆ ಬೆದರಿಕೆ ಎದುರಿಸುತ್ತಿರುವ ದಂಪತಿಗಳಿಗೆ ರಕ್ಷಣೆಗೆ ಸೇಫ್‌ಹೌಸ್‌ಗಳನ್ನು ನಿರ್ಮಿಸಲು ಅವಕಾಶ ಮಾಡಿಕೊಳ್ಳಲಾಗಿದೆ. → 4

ಯಾವುದಕ್ಕೆಲ್ಲ ನಿರ್ಬಂಧ



- ಮರ್ಯಾದೆ ಹತ್ಯೆ, ದೈಹಿಕ, ಮಾನಸಿಕ ಹಿಂಸೆ
- ಸಾಮಾಜಿಕ, ಆರ್ಥಿಕ ಬಹಿಷ್ಕಾರ. ಬಲವಂತದ ವಿವಾಹ/ವಿಚ್ಛೇದನ
- ಜೀವಂತ ವ್ಯಕ್ತಿಗೆ ತಿಥಿ ಮಾಡಿದರೂ ಕ್ರಮ

ವಿವಾಹಿತರಿಗೆ ಸೇಫ್ ಹೌಸ್!

ಕುಟುಂಬಸ್ಥರು ಮತ್ತು ಸಂಬಂಧಿಕರಿಂದಲೇ ಬೆದರಿಕೆ ಎದುರಿಸುವ ವಿವಾಹಿತರನ್ನು ಸುರಕ್ಷಿತ ಸ್ಥಳದಲ್ಲಿ ಇರಿಸಲು ಈ ವಿಧೇಯಕದಲ್ಲಿ ಜಿಲ್ಲೆಗೊಂದು 'ಸೇಫ್ ಹೌಸ್' ನಿರ್ಮಿಸಲು ಅವಕಾಶ ನೀಡಲಾಗಿದೆ. ಇಂತಹ ಸೇಫ್ ಹೌಸ್‌ನಲ್ಲಿ ಪೊಲೀಸರ ರಕ್ಷಣೆಯೊಂದಿಗೆ ಆರಂಭದಲ್ಲಿ ಒಂದು ತಿಂಗಳ ಕಾಲ ವಾಸಿಸಬಹುದು. ಪರಿಸ್ಥಿತಿಯನ್ನು ಅವಲೋಕಿಸಿ ಗರಿಷ್ಠ ಒಂದು ವರ್ಷದ ವರೆಗೆ ವಿಸ್ತರಿಸಲು ಅವಕಾಶ ನೀಡಲಾಗಿದೆ.

- ಮರ್ಯಾದೆ ಹತ್ಯೆಗೆ ಕನಿಷ್ಠ ಐದು ವರ್ಷ ಜೈಲು ಶಿಕ್ಷೆ
- ವಿವಾಹಿತರಿಗೆ ಗಂಭೀರ ಗಾಯಗಳಾ ದರೆ ಕನಿಷ್ಠ ಮೂರು ವರ್ಷ ಜೈಲು
- ವಧು-ವರರ ಗೌರವಕ್ಕೆ ಧಕ್ಕೆ ತರುಯುವ ಯಾವುದೇ ಅಪರಾಧ ಗಳಿಗೆ 2ರಿಂದ ಐದು ವರ್ಷ ಜೈಲು
- ಎಲ್ಲಾ ಅಪರಾಧಗಳು ಜಾಮೀನು ರಹಿತ ವಿಧೇಯಕದ ಪ್ರಮುಖಾಂಶ
- ಅಂತರ್ಜಾತಿ ವಿವಾಹವಾದ ದಂಪತಿ ಬಗ್ಗೆ ಕೆಟ್ಟದಾಗಿ ಬಿಂಬಿಸುವುದು, ಸುಳ್ಳು ಮಾಹಿತಿ ಹರಡುವುದು ಶಿಕ್ಷಾರ್ಹ ಅಪರಾಧ
- ದಂಪತಿಗಳಿಂದ ಫೋನ್, ಲ್ಯಾಪ್‌ಟಾಪ್ ಕಸಿದುಕೊಳ್ಳುವುದು, ಬ್ಯಾಂಕ್ ಖಾತೆ ಸ್ಥಗಿತಗೊಳಿಸುವುದನ್ನೂ ಸಹ ದೌರ್ಜನ್ಯ ಎಂದು ಪರಿಗಣಿಸಲಾಗುತ್ತದೆ.
- ಬಲವಂತದ ಗರ್ಭಪಾತ ಮಾಡಿಸುವುದು ಗಂಭೀರ ಅಪರಾಧ

ಸೊಂಪಾದ ಪುಟಗಳು

ಪರಂ-ಕುಮಾರಸ್ವಾಮಿ ತಾಜ್ ಮೀಟಿಂಗ್ ರಹಸ್ಯವೇನು?
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಬವಣೆಯ ಬೆಂಕಿಯಲ್ಲಿ ಬೆಂದು ಬಂದ ಬೆನ್ಜ್ ಕಾರು
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ನೀವು ದಾರಿಯಲ್ಲಿ ನಡೆಯುವಾಗ ಒಬ್ಬಂಟಿಯೇ. ಬೇರೆಯವರು ನಿಮ್ಮ ಜತೆ ಹೆಜ್ಜೆ ಹಾಕಬಹುದು. ಆದರೆ ಯಾರೂ ನಿಮಗಾಗಿ ನಿಮ್ಮ ಜತೆ ಹೆಜ್ಜೆ ಹಾಕುವುದಿಲ್ಲ. ಬೇರೆಯವರು ನಿಮ್ಮೊಂದಿಗೆ ಇದ್ದರೆ ಯಾಕೆ ಇದ್ದಾರೆ ಎಂದು ಪ್ರಶ್ನಿಸಿಕೊಳ್ಳಬೇಕು.

ವಕ್ರತುಂಡೋಕ್ತಿ



ನಮ್ಮ ಸಾಮರ್ಥ್ಯವನ್ನು ಕಮ್ಮಿ ಎಂದು ಅಂದಾಜು ಮಾಡಬಾರದು. ಕಾರಣ ಅದು ಬಾಸ್‌ನ ಕೆಲಸ.

ಶಾಲಿನಿ ಹೆಸರು ಪ್ರಸ್ತಾಪ: ಕ್ಷಮೆ ಕೋರಿದ ಕೃಷ್ಣ

ಬೆಂಗಳೂರು: ಮುಡಾ ಮಾಜಿ ಆಯುಕ್ತ ನಟೇಶ್‌ಗೆ ಬಡ್ತಿಗೆ ನೀಡಿರುವ ಲಂಚದ ಆರೋಪದ ವಿಷಯದಲ್ಲಿ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಹೆಸರು ಪ್ರಸ್ತಾಪಿಸಿರುವುದೊಂದೇ ನಾನು ಮಾಡಿರುವ ತಪ್ಪು ಎಂದು ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಹೇಳಿದ್ದಾರೆ. ಈ ಬಗ್ಗೆ ಸುದೀರ್ಘ ಪೋಸ್ಟ್ ಮಾಡಿರುವ ಅವರು, ನಟೇಶ್ ಬಡ್ತಿಗೆ ಲಂಚ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ತಾವು ಯಾವುದೇ ತಪ್ಪು ಮಾಡಿಲ್ಲ. ಸರಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಹೆಸರನ್ನು ಉಲ್ಲೇಖ ಮಾಡಿದ್ದಕ್ಕೆ ಮಾತ್ರ ಕ್ಷಮೆ ಕೇಳುತ್ತೇನೆ ಎಂದಿದ್ದಾರೆ.

ಅತಿ ವೇಗದ ಮೆಟ್ರೊ

ಮೀರತ್: ಉತ್ತರ ಪ್ರದೇಶ ರಾಜ್ಯದ ಮೀರತ್ ನಗರದಲ್ಲಿ 2 ಪ್ರಮುಖ ರೈಲು ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಲೋಕಾರ್ಪಣೆ ಮಾಡಿದರು. 23 ಕಿಮೀ ಉದ್ದ ಮಾರ್ಗದ ಮೀರತ್ ಮೆಟ್ರೊ ಸೇವೆಗೆ ಚಾಲನೆ ನೀಡಲಾಗಿದ್ದು, ಇದು ಭಾರತದಲ್ಲೇ ಅತಿವೇಗದ ಮೆಟ್ರೊ ವ್ಯವಸ್ಥೆ ಎನಿಸಿಕೊಂಡಿದೆ. ಅಲ್ಲದೇ, ಪ್ರಧಾನಿ ಮೋದಿ ಮೆಟ್ರೊದಲ್ಲಿ ಪ್ರಯಾಣವನ್ನೂ ಮಾಡಿದರು. ಪ್ರಯೋಗಾರ್ಥ ಸಂಚಾರಕ್ಕೆ ಆಹ್ವಾನಿತರಾಗಿದ್ದ ವಿದ್ಯಾರ್ಥಿಗಳ ಜತೆಗೆ ಸಂವಾದವನ್ನೂ ನಡೆಸಿದರು.

ಈ ಸಲದ ಬಜೆಟ್‌ನಲ್ಲಿ ಘೋಷಣೆ: ಸಿಎಂ

ಕಾರವಾರಕ್ಕೆ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್

ಕಾರವಾರ: ಕಾರವಾರದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆರಂಭ ಮಾಡುವ ಕುರಿತಂತೆ ಈ ಬಾರಿಯ ಬಜೆಟ್‌ನಲ್ಲಿ ಮಂಜೂರು ನೀಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಅವರು ಭಾನುವಾರ ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆವರಣದಲ್ಲಿ ರೂ.198.27 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ 450 ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಉದ್ಘಾಟನೆ ಮತ್ತು ಯಲ್ಲಾಪುರ ತಾಲ್ಲೂಕಿನ ಖಾನಾಪುರ ತಾಳಗುಪ್ಪಾ ರಾಜ್ಯ ಹೆದ್ದಾರಿ-93 ರಲ್ಲಿ ರೂ. 720.81 ಲಕ್ಷ ರು. ವೆಚ್ಚದ ಸೇತುವೆ ಕಾಮಗಾರಿ, ಯಲ್ಲಾಪುರ ಪಟ್ಟಣದಲ್ಲಿ 202.89 ಲಕ್ಷ ವೆಚ್ಚದ ನಿರೀಕ್ಷಣಾ ಮಂದಿರದ ಹೊಸ ಕಟ್ಟಡ ನಿರ್ಮಾಣ ಹಾಗೂ ಮುಂಡಗೋಡ ತಾಲ್ಲೂಕಿನಲ್ಲಿ 248.18 ರು. ಲಕ್ಷ ಮೊತ್ತದ ಹೊಸ ಪ್ರವಾಸಿ ಮಂದಿರ ನಿರ್ಮಾಣ ಕಾಮಗಾರಿ ಉದ್ಘಾಟಿಸಿ ಅವರು ಮಾತನಾಡಿದರು. ಕಾರವಾರಕ್ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆಗಬೇಕು ಎಂದು ಕಾರವಾರ-ಅಂಕೋಲಾ ಕ್ಷೇತ್ರದ ಶಾಸಕರು ಹಲವು ಬಾರಿ ಬೇಡಿಕೆ ಸಲ್ಲಿಸಿದ್ದಾರೆ ಹಾಗೂ ಒತ್ತಾಯಿಸಿದ್ದಾರೆ. ಈ ಬಾರಿಯ ಆಯವ್ಯಯದಲ್ಲಿ ಕಾರವಾರಕ್ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮಂಜೂರು ನೀಡಲಾಗುವುದು ಎಂದು ಸ್ಪಷ್ಟಪಡಿಸಿದರು. ಇಲ್ಲಿನ ಜನತೆ ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿ, ಉಡುಪಿ, ಮಂಗಳೂರಿಗೆ ಹೋಗಬೇಕಾಗಿತ್ತು. ಪ್ರಸ್ತುತ ನಿರ್ಮಿಸಿರುವ 450 ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಿಂದ ಈ ಸಮಸ್ಯೆ ನಿವಾರಣೆಯಾಗಿಗಲಿದೆ. ಇಲ್ಲಿ ಕ್ಯಾನ್ಸರ್ ಚಿಕಿತ್ಸೆಗೆ ಕೂಡ ಪ್ರತ್ಯೇಕ ಘಟಕ ಆರಂಭಗೊಳ್ಳಲಿದೆ ಎಂದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ತೀವ್ರ ಆಗ್ರಹ ವ್ಯಕ್ತವಾಗಿತ್ತು. ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರಾದ ಡಾ.ಶರಣ ಪ್ರಕಾಶ ಪಾಟೀಲ್, ಮಂಕಾಳ ಎಸ್ ವೈದ್ಯ, ಶಾಸಕರಾದ ಆರ್.ವಿ. ದೇಶಪಾಂಡೆ, ಶಿವರಾಮ ಹೆಬ್ಬಾರ್, ಭೀಮಣ್ಣ ನಾಯ್ಕ, ಸತೀಶ್ ಸೈಲ್ ಇದ್ದರು.

ಅಫ್ಘಾನಿಸ್ತಾನದ ಗಡಿಯಲ್ಲಿ ಪಾಕ್‌ಸೇನೆ ವಾಯು ದಾಳಿ

ಅಸ್ಲಾಮಾಬಾದ್: ಇತ್ತೀಚೆಗೆ ನಡೆದ ಆತ್ಮಾಹುತಿ ದಾಳಿಗಳ ಸರಣಿಗೆ ಪ್ರತೀಕಾರವಾಗಿ, ಪಾಕಿಸ್ತಾನ ಸೇನೆಯು ಅಫ್ಘಾನಿಸ್ತಾನದ ಗಡಿ ಭಾಗಗಳಲ್ಲಿ ಇರುವ ಉಗ್ರರ ಅಡಗುತಾಣಗಳ ಮೇಲೆ ವಾಯುದಾಳಿ ನಡೆಸಿದೆ. ಗುಪ್ತಚರ ಮಾಹಿತಿ ಆಧರಿಸಿ, ತೆಹ್ರೀಕ್ -ಎ-ತಾಲಿಬಾನ್ ಪಾಕಿಸ್ತಾನ್ ಹಾಗೂ ಅದಕ್ಕೆ ಸಂಬಂಧಿಸಿದ ಏಳು ಶಿಬಿರಗಳ ಮೇಲೆ ದಾಳಿ ಮಾಡಲಾಗಿದೆ. ಐಎಸ್ ಗುಂಪಿನ ಅಂಗಸಂಸ್ಥೆಯನ್ನೂ ಗಡಿ ಪ್ರದೇಶದಲ್ಲಿ ಗುರಿ ಮಾಡಿ ದಾಳಿ ಮಾಡಲಾಗಿದೆ ಎಂದು ಪಾಕ್ ತಿಳಿಸಿದೆ.

ಜ್ಯೋತಿಷಿ ಕಮಲಾಕರ್ ಭಟ್ ವಿರುದ್ಧ ಪೋಕ್ಸೊ

ಶಿವಮೊಗ್ಗ: ಸಿದ್ದಾಪುರದವಸಂತ್ ನಾಯ್ಕ್ ಹತ್ಯೆ ಪ್ರಕರಣದಲ್ಲಿ ಆರೋಪಿಯಾಗಿರುವ ಜ್ಯೋತಿಷಿ ಕಮಲಾಕರ್ ಭಟ್ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿದೆ. ಕಮಲಾಕರ್ ಭಟ್ ವಿರುದ್ಧ ಮೃತನ ಅಣ್ಣ ಮಹೇಶ್ ನಾಯ್ಕ್ ಪುತ್ರಿ ಸಿದ್ದಾಪುರ ಠಾಣೆಯಲ್ಲಿ ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಿಸಿದ್ದಾಳೆ.

ಉಗ್ರ ಸೈಫುಲ್ಲಾ ಸೇರಿ ಮೂವರ ಹತ್ಯೆ

ಕಿಶ್ತ್ವಾರ್: ಕಾಶ್ಮೀರದ ಕಿಶ್ತ್ವಾರ್ ಪ್ರದೇಶದಲ್ಲಿ ರಹಸ್ಯ ಅಡಗುತಾಣದಲ್ಲಿ ಅವಿತುಕೊಂಡಿದ್ದ ಮೂವರು ಭಯೋತ್ಪಾದಕರನ್ನು ಭಾರತೀಯ ಸೇನೆ ಭಾನುವಾರ ಹೊಡೆದುರುಳಿಸಿದೆ. ಮೃತರಲ್ಲಿ ಪಾಕಿಸ್ತಾನ ಮೂಲದ ಜೈಶೆ ಮೊಹಮ್ಮದ್ ಉನ್ನತ ಕಮಾಂಡರ್, ಭಾರತಕ್ಕೆ ಬೇಕಾಗಿದ್ದ ಮೋಸ್ಟ್ ವಾಟೆಂಡ್ ಉಗ್ರ, ಪ್ರಮುಖ ಸೈಫುಲ್ಲಾ ಸೇರಿದ್ದಾನೆ.

ಉಗ್ರ ಕೃತ್ಯಕ್ಕೆ ಸಂಚು: ಬಾಂಗ್ಲಾ ಪ್ರಜೆ ಸೇರಿ 8 ಶಂಕಿತರ ಸೆರೆ

ದೆಹಲಿ: ಪಾಕಿಸ್ತಾನದ ಐಎಸ್‌ಐ ಮತ್ತು ಬಾಂಗ್ಲಾದೇಶ ಮೂಲದ ಭಯೋತ್ಪಾದಕ ಗುಂಪುಗಳ ಬೆಂಬಲದೊಂದಿಗೆ ಭಾರತದಲ್ಲಿ ಪ್ರಮುಖ ಭಯೋತ್ಪಾದಕ ಪಿತೂರಿ ನಡೆಸುತ್ತಿದ್ದ ಆರೋಪದ ಮೇಲೆ ಎಂಟು ಜನರನ್ನು ತಮಿಳುನಾಡು ಮತ್ತು ಪಶ್ಚಿಮ ಬಂಗಾಳದಿಂದ ಬಂಧಿಸಲಾಗಿದೆ.

ತಮಿಳುನಾಡಿನ ತಿರುಪ್ಪೂರು ಜಿಲ್ಲೆಯ ಉಡುಪು ಉತ್ಪಾದನಾ ಘಟಕಗಳಿಂದ ಮಿಜಾನೂರ್ ರೆಹಮಾನ್, ಮೊಹಮ್ಮದ್ ಶಬಾತ್, ಉಮರ್, ಮೊಹಮ್ಮದ್ ಲಿಟನ್, ಮೊಹಮ್ಮದ್ ಶಾಹಿದ್ ಮತ್ತು ಮೊಹಮ್ಮದ್ ಉಜ್ಜಲ್ ಎಂದು ಗುರುತಿಸಲಾದ ಆರು ಶಂಕಿತರನ್ನು ಬಂಧಿಸಲಾಗಿದ್ದರೆ, ಪಶ್ಚಿಮ ಬಂಗಾಳದಿಂದ ಇಬ್ಬರನ್ನು ಬಂಧಿಸಲಾಗಿದೆ.

ಅಧಿಕಾರಿಗಳ ಪ್ರಕಾರ, ಬಂಧಿತ ಶಂಕಿತರಲ್ಲಿ ಬಾಂಗ್ಲಾದೇಶಿ ಪ್ರಜೆಯೂ ಸೇರಿದ್ದಾರೆ. ಆರೋಪಿಗಳು ಗುರುತಿಗಾಗಿ ನಕಲಿ ಆಧಾರ್ ಕಾರ್ಡ್‌ಗಳನ್ನು ಬಳಸುತ್ತಿದ್ದರು. .ಶಂಕಿತರಿಂದ ಎಂಟು ಮೊಬೈಲ್ ಫೋನ್‌ಗಳು ಮತ್ತು 16 ಸಿಮ್ ಕಾರ್ಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಶಂಕಿತರನ್ನು ತಮಿಳುನಾಡು ಪೊಲೀಸರು ಬಂಧಿಸಿ ದೆಹಲಿ ಪೊಲೀಸರಿಗೆ ಹಸ್ತಾಂತರಿಸಿದ್ದಾರೆ.

ಅಪಘಾತ: ಮಾಜಿ ಶಾಸಕ ಸುರೇಶ್ ಗೌಡ ಪಾರು

ಬೆಂಗಳೂರು: ನಾಗಮಂಗಲ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮಾಜಿ ಶಾಸಕ ಸುರೇಶ್ ಗೌಡ ಅವರು ಪ್ರಯಾಣಿಸುತ್ತಿದ್ದ ಕಾರು ನಿಯಂತ್ರಣ ತಪ್ಪಿ ಪಲ್ಟಿಯಾದ ಪರಿಣಾಮ ಅವರು ಗಾಯಗೊಂಡಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಸುರೇಶ್ ಗೌಡ ಅವರು ಗನ್‌ಮ್ಯಾನ್ ಸೇರಿದಂತೆ ನಾಲ್ವರ ಜತೆ ಕೊಪ್ಪಕ್ಕೆ ಹೋಗಿ ವಾಪಸಾಗುತ್ತಿದ್ದರು. ಮಧ್ಯರಾತ್ರಿ 12.15 ರ ಸುಮಾರಿನಲ್ಲಿ ನಾಗಮಂಗಲ-ಕೊಪ್ಪ ರಸ್ತೆಯಲ್ಲಿ ಬರುತ್ತಿದ್ದಂತೆ ಮಾಚೋ ಗೊಂಡನ ಹಳ್ಳಿ ಗೇಟ್ ಬಳಿ ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾಗಿದೆ.

ಪರಿಣಾಮ ಸುರೇಶ್ ಗೌಡರ ಕೈಗೆ ಪೆಟ್ಟು ಬಿದ್ದಿದ್ದು, ಚಾಲಕನಿಗೂ ಗಂಭೀರ ಗಾಯಗಳಾಗಿವೆ.

ಅಪಘಾತದ ರಭಸಕ್ಕೆ ಕಾರು ಭಾಗಶಃ ಜಖಂಗೊಂಡಿದೆ. ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಸುರೇಶ್ ಗೌಡ ಹಾಗೂ ಚಾಲಕನನ್ನು ಮಂಡ್ಯ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ಕಳುಹಿಸಿದ್ದಾರೆ.

9 ದಿನ ನ್ಯಾಯಾಂಗ ಬಂಧನ

ಶಾಸಕ ಲಮಾಣಿ ಅಗ್ರಹಾರ ಜೈಲಿಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಗುತ್ತಿಗೆದಾರನಿಂದ ಐದು ಲಕ್ಷ ರು. ಲಂಚ ಪಡೆಯುವಾಗ ಲೋಕಾಯುಕ್ತ ಬಲೆಗೆ ಬಿದ್ದಿದ್ದ ಗದಗ ಜಿಲ್ಲೆಯ ಶಿರಹಟ್ಟಿ ಕ್ಷೇತ್ರದ ಬಿಜೆಪಿ ಶಾಸಕ ಚಂದ್ರು ಲಮಾಣಿಗೆ ಮಾರ್ಚ್ 2ರ ವರೆಗೆ ನ್ಯಾಯಾಂಗ ಬಂಧನ ವಿಧಿಸಿ ಬೆಂಗಳೂರಿನ ಜನಪ್ರತಿನಿಧಿಗಳ ಕೋರ್ಟ್ ಆದೇಶಿಸಿದೆ. ಯಲಹಂಕ ಜುಡಿಷಿಯಲ್ ಲೇಔಟ್‌ನಲ್ಲಿರುವ ನ್ಯಾಯಾಧೀಶರ ನಿವಾಸಕ್ಕೆ ಶಾಸಕರನ್ನು ಲೋಕಾ ಯುಕ್ತ ಪೊಲೀಸರು ಹಾಜರುಪಡಿಸಿದ್ದರು. ನ್ಯಾಯಾ ಧೀಶರ ಆದೇಶದ ಅನ್ವಯ ಬಿಜೆಪಿ ಶಾಸಕ ಚಂದ್ರು ಲಮಾಣಿ ಈಗ ಪರಪ್ಪನ ಅಗ್ರಹಾರ ಜೈಲುಪಾಲಾಗಿದ್ದಾರೆ. → 4

ಬಿಜೆಪಿಗೆ ಮುಖಭಂಗ: ಶಿಸ್ತುಕ್ರಮ?

ತಮ್ಮ ಪಕ್ಷದ ಚಂದ್ರು ಲಮಾಣಿ ಮೇಲೆ ನಡೆದಿರುವ ಲೋಕಾಯುಕ್ತ ದಾಳಿ, ಆಡಿಯೊ ವೈರಲ್ ಆಗಿರುವುದು ಬಿಜೆಪಿಗೆ ತೀವ್ರ ಇಕ್ಕಟ್ಟಿಗೆ ಸಿಲುಕಿಸಿದೆ. ಕಾಂಗ್ರೆಸ್ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುತ್ತಿರುವ ಸಮಯದಲ್ಲಿ ಪಕ್ಷದ ಶಾಸಕರೇ ಲೋಕಾಯುಕ್ತ ಬಲೆಗೆ ಬಿದ್ದಿರುವುದು ಬಿಜೆಪಿಗೆ ಭಾರೀ ಮುಖಭಂಗ ಉಂಟು ಮಾಡಿದೆ.

ನೆರೆ ರಾಜ್ಯಗಳಿಗೆ ಹೋಲಿಸಿದರೆ ಜಿಡಿಪಿ ಪರಿಮಿತಿಯೊಳಗೆ ಕರ್ನಾಟಕದ ಸಾಲ

ಸಾಲದ ಹೊರೆ: ರಾಜ್ಯದ ಸ್ಥಿತಿ ಮೇಲು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕ ರಾಜ್ಯದ ಸಾಲದ ಹೊರೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಎನ್ನುವ ಆತಂಕದ ನಡುವೆ, ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಸ್ಥಿತಿ ಈಗಲೂ 'ಹದಗೆಟ್ಟಿಲ್ಲ' ಎನ್ನುವುದು ಸ್ಪಷ್ಟವಾಗುತ್ತಿದೆ.

ದಾಖಲೆಯ ಬಜೆಟ್ ಮಂಡಿಸಲು ಸಜ್ಜಾಗುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿ 1.30 ಲಕ್ಷ ಕೋಟಿ ರು. ಸಾಲ ಮಾಡಲು ಬಜೆಟ್‌ನಲ್ಲಿ ಅವಕಾಶ ಮಾಡಿಕೊಳ್ಳುತ್ತಾರೆ ಎನ್ನಲಾಗುತ್ತಿದೆ. ಈ ಪ್ರಮಾಣದಲ್ಲಿ ಸಾಲ ಪಡೆಯುವುದು ರಾಜ್ಯದ ಬೊಕ್ಕಸಕ್ಕೆ ಭಾರಿ ಹೊಡೆತ ಎನ್ನುವ ಆರೋಪವನ್ನು ಪ್ರತಿಪಕ್ಷಗಳು ಮಾಡಲು ಸಜ್ಜಾಗಿವೆ. ಆದರೆ ನೆರೆ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕ ಈ ವಿಷಯದಲ್ಲಿ 'ಉತ್ತಮ' ಸ್ಥಿತಿಯಲ್ಲಿದೆ ಎನ್ನಲಾಗುತ್ತಿದೆ.

ದಕ್ಷಿಣ ಭಾರತದ ರಾಜ್ಯಗಳು, ಗುಜರಾತ್‌ನಂತಹ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಸಾಲದ ಪ್ರಮಾಣದ ಕಡಿಮೆಯಿದ್ದು, ಸುರಕ್ಷಿತ ಸ್ಥಾನದಲ್ಲಿದೆ ಎನ್ನಲಾಗಿದೆ. ನೆರೆ ರಾಜ್ಯ ತಮಿಳುನಾಡು 10.71ರಷ್ಟು ಅಂದರೆ ಜಿಎಸ್‌ಡಿಪಿಯ ಶೇ.26.1ರಷ್ಟು ಸಾಲ ಹೊಂದುವ ಮೂಲಕ ಅತಿ ಹೆಚ್ಚು ಸಾಲ ಮಾಡಿರುವ ರಾಜ್ಯಗಳ ಪೈಕಿ ಮುಂಚೂಣಿಯಲ್ಲಿದೆ. ಆಂಧ್ರ ಪ್ರದೇಶ 7.11 ಸಾಲದ ಅನುಪಾತ ಹೊಂದಿದ್ದರೆ, ತೆಲಂಗಾಣ 4.50 ರಷ್ಟು ಅನುಪಾತದೊಂದಿಗೆ ಸಾಲದ ಪ್ರಮಾಣ ಏರುಗತಿಯಲ್ಲಿದೆ. ಕರ್ನಾಟಕ ಹಣಕಾಸಿನ ಹೊಣೆಗಾರಿಕೆ ಕಾಯಿದೆಯ ಪ್ರಕಾರ ರಾಜ್ಯ ಜಿಡಿಪಿಯ ಶೇ. 25ರ ವರೆಗೆ ಸಾಲ ಪಡೆಯಲು ಅವಕಾಶವಿದೆ. ಸದ್ಯ ಶೇ.24.91ರಷ್ಟು ಹೊಣೆಗಾರಿಕೆ ಹೊಂದುವ ಮೂಲಕ ಕರ್ನಾಟಕ ಆರ್ಥಿಕ ಶಿಸ್ತು ಕಾಪಾಡಿಕೊಂಡು ಬಂದಿದೆ. ರಾಜ್ಯದ ಮೂಲ ಸೌಕರ್ಯಗಳಿಗೆ ಹೆಚ್ಚು ಹಣ ವ್ಯಯಿಸುತ್ತಿರುವ ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ಸ್ಥಿತಿ ಉತ್ತಮವಾಗಿದೆ.

ಏರುಗತಿಯಲ್ಲಿ ಸಾಗುತ್ತಿರುವ ಸಾಲದ ಮೊತ್ತ: 2025-26ನೇ ಹಣಕಾಸು ವರ್ಷದ ಅಂತ್ಯಕ್ಕೆ ಕರ್ನಾಟಕದ ಒಟ್ಟು ಸಾಲ ಸುಮಾರು 7.64 ಲಕ್ಷ ಕೋಟಿ ರು. ತಲುಪಲಿದೆ ಎಂದು ಅಂದಾಜಿಸಲಾಗಿದೆ. ಇದು ರಾಜ್ಯದ ಒಟ್ಟು ಜಿಡಿಪಿಯ ಶೇ. 24.91 ರಷ್ಟಿದೆ. 2026-27ನೇ ಸಾಲಿನಲ್ಲಿ ಸುಮಾರು 1.20 ಲಕ್ಷ ಕೋಟಿಯಿಂದ 1.30 ಲಕ್ಷ ಕೋಟಿ ವರೆಗೆ ಹೊಸ ಸಾಲ ಪಡೆಯುವ ಸಾಧ್ಯತೆ ಇದೆ. ರಾಜ್ಯದ ಒಟ್ಟು ಸಾಲದ ಹೊರೆ ಅಪಾಯಕಾರಿ ಮಟ್ಟಕ್ಕೆ ತಲುಪಿಲ್ಲವಾದರೂ, ಏರುಗತಿಯಲ್ಲಿರುವುದು ಹಲವರ ಆತಂಕಕ್ಕೆ ಕಾರಣವಾಗಿದೆ.

2020-21ರಲ್ಲಿ ಕರ್ನಾಟಕ ಸರಕಾರದ ಸಾಲದ ಪ್ರಮಾಣ ನಾಲ್ಕು ಲಕ್ಷ ಕೋಟಿ ರು. ಆಸುಪಾಸಿನಲ್ಲಿತ್ತು. ಐದು ವರ್ಷಗಳಲ್ಲಿ 2.65 ಲಕ್ಷ ಕೋಟಿ ರು.ಗಿಂತಲೂ ಹೆಚ್ಚು ಸಾಲ ಪಡೆಯಲಾಗಿದೆ. ಈ ಪ್ರಮಾಣದಲ್ಲಿ ಸಾಲ ಏರಲು ಕರೋನಾ ಲಾಕ್‌ಡೌನ್ ವೇಳೆ ಆಗಿರುವ ಆರ್ಥಿಕ ನಷ್ಟ ಮುಖ್ಯ ಕಾರಣ ಎನ್ನಲಾಗಿದೆ. ಇದರೊಂದಿಗೆ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ 52,000 ಕೋಟಿ ಹೆಚ್ಚು ವೆಚ್ಚವಾಗುತ್ತಿದ್ದು, ಇದು ಬಜೆಟ್‌ನ ವೆಚ್ಚದ ಮೇಲೆ ತೀವ್ರ ಒತ್ತಡ ಹೇರಿದೆ ಎನ್ನಲಾಗುತ್ತಿದೆ.

ಸಾಲದ ಪ್ರಮಾಣ



1 ತಮಿಳುನಾಡು
2 ಮಹಾರಾಷ್ಟ್ರ
3 ಉತ್ತರ ಪ್ರದೇಶ
4 ಕರ್ನಾಟಕ
5 ಕೇರಳ

ಫನ್‌ತರಂಗ

- ರಘುಪತಿ ಶೃಂಗೇರಿ -

ಅಸ್ಸಾಂ ಕಾಂಗ್ರೆಸ್ ಮಾಜಿ ಅಧ್ಯಕ್ಷ ಭೂಪೇನ್ ಬೋರಾ ಬಿಜೆಪಿ ಸೇರ್ಪಡೆ

ಸುದ್ದಿ

ಕುಡಿಯುವ ನೀರಿನ ಸಮಸ್ಯೆಗೆ ಸಂಪರ್ಕಿಸಿ

ಚಾಮರಾಜನಗರ: ಜಿಲ್ಲೆಯಾದ್ಯಂತ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಜಿಲ್ಲಾ ಪಂಚಾಯತ್ ಕಚೇರಿಗೆ ದೂರುಗಳು ಸ್ವೀಕೃತವಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗಳನ್ನು ಪರಿಹರಿಸಲು ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯಿತಿ ಕಚೇರಿಗಳಲ್ಲಿ ಸಹಾಯವಾಣಿ ತೆರೆಯಲಾಗಿದೆ. ಜಿಲ್ಲಾ ಪಂಚಾಯತ್ ಸಹಾಯವಾಣಿ ಸಂ: 08226-224015, ಚಾಮರಾಜನಗರ ತಾಪಂ ಸಹಾಯವಾಣಿ ಸಂ: 08226-225392, ಗುಂಡ್ಲುಪೇಟೆ ತಾಪಂ ಸಹಾಯವಾಣಿ ಸಂ: 08229-200322, ಕೊಳ್ಳೇಗಾಲ ತಾಪಂ ಸಹಾಯವಾಣಿ ಸಂ: 08224-252505, ಹನೂರು ತಾಲೂಕು ಪಂಚಾಯಿತಿ ಸಹಾಯವಾಣಿ ಸಂ: 08224-200130 ಹಾಗೂ ಯಳಂದೂರು ತಾಪಂ ಸಹಾಯವಾಣಿ ಸಂ: 08226-295166 ಆಗಿದೆ. ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಕಂಡು ಬಂದಲ್ಲಿ ಸಾರ್ವಜನಿಕರು ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯಿತಿ ಕಚೇರಿಗಳಲ್ಲಿ ತೆರೆಯಲಾಗಿರುವ ಸಹಾಯವಾಣಿಯನ್ನು ಸಂಪರ್ಕಿಸುವಂತೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ತಿಳಿಸಿದ್ದಾರೆ.

ಬೇಕಾಗಿದ್ದಾರೆ
ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ.
ಸಂಬಳ: 25,000-30,000
ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ.
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
9187412584 / 9187312582

ಪ್ರಮಾಣ ಪತ್ರ
ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಕಸಬಾ ಹೋಬಳಿ, ಹೂಲೀಕುಂಟೆ ಗ್ರಾಮದ ವಾಸಿ ಶಿವಯ್ಯ ಸಿ.ವಿ ರವರ ಹೆಂಡತಿಯಾದ 45 ವರ್ಷ ವಯಸ್ಸುಳ್ಳ ಪ್ರೇಮಲತಾ. ಹೆಚ್.ಆರ್ ಆದ ನಾನು ಸತ್ಯವಾಗಿ ಪ್ರಮಾಣೀಕರಿಸುವುದೇನೆಂದರೆ.
ನಾನು ಮೇಲ್ಕಂಡ ವಿಳಾಸದಲ್ಲಿ ಖಾಯಂ ವಾಸಿಯಾಗಿರುತ್ತೇನೆ. ನನ್ನ ಆಧಾರ್ ಕಾರ್ಡ್ (ನಂ. 3646 4223 5131) ದಾಖಲೆಯಲ್ಲಿ ಹಾಗೂ ಶಾಲಾ ದಾಖಲಾತಿಯಲ್ಲಿ ನನ್ನ ಹೆಸರು ಪ್ರೇಮಲತಾ ಹೆಚ್.ಆರ್ ಎಂದು ನಮೂದಾಗಿರುತ್ತದೆ ಹಾಗೂ ಜನ್ಮ ದಿನಾಂಕ- 03-05-1981 ಆಗಿರುತ್ತದೆ. ಎಲ್.ಐ.ಸಿ ಪಾಲಿಸಿ ದಾಖಲೆಯಲ್ಲಿ ನನ್ನ ಹೆಸರು ಪ್ರೇಮಾ.ಹೆಚ್.ಆರ್ ಎಂದು ಇದ್ದು,ನಾನು ಶಾಹಿ ಎಕ್ಸ್ ಪೋರ್ಟ್ ಕಂಪನಿ, ಹೊಸರೋಡ್, ಬೆಂಗಳೂರು ಇಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಅಲ್ಲಿ ನನ್ನ ಹೆಸರು ಪ್ರೇಮ.ಸಿ.ವಿ. ಎಂದು ನಮೂದಾಗಿರುತ್ತದೆ. ನಾನು ಸಹಿ ಮಾಡುವುದು ಪ್ರೇಮಲತ. ಹೆಚ್.ಆರ್ ಎಂಬುದಾಗಿರುತ್ತದೆ.
ಮೇಲ್ಕಂಡ ಈ ಮೂರೂ ಹೆಸರುಗಳು ಪ್ರೇಮಲತ.ಹೆಚ್.ಆರ್ ಹಾಗೂ ಪ್ರೇಮಾ. ಹೆಚ್.ಆರ್ ಮತ್ತು ಪ್ರೇಮ.ಸಿ.ವಿ. ಒಂದೇ ಆಗಿದ್ದು ಸದರಿ ಹೆಸರಿನ ವ್ಯಕ್ತಿ ನಾನೇ ಆಗಿರುತ್ತೇನೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ. ಆದ್ದರಿಂದ ಈ ಪ್ರಮಾಣ ಪತ್ರವನ್ನು ಸಂಬಂಧಿಸಿದ ಅಧಿಕಾರಿಗಳಲ್ಲಿ ಸಲ್ಲಿಸುತ್ತಿದ್ದೇನೆ.
ಈ ಮೇಲ್ಕಂಡ ಎಲ್ಲಾ ಅಂಶಗಳು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಸತ್ಯವಾಗಿರುತ್ತವೆಂದು ಹೇಳಿ ಕೊರಟಗೆರೆಯ ನೋಟರಿಯವರಾದ ಡಿ.ಸಿ ಶಿವರಾಮಯ್ಯ (Reg.No.Law-161,LCL-2021) ಅವರ ಸಮ್ಮುಖದಲ್ಲಿ ದಿನಾಂಕ-21-02-2026 ರಂದು ನನ್ನ ಸಹಿ ಮಾಡಿರುತ್ತೇನೆ.

THE COURT OF THE CIVIL JUDGE AND JMFC AT BAGEPALLI
Crim miss NO. 1382 / 2025
Petitioner Smt Kamalamma w/o Lakhsmi Reddy Aged about 80 Years Nalapareddypalli village Gulur Hobly,Bagepalli Taluk,Chikkaballapur District. V/S Respondent : The Registrar of Births and Deaths. Office of Thasildar, Bagepalli. Bagepalli Taluk
PAPER PUBLICATION
The petitioner have filed this petition for Death certificate of the petitioner. her Aunty padmavathamma Daughter of Late Adireddy was died on 25-10-2018 at her residence Nalapareddypalli. Village, GulurHobli Bagepalli Taluk. Chikkaballapur District, The Petition is still Pending, any person who nave any right, or interest, may appear before this Honble court on 26/03/2026 at 11.00 AM in person or through any pleader to file your Objections if any. Take notice that in default of your appearance on the date mentioned before in the petition in will be heard and determined ex-parte.
Place:Bagepalli Date:10/2/2026
BY ORDER OR THE COURT
Sheristedar
Court of Covil Judge & JMFC

IN THE COURT OF THE CIVIL JUDGE & J.M.F.C. AT KORATAGERE
Cri.Mis No: 33/ 2026
Petitioners: 1. **Mohankumar s/o Late Narasimhaiah,** Aged about 50 years. 2. **Santoshkumar s/o Late Narasimhaiah,** Aged about 40 years. 3. **Hemalatha w/o Giribabu H,** Aged about 40 years. P1 to 3 of Gundanjaneya temple street, 6th waed, koratagere town, koratagere. 4. **Yashoda N W/o Varadaraju R,** Aged about 38 years. 5. **Pushpalatha w/o Lokeshkumar,** Aged about 50 years. 6. **Varadaraju R s/o Ramakrishnaiah,** Aged about 46 years. 7. **Rukkini w/o Nagaraju,** Aged about 43 years. r/o Bennenahalli village, Kasaba hobli, Tipaturu taluk, Tumakuru dist. 8. **Narasimhamurthy s/o Late Muddarangaiah,** Aged about 68 years. 9. **Lokesh kumar s/o Late Muddarangaya,** Aged about 64 years.P4 to p8 and p9 are residents of muggondanahalli village, kasaba hobli, koratagere taluk, tumkuru dist.
Respondents: Deputy-Thasildar Koratagere, koratagere Taluk.
PUBLIC NOTIFICAION
Whereas the petitioners have filed the above petition to obtain the death certificate of grant father of 1 to 7 and father of the 8 and 9 petitioner i.e **muddarangaiah s/o Late Narasappa,** he died on 12-10-1984 at in his house at Muggondanahalli Village, Kasaba Hobli, Koratagere Taluk tumkuru dist, is there any other L.R.s are hereby summoned to appear in the above court in person or by pleader on; 28-03-2026 at 11 A.M. to answer to the same Failing which the petition will be disposed of exparte.
By order of the court
Sd/-,Shirastedar
Civil judge & J.M.F.C.court
Koratagere.
S.N.Hanumanthraju
Adv. For petitioner.
Koratagere.
Dated 05-08-2025.

IN THE COURT OF THE CIVIL JUDGE AND JMFC AT BAGEPALLI
Crim miss No 1383/2025
Petitioner: Smt Kamalamma w/o Lakhsmi Reddy Aged about 80 Years Nalapareddypalli village Gulur Hobly, Bagepalli Taluk,Chikkaballapur District. V/S Respondent: The Registrar of Births and Deaths. Office of Thasildar, Bagepalli. Bagepalli Taluk
PAPER PUBLICATION
The petitioner have filed this petition for Death certificate of the petitioner her Uncle Ramareddy son of VenkataShivareddy was died on 15-03-2010 at her residence Nalapareddypalli. Village Gulur Hobli Bagepalli Taluk. Chikkaballapur District, The Petition is still Pending, any person who have any right, or interest, may appear before this Hon'ble court on 26/03/2026 at 11.00 AM in person or through any pleader to file your Objections if any. Take notice that in default of your appearance on the date mentioned before in the petition in will be heard and determind ex-part.
Place:Bagepalli Date:10/2/2026
BY ORDER OR THE COURT
Sheristedar
Court of Covil Judge & JMFC

IN THE COURT OF THE CIVIL JUDGE & J.M.F.C. AT KORATAGERE
C.Mis No: 38/ 2026
Petitioners: Puttamma & anothers.
V/S
Respondents: The Register birth and death, Deputy Thahasildar, Koratagere Taluk, Tumkuru dist.
PUBLIC NOTIFICAION
Where as the petitioners have filed the above petition to obtain the death certificate of 1st petitioners is the Daughter-in-law and 2nd petitrioner is the son of deceased **Doddaranganayaka s/o Ranganayaka,** died on:- 09-11-1979, in her house of 1st petitioner at Maragondanaguni village, Kolala hobli, koratagere taluk, Tumkuru dist. it is hereby notify that whoever has interest or objection to obtain the death certificates of the above said person, appear in person or through your advocate on; 07-04-2026 at 11-00 am in the above case. Failing which the matter will be heard and written in your absence. Given under my hand and seal of the court on this day at koratagere 10-02-2026.
By order of the court
Sd/-,Shirastedar
Civil judge & J.M.F.C.court
Koratagere.
H.C.Vrushabendra swamy. BA,LLB.
Advocate for petitoners
Koratagere.

IN THE COURT OF THE CIVIL JUDGE AND JMFC AT BAGEPALLI
Crim miss No 1384/2025
Petitioner: Smt Kamalamma w/o Lakhsmi Reddy Aged about 80 Years Nalapareddypalli village Gulur Hobly, Bagepalli Taluk,Chikkaballapur District. V/S Respondent: The Registrar of Births and Deaths. Office of Thasildar, Bagepalli. Bagepalli Taluk
PAPER PUBLICATION
The petitioner have filed this petition for Death certificate of the petitioner her Aunty Usha Daughter of Bayaparrddy was died on 04/09/2005 at her residence Nalapareddypalli. Village Gulur Hobli Bagepalli Taluk. Chikkaballapur District, The Petition is still Pending, any person who have any right, or interest, may appear before this Hon'ble court on 26/03/2026 at 11.00 AM in person or through any pleader to file your Objections if any. Take notice that in default of your appearance on the date mentioned before in the petition in will be heard and determined ex-parte.
Place:BagepalliDate:10/2/2025
BY ORDER OF THE COURT
Sheristedar
Court of Civil Judge & JMFC

SBI ಭಾರತೀಯ ಸ್ಟೇಟ್ ಬ್ಯಾಂಕ್
ಕೊಡಿಯಾಲ ಶಾಖೆ (08039) ಬಜಾರ್ ರಸ್ತೆ, ಕೊಡಿಯಾಲ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ-571415 E-mail: sbi.08039@sbi.co.in
ನಿಯಮ 8(1) ಸ್ವಾಧೀನದ ಸೂಚನೆ (ಸ್ಥಿರಾಸ್ಥಿಗಳಿಗಾಗಿ)
ಈ ಕೆಳಗಿನ ಸಹಿದಾರರು ಭಾರತೀಯ ಸ್ಟೇಟ್ ಬ್ಯಾಂಕ್ ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 ಪ್ರಧಾನ ಮಾಡಿದ ಅಧಿಕಾರವನ್ನು ಕಲಂ 13(12) ಆಕ್ಟ್ ಅಡಿಯಲ್ಲಿ ನಿಯಮ 9ರಂತೆ ಜೊತೆಗೆ ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ (54ರ 2002) ಕಾಯಿದೆಯಡಿಯಲ್ಲಿ ಅಧಿಕಾರ ಚಲಾಯಿಸಿ ಆ ನೋಟೀಸ್ ತಲುಪಿದ 60 ದಿನಗಳೊಳಗಾಗಿ ಪಾವತಿಸಲು ಕೋರಲಾಗಿದೆ.
ಈ ಕೆಳಕಂಡ ಸಾಲಗಾರರು ಹಣ ಪಾವತಿ ಮಾಡಲು ವಿಫಲರಾಗಿರುವುದರಿಂದ, ನೋಟೀಸ್ ಅನ್ನು ನಿಮಗೂ ಹಾಗೂ ಸಾರ್ವಜನಿಕರಿಗೂ ನೀಡಿದ್ದು, ಕೆಳಗೆ ಸಹಿ ಮಾಡಿರಿವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಶನ್ ಕಾಯ್ದೆಯ 13(4) ಹಾಗು 9ನೇ ನಿಯಮದಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ಥಿರಾಸ್ಥಿ ಸ್ವತ್ತನ್ನು ಬ್ಯಾಂಕ್ ತನ್ನ ವಶಕ್ಕೆ / ಸ್ವಾಧೀನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಿರುತ್ತಾರೆ. ಮುಖ್ಯವಾಗಿ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೂ ಈ ಮೂಲಕ ತಿಳಿಸುವುದೇನೆಂದರೆ ಸ್ಥಿರಾಸ್ತಿ ಸ್ವತ್ತು ಕುರಿತಾದ ಯಾವುದೇ ವ್ಯವಹಾರವನ್ನು ಮಾಡಬಾರದಾಗಿ ಎಚ್ಚರಿಸಲಾಗುತ್ತದೆ. ಮತ್ತು ಸ್ಥಿರಾಸ್ತಿ ಸ್ವತ್ತಿನ ಮೇಲೆ ಯಾವುದೇ ವ್ಯವಹಾರವನ್ನು ಮಾಡಿದರೆ ಭಾರತೀಯ ಸ್ಟೇಟ್ ಬ್ಯಾಂಕ್ ನಿಮಿತ್ತಕ್ಕೆ ಒಳಪಡುತ್ತದೆ.
ಈ ಮೂಲಕ ಸಾಲಗಾರರ ಗಮನಕ್ಕೆ ತರುವುದೇನೆಂದರೆ ಈ ಕೆಳಗೆ ಸಹಿ ಮಾಡಿರುವ ಅಧಿಕೃತ ಅಧಿಕಾರಿಯು ಸೆಕ್ಯುರಿಟೈಜೇಷನ್ ಕಾಯ್ದೆಯ ಉಪವಿಭಾಗ (8) ಹಾಗೂ 13ರ ಕಾಯಿದೆಯಲ್ಲಿ ಅನ್ವಯಿಸುವಂತೆ ಕೆಳಗೆ ನಮೂದಿಸಿರುವ ಸ್ಥಿರಾಸ್ತಿ ಸ್ವತ್ತನ್ನು ಸ್ವಾಧೀನಕ್ಕೆ ಪಡೆದಿರುತ್ತಾರೆಂದು ಸಾರ್ವಜನಿಕರಿಗೆ ತಿಳಿಸುತ್ತಿದ್ದಾರೆ.
• **ಡಿಮ್ಯಾಂಡ್ ನೋಟಿಸ್‌ನ ದಿನಾಂಕ:** 06.09.2025 • **ಸ್ವಾಧೀನ ಪಡೆದುಕೊಂಡ ದಿನಾಂಕ:** 17.02.2026
• **ಒಟ್ಟು ಸಾಲದ ಮೊತ್ತ:** ರೂ. 13,40,656/- (ಹದಿಮೂರು ಲಕ್ಷದ ನಲವತ್ತು ಸಾವಿರದ ಆರನೂರು ಐವತ್ತಾರು ರೂಪಾಯಿಗಳು ಮಾತ್ರ) ದಿನಾಂಕ 02-02-2026 ರವರಗೆ+ನಂತರದ ಬಡ್ಡಿ ಹಾಗೂ ಇತರೆ ಶುಲ್ಕಗಳು.
• **ಸಾಲಗಾರರ ಹೆಸರು ಮತ್ತು ವಿಳಾಸ:** ಆಶಾ ಕೆ., W/o ಪುಟ್ಟಸ್ವಾಮಿ, ಮಂಡ್ಯ-ಮೈಸೂರು ರಸ್ತೆ, ಪೀಹಳ್ಳಿ ಗ್ರಾಮ, ಕೊಡಿಯಾಲ ಗ್ರಾಮಪಂಚಾಯತಿ, ಅರಕೆರೆ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ-571415.
• **ಅಡಮಾನವಿಟ್ಟ ಆಸ್ತಿಯ ವಿವರಗಳು:** ಎಲ್ಲಾ ತುಂಡು ಮತ್ತು ಪಾರ್ಸೆಲ್ ಹೊಂದಿರುವ ಕೊಡಿಯಾಲ ಗ್ರಾಮಪಂಚಾಯತಿ ಖಾತಾ ಸಂಖ್ಯೆ 35 93/2, PID ಸಂಖ್ಯೆ 152100702100620113, ಪೂರ್ವದಿಂದ ಪಶ್ಚಿಮಕ್ಕೆ: 11.94 ಮೀ., ಉತ್ತರದಿಂದ ದಕ್ಷಿಣಕ್ಕೆ: 5.37 ಮೀ., ವಿಳಾಸ: ಪೀಹಳ್ಳಿ ಗ್ರಾಮ, ಕೊಡಿಯಾಲ ಗ್ರಾಮಪಂಚಾಯತಿ, ಅರಕೆರೆ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಆಶಾ ಕೆ., W/o ಪುಟ್ಟಸ್ವಾಮಿರವರ ಹೆಸರಿನಲ್ಲಿ ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಪಿ.ಸಿ. ನಿಂಗೇಗೌಡರವರ ಮನೆ, ಉತ್ತರಕ್ಕೆ: ನಾಗರಾಜುರವರ ಮನೆ, ದಕ್ಷಿಣಕ್ಕೆ: ಪಿ.ಡಿ. ನಾಗರಾಜುರವರ ಮನೆ.
ದಿನಾಂಕ: 23.02.2026 ಸಹಿ/- ಅಧಿಕೃತ ಅಧಿಕಾರಿ
ಸ್ಥಳ: ಕೊಡಿಯಾಲ ಭಾರತೀಯ ಸ್ಟೇಟ್ ಬ್ಯಾಂಕ್, (SARFAESI ಕಾಯಿದೆ-2002 ಅಡಿಯಲ್ಲಿ)

ವೇಮಗಲ್ ಸರಕಾರಿ ಆಸ್ಪತ್ರೆಯಲ್ಲಿ ಜನಪ್ರತಿನಿಧಿಗಳ ಸಭೆ | ಲೋಕೇಶ್ ಮರಿಯಪ್ಪ ಸೂಚನೆ

ರೋಗಿಗಳ ಜತೆಗೆ ಸೌಜನ್ಯವಾಗಿ ನಡೆದುಕೊಳ್ಳಿ

ಕೋಲಾರ: ರೋಗಿಗಳು ಮತ್ತು ಸಾರ್ವಜನಿಕರ ಜತೆಗೆ ಆಸ್ಪತ್ರೆ ಸಿಬ್ಬಂದಿ ಸೌಜನ್ಯಯುತವಾಗಿ ನಡೆದುಕೊಳ್ಳಬೇಕೆಂದು ವೇಮಗಲ್ ಕುರುಗಲ್ ಪಟ್ಟಣ ಪಂಚಾಯತಿ ಸದಸ್ಯ ಲೋಕೇಶ್ ಮರಿಯಪ್ಪ ಹೇಳಿದರು.

ವೇಮಗಲ್ ಸರಕಾರಿ ಆಸ್ಪತ್ರೆಯಲ್ಲಿ ನಡೆದ ಜನಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿ, ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಸಿಗುವ ವಿವಿಧ ಸೇವೆಗಳ ಬಗ್ಗೆ ಬೋರ್ಡ್ ಹಾಕಬೇಕು. ರಾತ್ರಿ ವೇಳೆ ವೈದ್ಯರು ಮತ್ತು ಸಿಬ್ಬಂದಿ ರೂಂನಲ್ಲಿ ಸೇರಿಕೊಂಡು ನಿದ್ದೆ ಮಾಡದೆ ಸಾರ್ವಜನಿಕರಿಗೆ ಕಾಣುವಂತೆ ಗ್ರೌಂಡ್ ಫ್ಲೋರ್‌ನಲ್ಲಿ ಕುಳಿತುಕೊಂಡು ರೋಗಿಗಳಿಗೆ ಕಾಯಬೇಕು ಎಂದರು.

ಅಧಿಕೃತ ನರ್ಸ್‌ಗಳು ಮಾತ್ರ ಚುಚ್ಚುಮದ್ದು ಕೊಡುವ ಜತೆಗೆ ಫಾರ್ಮಸಿಸ್ಟ್ ಮಾತ್ರವೇ ಮಾತ್ರೆ ವಿತರಿಸಬೇಕು. ಲ್ಯಾಬ್‌ನಲ್ಲಿ ರಕ್ತ ಪರೀಕ್ಷೆ ವರದಿಗಳನ್ನು ಸರಿಯಾದ ಸಮಯಕ್ಕೆ ನೀಡಬೇಕು. ಇಸಿಜಿ ಹಾಗೂ ಆಕ್ಸಿಜನ್ ವ್ಯವಸ್ಥೆಯನ್ನು ಸರಿಯಾಗಿಟ್ಟುಕೊಳ್ಳುವ ಜತೆಗೆ ಆಕ್ಸಿಜನ್‌ಗೆ ಪ್ರತ್ಯೇಕ ಲೈನ್ ಎಳೆಸಬೇಕು.

ಆಸ್ಪತ್ರೆಗೆ ಪ್ರತ್ಯೇಕವಾಗಿ ಆಂಬುಲೆನ್ಸ್ ವ್ಯವಸ್ಥೆ ಆಗಬೇಕು, ಸಿಸೇರಿಯನ್ ಆಪರೇಷನ್‌ಗೆ ಥಿಯೇಟರ್ ಸಜ್ಜುಗೊಳಿಸಬೇಕು. ಮಾತ್ರೆಗಳನ್ನು ಹೊರಗಡೆ ಮೆಡಿಕಲ್ ಸ್ಟೋರ್‌ಗೆ ಬರೆಯಬಾರದು ಎಂದು ಲೋಕೇಶ್ ಮರಿಯಪ್ಪ ಮನವಿ ಮಾಡಿದರು.

ವೇಮಗಲ್ ಸರಕಾರಿ ಆಸ್ಪತ್ರೆ ಸಿಬ್ಬಂದಿ ಜತೆಗೆ ಜನಪ್ರತಿನಿಧಿಗಳ ಸಭೆ ನಡೆಸಲಾಯಿತು.

ತಾಲೂಕು ಆರೋಗ್ಯಾಧಿಕಾರಿ ಡಾ.ಎ.ವಿ. ನಾರಾಯಣಸ್ವಾಮಿ ಮಾತನಾಡಿ, ಸರಕಾರಿ ಆಸ್ಪತ್ರೆಯಲ್ಲಿರುವ ಸಣ್ಣಪುಟ್ಟ ಲೋಪಗಳನ್ನು ಪರಿಪಡಿಸಲಾಗುತ್ತದೆ. ವೈದ್ಯರು ಮತ್ತು ಸಿಬ್ಬಂದಿ ತುರ್ತು ಪರಿಸ್ಥಿತಿಯಲ್ಲಿ ಚಿಕಿತ್ಸೆ ಕೊಟ್ಟು ರೋಗಿಗಳ ಪ್ರಾಣ ಉಳಿಸಿರುವ ಹತ್ತು ಹಲವಾರು ಉದಾಹರಣೆಗಳಿವೆ. ಹೀಗಾಗಿ ದೂರುಗಳ ಜತೆಗೆ ವೈದ್ಯರ ಉತ್ತಮ ಸೇವೆಯನ್ನು ಗುರುತಿಸಿ ಶ್ಲಾಘಿಸುವ ಕೆಲಸವೂ ಆಗಬೇಕೆಂದು ಸಲಹೆ ನೀಡಿದರು. ಆಪರೇಷನ್ ಮಾಡಲು ಅಗತ್ಯವಿರುವ ಪರಿಕರ ಮತ್ತು ಸಿವಿಲ್ ಕೆಲಸಗಳನ್ನು ಮುಗಿಸಲು ಎರಡು ತಿಂಗಳು ಅಗತ್ಯವಿದ್ದು ನಂತರ ಓಟಿ ಆರಂಭಿಸಲಾಗುತ್ತದೆ ಎಂದು ಟಿಎಚ್‌ಒ ಭರವಸೆ ನೀಡಿದರು.

> ಸರಕಾರಿ ಆಸ್ಪತ್ರೆಯಲ್ಲಿರುವ ಸಣ್ಣಪುಟ್ಟ ಲೋಪಗಳನ್ನು ಪರಿಪಡಿಸಲಾಗುತ್ತದೆ. ವೈದ್ಯರು ಮತ್ತು ಸಿಬ್ಬಂದಿ ತುರ್ತು ಪರಿಸ್ಥಿತಿಯಲ್ಲಿ ಚಿಕಿತ್ಸೆ ಕೊಟ್ಟು ರೋಗಿಗಳ ಪ್ರಾಣ ಉಳಿಸಿರುವ ಹತ್ತು ಹಲವಾರು ಉದಾಹರಣೆಗಳಿವೆ. ಹೀಗಾಗಿ ದೂರುಗಳ ಜತೆಗೆ ವೈದ್ಯರ ಉತ್ತಮ ಸೇವೆಯನ್ನು ಗುರುತಿಸಿ ಶ್ಲಾಘಿಸುವ ಕೆಲಸವೂ ಆಗಬೇಕೆಂದು.
> – ಡಾ.ಎ.ವಿ.ನಾರಾಯಣಸ್ವಾಮಿ, ತಾಲೂಕು ಆರೋಗ್ಯಾಧಿಕಾರಿ

ಪಟ್ಟಣ ಪಂಚಾಯತಿ ಅಧ್ಯಕ್ಷೆ ಅನೂಷಾ, ಉಪಾಧ್ಯಕ್ಷ ಸಿ.ಎಸ್.ವೆಂಕಟೇಶ್, ಮುಖ್ಯಾಧಿಕಾರಿ ವೆಂಕಟೇಶ್, ಡಾ. ಅಬ್ರಾರ್,ಡಾ. ವೆಂಕಟಾಚಲಪತಿ, ಡಾ.ಕೃಪಾ ಆಚಾರ್,ಡಾ. ರವಿಕಿರಣ್, ಡಾ.ಸುಪ್ರಿಯಾ ಕಾಮತ್ ಇದ್ದರು.

ಜನವಿರೋಧಿ ನೀತಿಗಳ ವಿರುದ್ಧ ಹೋರಾಟ ನಿರಂತರ

ಗುಡಿಬಂಡೆ: ಇಂದು ರಾಜ್ಯ ಹಾಗೂ ಕೇಂದ್ರ ಸರಕಾರಗಳೆರಡೂ ಜಾರಿ ಮಾಡುವಂತಹ ಜನವಿರೋಧಿ ನೀತಿಗಳ ವಿರುದ್ಧ ನಮ್ಮ ಹೋರಾಟ ನಿರಂತರವಾಗಿ ನಡೆಯುತ್ತಿರುತ್ತದೆ. ಅದಕ್ಕೆ ಜನರೂ ಸಹ ಬೆಂಬಲ ಕೊಟ್ಟಾಗ ಹೋರಾಟಕ್ಕೆ ಜಯ ಸಿಗುತ್ತದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಹ ಸಂಚಾಲಕ ಜಯರಾಮರೆಡ್ಡಿ ತಿಳಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಬಾಗೇಪಲ್ಲಿಯಲ್ಲಿ ಫೆ.25, 26ರಂದು ನಡೆಯಲಿರುವ ಜಿಲ್ಲಾ ರೈತ ಸಮ್ಮೇಳನದ ಅಂಗವಾಗಿ ಗುಡಿಬಂಡೆಯಲ್ಲಿ ಹಮ್ಮಿಕೊಂಡಿದ್ದ ಪ್ರಚಾರಾಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಜ್ಯ ಹಾಗೂ ಕೇಂದ್ರ ಸರಕಾರಗಳೆರಡೂ ಸದಾ ರೈತ, ಜನ, ಬಡವರ ವಿರೋಧಿ ಕಾಯ್ದೆಗಳನ್ನು ಜಾರಿಗೆ ಮಾಡುವ ಮೂಲಕ ಬಂಡವಾಳಷಾಹಿ, ಉಳ್ಳವರು, ಉದ್ಯಮಿಗಳ ಪರವಾಗಿ ಕೆಲಸ ಮಾಡುತ್ತವೆ. ಸರಕಾರಗಳು ಜಾರಿಗೆ ತರುವಂತಹ ಕಾಯ್ದೆಗಳಿಂದ ಇಂದು ಅನೇಕರು ಸಮಸ್ಯೆಗಳಿಗೆ ಸಿಲುಕುತ್ತಿದ್ದಾರೆ. ಇತ್ತಿಚಿಗೆ ನರೇಗಾ ಯೋಜನೆಯನ್ನು ಬದಲಿಸಿದ್ದು, ಇದರಿಂದ ನರೇಗಾ ಯೋಜನೆಯಡಿ ಕೆಲಸ ಮಾಡುವ ಕೂಲಿ ಕಾರ್ಮಿಕರಿಗೆ ತುಂಬಾನೆ ಕಷ್ಟವಾಗುತ್ತದೆ. ಈ ರೀತಿಯ ಅನೇಕ ಸಮಸ್ಯೆಗಳ ಪರಿಹಾರಕ್ಕಾಗಿ ಕೆಪಿಆರ್‌ಎಸ್ ನಿರಂತರ ಹೋರಾಟ ಮಾಡುತ್ತದೆ. ಅದಕ್ಕೆ ಎಲ್ಲರ ಸಹಕಾರ ಅಗತ್ಯವಾಗಿದೆ. ಬಾಗೇಪಲ್ಲಿ ನಡೆಯಲಿರುವ ಜಿಲ್ಲಾ ರೈತ ಸಮ್ಮೇಳನಕ್ಕೆ ಹೆಚ್ಚು ಸಂಖ್ಯೆಯಲ್ಲಿ ಜನರು ಆಗಮಿಸಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಬಾಗೇಪಲ್ಲಿಯಲ್ಲಿ ಫೆ.25, 26 ರಂದು ನಡೆಯಲಿರುವ ಜಿಲ್ಲಾ ರೈತ ಸಮ್ಮೇಳನದ ಅಂಗವಾಗಿ ಗುಡಿಬಂಡೆಯಲ್ಲಿ ಪ್ರಚಾರಾಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಬಳಿಕ ಜಿಲ್ಲಾ ಮುಖಂಡ ಚೆನ್ನರಾಯಪ್ಪ ಮಾತನಾಡಿ, ಜಿಲ್ಲೆಯ ರೈತರು ಇಂದು ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಅಂತರ್ಜಲ ಕುಸಿತದಿಂದ ಕುಡಿಯುವ ನೀರಿಗೂ ಸಂಚಕಾರ ಬಂದಿದೆ.

ಸರಕಾರವು ಕೃಷ್ಣಾ ನದಿ ನೀರನ್ನು ಹಂಚಿಕೆ ಮಾಡುವ ಬದಲು ಬೆಂಗಳೂರಿನ ಕೊಳಚೆ ನೀರನ್ನು ನೀಡುತ್ತಿರುವುದು ಖಂಡನೀಯ. ಈಗಾಗಲೇ ಎಚ್.ಎನ್. ವ್ಯಾಲಿ ನೀರು ಕುಡಿಯಲು ಯೋಗ್ಯವಲ್ಲ ಎಂದು ಹೇಳಲಾಗಿತ್ತು. ಇದೀಗ ಆ ನೀರು ಬಾಗೇಪಲ್ಲಿಯ ಚಿತ್ರಾವತಿ ಡ್ಯಾಂ ಸೇರುತ್ತಿದೆ. ನಮ್ಮ ಪಾಲಿಗೆ ಸಿಗಬೇಕಾದ ಕೃಷ್ಣ ನದಿ ನೀರನ್ನು ತರವು ಬದಲು ಈ ರೀತಿಯ ಕೊಳಚೆ ನೀರನ್ನು ಪೂರೈಕೆ ಮಾಡುವುದು ಎಷ್ಟರ ಮಟ್ಟಿಗೆ ಸರಿ, ಇನ್ನೂ ದಶಕಗಳಿಂದ ಭೂಮಿ ಸಾಗುವಳಿ ಮಾಡುತ್ತಿರುವ ಬಗರ್‌ಹುಕುಂ ರೈತರಿಗೆ ಇನ್ನೂ ಹಕ್ಕುಪತ್ರ ಸಿಗದಿರುವುದು ಸರಕಾರದ ವೈಫಲ್ಯವಾಗಿದೆ. ಈ ಅನ್ಯಾಯಗಳ ವಿರುದ್ಧ ಧ್ವನಿ ಎತ್ತಲು ಫೆಬ್ರವರಿಯಲ್ಲಿ ನಡೆಯುವ ಜಿಲ್ಲಾ ಸಮ್ಮೇಳನವು ನಮಗೆ ದೊಡ್ಡ ವೇದಿಕೆಯಾಗಲಿದೆ ಎಂದರು.

ಈ ವೇಳೆ ಕರ್ನಾಟಕ ಪ್ರಾಂತ ರೈತ ಸಂಘದ ಎಂ.ಎ.ಆದಿನಾರಾಯಣ, ಉಪ್ಪಾರಹಳ್ಳಿ ಶ್ರೀನಿವಾಸ್, ನರೇಗಾ ಸೀನಪ್ಪ, ಆದಿನಾರಾಯಣಸ್ವಾಮಿ, ರವಣ, ಪುರಷೋತ್ತಮ್, ಲಕ್ಷ್ಮೀನಾರಾಯಣ ರಾಮು ಸೇರಿದಂತೆ ಹಲವರು ಇದ್ದರು.

ಕಾಂಗ್ರೆಸ್ ಪಕ್ಷದಿಂದ ದೇಶ ಅಭಿವೃದ್ಧಿಯಾಗಿಲ್ಲ : ಜಗನ್ನಾಥ್

ರಾಮನಗರ: ಕಾಂಗ್ರೆಸ್ ದೇಶದ ಅಭಿವೃದ್ಧಿ ವಿರುದ್ಧ ಹೋದರೆ ಬಿಜೆಪಿ ಅದರ ಹತ್ತುಪಟ್ಟು ಭಾರತ ದೇಶವನ್ನು ಸದೃಢವಾಗಿ ಕಟ್ಟುತ್ತದೆ ಎಂದು ಜಿಲ್ಲಾ ಯುವ ಬಿಜೆಪಿ ಘಟಕದ ಅಧ್ಯಕ್ಷ ಜಗನ್ನಾಥ್ ಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, 'ಭಾರತ ದೇಶದಲ್ಲಿ ವಿಶ್ವಮಟ್ಟದಲ್ಲಿ ಎಐ ಇಂಪ್ಯಾಕ್ಟ್ ಸೆಮಿಟ್‌ನ್ನು ಫೆ.16ರಿಂದ 20 ತಾರೀಖಿನವರೆಗೆ ಆಯೋಜಿಸಲಾಗಿತ್ತು. ಈ ಸಭೆಯಲ್ಲಿ 100 ಕ್ಕೂ ಹೆಚ್ಚು ದೇಶಗಳಿಂದ 500 ಕ್ಕೂ ಹೆಚ್ಚು ಎಐ ಸೆಮಿಟ್‌ನಿಂದ ಸಿಇಓಗಳು, 50 ಕ್ಕೂ ಹೆಚ್ಚು ಸಂಘಟನೆಗಳು, ಬೇರೆ ಬೇರೆ ದೇಶಗಳಿಂದ ಸಚಿವರು ಗಣ್ಯರು ಭಾಗವಹಿಸಿದ್ದರು.

ಇಂತಹ ಮಹತ್ತರ ಸೆಮಿಟ್‌ನಲ್ಲಿ ಕಾಂಗ್ರೆಸ್ ತೋರಿದ ದುರ್ವರ್ತನೆ ಖಂಡಿಸಬೇಕು ಎಂದರು. ಇಂದಿನ ಆಧುನಿಕ ನಾಗರೀಕತೆಗೆ ಹೊಸ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಸ್ವಯಂ ನಿರ್ಧಾರ ತೆಗೆದುಕೊಳ್ಳುತ್ತದೆ. ಸ್ವಯಂ ಚಿಂತನೆಯಿಂದ ಮನುಷ್ಯರು ಹೇಗೆ ನಿರ್ಧಾರಿಸಿಂದತೆಯೇ ಎಐ ತಂತ್ರಜ್ಞಾನ ಕೆಲಸ ಮಾಡುತ್ತದೆ. ಇದು ಪ್ರಕ್ರಿಯೆಯು ಹಿಂದೆ ಎಂದೂ ಆಗಿರದ ಬದಲಾವಣೆಯನ್ನು ಸಮಾಜಕ್ಕೆ ತರುತ್ತಿದೆ. ಈ ರೀತಿಯ ನಿರ್ಧಾರದಿಂದ ಮನುಷ್ಯನ ಅರ್ಧ ಕೆಲಸಗಳನ್ನು ಎಐ ತಂತ್ರಜ್ಞಾನವೇ ಮಾಡುವ ಸಾಮಾರ್ಥ್ಯ ಹೊಂದಿದೆ. ಈ ಸಮಾರಂಭವನ್ನು ಪ್ರಧಾನಿ ಮೋದಿ ಅವರು ಉದ್ಘಾಟನೆ ಮಾಡಿದ್ದರು ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಅನಂದಸ್ವಾಮಿ, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ರಾಮು, ಕಾರ್ಯದರ್ಶಿ ಕೃಷ್ಣ, ರಾಮನಗರ ಪ್ರಾಧಿಕಾರದ ಮಾಜಿ ನಿರ್ದೇಶಕ ಕಾಳಯ್ಯ, ಯುವ ಮುಖಂಡರಾದ ಎಚ್.ಎಸ್.ಮಂಜುನಾಥ್, ಪ್ರತಾಪ್, ಜ್ಞಾನೇಶ್, ಸುಮಂತ್, ಚೌಕಳ್ಳಿ ಮಂಜುನಾಥ್ ಇನ್ನಿತರು ಉಪಸ್ಥಿತರಿದ್ದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಯುವ ಬಿಜೆಪಿ ಘಟಕದ ಅಧ್ಯಕ್ಷ ಜಗನ್ನಾಥಗೌಡ ಮಾತನಾಡಿದರು.

ಜಿಲ್ಲಾ ಸತ್ರ ನ್ಯಾಯಾಲಯ ಆರಂಭಿಸಲು ಪ್ರತಿಭಟನೆ

ಕೆ.ಆರ್.ಪೇಟೆ: ಪಟ್ಟಣದಲ್ಲಿ 6ನೇ ಅಪರ ಮತ್ತು ಜಿಲ್ಲಾ ಸತ್ರ ನ್ಯಾಯಾಲಯವನ್ನು ಆರಂಭಿಸಬೇಕೆಂದು ಒತ್ತಾಯಿಸಿ ಕೆ.ಆರ್.ಪೇಟೆ ತಾಲೂಕು ವಕೀಲರ ಸಂಘದ ನೇತೃತ್ವದಲ್ಲಿ ನೂರಾರು ವಕೀಲರು ನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ಕೆ.ಆರ್.ಪೇಟೆ ತಾಲೂಕು ವ್ಯಾಪ್ತಿಯಲ್ಲಿ ಸಾವಿರಾರು ಪ್ರಕರಣಗಳಿದ್ದು ಕೆ. ಆರ್.ಪೇಟೆ ಪಟ್ಟಣದಲ್ಲಿ ಆರನೇ ಸತ್ರ ಜಿಲ್ಲಾ ನ್ಯಾಯಾಲಯ ಇಲ್ಲದೆ ಇರುವುದರಿಂದ ವಕೀಲರು ಹಾಗೂ ಕಕ್ಷಿದಾರರು ಅನಿವಾರ್ಯವಾಗಿ ಜಿಲ್ಲಾ ಕೇಂದ್ರವಾದ ಮಂಡ್ಯಕ್ಕೆ ಹೋಗುವ ಪರಿಸ್ಥಿತಿ ಎದುರಾಗಿದೆ. ಕೆ.ಆರ್ . ಪೇಟೆಯಲ್ಲಿ ಜಿಲ್ಲಾ ಸತ್ರ ನ್ಯಾಯಾಲಯವನ್ನು ಆರಂಭಿಸಬೇಕೆಂದು ಒತ್ತಾಯಿಸಿ ರಾಜ್ಯ ಉಚ್ಚ ನ್ಯಾಯಾಲಯಕ್ಕೆ ಹಾಗೂ ಕಾನೂನು ಸಚಿವರಿಗೆ ಹಾಗೂ ಸರಕಾರಕ್ಕೆ ಮನವಿ ಸಲ್ಲಿಸಿದ್ದರು ಯಾವುದೇ ಪ್ರಯೋಜನವಾಗಿಲ್ಲ ಆದ್ದರಿಂದ ಅನಿವಾರ್ಯವಾಗಿ ಚಳುವಳಿ ದಾರಿ ಹಿಡಿಯುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಾಲೂಕು ವಕೀಲರ ಸಂಘದ ಅಧ್ಯಕ್ಷ ನಾಗೇಗೌಡ ಹೇಳಿದರು.

ಪ್ರತಿಭಟನಾ ಸ್ಥಳಕ್ಕೆ ಶಾಸಕ ಎಚ್.ಟಿ.ಮಂಜು ಭೇಟಿ ನೀಡಿ, ವಕೀಲರ ಸಂಘದ ಪದಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಮಾ.6 ರಿಂದ ಬಜೆಟ್ ಅಧಿವೇಶನವು ಆರಂಭವಾಗುತ್ತಿದ್ದು ಈ ಸಂದರ್ಭದಲ್ಲಿ ಅಧಿವೇಶನದಲ್ಲಿಯೇ ಕೆ.ಆರ್. ಪೇಟೆಯ ಆರನೇ ಹೆಚ್ಚುವರಿ ಅಪರ ಜಿಲ್ಲಾ ಸತ್ರ ನ್ಯಾಯಾಲಯದ ಸಮಸ್ಯೆಯನ್ನು ಸರಕಾರದ ಗಮನಕ್ಕೆ ತಂದು ಆದಷ್ಟು ಶೀಘ್ರವೇ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಲಯವನ್ನು ಮಂಜೂರು ಮಾಡುವಂತೆ ಒತ್ತಾಯಿಸುತ್ತೇನೆ ಎಂದು ಶಾಸಕರು ಭರವಸೆ ನೀಡಿದರು.

ಕೆ.ಆರ್.ಪೇಟೆ ತಾಲೂಕು ವಕೀಲರ ಸಂಘದ ನೇತೃತ್ವದಲ್ಲಿ ವಕೀಲರು ನ್ಯಾಯಾಲಯದ ಕಲಾಪಗಳನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ವಕೀಲರ ಸಂಘದ ಮಾಜಿ ಅಧ್ಯಕ್ಷ ಎನ್. ಆರ್.ರವಿಶಂಕರ್ ಪ್ರಧಾನ ಕಾರ್ಯದರ್ಶಿ , ಸಾಧುಗೋನಹಳ್ಳಿ ಮಂಜೇಗೌಡ, ಹಿರಿಯ ವಕೀಲರಾದ ರಾಜೇನಹಳ್ಳಿ ರಾಜೇಗೌಡ, ಬಿ.ಎಲ್. ದೇವರಾಜು, ಎಸ್.ಸಿ. ವಿಜಯಕುಮಾರ್,ಜಿ.ಆರ್. ಅನಂತರಾಮಯ್ಯ, ಪ್ರಸನ್ನ ಕುಮಾರ್,ಎಚ್.ರವಿ, ಬಂಡಿಹೊಳೆ ಗಣೇಶ, ಗಂಜಿಗೆರೆ ಲೋಕೇಶ್, ವಿ.ಎಸ್. ಧನಂಜಯಕುಮಾರ್, ಎಂ.ಎಲ್.ಸುರೇಶ್, ಕೆ.ಎನ್. ಪಾಂಡು, ಉಪಾಧ್ಯಕ್ಷ ಪುರುಷೋತ್ತಮ್, ಕಾರ್ಯದರ್ಶಿ ಎಸ್. ಜೆ. ಮಂಜೇಗೌಡ, ಜಂಟಿ ಕಾರ್ಯದರ್ಶಿ ದೊಡ್ಡಯ್ಯ, ಖಜಾಂಚಿ ಪ್ರಸನ್ನ ಕುಮಾರ್, ಹಿರಿಯ ವಕೀಲರುಗಳಾದ ಕೆ.ಆರ್. ಮಹೇಶ್, ಎಂ.ಆರ್. ಪ್ರಸನ್ನ ಕುಮಾರ್ ಸೇರಿದಂತೆ ನೂರಾರು ವಕೀಲರು ಭಾಗವಹಿಸಿದ್ದರು.

ಇಂದು ಅರೆಕಾಲಿಕ ಕಾನೂನು ಸ್ವಯಂ ಸೇವಕರ ತರಬೇತಿ

ಚಾಮರಾಜನಗರ: ರಾಜ್ಯ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಬೆಂಗಳೂರಿನ ಔಟ್ಲಾಡ್ ಇಂಡಿಯಾ ಫೌಂಡೇಶನ್ ಹಾಗೂ ತಾಲೂಕು ಕಾನೂನು ಸೇವೆಗಳ ಸಮಿತಿ ಸಹಯೋಗದಲ್ಲಿ 2025-26ನೇ ಸಾಲಿನ ಹೊಸ ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ಫೆ.23 ರಿಂದ 26ರವರೆಗೆ ಹಮ್ಮಿಕೊಂಡಿರುವ ನಾಲ್ಕು ದಿನಗಳ ತರಬೇತಿಯ ಉದ್ಘಾಟನೆ ಕಾರ್ಯಕ್ರಮವು ಫೆ.23 ರಂದು ಬೆಳಗ್ಗೆ 10 ಗಂಟೆಗೆ ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ನಡೆಯಲಿದೆ. ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷ ಜಿ. ಪ್ರಭಾವತಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾಧಿಕಾರಿ ಶ್ರೀರೂಪ ಅವರು ಅಧ್ಯಕ್ಷತೆ ವಹಿಸುವರು. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ, ಔಟ್ಲಾಡ್ ಇಂಡಿಯಾ ಫೌಂಡೇಶನ್ನ ಯೋಜನಾ ಸಂಯೋಜಕರಾದ ಮೀಮಾಂಸ ಸಿಂಗ್ ಅವರು ಉಪಸ್ಥಿತರಿರುವರು. ಸಂಪನ್ಮೂಲ ವ್ಯಕ್ತಿಗಳಾದ ಔಟ್ಲಾಡ್ ಇಂಡಿಯಾ ಫೌಂಡೇಶನ್‌ನ ಎಚ್. ವೆಂಕಟೇಶ್, ಜಾಮೀಜಾಯ್, ಸಿದ್ದಾರ್ಥ್ ಪಾಟೀಲ್ ಅವರು ಕಾರ್ಯಕ್ರಮದಲ್ಲಿ ತರಬೇತಿ ನೀಡುವರು ಎಂದು ತಿಳಿಸಿದೆ.

ವಿಜಯನಗರದ ಕನ್ನಡ ಭವನದಲ್ಲಿ 'ಸಾಂಸ್ಕೃತಿಕ ಕಾವ್ಯೋತ್ಸವ' ಸಂಭ್ರಮ | ಸಾಧಕರಿಗೆ ಪ್ರಶಸ್ತಿ ಪ್ರದಾನ

ಮಕ್ಕಳಿಗೆ ಶಿಕ್ಷಣದ ಜತೆಗೆ ಸಂಸ್ಕೃತಿ, ಸಂಸ್ಕಾರ ಕಲಿಸಿ

ಮೈಸೂರು: ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕೃತಿ ಹಾಗೂ ಸಂಸ್ಕಾರವನ್ನು ಕಲಿಸಿ ಎಂದು ಮೈಸೂರು ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸಲಹೆ ಮಾಡಿದರು.

ಧಾರವಾಡ ಜಿಲ್ಲೆ ಕುಂದಗೋಳದ ಜನಸೇವಾ ಫೌಂಡೇಶನ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಅಲೆಯನ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯ ಸಹಯೋಗದಲ್ಲಿ ವಿಜಯನಗರದ ಕನ್ನಡ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ 'ಸಾಂಸ್ಕೃತಿಕ ಕಾವ್ಯೋತ್ಸವ' ಸಂಭ್ರಮದಲ್ಲಿ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಪ್ರಸ್ತುತ ಸ್ಪರ್ಧಾತ್ಮಕ ಯುಗ. ಹೀಗಾಗಿ ಶಿಕ್ಷಣ ಬಹಳ ಮುಖ್ಯ. ಆದ್ದರಿಂದ ಪ್ರತಿಯೊಬ್ಬರೂ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡಿಸಬೇಕು ಎಂದರು.

ಕೇವಲ ಶಿಕ್ಷಣ ಕಲಿಸಿದರೆ ಅಷ್ಟೇ ಸಾಲದು. ಅಲ್ಲಿಗೆ ಪೋಷಕರ ಕರ್ತವ್ಯ ಮುಗಿಯುವುದಿಲ್ಲ. ಮಕ್ಕಳು ಸರಿದಾರಿಯಲ್ಲಿ ಹೋಗುತ್ತಿದ್ದಾರೆಯೇ ಎಂಬುದನ್ನು ಗಮನಿಸಬೇಕು ಎಂದು ಅವರು ಕಿವಿಮಾತು ಹೇಳಿದರು.

ಇತ್ತೀಚೆಗೆ ಮಕ್ಕಳು ಪುಸ್ತಕಗಳನ್ನು ಓದುವುದಿಲ್ಲ. ಸದಾ ಮೊಬೈಲ್ ನಲ್ಲಿ, ಸಾಮಾಜಿಕ ಜಾಲತಾಣದಲ್ಲಿ ಮುಳುಗಿರುತ್ತಾರೆ. ಓದದೇ ಯಾವುದೇ ಸಾಧನೆ ಮಾಡಲಾಗದು. ಕೃಷಿ ಕುಟುಂಬದಿಂದ ಬಂದ ನಾನು ಬಿ.ಎಸ್ಸಿಎಜಿ, ಎಂ.ಎಸ್ಸಿ ಎಜಿ ಓದಿ ನಂತರ ಐಪಿಎಸ್ ಮಾಡಿದೆ. ನಾನು ಕಷ್ಟಪಟ್ಟು ಓದದಿದ್ದರೆ ಇಲ್ಲಿಯವರೆಗೆ ಬರಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಪೋಷಕರು ಮಕ್ಕಳ ಕಡೆಗೆ ಗಮನ ನೀಡಬೇಕು. ಆಸ್ತಿ ಮಾಡುವ ಬದಲು ಮಕ್ಕಳನ್ನೇ ಆಸ್ತಿಯಾಗಿ ಮಾಡಬೇಕು. ಹೀಗಾದರೆ ಅವರು ಮುಂದೆ ದೇಶದ ಆಸ್ತಿಯಾಗುತ್ತಾರೆ ಎಂದರು.

ಮೈಸೂರಿನ ವಿಜಯನಗರದ ಕನ್ನಡ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ 'ಸಾಂಸ್ಕೃತಿಕ ಕಾವ್ಯೋತ್ಸವ' ಸಂಭ್ರಮದಲ್ಲಿ ಮೈಸೂರು ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಪೊಲೀಸ್ ಇಲಾಖೆಯಲ್ಲಿದ್ದರೂ ಕೂಡ ನಾನು ಯಾವುದೇ ಠಾಣೆಗೆ ಭೇಟಿ ನೀಡಿದರೂ ಅಲ್ಲಿಗೆ ಬರುವ ರೈತರ ಸಮಸ್ಯೆಗಳ ಪರಿಹಾರಕ್ಕೆ ಮೊದಲು ಆದ್ಯತೆ ನೀಡುತ್ತೇನೆ ಎಂದರು.

ಬೆಳಗಾವಿಯ ಶ್ರೀ ಕಾಡಯ್ಯ ಹಿರೇಮಠ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜಿಲ್ಲಾ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ನಾಗರಾಜ್ ವಿ. ಬೈರಿ, ಮಂಜುನಾಥ ಎನ್. ಶಿವಕ್ಕನವರ ಅಧ್ಯಕ್ಷತೆ, ರಾಜ್ಯ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ. ಗಂಗಾಧರ್ ಇದ್ದರು.

ಧಾರಾವಾಡ ಜಿಲ್ಲೆ ಅಣ್ಣಿಗೇರಿ ಬಿಸ್ಮಿಲ್ಲಾಹ್ ಆಗ್ರೋ ಇಂಪ್ಲೆಮೆಂಟ್ಸ್ ಉದ್ಯಮಿ ಖಾಜಾ ಹುಸೇನ್ ಇಮಾಮಹುಸೇನ್ ಗುಳಗುಂದಿ, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಟಿ. ತ್ಯಾಗರಾಜ್, ಪ್ರದೇಶ ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ಕಾರ್ಯದರ್ಶಿ ಆರಿಫ್ ಬೀರೂರು, ಕರುನಾಡ ಕನ್ನಡ ಕಲಾಸಿರಿ ಬಳಗದ ರಾಜ್ಯಾಧ್ಯಕ್ಷ ಸಿ.ಎಂ. ಅಂಬರೀಶ್, ಹರಪನಹಳ್ಳಿಯ ಭವಿಷ್ಯ ಬೆಳಕು ಚಾರಿಟಬಲ್ ಟ್ರಸ್ಟ್‌ನಅಧ್ಯಕ್ಷ ಗಿರೀಶ ನೆಲ್ಲುದ್ರಿ, ಬೆಂಗಳೂರಿನ ರಾಷ್ಟ್ರೀಯ ಮಹಿಳಾ ವೇದಿಕೆಯ ಸಂಸ್ಥಾಪಕ ಜಯಂತಿ ಗೌಡ್, ಕೃಷಿಕ ಸಮಾಜದ ರಾಜ್ಯಾಧ್ಯಕ್ಷೆ ಮಾಣಿಕ್ಯ ಬ.ಚಿಲ್ಲೂರ, ರೈತ ಸಂಘ ಸಂಘಟನಾ ಕಾರ್ಯದರ್ಶಿ ಬಸಪ್ಪ ಸಿದ್ದಪ್ಪ ಸಂಭೋಜಿ ಮುಖ್ಯ ಅತಿಥಿಗಳಾಗಿದ್ದರು.

ಸಮಾಚಾರ ಸಣ್ಣದಲ್ಲ

ಶಿಕ್ಷಣದಿಂದ ಉಜ್ವಲ ಭವಿಷ್ಯ ಸಾಧ್ಯ

ಕೆ.ಆರ್.ಪೇಟೆ: ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ವೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಉತ್ತಮವಾದ ವ್ಯಕ್ತಿತ್ವದಿಂದ ಬದುಕು ಸುಂದರವಾಗುತ್ತದೆ. ವೌಲ್ಯಗಳನ್ನು ಕಲಿಯಲು ಮಹಾತ್ಮರ ಜೀವನ ಚರಿತ್ರೆಗಳನ್ನು ಓದುವುದನ್ನು ರೂಢಿಸಿಕೊಳ್ಳಬೇಕು ಎಂದು ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್ ತಿಳಿಸಿದರು.ಅವರು ತಾಲ್ಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಜೈನಹಳ್ಳಿಯ ಡಾ. ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯಲ್ಲಿ ಆಯೋಜಿಸಿದ್ದ ಶಾರದಾ ಪೂಜೆ ಹಾಗೂ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಶ್ರೀ ಶಾರದಾಂಬೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.ಜೀವನದಲ್ಲಿ ಗುರಿ, ಛಲ, ಗುರುವಿನ ಆಶೀರ್ವಾದ ಇದ್ದರೆ ಮಾತ್ರವೇ ವಿದ್ಯೆ ಕಲಿತು ಸಮಾಜದಲ್ಲಿ ಉನ್ನತ ಸ್ಥಾನ ಗಳಿಸಲು ಸಾಧ್ಯ. ನಾವು ಇಂದು ಏನಾದರೂ ಗಳಿಸಿದ್ದರೆ ಅದೆಲ್ಲವೂ ಉತ್ತಮ ಶಿಕ್ಷಣ ಹಾಗಾಗಿ ಈ ಸಮಾಜದಿಂದ ಪಡೆದ ಒಂದಷ್ಟನ್ನಾದರೂ ನಾವು ಮತ್ತೆ ಸಮಾಜಕ್ಕೆ ವಾಪಸ್ಸು ಮಾಡಬೇಕಾಗುತ್ತದೆ. ಆ ಮೂಲಕ ಅಕ್ಷರ ಕಲಿಸಿದ ಗುರುಗಳು, ಜನ್ಮ ಕೊಟ್ಟ ಹೆತ್ತವರು, ಆಡಿ ಬೆಳೆದ ಭೂಮಿಯ ಋಣವನ್ನು ತೀರಿಸಲು ಸಾಧ್ಯವಾಗುತ್ತದೆ ಎಂದರು.ಬಳಿಕ ಶಾಲಾ ವಿದ್ಯಾರ್ಥಿಗಳಿಂದ ನಡೆದ ವಿವಿಧ ಸಂಸ್ಕೃತಿಕ ನೃತ್ಯ ಪ್ರದರ್ಶನ ಪಾಲಕರ, ವಿದ್ಯಾರ್ಥಿಗಳ ಮನದಲ್ಲಿ ರೋಮಾಂಚನವನ್ನುಂಟು ಮಾಡಿತು.

ಗಾಂಜಾ ಮಾರಾಟಕ್ಕೆ ಯತ್ನ: ಇಬ್ಬರ ಬಂಧನ

ಮಡಿಕೇರಿ: ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳ ಸಹಿತ 1 ಕೆಜಿ 60 ಗ್ರಾಂ ಗಾಂಜಾವನ್ನು ವಿರಾಜಪೇಟೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ವಿರಾಜಪೇಟೆಯ ಸುಣ್ಣದ ಬೀದಿಯ ಅಸ್ಸೆನಾರ್‌ರಜಾಕ್ (43) ಹಾಗೂ ಬಾಳುಗೋಡು ಬಿಟ್ಟಂಗಾಲ ಗ್ರಾಮದ ಮೋಹನ ಎ.ಜಿ ಅಶೋಕ (42) ಆರೋಪಿಗಳಾಗಿದ್ದಾರೆ. ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಒಂಟಿಯಂಗಡಿ ರಸ್ತೆಯ ಪ್ರೌಢಶಾಲೆ ಮೈದಾನದ ಬಳಿಯ ಬಸ್ ತಂಗುದಾಣದಲ್ಲಿ ಇವರಿಬ್ಬರು ಗಾಂಜಾ ಮಾರಾಟಕ್ಕೆ ಯತ್ನಿಸಿದ್ದಾರೆ ಎಂದು ಆರೋಪಿಸಲಾಗಿದೆ. ವಿರಾಜಪೇಟೆ ಉಪವಿಭಾಗದ ಮಹೇಶ್ ಕುಮಾರ್ ,ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಪಿಎಸ್‌ಐಗಳಾದ ಲತಾ ಎನ್.ಜೆ. ವಾಣಿಶ್ರೀ ಬಿ.ಎಸ್, ಪ್ರಮೋದ್, ಎ.ಎಸ್.ಐ ಸೋಮಣ್ಣ ಕೆ.ಬಿ,ಎಚ್.ಸಿಗಳಾದ ನವೀನ್ ಕುಮಾರ್‌ಎಸ್.ಎಲ್, ಬಸವರಾಜು ಎಂ, ಅಬ್ದುಲ್ ಮಜೀದ್, ಹನೀಫ್ ಕೆ.ಎ, ಬೋಪಣ್ಣ ಎಂ.ಎಸ್, ರಾಧಾ, ಪಿ.ಸಿಗಳಾದ ಮಹೇಶ್ ಎಸ್, ಶಿವಪ್ರಸಾದ್, ರಾಜೇಶ್ ಎಸ್ ಹಾಗೂ ರಾಘವೇಂದ್ರ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಪೊಲೀಸ್ ಅಧಿಕಾರಿಗಳ ಹಾಗೂ ಸಿಬ್ಬಂದಿಗಳ ಕಾರ್ಯದಕ್ಷತೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಆರ್.ಎನ್ ಶ್ಲಾಘಿಸಿದ್ದಾರೆ.

ಫೆ.24ರಿಂದ ಆಲೂರು ಬೀರೇಶ್ವರಸ್ವಾಮಿ ಜಾತ್ರೆ

ಮಂಡ್ಯ: ಮದ್ದೂರು ತಾಲೂಕಿನ ಪುರಾಣ ಪ್ರಸಿದ್ಧ ಆಲೂರು ಬೀರೇಶ್ವರಸ್ವಾಮಿ ಪುಣ್ಯ ಕ್ಷೇತ್ರದಲ್ಲಿ ಫೆಬ್ರವರಿ 24ರಿಂದ 26ರವರೆಗೆ ಬೃಹತ್ ಜಾತ್ರಾ ಮಹೋತ್ಸವ ಹಾಗೂ ವಿವಿಧ ಪೂಜಾ ಕೈಂಕರ್ಯಗಳು ನಡೆಯಲಿವೆ. ಶ್ರೀಕ್ಷೇತ್ರದಲ್ಲಿ ನೆಲೆಸಿರುವ ಪುರಾಣ ಪ್ರಸಿದ್ಧ ಶ್ರೀಬೀರೇಶ್ವರಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ, ನೂತನ ರಾಜಗೋಪುರ, ವಿಮಾನಗೋಪುರ, ಕಳಸ ಪ್ರತಿಷ್ಠಾಪನೆ, ಶ್ರೀಚಿಕ್ಕಮ್ಮ ತಾಯಿ, ಶ್ರೀಕಾಳಮ್ಮ ತಾಯಿ, ಶ್ರೀಗಣಪತಿ, ಶ್ರೀನಂದಿ, ನವಗ್ರಹಗಳ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ ಮಹೋತ್ಸವವನ್ನು ಆಯೋಜಿಸಲಾಗಿದೆ.

ಸರಕಾರಿ ಶಾಲೆಗಳಲ್ಲೂ ಗುಣಾತ್ಮಕ ಶಿಕ್ಷಣ

ಚಾಮರಾಜನಗರ: ಸರಕಾರಿ ಶಾಲೆಗಳಲ್ಲೂ ಗುಣಮಟ್ಟದ ಶಿಕ್ಷಣ ದೊರೆಯುತ್ತಿದ್ದು, ಪೋಷಕರು ಸರಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಬೇಕು ಎಂದು ಕಲಾವಿದ ಉಮ್ಮತ್ತೂರು ಬಸವರಾಜು ಕಿವಿಮಾತು ಹೇಳಿದರು.ತಾಲೂಕಿನ ಉಮ್ಮತ್ತೂರು ಸರಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲಾವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು,ಕಾರ್ಯಕ್ರಮದಲ್ಲಿಸರ್ಕಾರ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ, ಕ್ಷೀರಭಾಗ್ಯ, ಉಚಿತ ಪುಸ್ತಕ, ಸಮವಸ್ತ್ರ ನೀಡುತ್ತಿದೆ. ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣದ ಜತೆಗೆ ಉಚಿತ ಸೌಲಭ್ಯಗಳು ಸಿಗುತ್ತಿದ್ದು, ಪೋಷಕರು ಇದರ ಸದುಪಯೋಗ ಪಡೆಯಬೇಕು. ಕಾನ್ವೆಂಟ್ ವ್ಯಾಮೋಹದಿಂದ ಹೊರಬರಬೇಕು. ಸರ್ಕಾರಿ ಶಾಲೆಗಳಲ್ಲಿ ಓದಿದ ಅನೇಕ ಮಹನೀಯರು ದೇಶದ ಉನ್ನತ ಹುದ್ದೆ ಅಲಂಕರಿಸಿದ್ದಾರೆ. ಇಲ್ಲಿ ನುರಿತ ಶಿಕ್ಷಕರಿದ್ದಾರೆ. ಪೋಷಕರು ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಕಳುಹಿಸಬೇಕು' ಎಂದು ಸಲಹೆ ನೀಡಿದರು.

{ಎ.ಎಸ್.ಪೊನ್ನಣ್ಣ } ಶಾಸಕ

ಇದೇ ಬಜೆಟ್ ಅಧಿವೇಶನ ನಂತರ ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು 3 ಸಾವಿರ ನಿವೇಶನ ಹಕ್ಕುಪತ್ರ ನೀಡಲು ನಿರ್ಧರಿಸಲಾಗಿದೆ. ನವೆಂಬರ್,ಡಿಸೆಂಬರ್‌ತಿಂಗಳಲ್ಲಿಯೇ ಮುಖ್ಯಮಂತ್ರಿ ಅವರನ್ನು ಆಹ್ವಾನಿಸಿ ನಿವೇಶನ ಹಕ್ಕುಪತ್ರ ವಿತರಿಸಲು ಉದ್ದೇಶಿಸಲಾಗಿತ್ತು, ಆದರೆ ತಾಂತ್ರಿಕ ಕಾರಣಗಳಿಂದ ಈ ಆಗಿರಲಿಲ್ಲ.

ತುರಗನೂರು ಶಾಖಾ ನಾಲೆ | ಸಿಎಂ ಸಿದ್ದರಾಮಯ್ಯರಿಂದ ಕಾಮಗಾರಿಗೆ ಅನುದಾನ ಮಂಜೂರು: ಉಸ್ತುವಾರಿ ಸಚಿವ ಡಾ.ಮಹದೇವಪ್ಪ

ನಾಲೆಗಳ ಅಭಿವೃದ್ಧಿಯಿಂದ 1800 ಎಕರೆಗೆ ನೀರು

ಮೈಸೂರು: ತುರಗನೂರು ಶಾಖಾ ನಾಲೆಯು ವಿಶ್ವೇಶ್ವರಯ್ಯ ನಾಲೆಯ ಅಂತಿಮ ನೆಲೆಯಾಗಿದ್ದು, ಈ ನಾಲೆಯನ್ನು 1943 ರಲ್ಲಿ ನಿರ್ಮಿಸಲಾಗಿದೆ. ಇದರ ಆಧುನೀಕರಣದಿಂದ ಸುಮಾರು 1800 ಕೃಷಿ ಭೂಮಿಗೆ ನೀರು ಸಿಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ಚಿದರವಳ್ಳಿಯಲ್ಲಿ 91.33 ಕೋಟಿ ರು. ವೆಚ್ಚದ ತಿ.ನರಸಿಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತುರಗನೂರು ವಿಸ್ತರಣೆ, ಉಕ್ಕಲಗೆರೆ ಹಾಗೂ ಹಲವಾರ ಶಾಖಾ ನಾಲೆಗಳ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ತುರಗನೂರು ನಾಲೆ ಅಭಿವೃದ್ಧಿಯ ಬಗ್ಗೆ ಸಮೀಕ್ಷೆ ಅಧ್ಯಯನ ನಡೆಸಲಾಗಿದೆ. 70 ವರ್ಷಗಳ ನಂತರ ಅಭಿವೃದ್ಧಿ ಬಗ್ಗೆ ಆಸಕ್ತಿ ವಹಿಸಿ ಕಾಮಗಾರಿ ರೂಪಿಸಿ ಅನುದಾನ ನೀಡಿರುವ ಮಾನ್ಯ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದರು.ನಂಜಾಪುರ ಏತ ನೀರಾವರಿ ಯೋಜನೆಯ ಪ್ರಾರಂಭವಾದ ದಿನದಿಂದಲೂ ಇದ್ದ ತೊಡಕನ್ನು ಪ್ರಸಕ್ತ

ಶಾಖಾ ನಾಲೆಗಳ ಅಭಿವೃದ್ಧಿಗೆ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಗುದ್ದಲಿ ಪೂಜೆ ನೆರವೇರಿಸಿದರು.

ಸಾಲಿನಲ್ಲಿ ಹಭಿವೃದ್ಧಿಪಡಿಸಲು ಹಾಗೂ ಎಲ್ಲಾ ಮೋಟಾರ್ಗಳನ್ನು ಹೊಸದಾಗಿ ಅಳವಡಿಸಿ ದುರಸ್ಥಿಪಡಿಸಲು ಸುಮಾರು ರು.20.00 ಕೋಟಿ ಅನುದಾನ ಒದಗಿಸಲಾಗುವುದು ಎಂದರು.

ತುರಗನೂರು ಅಭಿವೃದ್ಧಿ ಕಾಮಗಾರಿಯಿಂದ ಸುಮಾರು 100 ಕ್ಯೂಸೆಕ್‌ಸ್ಗಿಂತ ಅಧಿಕ ಪ್ರಮಾಣದ ನೀರು ಸೋಸಲೆ ಹೋಬಳಿಯ ಗ್ರಾಮಗಳಿಗೆ ಲಭಿಸುವುದರಿಂದ ಈ ಪ್ರದೇಶವು ಹಚ್ಚ ಹಸಿರಿನಿಂದ

> **ನಂಜಾಪುರ ಏತ ನೀರಾವರಿ ಯೋಜನೆಯ ಪ್ರಾರಂಭವಾದ ದಿನದಿಂದಲೂ ಇದ್ದ ತೊಡಕನ್ನು ಪ್ರಸಕ್ತ ಸಾಲಿನಲ್ಲಿ ಹಭಿವೃದ್ಧಿಪಡಿಸಲು ಹಾಗೂ ಎಲ್ಲಾ ಮೋಟಾರ್ಗಳನ್ನು ಹೊಸದಾಗಿ ಅಳವಡಿಸಿ ದುರಸ್ಥಿಪಡಿಸಲು ಸುಮಾರು ರು.20.00 ಕೋಟಿ ಅನುದಾನ ಒದಗಿಸಲಾಗುವುದು.**
> **-ಡಾ.ಎಚ್.ಸಿ.ಮಹದೇವಪ್ಪ, ಸಚಿವ**

ಕಂಗೊಳಿಸುವ ದಿನಗಳು ದೂರವಿಲ್ಲ ಎಂದರು.

ನಂಜಾಪುರ, ಸಿ.ವಿ.ಕೊಪ್ಪಲು, ಹೊಸಕೊಪ್ಪಲು, ಚಿಮಿಲಿ, ಚಿಕ್ಕಕಲ್ಲೂಣಿ, ಬೊಮ್ಮನಹಳ್ಳಿ, ಎಸ್. ದೊಡ್ಡಪುರ, ಕೆಂಪನಪುರ, ಸೀಗೋಡಿಪುರ, ಬೋಳೇಗೌಡನಹುಂಡಿ, ರಾಮೇಗೌಡನಪುರ, ವಡ್ಡರಕೊಪ್ಪಲು, ಮರಿಯೂರು, ಬಿ.ಬೆಟ್ಟಹಳ್ಳಿ, ಮೇಗಲಕೊಪ್ಪಲು, ಕುಂತನಹಳ್ಳಿ, ದೇವಿನಹಳ್ಳಿ, ಎಂ.ಎಲ್.ಹುಂಡಿ, ಕಳ್ಳಪುರ, ಬೂದಹಳ್ಳಿ, ಉತ್ತಲಗೆರೆ, ಕನ್ನಾಯಕನಹಳ್ಳಿ, ತಮ್ಮಡಿಪುರ, ನಾಗಲಿಗೆರೆ, ಕೋಣಗಹಳ್ಳಿ, ಚಿಟ್ಟಗಯ್ಯನಕೊಪ್ಪಲು, ನೆರೆಗ್ಯಾತನಹಳ್ಳಿ, ಹೊರಳಹಳ್ಳಿ, ಚಿದರವಳ್ಳಿ, ಮುಡುಕನಪುರ. ಹಲವಾರ, ದೊಡ್ಡಬಾಗಿಲು, ಕೊಳತ್ತೂರು ಗ್ರಾಮಗಳಿಗೆ ಈ ಕಾಮಗಾರಿಯಿಂದ ಉಪಯುಕ್ತವಾಗಲಿದೆ ಎಂದು ತಿಳಿಸಿದರು.

ಪಂಚ ಗ್ಯಾರಂಟಿ ಯೋಜನೆಗಳು ಬಡವರ ಜೀವನ ಮಟ್ಟ ಸುಧಾರಿಸಿದೆ. ಬಡ ಮಹಿಳೆ ಹಾಗೂ ಕುಟುಂಬಕ್ಕೆ ಒಟ್ಟಾರೆ 4 ರಿಂದ 5 ಸಾವಿರ ರು. ದೊರೆಯುತ್ತಿದೆ ಎಂದರು.

ಕಾರ್ಯ ಕ್ರಮದಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀ ಕಾಂತ ರೆಡ್ಡಿ ಜಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್ ,ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಮಾಜಿ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯೆ ಸುನೀತಾ ವೀರಪ್ಪಗೌಡ ಇನ್ನಿತರರು ಉಪಸ್ಥಿತರಿದ್ದರು.

ಸರ್ವಜ್ಞರ ಆದರ್ಶ ಪಾಲನೆ ಅಗತ್ಯ

ತಾಲೂಕಿನ ಸೀಗೂರು ಗ್ರಾಮದಲ್ಲಿ ಆಯೋಜಿಸಿದ್ದ ಸರ್ವಜ್ಞರ 504 ನೇ ಜಯಂತಿಯಲ್ಲಿ ಕೊಪ್ಪ ರಾಮಚಂದ್ರ ಅವರು ಮಾತನಾಡಿದರು.

ಪಿರಿಯಾಪಟ್ಟಣ: ಸಮಾಜದಲ್ಲಿರುವ ಒಡಕನ್ನು ತೊಡೆದು ಹಾಕಲು ತ್ರಿಪದಿಗಳ ರೂಪದಲ್ಲಿ ಚಿಕಿತ್ಸೆ ನೀಡಿದ ಕೀರ್ತಿ ಸರ್ವಜ್ಞರಿಗೆ ಸಲ್ಲುತ್ತದೆ ಎಂದು ತಾಲೂಕು ಕಲಾಲಗುಂಡ ಕುಂಬಾರ ಸಂಘದ ಉಪಾಧ್ಯಕ್ಷ ಕೊಪ್ಪ ರಾಮಚಂದ್ರ ತಿಳಿಸಿದರು.

ತಾಲೂಕಿನ ಸೀಗೂರು ಗ್ರಾಮದಲ್ಲಿ ಆಯೋಜಿಸಿದ್ದ ಸರ್ವಜ್ಞರ 504 ನೇ ಜಯಂತಿಯಲ್ಲಿ ಮಾತನಾಡಿದರು. ಸಮಾಜದ ಅಂಕು ಡೊಂಕು, ಜಾತಿ ಕುಲದ ವಿಷಯ ಕುರಿತು ನಿಂತಲ್ಲೇ ತ್ರಿಪದಿ ರಚಿಸಿ ವಿಮರ್ಶಿಸುತ್ತಿದ್ದ ಸರ್ವಜ್ಞರು ಅಗಾಧ ಪಾಂಡಿತ್ಯ ಹೊಂದಿದ್ದರು. ಒಳಿತು ಮತ್ತು ಕೆಡುಕಿನ ವ್ಯತ್ಯಾಸ, ಏನು ಮಾಡಿದರೆ ಸಮಾಜ ಒಳ್ಳೆಯ ದಾರಿಯಲ್ಲಿ ನಡೆಯುತ್ತದೆ ಎಂದು ತಿಳಿಸಿಕೊಟ್ಟ ಮಹಾನ್ ತತ್ವಜ್ಞಾನಿ ಸರ್ವಜ್ಞ. ಅವರ ಮೂಲ ಹೆಸರು ಬೇರೆ ಇದ್ದರೂ ಅವರು ಎಲ್ಲಾ ಜ್ಞಾನ ಹೊಂದುವ ಮೂಲಕ ತ್ರಿಕಾಲ ಜ್ಞಾನಿ, ಸರ್ವಜ್ಞ ಎಂದು ಕರೆಸಿಕೊಂಡಿದ್ದಾರೆ ಎಂದರು.

ಶಿಕ್ಷಕ ಎಸ್.ಆರ್.ರಮೇಶ್, ಕುಂಬಾರ ಸಮಾಜದ ಯುವ ಮುಖಂಡ ಕೊಣಸೂರು ಪ್ರಭು ಮಾತನಾಡಿದರು. ಕಾರ್ಯಕ್ರಮದಲ್ಲಿ ಗ್ರಾಪಂ ಮಾಜಿ ಉಪಾಧ್ಯಕ್ಷ ಸ್ವಾಮಿ ಶೆಟ್ಟಿ, ರೈತಸಂಘದ ರಾಜ್ಯ ಸಮಿತಿ ಸದಸ್ಯ ದ್ಯಾವಶೆಟ್ಟಿ, ಗ್ರಾಮದ ಮುಖಂಡರಾದ ಪುಟ್ಟರಾಜು, ಜಯಕೃಷ್ಣ ಶೆಟ್ಟಿ, ದೇವರಾಜ್, ವಸಂತ್, ರಂಗ ಶೆಟ್ಟಿ, ಎಸ್.ಟಿ.ರಮೇಶ್, ಜಯಣ್ಣ, ಅಶ್ವತ್, ಕೃಷ್ಣ ಮೂರ್ತಿ,ರವಿ, ಅಭಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಫಾರಿಗೆ ಒಪ್ಪಿಗೆ ನೀಡಿರುವುದು ಸಂತಸ ತಂದಿದೆ

ಚಾಮರಾಜನಗರ: ಚಾಮರಾಜನಗರ ಜಿಲ್ಲೆ ಪ್ರವಾಸಿಗಳಿಗೆ ಉತ್ತಮ ನೈಸರ್ಗಿಕವಾಗಿ ರಮಣಿಯ ಸ್ಥಳವಾಗಿದೆ. ಹೆಚ್ಚು ಅರಣ್ಯ ಪ್ರದೇಶವಿರುವ ಹಾಗೂ ಹುಲಿ ಸಂರಕ್ಷಿತ ಪ್ರದೇಶ ಇರುವ ರಮ್ಯ ಮನೋರಂಜನೆಯ ಕ್ಷೇತ್ರವಾಗಿದೆ ಎಂದು ಚಾಮರಾಜನಗರ ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರಾದ ಎಂ.ನಂದ್ಯಪ್ಪಶೆಟ್ಟಿ ತಿಳಿಸಿದರು.

ನಗರದ ಸತ್ಯಮಂಗಲ ರಸ್ತೆಯಲ್ಲಿ ಇರುವ ಖಾಸಗಿ ಹೋಟೆಲ್ನಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಅವರು ಮಾತನಾಡಿದರು. ಹೋಟೆಲ್ ಉದ್ಯಮ ಎಂದರೇ ಒಂದು ರೀತಿಯ ಸೇವ ಕ್ಷೇತ್ರವಾಗಿದ್ದು ಪ್ರವಾಸಿಗರಿಗೆ ಹಾಗೂ ಸಾರ್ವಜನಿಕರಿಗೆ ಉತ್ತಮ ಆಹಾರ ಮತ್ತು ತಂಗ್ಗುವಿಕೆ ಸೇವೆಯನ್ನು ನೀಡುತ್ತಾ ಬಂದಿದೆ. ಈ ಒಂದು ಸೇವಾ ಕ್ಷೇತ್ರವನ್ನು ಸರ್ಕಾರವು ಅಗತ್ಯ ವಸ್ತುಗಳ ಕಾಯ್ದೆ ಅಡಿಯಲ್ಲಿ ಸೇರಿಸಬೇಕೆಂದು ಒತ್ತಾಯಿಸಿದರು.

ಕೆಲವು ದಿನಗಳ ಹಿಂದೆ ಪ್ರವಾಸಿಗಳ ಕೊರತೆಯಿಂದ ಎಷ್ಟೋ ಹೋಟೆಲ್ಗಳು ನಷ್ಟ ಅನುಭವಿಸಿದ ಸಂಗತಿಗಳು ಇದೇ. ಹೋಟೆಲ್ ಮಾಲೀಕರ ಸಂಘದ ವತಿಯಿಂದ ರಾಜ್ಯ ಸರಕಾರಕ್ಕೆ ಮನವಿ ಮಾಡಿದ್ದೇವು ಅದರಂತೆ ಗುಂಡ್ಲುಪೇಟೆ ತಾಲ್ಲೂಕಿನ ಬಂಡಿಪುರದಲ್ಲಿ ಸಫಾರಿಗೆ ಒಪ್ಪಿಗೆ ನೀಡಿರುವುದು

ನಗರದ ಸತ್ಯಮಂಗಲ ರಸ್ತೆಯಲ್ಲಿ ಇರುವ ಖಾಸಗಿ ಹೋಟೆಲ್ನಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಎಂ.ನಂದ್ಯಪ್ಪಶೆಟ್ಟಿ ಅವರು ಮಾತನಾಡಿದರು.

ಸಂತೋಷವಾಗಿದೆ. ರಾಜ್ಯ ಸರ್ಕಾರಕ್ಕೆ ಹಾಗೂ ಮಂತ್ರಿಗಳಿಗೆ ಹೋಟೆಲ್ ಮಾಲೀಕರ ಸಂಘದಿಂದ ಅಭಿನಂದನೆಗಳನ್ನು ಸಲ್ಲಿಸುತ್ತೇವೆ ಎಂದರು.

ಜಿಲ್ಲೆಯ ಹೋಟೆಲ್ ಉದ್ಯಮಿಗಳಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಕರೆದು ಉದ್ಯಮದಲ್ಲಿ ಎದುರಿಸುತ್ತಿರುವ ಸಂಕಷ್ಟಗಳಿಗೆ ಪರಿಹಾರ ಕಂಡುಕೊಳ್ಳುವ ವಿಚಾರವನ್ನು ಚರ್ಚಿಸಲಾಗುವುದು. ನನ್ನನು ಅಧ್ಯಕ್ಷರಾಗಿ ಅವಿರೋದವಾಗಿ ಆಯ್ಕೆ ಮಾಡಿದ ತಮಗೆ ಕೃತಜ್ಞತೆಗಳು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪೊಲೀಸ್ ಇಲಾಖೆಯವತಿಯಿಂದ ವಂಚನೆಗಳನ್ನು ತಡೆಗಟ್ಟುವ ಬಗ್ಗೆ ಮಾಹಿತಿಯನ್ನು ಪೊಲೀಸ್ ಇಲಾಖೆಯ ಭೀಮಪ್ಪ ಇಚಿಡಿ,ಎಸ್.ಎಂ ಅಬ್ದುಲ್ ಖಾದರ್‌ತಿಳಿಸಿದರು. ನೂತನ ಸದಸ್ಯರಿಗೆ ಪ್ರಮಾಣಪತ್ರವನ್ನು ಕಾರ್ಯದರ್ಶಿ ಪ್ರತಾಪ್ ವಿತರಿಸಿದರು.

ಕಾರ್ಯದರ್ಶಿ ಪ್ರತಾಪ್.ಎಸ್, ಉಪಾಧ್ಯಕ್ಷ ಶ್ರೀನಿವಾಸರಾವ್, ಸಿ.ಒ.ಪಾಪಣ್ಣ, ಜಂಟಿ ಕಾರ್ಯದರ್ಶಿ ಅಂಕಶೆಟ್ಟಿ,ಜಿ, ಖಜಾಂಚಿ ವಿಜಯ್ಕುಲಾಲ್, ರೆಸಾರ್ಟ್ ಮಾಲೀಕರಾದ ಕಾರ್ತಿಕ್, ಜಯಕುಮಾರ್‌ಹಾಗೂ ಇನ್ನು ಇತರರು ಇದ್ದರು.

ಶಿಸ್ತು, ಸಂಯಮ, ಶ್ರಮದಿಂದ ಸಾಧನೆ ಸಾಧ್ಯ

ಮಂಡ್ಯ: ಸಮಾಜದ ಉನ್ನತಿಗೆ ಶ್ರಮಿಸುವವರು ಟೀಕೆ ವಿಮರ್ಶೆಗಳಿಗೆ ತಲೆಕೆಡಿಸಿಕೊಳ್ಳದೆ ಗುರಿಯತ್ತ ಸಾಗಿದರೆ ಮಾತ್ರ ಅಂದುಕೊಂಡಿದ್ದನ್ನು ಸಾಧಿಸಬಹುದು ಎಂದು ರಾಜೀವ್ಗಾಂಧಿ ಆರೋಗ್ಯ ವಿವಿ ಕುಲಪತಿ ಡಾ. ಭಗವಾನ್ ತಿಳಿಸಿದರು.

ಪ್ರಶಾಂತಿ ಸೇವಾ ಟ್ರಸ್ಟ್ ಮತ್ತು ಮಧುರ ಮಂಡ್ಯ ರಂಗಕಲಾ ಟ್ರಸ್ಟ್ ವತಿಯಿಂದ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ನಡೆದ ಸಾಯಿ ಸಂಗೀತೋತ್ಸವ ಕರ್ಯಾಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಮಠ-ಮಾನ್ಯರಲ್ಲಿ ಕಲಿಯುವುದರಿಂದ ಶಿಸ್ತನ್ನು ಮೈಗೂಡಿಸಿಕೊಳ್ಳುತ್ತಾರೆ. ಶಿಸ್ತಿನಿಂದ ಬೆಳೆಯುತ್ತಾರೆ ಎಂಬ ನಂಬಿಕೆ ಜನರಲ್ಲಿದೆ ಎಂದರು.

ಅಂತೆಯೇ ಮಂಡ್ಯದ ಬಹುತೇಕ ಮಂದಿ ದಕ್ಷಿಣ ಕನ್ನಡದ ಆಳಿಕೆಯಲ್ಲಿ ವಿದ್ಯಾಭ್ಯಾಸ ನಡೆಸಿರುವುದು ಅವರು ನಂಬಿರುವ ವಿಶ್ವಾಸಕ್ಕೆ ಸಾಕ್ಷಿಯಾಗಿದೆ. ಹಾಗಾಗಿ ಪ್ರಬುದ್ಧ ಆತ್ಮ ಹೊಂದಿರುವವರು ಯಾವುದೇ ಟೀಕೆ ಆರೋಪಗಳಿಗೆ ಗಮನ ಕೊಡುವುದಿಲ್ಲ ಎಂದು ತಿಳಿಸಿದರು.

ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್‌ಕಲಾಮಂದಿರದಲ್ಲಿ ನಡೆದ ಸಾಯಿ ಸಂಗೀತೋತ್ಸವ ಕಾರ್ಯ ಕ್ರಮವನ್ನು ಡಾ. ಭಗವಾನ್ ಅವರು ಉದ್ಘಾಟಿಸಿದರು.

ಟೀಕೆಗಳು ಸಾಯುತ್ತವೆ, ಸಾಧನೆಗಳು ಬೆಳಗುತ್ತವೆ. ಒಬ್ಬ ವೈದ್ಯ ತಪ್ಪು ಮಾಡಿದರೆ ಒಬ್ಬರೋ, ಇಬ್ಬರೋ ರೋಗಿ ಸಾಯ ಬಹುದು. ಆದರೆ ಶಿಕ್ಷಕರು ತಪ್ಪು ಮಾಡಿದರೆ ಒಂದು ತಲೆಮಾರು ಸಂಕಷ್ಟಕ್ಕೀ ಡಾಗುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕಿದೆ ಎಂದು ಸಲಹೆ ನೀಡಿದರು. ಶಿಸ್ತು, ಸಂಯಮ ಯಾರಲ್ಲಿರುತ್ತದೋ ಅವರು ಯಶಸ್ಸು ಸಾಧಿಸುವುದು ಖಚಿತ. ಈ ನಿಟ್ಟಿನಲ್ಲಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ರುವವರು ಮುಂದಿನ ಹೆಜ್ಜೆ ಇಡಬೇಕು. ಆಸ್ತಿಕನಾಗಲೀ, ನಾಸ್ತಿಕನಾಗಲೀ, ತಾವು ಆರೋಗ್ಯವಾಗಿದ್ದು, ಇತರರನ್ನೂ ಆರೋಗ್ಯ ವಾಗಿರಿಸಿಕೊಳ್ಳುವುದು ಸದ್ಧರ್ಮವಾಗಿದೆ ಎಂದು ಹೇಳಿದರು.

ಮಕ್ಕಳಿಗೆ ಕೇವಲ ಪಠ್ಯ ಪುಸ್ತಕ ಮಾತ್ರ ಶೈಕ್ಷಣಿಕ ಅಭಿವೃದ್ಧಿಗೆ ಸಾಧನವಲ್ಲ, ಜೊತೆಗೆ ಪಠ್ಯೇತರ ಚಟುವಟಿಕೆಗಳೂ ಅಷ್ಟೇ ಮುಖ್ಯವಾಗಿರುತ್ತವೆ ಎಂದು ಅಭಿಪ್ರಾಯಿಸಿದರು.

ಇದೇ ವೇಳೆ ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ ಮತ್ತು ಶ್ರೀಸತ್ಯ ಸಾಯಿ ಲೋಕ ಸೇವಾ ಗುರುಕುಲಂನ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಸಂಗೀತ ಮತ್ತು ಸ್ವರಮೇಳ ಕರ್ಯಾಕ್ರಮ ನಡೆಸಿಕೊಟ್ಟರು.

ಮಧುರ ಮಂಡ್ಯ ರಂಗಕಲಾ ಟ್ರಸ್ಟ್ ಅಧ್ಯಕ್ಷ ಡಾ.ಎ.ವಿ.ಉಮೇಶ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮಿಮ್ಸ್ ನಿರ್ದೇಶಕ ಡಾ.ನರಸಿಂಹಸ್ವಾಮಿ, ಸತ್ಯಸಾಯಿ ಲೋಕ ಸೇವಾ ಗುರುಕುಲಂನ ಹಿರಿಯ ವಿದ್ಯಾರ್ಥಿ ಡಾ.ಕೆ.ಚಂದ್ರಶೇಖರ್ ,ನಾರಾಯಣ್, ಗೌರವ್, ಜಯರಾಮರೆಡ್ಡಿ ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಇಂದು ಎಸ್ಸಿ, ಎಸ್ಟಿ ಕಾಯಿದೆ ಕುರಿತು ಕಾರ್ಯಾಗಾರ

ಮದ್ದೂರು ನಗರದ ಪ್ರವಾಸಿ ಮಂದಿರದ ಸಭೆಯಲ್ಲಿ ಎಸ್ಸಿ ಎಸ್ಟಿ ಜಾಗೃತಿ ಸಮಿತಿ ಸದಸ್ಯ ಚಿದಂಬರ ಮೂರ್ತಿ ಅವರು ಮಾತನಾಡಿದರು.

ಮದ್ದೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಕಾಯಿದೆ ಅನ್ವಯ ವಿಚಾರಗೋಷ್ಠಿ ಮತ್ತು ಕಾರ್ಯಾ ಗಾರ ಕಾರ್ಯಕ್ರಮವನ್ನು ಫೆಬ್ರವರಿ 23 ರಂದು ಬೆಳಗ್ಗೆ 10.30ಕ್ಕೆ ನಗರದ ಸರಕಾರಿ ಮಹಿಳಾ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಎಸ್ಸಿ ಎಸ್ಟಿ ಜಾಗೃತಿ ಸಮಿತಿ ಸದಸ್ಯ ಚಿದಂಬರ ಮೂರ್ತಿ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಶನಿವಾರ ನಡೆದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ನಗರಸಭೆ, ತಾಲೂಕು ಕಾನೂನು ಸೇವಾ ಪ್ರಾಧಿಕಾರ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯಗಾರ ಆಯೋಜಿಸಲಾಗಿದೆ ಎಂದರು.ಕಾರ್ಯಗಾರದಲ್ಲಿ ಘನ ಉಪಸ್ಥಿತಿ ಕೇಂದ್ರ ಸಚಿವ ಎಚ್ .ಡಿ.ಕುಮಾರಸ್ವಾಮಿ, ಉದ ಘ್ಾಟನೆ ಸಚಿವ ಎನ್.ಚಲುವರಾಯಸ್ವಾಮಿ, ಅಧ್ಯಕ್ಷತೆ ಶಾಸಕ ಕೆ.ಎಂ.ಉದಯ್, ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯರಾದ ಮಧುಜಿ.ಮಾದೇಗೌಡ, ದಿನೇಶ್ಗೂಳಿಗೌಡ, ವಿವೇಕಾನಂದ ಭಾಗವಹಿಸಲಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲ್ವಿಚಾರಣೆ ಮತ್ತು ಬಲವರ್ಧನ ಸಮಿತಿ ರಾಜ್ಯ ಸಂಚಾಲಕಿ ಪಿ.ಯಶೋಧ ವಿಚಾರ ಮಂಡನೆ ಮಾಡಲಿದ್ದಾರೆಂದು ತಿಳಿಸಿದರು.

ತಾಲೂಕು ಮಟ್ಟದ ಜಾಗೃತಿ ಸಮಿತಿ ಸದಸ್ಯರು, ಸಂಘ, ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಅಂಗನವಾಡಿ, ಆಶಾ ಕಾರ್ಯಕರ್ತೆ ಯರು, ತಾಲೂಕು ಮಟ್ಟದ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.ಸಭೆಯಲ್ಲಿ ಜಾಗೃತಿ ಸಮಿತಿ ಸದಸ್ಯ ರಘು, ಕೆಡಿಪಿ ಸದಸ್ಯ ಸಿದ್ದರಾಜು, ಗ್ಯಾರಂಟಿ ಯೋಜನೆಗಳ ಜಿಲ್ಲಾ ಉಪಾಧ್ಯಕ್ಷ ರಾಜೇಂದ್ರ, ಎಸ್ಸಿ, ಎಸ್ಟಿ ವಿಭಾಗದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹದೇವಯ್ಯ, ಶಿವಲಿಂಗಯ್ಯ, ಮುಖಂಡರಾದ ಭಾನುಪ್ರಕಾಶ್, ಸಿದ್ದರಾಮು, ಕುಮಾರ್ ,ಅರುವನಹಳ್ಳಿ ಸಿದ್ದರಾಜು, ಶರತ್, ಹುಲಿಗೆರೆಪುರ ಮಹದೇವು ಸೇರಿದಂತೆ ಇತರರಿದ್ದರು.

ಭವ್ಯ ವಿಧಾನಸೌಧ ನಿರ್ಮಾತೃ ಕೆಂಗಲ್ ಹನುಮಂತಯ್ಯ

ಚಾಮರಾಜನಗರ : ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರು ಒಬ್ಬ ದಕ್ಷ ಆಡಳಿತಗಾರರಾಗಿ ಭವ್ಯ ವಿಧಾನಸೌಧ ನಿರ್ಮಿಸಿದರು ಎಂದು ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಎಂ.ಬಿ ಮಂಜೇಗೌಡ ಹೇಳಿದರು ನಗರದ ಕೊಳದ ಬೀದಿಯ ಒಕ್ಕಲಿಗ ಸಮುದಾಯ ಭವನದಲ್ಲಿ ಚಾಮರಾಜನಗರ ಟೌನ್ ಒಕ್ಕಲಿಗ ಸಂಘದ ವತಿಯಿಂದ ನಡೆದ ಕರ್ನಾಟಕ ಏಕೀಕರಣ ರೂವಾರಿ, ವಿಧಾನಸೌಧ ನಿರ್ಮಾತೃ ಮಾಜಿ ಮುಖ್ಯ ಮಂತ್ರಿ ಕೆಂಗಲ್ ಹನುಮಂತ ಯ್ಯ ಅವರ 118ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಹೇಳಿದರು.ರಷ್ಯಾದ ನಿಯೋಗವೂ ಂದರಲ್ಲಿ ವ್ಯಂಗ್ಯದ ಮಾತುಗಳಿಂದ ವಿಚಲಿತರಾದ ಅವರು, ದಕ್ಷಿಣ ಭಾರತದ ವಾಸ್ತುಶಿಲ್ಪ ಶೈಲಿಯಲ್ಲಿ ವಿಧಾನಸೌಧ ನಿರ್ಮಿಸುವ ಪಣತೊಟ್ಟು 1956ರಲ್ಲಿ ಪೂರ್ಣಗೊಳಿಸಿದರು ಎಂದರು.ಆಧುನಿಕ ಶಿಲ್ಪಿಯಾಗಿದ್ದು, ಕರ್ನಾಟಕ ಏಕೀಕರಣದ ಪ್ರಮುಖ ರೂವಾರಿಯಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿ ದಕ್ಷ ಆಡಳಿತಗಾರರಾಗಿ, ಗ್ರಾಮೀಣಾಭಿವೃದ್ಧಿಯ ಹರಿಕಾರರಾಗಿ ಸೇವೆ ಸಲ್ಲಿಸಿದರು. ಕನ್ನಡನಾಡು ನಿರ್ಮಾಣದ ಕನಸು ಕಂಡಿದ್ದ ಅವರು ರೈಲ್ವೆ ಸಚಿವರಾಗುಯೂ ಉತ್ತಮ ಸೇವೆ ಸಲ್ಲಿಸಿದರು. ನಂತರ ಕಾನೂನು ಸಚಿವರಾಗಿಯೂ ದಕ್ಷ ಆಡಳಿತ ನೀಡಿದ್ದರು ಎಂದರು.

ಪೊನ್ನಂಪೇಟೆಯ ತಾಪಂ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆ| ಶಾಸಕ ಎ.ಎಸ್.ಪೊನ್ನಣ್ಣ ಹೇಳಿಕೆ

ವಿರಾಜಪೇಟೆ ಕ್ಷೇತ್ರದಲ್ಲಿ 3 ಸಾವಿರ ನಿವೇಶನ ಹಕ್ಕುಪತ್ರ ನೀಡಲು ನಿರ್ಧಾರ

ಮಡಿಕೇರಿ: ಇದೇ ಬಜೆಟ್ ಅಧಿವೇಶನ ನಂತರ ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸುಮಾರು 3 ಸಾವಿರ ನಿವೇಶನ ಹಕ್ಕುಪತ್ರ ನೀಡಲು ನಿರ್ಧರಿಸಲಾಗಿದೆ ಎಂದು ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ ಅವರು ತಿಳಿಸಿದ್ದಾರೆ.

ವಿರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ನಿವೇಶನ ರಹಿತರಿಗೆ ನಿವೇಶನ ಹಕ್ಕುಪತ್ರ ನೀಡುವ ಬಗ್ಗೆ ವಿವಿಧ ಇಲಾಖೆ ಅಧಿಕಾರಿಗಳ ಜತೆ ಪೊನ್ನಂಪೇಟೆಯ ತಾ.ಪಂ.ಸಭಾಂಗಣದಲ್ಲಿ ಶನಿವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ನವೆಂಬರ್, ಡಿಸೆಂಬರ್ ತಿಂಗಳಲ್ಲಿಯೇ ಮುಖ್ಯಮಂತ್ರಿ ಅವರನ್ನು ಆಹ್ವಾನಿಸಿ ನಿವೇಶನ ಹಕ್ಕುಪತ್ರ ವಿತರಿಸಲು ಉದ್ದೇಶಿಸಲಾಗಿತ್ತು, ಆದರೆ ತಾಂತ್ರಿಕ ಕಾರಣಗಳಿಂದ ಈ ಆಗಿರಲಿಲ್ಲ ಎಂದರು.

ಸದ್ಯ ಮಾರ್ಚ್ 27 ರ ನಂತರ ಮುಖ್ಯಮಂತ್ರಿ ಅವರನ್ನು ಆಹ್ವಾನಿಸಿ ನಿವೇಶನ ಹಕ್ಕುಪತ್ರ ವಿತರಿಸಲಾಗುವುದು ಎಂದು ಎ.ಎಸ್.ಪೊನ್ನಣ್ಣ ಅವರು ವಿವರಿಸಿದರು. ಸಮಗ್ರ ಗಿರಿಜನ ಕಲ್ಯಾಣ ಇಲಾಖೆಯಿಂದ ಲೈನ್ ಮನೆಗಳಲ್ಲಿ ವಾಸಿಸುವ

ಪೊನ್ನಂಪೇಟೆಯ ತಾಪಂ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಅವರು ಮಾತನಾಡಿದರು.

ಸುಮಾರು 1125 ಕುಟುಂಬಗಳಿಗೆ, ಹಾಗೆಯೇ ಬಸವ ಮತ್ತು ಅಂಬೇಡ್ಕರ್‌ವಸತಿ ಯೋಜನೆ, ಜತೆಗೆ ಸ್ಥಳೀಯ ಸಂಸ್ಥೆ ವ್ಯಾಪ್ತಿ ಸೇರಿದಂತೆ ಒಟ್ಟು ಸುಮಾರು 3 ಸಾವಿರ ನಿವೇಶನ ಹಕ್ಕುಪತ್ರ ವಿತರಿಸಲು ಉದ್ದೇಶಿಸಲಾಗಿದೆ ಎಂದು ಶಾಸಕರು ಹೇಳಿದರು.

ನಿವೇಶನ ಹಕ್ಕುಪತ್ರ ವಿತರಣೆಗೆ ವಿಳಂಬ ಆಗಿರುವುದಕ್ಕೆ ತೀವ್ರ ಅತೃಪ್ತಿ ವ್ಯಕ್ತಪಡಿಸಿದ ಶಾಸಕರು, ತಾಂತ್ರಿಕ ತೊಂದರೆಗಳನ್ನು ಒಂದು ವಾರದಲ್ಲಿ ಬಗೆಹರಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು.

ನಿವೇಶನ ರಹಿತರ ಫಲಾನುಭವಿಗಳ ಪಟ್ಟಿ ಮಾಡುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ಜತೆ ಹಲವು ಬಾರಿ ಚರ್ಚಿಸಲಾಗಿತ್ತು, ಆದರೆ ಇದುವರೆಗೆ ನಿರೀಕ್ಷಿತ ಪ್ರಗತಿ ಸಾಧಿಸದಿರುವುದಕ್ಕೆ ಎ.ಎಸ್.ಪೊನ್ನಣ್ಣ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ನಿವೇಶನ ರಹಿತರಿಗೆ ನಿವೇಶನ ನೀಡಲೇಬೇಕು. ಆ ದಿಸೆಯಲ್ಲಿ ಅಧಿಕಾರಿಗಳು ಕಾಲಮಿತಿಯಲ್ಲಿ ಕರ್ತವ್ಯ ನಿರ್ವಹಿಸಿ, ಸಿದ್ಧತೆ ಮಾಡಿಕೊಳ್ಳಬೇಕು ಎಂದರು. ವಿವಿಧ ಗ್ರಾ.ಪಂ. ಹಾಗೂ ಪುರಸಭೆ ವ್ಯಾಪ್ತಿಯಲ್ಲಿ ನಿವೇಶನ ಹಂಚಿಕೆ ಅಂಕಿ

> **ಸಮಗ್ರ ಗಿರಿಜನ ಕಲ್ಯಾಣ ಇಲಾಖೆಯಿಂದ ಲೈನ್ ಮನೆಗಳಲ್ಲಿ ವಾಸಿಸುವ ಸುಮಾರು 1125 ಕುಟುಂಬಗಳಿಗೆ, ಹಾಗೆಯೇ ಬಸವ ಮತ್ತು ಅಂಬೇಡ್ಕರ್‌ವಸತಿ ಯೋಜನೆ, ಜತೆಗೆ ಸ್ಥಳೀಯ ಸಂಸ್ಥೆ ವ್ಯಾಪ್ತಿ ಸೇರಿದಂತೆ ಒಟ್ಟು ಸುಮಾರು 3 ಸಾವಿರ ನಿವೇಶನ ಹಕ್ಕುಪತ್ರ ವಿತರಿಸಲು ಉದ್ದೇಶಿಸಲಾಗಿದೆ.**
> **-ಎ.ಎಸ್.ಪೊನ್ನಣ್ಣ, ಶಾಸಕ**

ಅಂಶಗಳ ಬಗ್ಗೆ ಶಾಸಕರು ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ವಸತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮೋಹನ್ ರಾಜ್ ಅವರು ವಸತಿ ಇಲಾಖೆಯಲ್ಲಿ ಅನುಮೋದನೆಗೆ ಬಾಕಿ ಇರುವ ಹಲವು ಕಡತವನ್ನು ಸ್ಥಳದಲ್ಲಿಯೇ ವಿಲೇವಾರಿ ಮಾಡಿದರು.

ಬಡವರಲ್ಲಿ ಕಡು ಬಡವರಿದ್ದು, ಅಂತಹ ಕುಟುಂಬಕ್ಕೆ ಆಧಾರ್‌ಹಾಗೂ ಚುನಾವಣಾ ಗುರುತಿನ ಚೀಟಿ ಮಾಡಿಸಬೇಕು ಎಂದು ಸಲಹೆ ನೀಡಿದರು.

ಮಡಿಕೇರಿ ತಾ.ಪಂ.ಇಒ ಶೇಖರ್‌ಮಾಹಿತಿ ನೀಡಿ ತಾಲೂಕಿನಲ್ಲಿ ನಿವೇಶನ ರಹಿತ 528 ಅರ್ಜಿಗಳಲ್ಲಿ 460 ಕುಟುಂಬಗಳನ್ನು ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಉಳಿದವು ತಾಂತ್ರಿಕ ಕಾರಣದಿಂದ ಬಾಕಿ ಇದೆ ಎಂದು ವಸತಿ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರ ಗಮನಕ್ಕೆ ತಂದರು.

ವಿರಾಜಪೇಟೆ ಪುರಸಭೆ ಮುಖ್ಯಾಧಿಕಾರಿ ನಾಚಪ್ಪ ಅವರು ಪೌರಕಾರ್ಮಿಕರಿಗೆ ನಿವೇಶನ ಹಕ್ಕುಪತ್ರ ಹಾಗೂ ಮನೆ ನಿರ್ಮಾಣದ ಬಗ್ಗೆ ಮಾಹಿತಿ ನೀಡಿದರು.

ಕೆ.ಪಿ.ಮೋಹನ್ ರಾಜ್, ತಹಸೀಲ್ದಾರರಾದ ಪ್ರವೀಣ್ ಕುಮಾರ್,ಶ್ರೀಧರ, ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್,ಸಮಗ್ರ ಗಿರಿಜನ ಯೋಜನಾ ಇಲಾಖೆ ಸಮನ್ವಯಾಧಿಕಾರಿ ಎಸ್.ಹೊನ್ನೇಗೌಡ, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ ಅವರು ಮಾತನಾಡಿದರು.

ನಗರಾಭಿವೃದ್ಧಿ ಯೋಜನಾ ಶಾಖೆಯ ಯೋಜನಾ ನಿರ್ದೇಶಕರಾದ ಬಿ.ಬಸಪ್ಪ, ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್ ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರು ಹಲವು ಮಾಹಿತಿ ನೀಡಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಸಮಾಚಾರ ಸಣ್ಣದಲ್ಲ

ಪತ್ನಿಗೆ ಯುವಕನ ಸಂದೇಶ: ಗಂಡ ಆತ್ಮಹತ್ಯೆ

ಚಿಕ್ಕಮಗಳೂರು: ಪತ್ನಿಗೆ ಬೇರೆ ಯುವಕನೊಬ್ಬ ಮೆಸೇಜ್ ಮಾಡಿದ್ದಕ್ಕೆ ವ್ಯಕ್ತಿಯೊಬ್ಬ ನೇಣಿಗೆ ಶರಣಾಗಿದ್ದಾನೆ ಎಂಬ ಆರೋಪ ಚಿಕ್ಕಮಗಳೂರು ತಾಲೂಕಿನ ಬ್ಯಾಗದಹಳ್ಳಿಯಲ್ಲಿ ಕೇಳಿಬಂದಿದೆ. ಆತ್ಮಹತ್ಯೆಗೆ ಶರಣಾದವನನ್ನು ಮನು (26) ಎಂದು ಗುರುತಿಸಲಾಗಿದೆ. ಫೆ.20ರ ರಾತ್ರಿ ಪತ್ನಿ ಹಾಗೂ ಮೆಸೇಜ್ ಮಾಡಿದ್ದವನ ಜತೆ ಮನು ಜಗಳವಾಡಿದ್ದ. ಗಲಾಟೆ ವೇಳೆ 112 ಪೊಲೀಸರು ಹೋಗಿ ಸಮಾಧಾನ ಮಾಡಿದ್ದರು. ಫೆ.21 ರಂದು ಮನು ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಪತ್ನಿ ಮೇಲಿನ ಅಕ್ರಮ ಸಂಬಂಧದ ಶಂಕೆಯಿಂದ ಮನು ಆತ್ಮಹತ್ಯೆಗೆ ಶರಣಾಗಿರಬಹುದು ಎನ್ನಲಾಗಿದೆ. ತನಿಖೆ ಮಾಡಿ ಮನು ಸಾವಿಗೆ ನ್ಯಾಯ ಕೊಡಿಸುವಂತೆ ಆತನ ಪೋಷಕರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ದಲಿತ ಸಮುದಾಯಕ್ಕೆ ಪ್ರಿಯಾಂಕ್ ಕೊಡುಗೆ ಶೂನ್ಯ

ಬೆಂಗಳೂರು: ಪ್ರಿಯಾಂಕ್ ಖರ್ಗೆ ಅವರಿಗೆ ಮಾಡೋದಿಕ್ಕೆ ಬೇರೆ ಏನೂ ಕೆಲಸವಿಲ್ಲ. ಅವರು ಕೇವಲ ಸಚಿವರು ಎಂಬ ಗೌರವ ಬಿಟ್ಟರೆ ಸಮಾಜದಲ್ಲಿ ಬೇರೇನೂ ಇಲ್ಲ. ಅವರು ದಲಿತರ ಪರ ಹೋರಾಡಿಯೇ ಇಲ್ಲ. ದಲಿತತ್ವ ಅವರಲ್ಲಿ ಇಲ್ಲ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಹೆಸರು ಹೇಳುತ್ತಾರೆ ಹೊರತು ದಲಿತತ್ವ ಅವರ ಕುಟುಂಬದಲ್ಲಿ ಇಲ್ಲ ಎಂದು ವಿಧಾನ ಪರಿಷತ್‌ನ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ವಾಗ್ದಾಳಿ ನಡೆಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪ್ರಿಯಾಂಕ್ ಖರ್ಗೆ ಅವರು ರಾಜಕಾ ರಣಿಯೇ ಅಲ್ಲ. ಅಪ್ಪನ ನೆರಳಲ್ಲಿ ಅಧಿಕಾರ ಅನುಭವಿಸುತ್ತಿದ್ದಾರೆ. ಅವರಿಗೆ ಯಾವ ಬದ್ಧತೆಯೂ ಇಲ್ಲ. ಅವರ ತಳಬುಡ ಎಲ್ಲಾ ನನಗೆ ಗೊತ್ತಿದೆ. ಅವರದ್ದು ಪಿತ್ರಾರ್ಜಿತ ರಾಜಕಾರಣ. ಅವರ ಅಪ್ಪನ ಹೆಸರು ಜತೆಯಲ್ಲಿ ಇಲ್ಲದೇ ಇದ್ದರೆ ಅವರು ಗ್ರಾಮ ಪಂಚಾಯಿತಿ ಸದಸ್ಯರಾಗಲು ಅರ್ಹರಲ್ಲ ಎಂದು ಟೀಕಿಸಿದರು. ಪ್ರಿಯಾಂಕ್ ಖರ್ಗೆ ಅವರು ಒಳ ಮೀಸಲಾತಿ ಬಗೆಗೆ ಒಂದು ಮಾತೂ ಆಡ ಲಿಲ್ಲ. ಒಳ ಮೀಸಲಾತಿ ನ್ಯೂನತೆಗಳ ಬಗ್ಗೆ ಬೆಳಗಾವಿ ಅಧಿವೇಶನದಲ್ಲಿ ನಾನು ಗಮನ ಸೆಳೆದಿದ್ದೆ, ಆದರೆ ಯಾವುದಕ್ಕೂ ಗಮನ ಹರಿಸಿಲ್ಲ. ಒಳಮೀಸಲಾತಿಯಲ್ಲಿ ಜನಾಂಗಗಳ ಲೋಪ ಅಲ್ಲ, ಅದು ಸರಕಾರದ ಲೋಪ. ಇದನ್ನು ಸರಕಾರವೇ ಸರಿ ಮಾಡಬೇಕು ಎಂದರು.

ಮಗಳನ್ನು ಪ್ರೀತಿಸಿದ ಯುವಕನ ಮನೆ ಸುಟ್ಟ

ಮಂಡ್ಯ: ಮಗಳು ತನ್ನ ವಿರೋಧದ ನಡುವೆಯೂ ಪ್ರೀತಿಸಿದ ಯುವಕನನ್ನು ಮದುವೆಯಾಗಿದ್ದಕ್ಕೆ, ಯುವತಿಯ ತಂದೆ ಯುವಕನ ಮನೆಗೆ ಬೆಂಕಿ ಹಚ್ಚಿರುವ ಘಟನೆ ಮದ್ದೂರು ತಾಲೂಕಿನ ಚುಂಚಗಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ವಿನೋದ್ ಎಂಬ ಯುವಕ ಹಾಗೂ ಪಕ್ಕದ ಮನೆಯ ಯುವತಿ ಹಲವು ವರ್ಷಗಳಿಂದ ಪ್ರೀತಿಸುತ್ತಿದ್ದರು. ಮನೆಯವರ ವಿರೋಧದ ಫೆ.12 ರಂದು ಮದುವೆಯಾಗಿದ್ದರು. ಇದರಿಂದ ಕೋಪಗೊಂಡ ಯುವತಿಯ ತಂದೆ ಭಾನುವಾರ ಬೆಳಗ್ಗೆ ಚನ್ನೇಗೌಡ ವಿನೋದ್ ಮನೆಗೆ ಬೆಂಕಿ ಹಚ್ಚಿದ್ದಾನೆ. ಮನೆಯಲ್ಲಿ ಯಾರೂ ಇಲ್ಲದ ಪರಿಣಾಮ ಪ್ರಾಣಾಪಾಯ ಸಂಭವಿಸಿಲ್ಲ. ಮನೆ ಸಂಪೂರ್ಣ ಭಸ್ಮವಾಗಿದ್ದು, ಮನೆಯಲ್ಲಿದ್ದ ಎಲೆಕ್ಟ್ರಾನಿಕ್ ವಸ್ತುಗಳು, ಬಟ್ಟೆ, ಅಡುಗೆ ಸಾಮಾಗ್ರಿಗಳು ಸುಟ್ಟು ಕರಕಲಾಗಿವೆ. ಬೆಂಕಿಯಿಟ್ಟ ಚನ್ನೇಗೌಡನಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಆತನಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕಳುಹಿಸಲಾಗಿದೆ. ಮದ್ದೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ವಿನೋದ್ ಕುಟುಂಬಸ್ಥರು ಮನೆಯಲ್ಲಿ 10 ಲಕ್ಷ ರು. ನಗದು, 250 ಗ್ರಾಂ ಚಿನ್ನವಿತ್ತು ಎಂದು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸದ್ಯ ಗ್ರಾಮದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಿದ್ದು, ಮುಂಜಾಗ್ರತೆ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ.

ಲಮಾಣಿ ಪ್ರಕರಣಕ್ಕೂ ನನಗೂ ಸಂಬಂಧವಿಲ್ಲ

ಗದಗ: ಶಿರಹಟ್ಟಿ ಶಾಸಕ ಡಾ. ಚಂದ್ರು ಲಮಾಣಿ ವಿರುದ್ಧ ಸ್ವಾಮಿಜಿಯೊಬ್ಬರು ಷಡ್ಯಂತ್ರ ಮಾಡಿದ್ದಾರೆ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಆದರಹಳ್ಳಿ ಗವಿಮಠದ ಕುಮಾರ ಮಹಾರಾಜ ಸ್ವಾಮೀಜಿ ಸ್ಪಷ್ಟನೆ ನೀಡಿದ್ದಾರೆ. ಈ ಬಗ್ಗೆ ಆಡಿಯೋದಲ್ಲಿ ಸ್ಪಷ್ಟನೆ ನೀಡಿದ್ದು, ಅದರಲ್ಲಿ ನಾನು ಮಾತನಾಡಿದ್ದು ಸತ್ಯ. ಆದರೆ ಲೋಕಾಯುಕ್ತ ಪ್ರಕರಣಕ್ಕೂ ನನಗೂ ಸಂಬಂಧವಿಲ್ಲ. ಮಾತನಾಡಿಲ್ಲ ಅಂತ ಸಮರ್ಥನೆ ಮಾಡಿಕೊಳ್ಳಲ್ಲ. ಆಗ ಜಗಳದ ಸಮಯದಲ್ಲಿ ಶಾಸಕರು ಒತ್ತಡ ಕೊಟ್ಟಿದ್ದಕ್ಕೆ ಸಿಟ್ಟಿನಲ್ಲಿ ಮಾತಾಡಿದ್ದೇನೆ ನಿಜ. ಆದರೆ ಈ ಪ್ರಕರಣಕ್ಕೆ ನನಗೆ ಸಂಬಂಧ ಇಲ್ಲ ಎಂದಿದ್ದಾರೆ. ಮೈಸೂರು ಕಾರ್ಯಕ್ರಮ ನಂತರ ಗದಗ ಬಂದು ಪ್ರೆಸ್ ಮೀಟ್ ಮಾಡಿ ಹೇಳ್ತೀನಿ. ನಾನು ಭಾಗಿಧಾರ ಇದ್ದೀನಿ ಅಂದ್ರೆ ನನ್ನ ಎರಡೂ ಮೊಬೈಲ್ ತೆಗೆದುಕೊಳ್ಳಿ ಚೆಕ್ ಮಾಡಿ ಅಂತಾ ಹೇಳಿದ್ದೇನೆ. ಈ ಬಗ್ಗೆ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಭಕ್ತರು ಭಯ ಪಡುವ ಅಗತ್ಯ ಇಲ್ಲ ಎಂದಿದ್ದಾರೆ. ಪತ್ತೆಯಾಗಿದ್ದ ಆಡಿಯೋದಲ್ಲಿ ಮುಂದಿನ ಚುನಾವಣೆಗೆ ಡಾ.ಚಂದ್ರುಗೆ ಟಿಕೆಟ್ ತಪ್ಪಿಸಬೇಕು ಅಂತಾ ಸ್ವಾಮೀಜಿ ಸ್ಪಷ್ಟವಾಗಿ ಮಾತನಾಡಿದ್ದಾರೆ. ಶಾಸಕರಿಗೆ ಟಿಕೆಟ್ ತಪ್ಪಿಸದೇ ಸಮಾಧಾನ ಇಲ್ಲ. ಬೆಂಗಳೂರಿನಲ್ಲಿ ಬೇರೆ ಸೂತ್ರ ಹಮ್ಮಿಕೊಂಡಿದ್ದೇವೆ. ಕೂತು ಮಾತಾಡಿ ಪ್ಲಾನ್ ಮುಂದುವರೆಸೋಣ. ಸೋನು ಲಮಾಣಿ ಅಂತಾ ಸಮಾಜದ ಲೀಡರ್ ಇದ್ದಾರೆ. ವೀರೇಂದ್ರ ಪಪ್ಪಿ ಇವನ ಪಾಟ್ನರ್, ಕ್ಯಾಸಿನೋ ಎಲ್ಲಾ ಇದೆ. ಅವರು ನಮ್ಮ ಭಕ್ತ. ಬೆಂಗಳೂರಿನಲ್ಲಿ ಟೀಮ್ ಇದೆ. ಕೆಲಸ ಕೊಡಿ ಅಂತಾ ಬರ್ತಾರೆ. ನೋಟಿಗೆ ಅದು, ಇದು ಹಚ್ಚಿ, ಐಟಿಗೆ ಒಗೆಸುತ್ತಾರೆ. ಬನ್ನಿ ಈ ಬಗ್ಗೆ ಮಾತಾಡೋಣ, ಅವರನ್ನ ಕೈ ಬಿಟ್ಟು ನಾವು ಸುಮ್ಮನೇ ನಿಲ್ಲೋಣ ಅಂತ 2:36 ನಿಮಿಷದ ಆಡಿಯೋದಲ್ಲಿ ಷಡ್ಯಂತ್ರದ ಮಾತುಗಳು ಕೇಳಿ ಬಂದಿದ್ದವು.

ಬೆಳಗಾವಿ ಡಿಸಿಸಿ ಬ್ಯಾಂಕ್ ವಿರುದ್ಧ ಗಂಭೀರ ಆರೋಪ | ಸರಕಾರಿ ಜಮೀನು ವಾಪಸ್ಸಾತಿಗೆ ಲೋಕಾಯುಕ್ತಕ್ಕೆ ದೂರು

120 ಕೋಟಿ ಸಾಲದ ಸುತ್ತ ಅನುಮಾನದ ಹುತ್ತ

ವಿನಾಯಕ ಮಠಪತಿ ಬೆಳಗಾವಿ

4 ಎಕರೆ ಜಮೀನು ಅಡವಿಟ್ಟುಕೊಂಡು ಸುಮಾರು 120 ಕೋಟಿ ಸಾಲ ಕೊಟ್ಟ ಬೆಳಗಾವಿ ಡಿಸಿಸಿ ಬ್ಯಾಂಕ್ ನಡೆ ವಿರುದ್ಧ ಸಾರ್ವಜನಿಕ ವಲಯದಲ್ಲಿ ಪರ ವಿರೋಧ ಚರ್ಚೆಗಳು ನಡೆಯುತ್ತಿವೆ. ಈ ಮಧ್ಯೆ, ಸಾಲ ಕೊಟ್ಟ ಜಮೀನು ಸರಕಾರಕ್ಕೆ ಸೇರಿದ್ದು, ಖಾಸಗಿ ವ್ಯಕ್ತಿ ಪರಭಾರೆ ಮಾಡಿಕೊಂಡು ಅಕ್ರಮವೆಸಗಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಗುತ್ತಿಗೆದಾರ ಜಯಶೀಲ ಶೆಟ್ಟಿ ಎಂಬುವವರಿಗೆ ಸೇರಿದ್ದ ಬೆಳಗಾವಿ ಹೃದಯಭಾಗ ಶ್ರೀನಗರದಲ್ಲಿರುವ 5.1 ಎಕರೆ ಜಮೀನಿನ ಪೈಕಿ 4 ಎಕರೆಗೆ ಬಿಡಿಸಿಸಿ ಬ್ಯಾಂಕ್ 120 ಕೋಟಿ ರು.ಸಾಲ ನೀಡಿದೆ. ಆದರೆ ಬ್ಯಾಂಕ್ ಆಡಳಿತ ಮಂಡಳಿ ಸಮರ್ಪಕ ದಾಖಲೆ ಪರಿಶೀಲನೆ ನಡೆಸದೆ ದೊಡ್ಡ ಮೊತ್ತದಲ್ಲಿ ಸಾಲ ನೀಡಲಾಗಿದೆ ಎಂದು ಕೆಲ ಮುಖಂಡರು ಆಕ್ರೋಶ ಹೊರಹಾಕುತ್ತಿದ್ದಾರೆ. ಆದರೆ ಬ್ಯಾಂಕ್ ಆಡಳಿತ ಮಂಡಳಿ ಮಾತ್ರ ಕಾನೂನು ರೀತಿಯಲ್ಲೇ ಸಾಲ ನೀಡಿದ್ದು ಸಮರ್ಪಕವಾಗಿ ಬಡ್ಡಿ ವಸೂಲಿ ಮಾಡಲಾಗಿದೆ ಎಂದು ತಿಳಿಸಿದೆ.

ಸದ್ಯ ಬಿಡಿಸಿಸಿ ಬ್ಯಾಂಕ್ ಕೊಟ್ಟಿರುವ ಸಾಲದ ಜಮೀನಿನ ಹಕ್ಕು ಸರಕಾರಕ್ಕೆ ಸೇರಿದ್ದು ಎಂಬ ಅಂಶ ಬೆಳಕಿಗೆ ಬಂದಿದೆ. ಪೊಲೀಸ್ ಇಲಾಖೆಗೆ ಸೇರಿರುವ ಕೋಟ್ಯಂತರ ರು. ಮೌಲ್ಯದ ಜಮೀನಿನ ಹಕ್ಕನ್ನು ಗುತ್ತಿಗೆದಾರ ಜಯಶೀಲ ಶೆಟ್ಟಿ ಅನಧಿಕೃತವಾಗಿ ಪಡೆದುಕೊಂಡಿದ್ದಾರೆ ಎಂದು ಆರ್‌ಟಿಐ ಕಾರ್ಯಕರ್ತ ಭೀಮಪ್ಪ ಗಡಾದ್ ಆರೋಪಿಸಿದ್ದು, ದಾಖಲೆ ಪತ್ರಗಳನ್ನು ಬಿಡುಗಡೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಕರಣದ ದಿಕ್ಕು ಬದಲಾಗಿದೆ.

ಬಿಡಿಸಿಸಿ ಬ್ಯಾಂಕ್ ವಿರುದ್ಧ ಸಿಡಿದೆದ್ದ ರೈತರು: ರೈತರ ಕೃಷಿ ಜಮೀನಿಗೆ 40 ಸಾವಿರ ರು. ಸಾಲ ನೀಡಲು ಸತಾಯಿಸುವ ಸಹಕಾರಿ ಬ್ಯಾಂಕ್ ತಮಗೆ ಬೇಕಾದವರಿಗೆ ಕೋಟ್ಯಂತರ ರು.ಸಾಲ ಕೊಟ್ಟು ರೈತರಿಗೆ ಮೋಸ ಎಸಗಿದೆ ಎಂಬ ಗಂಭೀರ ಆರೋಪ ಮಾಡಲಾಗುತ್ತಿದೆ. ಸಮರ್ಪಕ ದಾಖಲೆ ಪರಿಶೀಲನೆ ಮಾಡದೆ ಖಾಸಗಿ ವ್ಯಕ್ತಿಗೆ ಕೋಟ್ಯಂತರ ರು. ಸಾಲ ನೀಡಿದ್ದಾರೆ ಎಂದು ರೈತ ಮುಖಂಡರು ಆರೋಪಿಸುತ್ತಿದ್ದಾರೆ. ರೈತರಿಗೂ ಪ್ರತಿ ಎಕರೆಗೆ ಒಂದು ಲಕ್ಷ ರು. ಕೃಷಿ ಸಾಲ ನೀಡುವಂತೆ ಆಗ್ರಹಿಸಿ ಬಿಡಿಸಿಸಿ ಬ್ಯಾಂಕ್ ವಿರುದ್ಧ ಪ್ರತಿಭಟನೆ ಸಜ್ಜಾಗಿದ್ದಾರೆ.

ಸಾಲದ ಗೌಪ್ಯತೆ ಕಾಪಾಡಲು ಆಡಳಿತ ಮಂಡಳಿ ವಿಫಲ: ಬ್ಯಾಂಕಿನಲ್ಲಿ ಸಾಲ ಪಡೆದವರ ಮಾಹಿತಿ ಗೌಪ್ಯತೆ ಕುರಿತು ಬಿಡಿಸಿಸಿ ಬ್ಯಾಂಕ್ ಎಡವಿದೆಯಾ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ. ಬ್ಯಾಂಕಿನ ಆಡಳಿತ ವಿಷಯಗಳನ್ನು ಸಾರ್ವಜನಿಕ ವಲಯದಲ್ಲಿ ಚರ್ಚಿಸಿದರೆ ಇದರಿಂದ ಮುಂದಿನ ವ್ಯವಹಾರಗಳಿಗೂ ಪೆಟ್ಟು ಬೀಳುವ ಸಾಧ್ಯತೆ ಇದೆ ಎಂಬುದು ಕೆಲವರ ವಾದ.

ಸರಕಾರಿ ಆಸ್ತಿ ಖಾಸಗಿ ವ್ಯಕ್ತಿಗಳ ಪಾಲು?

ಬೆಳಗಾವಿ ನಗರದಲ್ಲಿರುವ 1316/3 ಸರ್ವೆ ನಂಬರಿನ 5 ಎಕರೆ 34 ಗುಂಟೆ ಜಮೀನು ಮಾಲಿಕತ್ವದ ವಿರುದ್ಧವೇ ಸದ್ಯ ಸಂಶಯ ವ್ಯಕ್ತವಾಗಿದೆ. ಮೂಲತಃ ಈ ಜಮೀನು ಪೊಲೀಸ್ ಇಲಾಖೆಗೆ ಸೇರಿದ್ದು, ಪಹಣಿಯಲ್ಲಿ ಪೊಲೀಸ್ ಗೋಲಿಬಾರ್ ಕಡೆ ಎಂದು ದಾಖಲಾಗಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಖಾಸಗಿ ವ್ಯಕ್ತಿಗಳು ತಮ್ಮ ಹೆಸರು ಸೇರ್ಪಡೆ ಮಾಡಿಕೊಳ್ಳುವ ಮೂಲಕ 200 ಕೋಟಿ ಮೌಲ್ಯದ ಸರಕಾರಿ ಜಮೀನು ಕಬಳಿಸುವ ಹುನ್ನಾರ ಮಾಡಿದ್ದಾರೆ ಎಂದು ಮಾಹಿತಿ ಹಕ್ಕು ಕಾರ್ಯಕರ್ತ ಭೀಮಪ್ಪ ಗಡಾದ ಆರೋಪಿಸಿದ್ದಾರೆ.

ಪೊಲೀಸ್ ಇಲಾಖೆಗೆ ಸೇರಿರುವ 5.34 ಎಕರೆ ಜಮೀ ನನ್ನು 1975 ರಲ್ಲಿ ಇಬ್ರಾಹಿಂ ಮುಜಾ ವರ್ ಎಂಬ ವ್ಯಕ್ತಿ ಅನಧಿಕೃತವಾಗಿ ತಮ್ಮ ಹೆಸರಿಗೆ ದಾಖಲಿಸಿಕೊಂಡಿ ದ್ದಾರೆ. ಪೊಲೀಸ್ ಗೋಲಿಬಾರ್ ಕಡೆ ಎಂದು ನಮೂದು ಇದ್ದ ಜಮೀನನ್ನು ಕಬಳಿಸಲಾಗಿದೆ. ಈ ಕುರಿತು ಬೆಳಗಾವಿ ಎಸ್ಪಿ ಅವರೂ ಭೂಮಿ ವಾಪಸ್ ಪಡೆಯಲು 2 ವರ್ಷದಿಂದ ಕಾನೂನು ಹೋರಾಟ ನಡೆಸಿದ್ದಾರೆ. ಈ ಕುರಿತು ಲೋಕಾಯುಕ್ತಕ್ಕೆ ದೂರು ಸಲ್ಲಿಸಲಾಗಿದೆ.

- ಭೀಮಪ್ಪ ಗಡಾದ ಆರ್‌ಟಿಐ ಕಾರ್ಯಕರ್ತ

ಓರ್ವ ಗುತ್ತಿಗೆದಾರರಿಗೆ ಭದ್ರತೆ ಆಧರಿಸಿ 120 ಕೋಟಿ ಸಾಲ ಕೊಟ್ಟಿದ್ದೇವೆ. ನಾಲ್ಕು ಎಕರೆ ಜಮೀನು ಹಾಗೂ 700 ಕೋಟಿ ಮೌಲ್ಯದ ಆಸ್ತಿ ಪತ್ರಗಳನ್ನು ಭದ್ರತೆಯಾಗಿಟ್ಟುಕೊಂಡು ಸಾಲ ನೀಡಿದ್ದೇವೆ. ಆದರೆ ಕೆಲವರು ಬ್ಯಾಂಕಿನ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದು ಅವರ ವಿರುದ್ಧ ಕಾನೂನು ರೀತಿ ಹೋರಾಟ ನಡೆಸುತ್ತೇವೆ.

- ಅಣ್ಣಾಸಾಹೇಬ್ ಜೊಲ್ಲೆ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ

ದೆಹಲಿಗೆ ನಾನು ಹೋಗದೇ ಇನ್ಯಾರು ಹೋಗಲು ಸಾಧ್ಯ?

ಬೆಂಗಳೂರು: ಪಕ್ಷದ ವರಿಷ್ಠರು ಕರೆದಾಗಲೆಲ್ಲ ದೆಹಲಿ ಹೋಗುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಮುಂದಿನ ವಾರ ದೆಹಲಿಗೆ ತೆರಳುವ ಸಾಧ್ಯತೆಯಿದೆ ಎನ್ನುವ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ನಾನು ದೆಹಲಿಗೆ ಹೋಗುವುದು ಬರುವುದು ಇದ್ದೇ ಇರುತ್ತದೆ. ನಾನು ಹೋಗದೇ ಮತ್ಯಾರು ಹೋಗುತ್ತಾರೆ? ಅವರು ಯಾವಾಗ ಕರೆಯುತ್ತಾರೋ ಆಗೆಲ್ಲಾ ಹೋಗುತ್ತೇವೆ ಎಂದರು.

ಇನ್ನು ಅಸ್ಸಾಂಗೆ ತೆರಳಿದ್ದಾಗ ಪ್ರಿಯಾಂಕಾ ಗಾಂಧಿ ಅವರೊಂದಿಗೆ ರಾಜ್ಯ ರಾಜಕೀಯಕ್ಕೆ ಸಂಬಂಧಿಸಿದಂತೆ ಯಾವುದೇ ಚರ್ಚೆಯಾಗಿಲ್ಲ. ನಾನು ರಾಜ್ಯ ರಾಜಕೀಯದ ಬಗ್ಗೆ ಹಂಗೆಲ್ಲ, ಎಲ್ಲೆಂದರಲ್ಲಿ ಚರ್ಚೆ ಮಾಡುವುದಿಲ್ಲ. ಅದು ಸಾರ್ವಜನಿಕವಾಗಿ ಚರ್ಚಿಸುವ ವಿಚಾರವೂ ಅಲ್ಲ ಎಂದರು. ರಾಹುಲ್ ಗಾಂಧಿ ಅವರು ಅಮೆರಿಕ ವಿಧಿಸಿರುವ ತೆರಿಗೆ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಟೀಕೆ ಮಾಡಿರುವ ಬಗ್ಗೆ ಕೇಳಿದಾಗ, ರಾಹುಲ್ ಗಾಂಧಿ ಅವರು ದೇಶದ ಹಿತಕ್ಕಾಗಿ ಏನು ಬೇಕೋ ಅದನ್ನು ಮಾಡುತ್ತಾರೆ, ಮಾತಾಡುತ್ತಾರೆ. ಅಮೆರಿಕದ ಜತೆಗಿನ ತೆರಿಗೆ ಒಪ್ಪಂದದಿಂದ ದೇಶದ ಪ್ರತಿ ರೈತನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ರಾಹುಲ್ ಗಾಂಧಿ ಅವರು ಲೋಕಸಭೆ ವಿರೋಧ ಪಕ್ಷದ ನಾಯಕರಾಗಿ ಚರ್ಚೆ ಮಾಡುತ್ತಾರೆ ಎಂದರು.

ನರೇಗಾ ಬಚಾವ್ ಸಮಾವೇಶ: ನಾನು ಹಾಗೂ ಸಿಎಂ ಇಬ್ಬರೂ ಕಾರವಾರಕ್ಕೆ ಹೋಗಿ ವೈದ್ಯಕೀಯ ವಿವಿ ಉದ್ಘಾಟನೆ ಮಾಡುತ್ತಿದ್ದೇವೆ. ಸೋಮವಾರ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಎರಡೂ ಸೇರಿಸಿ ಮನರೇಗಾ ಉಳಿಸಿ ಸಮಾವೇಶ ಹಮ್ಮಿಕೊಂಡಿದ್ದೇವೆ. ದೆಹಲಿಯಿಂದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಆಗಮಿಸುತ್ತಿದ್ದು, ಸಮಾವೇಶಕ್ಕೆ ಕಾಂಗ್ರೆಸ್ ಪಕ್ಷದ ಎಲ್ಲಾ ಶಾಸಕರು ಆಗಮಿಸಬೇಕು. ಮನರೇಗಾ ರಕ್ಷಣೆಗೆ ಆಗ್ರಹಿಸಿ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ಪಾದಯಾತ್ರೆ ಮಾಡಲಾಗಿದೆ. ಬಾಕಿ ಇರುವ ಕ್ಷೇತ್ರಗಳಲ್ಲೂ ಮಾಡಲಾಗುವುದು ಎಂದು ಡಿಕೆಶಿ ತಿಳಿಸಿದರು.

ಮರ್ಯಾದೆಗೇಡು ಹತ್ಯೆಗೆ ಕಠಿಣ ಕಾನೂನು

← ಮೊದಲ ಪುಟದಿಂದ

ಕೇವಲ ಕೊಲೆ ಅಥವಾ ದೈಹಿಕ ಹಲ್ಲೆ ಮಾತ್ರವಲ್ಲದೆ, ದಂಪತಿಗಳ ವಿರುದ್ಧ ಸಾಂಕೇತಿಕವಾಗಿ ತಿಥಿ ವಿಧಿವಿಧಾನ ಮಾಡುವುದು ಮತ್ತು ಮಾನಸಿಕ ಕಿರುಕುಳ ನೀಡುವುದು, ದಂಪತಿಗಳಿಗೆ ಅಥವಾ ಅವರ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ ಹಾಕುವುದು, ಆಸ್ತಿಯಿಂದ ವಂಚಿಸುವುದು, ಕೆಲಸದಿಂದ ತೆಗೆದುಹಾಕುವುದನ್ನೂ ಸಹ ಅಪರಾಧವೆಂದು ಪರಿಗಣಿಸಲಾಗಿದೆ. ಸಂಪ್ರದಾಯದ ಹೆಸರಿನಲ್ಲಿ ದಂಪತಿಗಳ ಹತ್ಯೆ ಅಥವಾ ಹಲ್ಲೆ ನಡೆಸಿದರೆ ಕನಿಷ್ಠ 5 ವರ್ಷದಿಂದ ಜೀವಾವಧಿ ಶಿಕ್ಷೆಯವರೆಗೆ ದಂಡನೆಯನ್ನು ವಿಧಿಸಲು ಅವಕಾಶವಿದೆ.

ಕೌನ್ಸೆಲಿಂಗ್‌ಗೆ ಅವಕಾಶ: ಅಂತರ್ಜಾತಿ ವಿವಾಹಗಳನ್ನು ವಿಧ್ಯುಕ್ತವಾಗಿ ನೆರವೇರಿಸಲು ಮತ್ತು ದಂಪತಿಗಳಿಗೆ ಕೌನ್ಸೆಲಿಂಗ್ ನೀಡಲು ನಿವೃತ್ತ ನ್ಯಾಯಾಧೀಶರು ಮತ್ತು ಅಧಿಕಾರಿಗಳನ್ನೊಳಗೊಂಡ 'ಇವ ನಮ್ಮವ ವೇದಿಕೆ' ರಚಿಸಲು ಮತ್ತು ಇಂತಹ ಪ್ರಕರಣಗಳ ವಿಚಾರಣೆ ನಡೆಸಲು ಪ್ರತ್ಯೇಕ ನ್ಯಾಯಾಲಯಗಳನ್ನು ಸ್ಥಾಪಿಸಲು ವಿಧೇಯಕದಲ್ಲಿ ಪ್ರಸ್ತಾಪಿಸಲಾಗಿದೆ. ಚಾರ್ಜ್‌ಶೀಟ್ ಸಲ್ಲಿಕೆಯಾದ 2 ತಿಂಗಳೊಳಗೆ ವಿಚಾರಣೆ ಪೂರ್ಣಗೊಳಿಸಲು ಕ್ರಮವಹಿಸಬೇಕು. ಪ್ರತಿ ಜಿಲ್ಲೆಯಲ್ಲಿಯೂ ಡಿಸಿ ನೇತೃತ್ವದಲ್ಲಿ ಮೇಲ್ವಿಚಾರಣಾ ಸಮಿತಿಯಿರಲಿದ್ದು, 24 ಗಂಟೆಗಳ ಸಹಾಯವಾಣಿ ಕಾರ್ಯನಿರ್ವಹಿಸಲಿದೆ.

ಮದುವೆ ವಿರೋಧಿಸಿ ತಿಥಿ ಮಾಡಿದ್ರೂ ಜೈಲು: ರಾಜ್ಯ ಸರಕಾರದ ಪ್ರಸ್ತಾವಿತ ವಿಧೇಯಕದಲ್ಲಿ ಹಲ್ಲೆ, ಬಹಿಷ್ಕಾರವಷ್ಟೇ ಅಲ್ಲದೇ, ಅಂತರ್ಜಾತಿ ವಿವಾಹವಾದರೂ ಎನ್ನುವ ಕಾರಣಕ್ಕೆ ಸಾಂಕೇತಿಕ ಶವಸಂಸ್ಕಾರ, ತಿಥಿ ಮಾಡುವುದಕ್ಕೂ ನಿರ್ಬಂಧ ಹೇರಲಾಗಿದೆ. ಅನೇಕ ಸಂದರ್ಭದಲ್ಲಿ ಪೋಷಕರು, ತಮ್ಮಿಚ್ಛೆಗೆ ವಿರುದ್ಧವಾಗಿ ಮದುವೆಯಾಗುವ ಮಕ್ಕಳ ತಿಥಿ ಮಾಡಿ, ತಮಗೂ, ಮಕ್ಕಳಿಗೂ ಸಂಬಂಧ ಕಳೆದುಕೊಳ್ಳುವ ಘಟನೆಗಳು ನಡೆಯುತ್ತದೆ.ಆದ್ದರಿಂದ ಇನ್ನು ಮುಂದೆ ಇಂತಹ ಪ್ರತಿರೋಧ ಮಾಡಿದರೂ, ಅದರ ವಿರುದ್ಧ ದೂರು ದಾಖಲಿಸಿ 2ರಿಂದ 5ವರ್ಷಗಳ ಅವಧಿಗೆ ಜೈಲು ಶಿಕ್ಷೆ ವಿಧಿಸುವುದಕ್ಕೆ ಅವಕಾಶ ಕಲ್ಪಿಸಲಾಗಿದೆ.

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್ ಆರೋಪ

ಶೇ.40ರಷ್ಟು ಶಾಸಕರು ಕಮಿಷನ್ ದಂಧೆಕೋರರು

ಹೊಸಪೇಟೆ: ರಾಜ್ಯದಲ್ಲಿ ಪಕ್ಷಾತೀತವಾಗಿ ಶಾಸಕರು ಕಮಿಷನ್ ದಂಧೆಕೋರರಾಗಿದ್ದಾರೆ. ಶೇ.30ರಿಂದ 40ರಷ್ಟು ಶಾಸಕರಂತೂ ಇದರಲ್ಲಿ ನೇರವಾಗಿ ಶಾಮೀಲಾಗಿದ್ದಾರೆ. ಇದನ್ನು ಮುಖ್ಯಮಂತ್ರಿಗಳ ಗಮನಕ್ಕೂ ತಂದಿದ್ದೇವೆ. ಅದರ ಭಾಗವಾಗಿಯೇ ಶಿರಹಟ್ಟಿ ಶಾಸಕರು ಸಿಕ್ಕಿಬಿದ್ದಿದ್ದಾರೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಮಗಾರಿ ಮುಗಿದ ನಂತರ ಬಿಲ್ ಪಾವತಿ ವೇಳೆ ಕಮಿಷನ್ ಪಡೆಯುವ ಕಾಲ ಈಗ ಹೊರಟುಹೋಗಿದೆ, ಮೊದಲೇ ಕಮಿಷನ್ ನೀಡಬೇಕಾಗಿದೆ. ಗುದ್ದಲಿ ಪೂಜೆ ಮಾಡುವ ಹಂತದಲ್ಲೇ ಶಾಸಕರಿಗೆ ಕಮಿಷನ್ ನೀಡಬೇಕಾಗುತ್ತದೆ, ಅಧಿಕಾರಿಗಳು ಇಲ್ಲಿ ಮಧ್ಯವರ್ತಿಗಳಾಗಿ ವರ್ತಿಸಿ ಗುತ್ತಿಗೆದಾರರನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದಾರೆ ಎಂದರು.

ಶೇ.60ರಷ್ಟು ಕಮಿಷನ್ ಎಂದು ಹೇಳಿಲ್ಲ: ಈ ಹಿಂದಿನ ಸರಕಾರದಲ್ಲಿ ಶೇ.40ರಷ್ಟು ಕಮಿಷನ್ ಇತ್ತು, ಈ ಸರಕಾರದಲ್ಲಿ ಶೇ.60ರಷ್ಟು ಕಮಿಷನ್ ದಂಧೆ ಇದೆ ಎಂದು ನಾನು ಹೇಳಿಲ್ಲ, ನನ್ನ ಮಾತನ್ನು ತಿರುಚಲಾಗಿದೆ. ಆದರೆ ಈ ಹಿಂದಿನ ಅಧ್ಯಕ್ಷರ ಹೇಳಿಕೆಯನ್ನು ಕಾಂಗ್ರೆಸ್ ಪಕ್ಷ ಚೆನ್ನಾಗಿ ಬಳಸಿಕೊಂಡಿದ್ದು ನಿಜ. ಆದರೆ ನಾವು ಸಹ ಅದೇ ಹಾದಿ ತುಳಿದಿಲ್ಲ. ಗುತ್ತಿಗೆದಾರರ ಬಾಕಿ ಬಿಲ್ ಮೊತ್ತ ₹37 ಸಾವಿರ ಕೋಟಿಯನ್ನು ತಕ್ಷಣ ಕೊಡಿ ಎಂಬುದಷ್ಟೇ ನಮ್ಮ ಬೇಡಿಕೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್ ಮಾತನಾಡಿದರು.

ಮಾರ್ಚ್ 6ಕ್ಕೆ ಮುಷ್ಕರ: ಬೇಡಿಕೆ ಈಡೇರಿಸಲು ಆಗ್ರಹಿಸಿ ಮಾರ್ಚ್ 6ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯದ ಎಲ್ಲ 31 ಜಿಲ್ಲೆಗಳಿಂದ ಬರಲಿರುವ ಗುತ್ತಿಗೆದಾರರ ಸಹಿತ ಒಂದು ದಿನದ ಮುಷ್ಕರ ನಡೆಸಲಾಗುವುದು. ಅಂದು ರಾಜ್ಯದೆಲ್ಲೆಡೆ ಕಾಮಗಾರಿಗಳು ಸ್ಥಗಿತಗೊಂಡಿರುತ್ತವೆ. ಸರಕಾರ ಅಗಲೂ ಸ್ಪಂದಿಸದಿದ್ದರೆ ಎಪ್ರಿಲ್‌ನಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ಮಂಜುನಾಥ್ ಎಚ್ಚರಿಸಿದರು.

ಸಂಘದ ಪದಾಧಿಕಾರಿ ಗಳಾದ ನಾಗಪ್ಪ, ರಾಜಶೇಖರ ಪಾಟೀಲ್, ಜಗದೀಶ್, ಕಿಚಡಿ ಶ್ರೀನಿವಾಸ್, ಕೇಶವ ರೆಡ್ಡಿ, ನಾಗರಾಜ, ಮಹೇಶ್ ಹಲಗೇರಿ, ಉಮಾಕಾಂತ್, ದೇವಿಪ್ರಸಾದ್ ಇದ್ದರು.

ಶಿವಾಜಿ ಮೆರವಣಿಗೆ ಮೇಲೆ ಕಲ್ಲು ತೂರಾಟ ಪ್ರಕರಣ: ಇಬ್ಬರ ಸೆರೆ

ಬಾಗಲಕೋಟೆ: ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿ ಕಲ್ಲು ತೂರಾಟ ನಡೆಸಿದ ಆರೋಪದಲ್ಲಿ ಇಬ್ಬರ ವಿರುದ್ಧ ಬಾಗಲಕೋಟೆ ಶಹರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಾಗಲಕೋಟೆಯ ಅಶೋಕ ಬಾರಕೇರ ಹಾಗೂ ಸಿದ್ದಪ್ಪ ಫೇರಡೆ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಆರೋಪಿಗಳನ್ನು ಶನಿವಾರ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ನೀಡಿದ್ದಾರೆ. ಅಶೋಕ ಕಲ್ಲು ತೂರಿ ಓಡಿ ಹೋಗುವಾಗ ಬಿದ್ದು ಗಾಯ ಮಾಡಿಕೊಂಡಿದ್ದು, ನಮ್ಮ ಸಿಬ್ಬಂದಿ ಕೂಡಲೇ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ ಎಂದು ಎಸ್‌ಪಿ ಸಿದ್ಧಾರ್ಥ ಗೋಯಲ್ ತಿಳಿಸಿದ್ದಾರೆ.

ಹಿಂದೂ ಜಾಗರಣ ವೇದಿಕೆಯ ದಕ್ಷಿಣ ಪ್ರಾಂತ್ಯದ ಕಾರ್ಯಕಾರಣಿ ಸದಸ್ಯ ಪ್ರಮೋದ್ ಮುತಾಲಿಕ್ ಹಾಗೂ ಪುನೀತ್ ಕೆರೆಹಳ್ಳಿ ಅವರಿಗೆ ಬಾಗಲಕೋಟೆ ಜಿಲ್ಲೆ ಪ್ರವೇಶಕ್ಕೆ ಶುಕ್ರವಾರದಿಂದ ಒಂದು ತಿಂಗಳ ಕಾಲ ನಿರ್ಬಂಧ ಹೇರಲಾಗಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದ್ದಾರೆ.

ಶಿವಾಜಿ ಮಹಾರಾಜರ ಮೆರವಣಿಗೆ ವೇಳೆ ಕಲ್ಲು ತೂರಿದವರ ಮೇಲೆ ಕ್ರಮ ಕೈಗೊಳ್ಳುವುದಿಲ್ಲ, ಆದರೆ ದೇಶಭಕ್ತಿ ಮತ್ತು ಜಾಗೃತಿ ಮೂಡಿಸುವವರನ್ನೇ ಗಡೀಪಾರು ಮಾಡಲಾಗುತ್ತಿದೆ. ಕಾಂಗ್ರೆಸ್ ಸರಕಾರ ನಮ್ಮೆಲ್ಲರ ಸ್ವಾತಂತ್ರ್ಯವನ್ನು ಹರಣ ಮಾಡುತ್ತಿದೆ.

- ಪ್ರಮೋದ್ ಮುತಾಲಿಕ್ ಶ್ರೀರಾಮಸೇನೆ ರಾಜ್ಯಾಧ್ಯಕ್ಷ

ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಫೆ.21ರಿಂದ ಮಾ.22 ರವರೆಗೆ ಇಬ್ಬರಿಗೂ ಜಿಲ್ಲೆ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದೆ. ಸಾರ್ವಜನಿಕ ಶಾಂತಿ, ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಆದೇಶ ಹೊರಡಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ನಿರ್ಬಂಧದ ನಡುವೆ ಬಾಗಲಕೋಟೆಗೆ ಮುತಾಲಿಕ್: ಶ್ರೀರಾಮ ಸೇನೆ ಮುಖಂಡ ಪ್ರಮೋದ್ ಮುತಾಲಿಕ್ ಅವರಿಗೆ ಜಿಲ್ಲೆಗೆ ಪ್ರವೇಶ ನಿರ್ಬಂಧ ಹೇರಿದ ಮರುದಿನವೇ ಬಾಗಲಕೋಟೆ ನಗರಕ್ಕೆ ಬಂದಿದ್ದಾರೆ. ಬೆಂಗಳೂರಿನಿಂದ ರೈಲಿನ ಮೂಲಕ ನಗರಕ್ಕೆ ಆಗಮಿಸಿದ ಮುತಾಲಿಕ್ ಅವರು ಜಿಲ್ಲಾಡಳಿತದ ನಿರ್ಬಂಧ ಕ್ರಮವನ್ನು ತೀವ್ರವಾಗಿ ಖಂಡಿಸಿದರು.

ಕಾಡಾನೆ ದಾಳಿಗೆ ಮಹಿಳೆ ಬಲಿ: ಊರೇ ರಣರಂಗ

← ಮೊದಲ ಪುಟದಿಂದ

ಇವರು ಇತ್ತೀಚೆಗಷ್ಟೇ ಊರ ಜಾತ್ರೆ ಮುಗಿಸಿಕೊಂಡು ಎಸ್ಟೇಟ್‌ಗೆ ಕೆಲಸಕ್ಕೆ ಮರಳಿದ್ದರು. ಇವರಿಗೆ ಪತಿ, ಇಬ್ಬರು ಅಪ್ರಾಪ್ತ ಮಕ್ಕಳಿದ್ದಾರೆ. ಎನ್.ಆರ್ ಪುರ ತಾಲೂಕಿನ ಕಾಂಡ್ಯ ಹೋಬಳಿಯ ಹುಣಸೆಹಳ್ಳಿಯ ಪುರ ಗ್ರಾಮದಲ್ಲಿ ನಾಗೇಶ್ ಗೌಡ ಎಂಬವರಿಗೆ ಸೇರಿದ ಕಾಫಿ ತೋಟದಲ್ಲಿ ಕೆಲಸಕ್ಕೆ ತೆರಳುತ್ತಿದ್ದ ಬೋರಮ್ಮ ಅವರ ಮೇಲೆ ಏಕಾಏಕಿ ಮದವೇರಿದ ಕಾಡಾನೆ ದಾಳಿ ನಡೆಸಿದೆ. ಗಂಭೀರವಾಗಿ ಗಾಯಗೊಂಡ ಬೋರಮ್ಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಫೆ. 19ರಂದು ಇದೇ ಆನೆ ದಾಳಿಗೆ ಹಾವೇರಿ ಹಾನಗಲ್ ಮೂಲದ ಕಾರ್ಮಿಕ ಯಲ್ಲಪ್ಪ ಎಂಬವರು ಕೂಡ ಕಾಡಾನೆ ದಾಳಿಗೆ ಬಲಿಯಾಗಿದ್ದರು. ಈ ಬಳಿಕ ಆನೆ ಸೆರೆ ಕಾರ್ಯಾಚರಣೆ ಆರಂಭಿಸಿ ದ್ದರೂ ಪುಂಡಾನೆಯನ್ನು ಸೆರೆ ಹಿಡಿಯಲು ಸಾಧ್ಯವಾಗಿರಲಿಲ್ಲ.

ರಸ್ತೆಯಲ್ಲಿಯೇ ಶಾಮಿಯಾನ, ಪ್ರತಿಭಟನೆ: ಆನೆ ಸೆರೆ ಕಾರ್ಯಾಚರಣೆ ನಡುವೆಯೇ ಮತ್ತೊಬ್ಬ ಕಾರ್ಮಿಕ ಮಹಿಳೆ ಆನೆ ದಾಳಿಗೆ ಬಲಿಯಾದ ಘಟನೆಯಿಂದ ಆಕ್ರೋಶಗೊಂಡ ಗ್ರಾಮಸ್ಥರು, ರೈತರು, ಕೂಲಿ ಕಾರ್ಮಿಕರು, ಹಾಗೂ ವಿವಿಧ ಸಂಘಟನೆಗಳ ಮುಖಂಡರು ಮೃತದೇಹವನ್ನು ರಾಜ್ಯ ಹೆದ್ದಾರಿಯಲ್ಲಿ ಇಟ್ಟು ಪ್ರತಿಭಟನೆ ನಡೆಸಿದರು.

ಬಾಳೆಹೊನ್ನೂರು ಸಮೀಪದ ಕಡಬಗೆರೆಯಲ್ಲಿ ರಸ್ತೆಯಲ್ಲಿಯೇ ಶಾಮಿಯಾನ ಹಾಕಿ ಧರಣಿ ಕುಳಿತ ಉದ್ರಿಕ್ತರು ಕೂಡಲೇ ಅರಣ್ಯ ಸಚಿವರು ಸ್ಥಳಕ್ಕೆ ಆಗಮಿಸಬೇಕು ಎಂದು ಪಟ್ಟು ಹಿಡಿದರು. ಎಸ್‌ಪಿ, ಜಿಲ್ಲಾಧಿಕಾರಿ ಸ್ಥಳಕ್ಕೆ ಆಗಮಿಸಿ ಪ್ರತಿಭಟನೆ ಕೈ ಬಿಡುವಂತೆ ಮನವಿ ಮಾಡಿದರೂ ಸುಮಾರು ಆರು ಗಂಟೆಗಳ ಪ್ರತಿಭಟನೆ ಕೈ ಬಿಟ್ಟಿರಲಿಲ್ಲ.

ಪ್ರತಿಭಟನೆ ವೇಳೆ ಟಯರ್‌ಗೆ ಬೆಂಕಿ ಹಚ್ಚಲು ಯತ್ನಿಸಿದ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆಯಲು ಮುಂದಾದಾಗ ವಾತಾವರಣ ಮತ್ತಷ್ಟು ಉದ್ವಿಗ್ನಗೊಂಡಿದೆ. ಬಂಧಿತ ವ್ಯಕ್ತಿಯನ್ನು ಬಿಡಿಸಲು ಹೋದ ಪ್ರವೀಣ್ ಖಾಂಡ್ಯ ಮತ್ತು ಪೊಲೀಸರ ನಡುವೆ ತೀವ್ರ ಮಾತಿನ ಚಕಮಕಿ ನಡೆದಿದೆ. ನೂರಾರು ಜನರು ಪೊಲೀಸರ ವಿರುದ್ಧ ಘೋಷಣೆ ಕೂಗುತ್ತಾ ಆಕ್ರೋಶ ಹೊರಹಾಕಿದಾಗ , ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಯಿತು.

ಪುಂಡಾನೆ ಕೊನೆಗೂ ಸೆರೆ ಹೈರಾಣಾದ ಸಾಕಾನೆಗಳು : ಇಬ್ಬರನ್ನು ಬಲಿ ಪಡೆದಿದ್ದ ಕಾಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಕೊನೆಗೂ ಸೆರೆ ಹಿಡಿದಿದ್ದಾರೆ. ಹುಣಸೆಹಳ್ಳಿ ಸಮೀಪದ ಪುರದ ಬಳಿ ಮಹಿಳೆಯನ್ನು ಬಲಿ ಪಡೆದ ಅರ್ಧ ಗಂಟೆಯಲ್ಲೇ ಕಾಡಾನೆಯನ್ನು ಸೆರೆ ಹಿಡಿಯಲಾಯಿತು. ಅರಿವಳಿಕೆ ಚುಚ್ಚುಮದ್ದು ಪ್ರಭಾವದಿಂದ ಬೆರಣಗೋಡು ಸಮೀಪದ ಕೆರೆಮನೆ ಬಳಿ ಆನೆ ಕುಸಿದು ಬಿದ್ದಿದೆ. ಏಳು ಕುಮ್ಕಿ ಆನೆಗಳು ಹಾಗೂ ಸುಮಾರು 75 ಸಿಬ್ಬಂದಿಗಳ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮಹಿಳೆಗೆ ಮೇಲೆ ದಾಳಿ ನಡೆಸಿದ ಸ್ಥಳದಿಂದ ಅಲ್ಪ ದೂರದಲ್ಲಿರುವ ಕಾಫಿ ತೋಟದಲ್ಲಿ ಕಾಡಾನೆಯನ್ನು ಪತ್ತೆ ಮಾಡಲಾಯಿತು. ಅರಿವಳಿಕೆ ಚುಚ್ಚುಮದ್ದು ನೀಡಿ ಆನೆಯನ್ನು ನಿಶ್ಚೇತನಗೊಳಿಸಿ ಬಳಿಕ ಕುಮ್ಕಿ ಆನೆಗಳ ಸಹಾಯದಿಂದ ನಿಯಂತ್ರಣಕ್ಕೆ ಪಡೆದು ಸೆರೆ ಹಿಡಿಯಲಾಯಿತು. 4 ಆನೆ ತಳ್ಳಿದರೂ ಕಾಡಾನೆ ಅಲುಗಾಡದೇ ನಿಂತಿತ್ತು.

ಶಿಡ್ಲಘಟ್ಟದಲ್ಲಿ ಕಾಂಗ್ರೆಸ್ ಮಹಿಳಾ ಕಾರ್ಯಕರ್ತೆಯರಿಂದಲೇ ಪ್ರತಿಭಟನೆ

ಎಂ.ಸಿ.ಸುಧಾಕರ್ ಕ್ಷಮೆಯಾಚಿಸಲು ಆಗ್ರಹ

ವಿಶ್ವವಾಣಿ ಸುದ್ದಿಮನೆ ಚಿಕ್ಕಬಳ್ಳಾಪುರ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ. ಸುಧಾಕರ್ ಅವರು ಮಹಿಳಾ ಅಧಿಕಾರಿ ಬಗ್ಗೆ ಕೀಳಾಗಿ ಮಾತನಾಡಿದ್ದು, ಕೂಡಲೇ ಮಹಿಳೆಯರಲ್ಲಿ ಕ್ಷಮೆ ಕೇಳಬೇಕು ಎಂದು ಶಿಡ್ಲಘಟ್ಟದಲ್ಲಿ ಕಾಂಗ್ರೆಸ್‌ನ ಮಹಿಳಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ಸಾರಿಗೆ ಬಸ್ ನಿಲ್ದಾಣದ ಇಂದಿರಾ ಕ್ಯಾಂಟೀನ್‌ನಿಂದ ನಗರದ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾಂಗ್ರೆಸ್ ಮಹಿಳಾ ಕಾರ್ಯಕರ್ತೆ ಯರು, ಸಚಿವ ಡಾ.ಎಂ.ಸಿ.ಸುಧಾಕರ್ ಅವರ ಭಿತ್ತಿ ಚಿತ್ರ ಪ್ರದರ್ಶಿಸಿ ಅವರ ವಿರುದ್ಧ ಧಿಕ್ಕಾರಗಳನ್ನು ಕೂಗಿದರು. ಸಚಿವ ಡಾ.ಎಂ.ಸಿ. ಸುಧಾಕರ್ ಅವರು ಈ ಹಿಂದೆ ತನ್ನ ಬೆಂಬಲಿಗ ಉಮೇಶ್ ಅವರೊಂದಿಗೆ ಮೊಬೈನಲ್ಲಿ ಮಾತನಾಡುವಾಗ ಮಹಿಳಾ ಅಧಿಕಾರಿಯನ್ನು ಅವಾಚ್ಯವಾಗಿ ನಿಂದಿಸಿದ್ದು, ಅಧಿಕಾರಿ, ಶಾಸಕರು ಹಾಗೂ ಸಚಿವರ ಕಾರ್ಯಕ್ರಮವನ್ನು ಬಹಿಷ್ಕರಿಸಿ ಎಂದು ಪ್ರಚೋದಿಸಿರುವ ಆಡಿಯೊ ಎಲ್ಲೆಡೆ ವೈರಲ್ ಆಗಿತ್ತು.

ಪ್ರತಿಭಟನೆ ವೇಳೆ ಕಾಂಗ್ರೆಸ್‌ನ ಮಹಿಳಾ ಘಟಕದ ಉಪಾಧ್ಯಕ್ಷೆ ಗಾಯಿತ್ರಮ್ಮ ಮಾತನಾಡಿ, ಸಚಿವ ಸುಧಾಕರ್ ಅವರು ಇದೀಗ ಉನ್ನತ ಸ್ಥಾನದಲ್ಲಿದ್ದಾರೆ. ಈ ಹಿಂದೆ ಅವರು ಒಬ್ಬ ಮಹಿಳಾ ಅಧಿಕಾರಿ ಕುರಿತು ಅವಾಚ್ಯ ಶಬ್ದಗಳಿಂದ ನಿಂದಿಸಿ ಮಾತನಾಡಿರುವ ಆಡಿಯೋ ಎಲ್ಲೆಡೆ ವೈರಲ್ ಆಗುತ್ತಿದೆ. ಇದು ಮಹಿಳೆಯರಿಗೆ ಮಾಡುವ ಅಪಮಾನ ಎಂದು ದೂರಿದರು. ಕಾಂಗ್ರೆಸ್ ಪಕ್ಷವು ಎಂದಿಗೂ ಮಹಿಳೆಯರನ್ನು ಪೂಜ್ಯನೀಯ ಸ್ಥಾನದಲ್ಲಿ ನೋಡುತ್ತದೆ. ಅಷ್ಟೇ ಗೌರವವನ್ನು ಕೂಡ ನೀಡುತ್ತದೆ. ಆದರೆ ಡಾ.ಎಂ.ಸಿ.ಸುಧಾಕರ್ ಅವರು ಮಹಿಳಾ ಅಧಿಕಾರಿ ಬಗ್ಗೆ ಕೀಳಾಗಿ ಮಾತನಾಡಿದ್ದು ನಮ್ಮೆಲ್ಲರಿಗೂ ಬೇಸರ ತಂದಿದೆ. ಕೂಡಲೆ ಅವರು ಮಹಿಳೆಯರಲ್ಲಿ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ಶಿಡ್ಲಘಟ್ಟದಲ್ಲಿ ಕಾಂಗ್ರೆಸ್‌ನ ಮಹಿಳಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ಈ ಬಗ್ಗೆ ಶಿಡ್ಲಘಟ್ಟ ನಗರ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿ ಈ ಆಡಿಯೋದ ಸತ್ಯಾಸತ್ಯತೆಯನ್ನು ಪತ್ತೆ ಹಚ್ಚಬೇಕು ಎಂದು ಆಗ್ರಹಿ ಸುತ್ತೇವೆ ಮತ್ತು ಮಹಿಳಾ ಅಧಿಕಾರಿ ಬಗ್ಗೆ ಕೆಟ್ಟದಾಗಿ ಮಾತನಾಡಿರುವ ಸಚಿವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಕೆಪಿಸಿಸಿ ಅಧ್ಯಕ್ಷರಿಗೂ ದೂರು ನೀಡುತ್ತೇವೆ ಎಂದರು.

ಶಾಸಕ ಲಮಾಣಿ ಅಗ್ರಹಾರ ಜೈಲಿಗೆ

← ಮೊದಲ ಪುಟದಿಂದ

ಚಂದ್ರು ಲಮಾಣಿಯೊಂದಿಗೆ ಪಿಎ ಮಂಜು ನಾಥ್, ಸಂಬಂಧಿ ಗುರು ಲಮಾಣಿಗೂ ನ್ಯಾಯಾಂಗ ಬಂಧನ ವಿಧಿಸಿ ನ್ಯಾಯಾಧೀಶರು ಆದೇಶ ಹೊರಡಿಸಿದ್ದಾರೆ. ಬಿಜೆಪಿ ಶಾಸಕ ಡಾ.ಚಂದ್ರು ಲಮಾಣಿ, ಸರ ಕಾರಿ ಪಿಎ ಮಂಜುನಾಥ್ ಮತ್ತು ಖಾಸಗಿ ಪಿಎ ಗುರು ವನ್ನು ಕರೆತಂದ ಬಳಿಕ ವೈದ್ಯಕೀಯ ತಪಾಸಣೆ ನಡೆ ಸಿದ್ದ ಲೋಕಾಯುಕ್ತ ಪೊಲೀಸರು ಅವರನ್ನು ನ್ಯಾಯಾ ಧೀಶರ ಮುಂದೆ ಹಾಜರುಪಡಿಸಿದ್ದರು.

ಪ್ರಕರಣ ಸಂಬಂಧ ಶಾಸಕ ಚಂದ್ರು ಲಮಾಣಿ ಹಾಗೂ ಗುತ್ತಿಗೆದಾರನ ನಡುವೆ ನಡೆದ ಸಂಭಾಷಣೆ ಆಡಿಯೊವನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಸದ್ಯ ಆಡಿಯೊ ಎಫ್‌ಎಸ್‌ಎಲ್ ವರದಿಗಾಗಿ ಅವರು ಕಾಯುತ್ತಿ ದ್ದಾರೆ ಎನ್ನಲಾಗಿದೆ.

ಶಾಸಕರು ಗುತ್ತಿಗೆದಾರನ ಜತೆ ಕಮಿಷನ್ ಬಗ್ಗೆ ಮಾತನಾ ಡಿದ ಆಡಿಯೊ ಸೇರಿ ಹಲವು ಮಹತ್ವದ ದಾಖಲೆಗಳನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿರುವ ಮಾಹಿ ತಿಯೂ ಇದೆ. ಜುಲೈನಲ್ಲಿ ಮಂಜೂರಾಗಿದ್ದ ಟೆಂಡರ್‌ನ ಕಾಮಗಾರಿಗೆ ಒಂದುವರೆ ತಿಂಗಳ ಹಿಂದೆ ಶಾಸಕರು ಚಾಲನೆ ನೀಡಿದ್ದರು. ಪೂಜೆ ಮಾಡಿದ ದಿನದ ಸಂಜೆಯೇ ಹಣ ಕೊಡುವುದಾಗಿ ಮಾತುಕತೆ ನಡೆದಿತ್ತು. ಆದರೆ ಪೂಜೆ ಬಳಿಕ ಗುತ್ತಿಗೆದಾರ ವಿಜಯರಾಜ್ ಫೋನ್ ಕರೆ ಸ್ವೀಕರಿಸಿಲ್ಲ. ಪಿಎಗಳು ಫೋನ್ ಮಾಡಿದರೂ ಸ್ಪಂದನೆ ಇರಲಿಲ್ಲ ಎನ್ನಲಾಗಿದೆ.

ಇದಾದ ಬಳಿಕ ಒಂದೂವರೆ ತಿಂಗಳ ನಂತರ ಗುತ್ತಿಗೆದಾರ ಶಾಸಕರ ಬಳಿ ಹೋಗಿದ್ದರು. ಆಗ ಶಾಸಕರು ಜೋರಾಗಿ ಮಾತಾಡಿದ್ದು, ನಿನ್ನ ನಡು ಮುರಿಸ್ತೀನಿ ಎಂದು ಅವಾಜ್ ಹಾಕಿರೋ ಆಡಿಯೊ ಕೂಡ ಲೋಕಾಯುಕ್ತಕ್ಕೆ ಸಿಕ್ಕಿದೆ ಎನ್ನಲಾಗಿದೆ. ಇನ್ನು ಲೋಕಾಯುಕ್ತ ವಿಚಾರಣೆ ವೇಳೆ ಶಾಸಕರು,'ನಾನು ಕಮಿಷನ್ ಪಡೆದಿಲ್ಲ, ಹಣ ಮುಟ್ಟಿಲ್ಲ' ಎಂದಿದ್ದರು. ಆದರೆ ಹಣ ಪಡೆದಿದ್ದ ಪಿಎ ಗುರು ಅದನ್ನು ಶಾಸಕರಿಗೆ ನೀಡಿದ್ದ. ಆ ಹಣದಲ್ಲಿ ಸ್ವಲ್ಪ ಮೊತ್ತವನ್ನು ಖರ್ಚಿ ಗಾಗಿ ಸರಕಾರಿ ಪಿಎ ಮಂಜುನಾಥ್‌ಗೆ ನೀಡಿದ್ದರು. ಇನ್ನೇನು ಆಸ್ಪತ್ರೆಯಿಂದ ಕಾರ್ಯಕ್ರಮವೊಂದಕ್ಕೆ ಹೊರಡಬೇಕು ಎನ್ನುವಷ್ಟರಲ್ಲಿ ಲೋಕಾ ಅಧಿಕಾರಿಗಳು ಖೆಡ್ಡಾ ತೋಡಿದ್ದು, ಶಾಸಕರು ಹಾಗೂ ಪಿಎಗಳ ಕೈ ತೊಳೆದಾಗ ಪಿಂಕ್ ಕಲರ್ ಬಂದ ಕಾರಣ ಶಾಸಕರು ಲಾಕ್ ಆಗಿದ್ದಾರೆ ಎನ್ನಲಾಗಿದೆ.

ಶಿಸ್ತುಕ್ರಮಕ್ಕೆ ಬಿಜೆಪಿ ಚಿಂತನೆ?

ತಮ್ಮ ಪಕ್ಷದ ಚಂದ್ರು ಲಮಾಣಿ ಮೇಲೆ ನಡೆದಿರುವ ಲೋಕಾಯುಕ್ತ ದಾಳಿ, ಆಡಿಯೊ ವೈರಲ್ ಆಗಿರುವುದು ಬಿಜೆಪಿಗೆ ತೀವ್ರ ಇಕ್ಕಟ್ಟಿಗೆ ಸಿಲುಕಿಸಿದೆ. ಕಾಂಗ್ರೆಸ್ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುತ್ತಿರುವ ಸಮಯದಲ್ಲಿ ಪಕ್ಷದ ಶಾಸಕರೇ ಲೋಕಾಯುಕ್ತ ಬಲೆಗೆ ಬಿದ್ದಿರುವುದು ಬಿಜೆಪಿಗೆ ಭಾರೀ ಇರುಸುಮುರುಸು ಉಂಟು ಮಾಡಿದೆ. ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಕಾಂಗ್ರೆಸಿಗರು, ಚಂದ್ರು ಲಮಾಣಿ ಪ್ರಕರಣವನ್ನು ಬಿಜೆಪಿ ವಿರುದ್ಧ ಅಸ್ತ್ರದ ರೀತಿ ಬಳಸಿಕೊಳ್ಳಲು ಆರಂಭಿಸಿದ್ದಾರೆ. ಮುಂದಿನ ಬಜೆಟ್ ಅಧಿವೇಶನದಲ್ಲಿ ಸರಕಾರದ ವಿರುದ್ಧ ಮಾತನಾಡುವಾಗ, ಈ ಪ್ರಕರಣವನ್ನು ಎತ್ತಿಕೊಳ್ಳುವ ಸಾಧ್ಯತೆಯಿರುವುದರಿಂದ, ಕ್ರಮವಹಿಸಲು ಮುಂದಾಗಿದೆ ಎನ್ನಲಾಗಿದೆ. ಲೋಕಾಯುಕ್ತದಿಂದ ಪ್ರಾಥಮಿಕ ವರದಿ ಬಂದ ಬಳಿಕ ಬಿಜೆಪಿ ಕೇಂದ್ರ ಶಿಸ್ತು ಸಮಿತಿ ಕ್ರಮಕೈಗೊಳ್ಳುವ ಸಾಧ್ಯತೆಯಿದೆ. ಸದ್ಯಕ್ಕೆ ಪಕ್ಷದಿಂದ ಅಮಾನತುಗೊಳಿಸಿ, ಬಳಿಕ ಲಂಚ ಪ್ರಕರಣದ ಆರೋಪದಲ್ಲಿ ಸತ್ಯಾಂಶವಿದ್ದರೆ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದಲೇ ಉಚ್ಚಾಟನೆ ಮಾಡುವ ಬಗ್ಗೆಯೂ ಚಿಂತನೆ ನಡೆಸಿದೆ ಎನ್ನಲಾಗಿದೆ.

ಸಮಾಚಾರ ಸಣ್ಣದಲ್ಲ

ಶಿವಾನಂದ ಪಾಟೀಲಗೆ ಮಾತೃವಿಯೋಗ

ವಿಜಯಪುರ: ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಅವರಿಗೆ ಮಾತೃ ವಿಯೋಗ ಆಗಿದ್ದು, ಅವರ ತಾಯಿ ಗಂಗಾಬಾಯಿ ಸಿದ್ದರಾಮಪ್ಪ ಪಾಟೀಲ

ಭಾನುವಾರ ಬೆಳಗಿನ ಜಾವ ನಿಧನರಾಗಿದ್ದರು. 84 ವರ್ಷದವರಾಗಿದ್ದ ಅವರು ವಯೋಸಹಜ ಖಾಯಿಲೆಗಳಿಂದ ಬಳಲುತ್ತಿದ್ದರು. ಮಕ್ಕಳಾದ ಮಹಾದೇವಿ ಪಾಟೀಲ, ಶಿವಶರಣಗೌಡ ಪಾಟೀಲ, ಶಿವಾನಂದ ಪಾಟೀಲ ಹಾಗೂ ವಿಜುಗೌಡ ಪಾಟೀಲ ಸೇರಿದಂತೆ ಮೊಮ್ಮಕ್ಕಳು ಹಾಗೂ ಅಪಾರ ಬಂಧು, ಬಳಗವನ್ನು ಮೃತರು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಸಂಜೆ 4-30 ಗಂಟೆಗೆ ವಿಜಯಪುರ ನಗರದ ಜಮಖಂಡಿ ರಸ್ತೆಯಲ್ಲಿರುವ ತೋಟದಲ್ಲಿ ನೆರವೇರಿತು.

ಪೋಕ್ಸೊ ಆರೋಪಿಗೆ 20 ವರ್ಷ ಜೈಲು ಶಿಕ್ಷೆ

ಕಲಬುರಗಿ: ಅಪ್ರಾಪ್ತೆ ಮೇಲೆ ಅತ್ಯಾಚಾರ ಎಸಗಿದ ಅಪರಾಧಿಗೆ 20 ವರ್ಷ ಜೈಲು ಶಿಕ್ಷೆ 1.50 ಲಕ್ಷ ರು.ದಂಡ ವಿಧಿಸಿ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ

ನ್ಯಾಯಾಧೀಶ ಮಹ್ಮದ್ ಮುಜೀರ್ ಉಲ್ಲಾ ಆದೇಶಿಸಿದ್ದಾರೆ. ಸೇಡಂನ ಬೀದರಚೇಡ ಗ್ರಾಮದ ದೇವರಾಜ ವಡ್ಡರಗೆ ಶಿಕ್ಷೆ ನೀಡಲಾಗಿದೆ. 2025 ಏ.26ರಂದು ಬಾಲಕಿ ಬಹಿರ್ದೆಸೆಗೆ ಹೋದಾಗ ಅಪಹರಿಸಿ, ರಾತ್ರಿ ವೇಳೆ ಮುಧೋಳ ಕೊಡಂಗಲ ರೋಡಿನ ಬಳಿಯ ಜಮೀನೊಂದರಲ್ಲಿ ಅತ್ಯಾಚಾರ ಎಸಗಿದ್ದ. ನಂತರ ಹೈದರಾಬಾದ್‌ಗೆ ಕರೆದೊಯ್ದು ಅತ್ಯಾಚಾರ ನಡೆಸಿದ್ದ. ಈ ಕುರಿತು ಮುಧೋಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತನಿಖಾಧಿಕಾರಿ ಎನ್.ಕೆ. ಆರೋಪಿ ವಿರುದ್ಧ ದೋಷಾರೋಪಣೆ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು ಶಿಕ್ಷೆ ವಿಧಿಸಿದ್ದಾರೆ. ನೊಂದ ಬಾಲಕಿಗೆ 3 ಲಕ್ಷ ರು.ಪರಿಹಾರ ನೀಡಬೇಕು ಎಂದು ಆದೇಶಿಸಿದ್ದಾರೆ. ಕೋರ್ಟ್‌ಗೆ ಪೊಲೀಸ್ ಸಿಬ್ಬಂದಿ ಚಂದ್ರಕಾಂತ ಸಾದಾರರನ್ನು ಹಾಜರುಪಡಿಸಿದ್ದರು.

ವೈದ್ಯ ವಿದ್ಯಾರ್ಥಿ ಆತ್ಮಹತ್ಯೆಗೆ ಶರಣು

ದಾವಣಗೆರೆ: ಓವರ್ ಡೋಸ್ ಇಂಜೆಕ್ಷನ್ ಚುಚ್ಚಿಕೊಂಡು ವೈದ್ಯ ವಿದ್ಯಾರ್ಥಿ ಆತ್ಮಹತ್ಯೆಗೆ ಶರಣಾಗಿರುವುದು ದಾವಣಗೆರೆ ನಗರದ ಖಾಸಗಿ ವೈದ್ಯಕೀಯ ಕಾಲೇಜ್ ಹಾಸ್ಟೆಲ್‌ನಲ್ಲಿ ನಡೆದಿದೆ. ಆತ್ಮಹತ್ಯೆಗೆ ಶರಣಾದ ವೈದ್ಯ ವಿದ್ಯಾರ್ಥಿಯನ್ನು ಮಹಾರಾಷ್ಟ್ರ ಸತಾರ್ ಜಿಲ್ಲೆಯ

ಕರಾಡ್ ಮೂಲದ ಸಿದ್ಧಾರ್ಥ ತ್ರಯಂಬಕೆ (30) ಎಂದು ಗುರುತಿಸಲಾಗಿದೆ. ಮೃತನು ದಾವಣಗೆರೆ ಖಾಸಗಿ ಮೆಡಿಕಲ್ ಕಾಲೇಜಿನಲ್ಲಿ ಡರ್ಮಾಟಾಲಾಜಿ (ಚರ್ಮ ರೋಗ) ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿದ್ದರು. ಹಾನಿಕಾರಕ ಇಂಜೆಕ್ಷನ್ ಚುಚ್ಚಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ತಿಳಿದು ಬಂದಿದೆ. ರೂಮ್‌ಲಾಕ್ ಆದ ಹಿನ್ನೆಲೆ ಸಂಶಯಗೊಂಡ ವಿದ್ಯಾರ್ಥಿಗಳು ಕೊಠಡಿ ಬಾಗಿಲು ಮುರಿದು ನೋಡಿದಾಗ ಆತ್ಮಹತ್ಯೆ ವಿಚಾರ ಬೆಳಕಿಗೆ ಬಂದಿದೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ದಾವಣಗೆರೆ ನಗರ ಬಡಾವಣೆ ಪೊಲೀಸ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಜಯನಗರ, ಬೆಂಗಳೂರು**

ಸಮಸ್ಯೆಯೇನು..?

- ಸಮಸ್ಯೆಯೇನು? ರಸ್ತೆಗೆ ಅಳವಡಿಸಿರುವ ರೋಡ್ ಹಂಪ್‌ಗೆ ಬಿಳಿ ಬಣ್ಣ ಹಚ್ಚುವ ಕುರಿತು.
- ಬೆಂಗಳೂರಿನ ಜಯನಗರದಲ್ಲಿರುವ ಕರ್ನಾಟಕ ರಾಜ್ಯ ಬೀಜ ನಿಗಮದ ಬಳಿಯ ರಸ್ತೆಯಲ್ಲಿ ಸ್ಪೀಡ್ ಬ್ರೇಕ್ ಹಂಪ್ ಹಾಕಲಾಗಿದ್ದು, ಇದು ಕಣ್ಣಿಗೆ ಸರಿಯಾಗಿ ಗೋಚರಿಸುತ್ತಿಲ್ಲ. ಇದರಿಂದ ವಾಹನ ಅಪಘಾತಕ್ಕೀಡಾಗುತ್ತಿವೆ. ರೋಡ್ ಹಂಪ್‌ಗೆ ಬಿಳಿ ಬಣ್ಣ ಹಾಕಲು ಆಗ್ರಹಿಸಿ ಸ್ಥಳೀಯರೊಬ್ಬರು ಜಿಬಿಎಗೆ ಮನವಿ ಮಾಡಿದ್ದರು. ಜಿಬಿಎ ಅಧಿಕಾರಿಗಳು ಬಿಳಿ ಪಟ್ಟಿ ಹಾಕಿಸಿದ್ದಾರೆ.

ದಿನ ವಿಶೇಷ

23ಫೆಬ್ರವರಿ2026ಸೋಮವಾರ

» ಸೂರ್ಯೋದಯ	: 06-41
» ಸೂರ್ಯಾಸ್ತ	: 06-28
» ತಿಥಿ	: ಷಷ್ಠಿ
» ನಕ್ಷತ್ರ	: ಭರಣಿ
» ಸಂವತ್ಸರ	: ವಿಶ್ವಾವಸು
» ಆಯನ	: ಉತ್ತರಾಯಣ
» ಋತು	: ಶಿಶಿರ
» ಮಾಸ	: ಫಾಲ್ಗುಣ
» ಪಕ್ಷ	: ಶುಕ್ಲ ಪಕ್ಷ

ಹಾಲಿ-ಮಾಜಿ ಸಿಎಂ ನಡುವೆ ಕೆಸರಾಟ

ದೇವೇಗೌಡರದ್ದು ಜಾತಿವಾದವಲ್ಲ, ಕುಟುಂಬವಾದ

ಬೆಂಗಳೂರು: ಮಾಜಿ ಪ್ರಧಾನಿ ದೇವೇಗೌಡರು, ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಜಾತಿವಾದಿಗಳಲ್ಲ. ಅವರು ಸ್ವಜಾತಿ ವಿರೋಧಿಗಳು. ಅದನ್ನೂ ಮೀರಿ ಕುಟುಂಬವಾದಿಗಳು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ಸಾಮಾಜಿಕ ನ್ಯಾಯದ ಬಗ್ಗೆ ಸಿದ್ದರಾಮಯ್ಯ ಅವರು ಬರೆದಿದ್ದ ಲೇಖನವನ್ನು ಟೀಕಿಸಿದ್ದ ಕುಮಾರಸ್ವಾಮಿ ಅವರಿಗೆ ತಿರುಗೇಟು ನೀಡಿರುವ ಸಿದ್ದರಾಮಯ್ಯ ಅವರು ಸುದೀರ್ಘ ಪ್ರಕಟಣೆ ಹೊರಡಿಸಿದ್ದಾರೆ. ನಾನು ಬರೆದಿದ್ದ ಲೇಖನ ರಾಜ್ಯದ ರಾಜಕೀಯ ವಲಯದಲ್ಲಿ ಬಹುಮುಖಿ ಚರ್ಚೆಗೆ ಒಳಗಾಗಿದೆ. ನೀರು ನಿಂತಲ್ಲಿಯೇ ನಿಂತು ಮಡುಗಟ್ಟಿ ಹೋದರೆ ಕೆಸರಾಗುತ್ತದೆ, ಹರಿಯುತ್ತಿದ್ದರೆ ಅದು ತಿಳಿಯಾಗುತ್ತಾ ಹೋಗುತ್ತದೆ. ಸಾಮಾಜಿಕ ವ್ಯವಸ್ಥೆ ಕೂಡ ಹಾಗೆಯೇ ಪಟ್ಟಭದ್ರವಾಗಿ ಉಳಿಯದೆ ಚಲನಶೀಲತೆ ಪಡೆದುಕೊಂಡರೆ ಅದು ಜನಪರವಾಗಿ ಪರಿವರ್ತನೆಯಾಗುತ್ತದೆ. ಈ ದೃಷ್ಟಿಯಿಂದ ನನ್ನ ಲೇಖನದ ಬಗೆಗಿನ ಚರ್ಚೆಯನ್ನು ನಾನು ಸ್ವಾಗತಿಸುತ್ತೇನೆ ಎಂದಿದ್ದಾರೆ.

ಕುಮಾರಸ್ವಾಮಿ ಹಾಗೂ ದೇವೇಗೌಡರು ಖಂಡಿತ ಜಾತಿವಾದಿಗಳಲ್ಲ, ಅವರು ಸ್ವಜಾತಿ ವಿರೋಧಿಗಳು. ಅದಕ್ಕಿಂತಲೂ ಮುಖ್ಯವಾಗಿ ಕುಟುಂಬವಾದಿಗಳು. ಇವರಿಗೆ ತಮ್ಮ ಜಾತಿ ಒಂದು ಓಟ್ ಬ್ಯಾಂಕ್ ಅಷ್ಟೆ. ತಂದೆ ಮತ್ತು ಮಕ್ಕಳು ತಮ್ಮ ಕುಟುಂಬದ ಸ್ವಾರ್ಥಕ್ಕಾಗಿ ರಾಜಕೀಯ ಕ್ಷೇತ್ರದಲ್ಲಿ ಉಳಿದವರನ್ನು ಬಿಟ್ಟುಬಿಡಿ, ಸ್ವಜಾತಿ ನಾಯಕರು ಕೂಡ ಬೆಳೆಯದಂತೆ ಒಬ್ಬೊಬ್ಬರನ್ನೇ ಮುಗಿಸುತ್ತಾ ಬಂದವರು. ಹಿಂದೆ, ಇಂದು ಮತ್ತು ಮುಂದೆ ಜಾತ್ಯತೀತ ಜನತಾದಳದ ತುತ್ತತುದಿಯ ನಾಯಕರು ಗೌಡರ ಕುಟುಂಬದವರೇ ಆಗಿರುತ್ತಾರೆ ಎನ್ನುವುದು ಸತ್ಯ. ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ದೇವೇಗೌಡರು ಎಷ್ಟು ಮಂದಿ ಒಕ್ಕಲಿಗ ನಾಯಕರನ್ನು ಜೆಡಿಎಸ್‌ನಲ್ಲಿ ಬೆಳೆಸಿದ್ದಾರೆ ಎಂದು ವಿನಯಪೂರ್ವಕವಾಗಿ ಕೇಳಬಯಸುವೆ. ಹಾಸನದ ಪುಟ್ಟಸ್ವಾಮಿಗೌಡ, ಸಿ.ಎಸ್.ಪುಟ್ಟೇಗೌಡ, ಜವರೇಗೌಡ, ಕೆ.ಎಂ. ವಿಶ್ವನಾಥ್, ಹನುಮೇಗೌಡ, ಮಂಡ್ಯದ ಕೆ.ಎನ್.ನಾಗೇಗೌಡ, ಕೆ.ಆರ್.ಪೇಟೆ ಕೃಷ್ಣ, ವೈ.ಕೆ.ರಾಮಯ್ಯ, ಸಿ.ಬೈರೇಗೌಡ, ಬಚ್ಚೇಗೌಡ, ಬಿ.ಎಲ್.ಶಂಕರ್, ಸಿ.ನಾರಾಯಣಸ್ವಾಮಿ, ಚೆಲುವರಾಯಸ್ವಾಮಿ ಮೊದಲಾದವರೆಲ್ಲ ಯಾಕೆ ದೇವೇಗೌಡರನ್ನು ಬಿಟ್ಟು ಹೊರಬಂದರು ಎನ್ನುವುದನ್ನು ನಾನು ವಿವರಿಸಿ ಹೇಳಬೇಕಾಗಿಲ್ಲ ಎಂದು ಟೀಕಿಸಿದ್ದಾರೆ.

ಒಕ್ಕಲಿಗರನ್ನು ಬೆಳೆಸಿದ್ದು ಕಾಂಗ್ರೆಸ್: ಒಕ್ಕಲಿಗ ನಾಯಕರನ್ನು ಗುರುತಿಸಿ ರಾಜಕೀಯವಾಗಿ ಬೆಳೆಸಿದ್ದು ಕಾಂಗ್ರೆಸ್ ಮಾತ್ರ. ಕೆಂಗಲ್ ಹನುಮಂತಯ್ಯ ಅವರಿಂದ ಹಿಡಿದು ಎಸ್.ಎಂ.ಕೃಷ್ಣವರೆಗೆ ನೂರಾರು ಒಕ್ಕಲಿಗ ನಾಯಕರನ್ನು ಬೆಳೆಸಿದೆ. ದೇವೇಗೌಡರಿಂದ ಮೋಸಕ್ಕೊಳಗಾದ ನಾಯಕರಿಗೆ ಅವಕಾಶ ನೀಡಿ ರಾಜಕೀಯವಾಗಿ ಬೆಳೆಸುತ್ತಿರುವುದು ಕಾಂಗ್ರೆಸ್ ಪಕ್ಷ. ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ಎಸ್.ಎಂ.ಕೃಷ್ಣ ಅವರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರೆ ಅದಕ್ಕೆ ಕಾಂಗ್ರೆಸ್ ಕಾರಣ ಎಂದಿದ್ದಾರೆ.

ಒಕ್ಕಲಿಗ ಸಮುದಾಯಕ್ಕೆ ಸಮರ್ಥ ನಾಯಕತ್ವ ನೀಡಲು ಸಾಧ್ಯವಿರುವವರು ಈಗಲೂ ಕಾಂಗ್ರೆಸ್‌ನಲ್ಲಿದ್ದಾರೆ. ಡಿ.ಕೆ. ಶಿವಕುಮಾರ್, ಟಿ.ಬಿ.ಜಯಚಂದ್ರ, ಕಿಮ್ಮನೆ ರತ್ನಾಕರ್, ಎಂ.ಕೃಷ್ಣಪ್ಪ, ಕೃಷ್ಣಬೈರೇಗೌಡ, ಪಿರಿಯಾಪಟ್ಟಣ ವೆಂಕಟೇಶ್ ಹೀಗೆ ನಮ್ಮಲ್ಲಿರುವ ಒಕ್ಕಲಿಗ ನಾಯಕರ ದೊಡ್ಡ ಪಟ್ಟಿಯೇ ಇದೆ. ಜೆಡಿಎಸ್‌ನಲ್ಲಿ ಎಷ್ಟು ಮಂದಿ ಒಕ್ಕಲಿಗ ನಾಯಕರಿದ್ದಾರೆ? ಮುಂದೊಂದು ದಿನ ದೇವೇಗೌಡರ ಕುಟುಂಬವನ್ನು ಹೊರತುಪಡಿಸಿ ಯಾರಾದರೂ ರಾಜ್ಯದ ಮುಖ್ಯಮಂತ್ರಿಗಳಾದರೆ ಅದು ಕಾಂಗ್ರೆಸ್ ಪಕ್ಷದಿಂದಲೇ ಆಗಲಿದ್ದಾರೆ ಎನ್ನುವುದನ್ನು ನಾನು ಒತ್ತು ಕೊಟ್ಟು ಹೇಳುತ್ತಿದ್ದೇನೆ ಎಂದು ಹೇಳಿದ್ದಾರೆ.



ಕಾಂಗ್ರೆಸ್ ಸಾಮಾಜಿಕ ನ್ಯಾಯದ ಪರವಾಗಿರುವ ಪಕ್ಷ. ಈ ಸೈದ್ಧಾಂತಿಕ ಬದ್ಧತೆಯನ್ನು ಕೇವಲ ಮಾತಿನ ಮೂಲಕ ಮಾತ್ರವಲ್ಲ, ಕೃತಿಯ ಮೂಲಕವೂ ಪಕ್ಷ ಮಾಡಿ ತೋರಿಸುತ್ತಾ ಬಂದಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದಿಂದ ಒಕ್ಕಲಿಗರು, ಲಿಂಗಾಯತರು, ಹಿಂದುಳಿದವರು ಮುಖ್ಯಮಂತ್ರಿಗಳಾಗಿದ್ದಾರೆ, ಹಿಂದುಳಿದ ಜಾತಿಗೆ ಸೇರಿದ ನನ್ನನ್ನು ಗುರುತಿಸಿ ಎರಡನೇ ಬಾರಿ ಮುಖ್ಯಮಂತ್ರಿಯಾಗುವ ಅವಕಾಶ ಕಲ್ಪಿಸಿಕೊಟ್ಟಿರುವುದು ಕೂಡ ಕಾಂಗ್ರೆಸ್ ಪಕ್ಷ. ಇದಕ್ಕಾಗಿ ನಾನು ಪಕ್ಷದ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿಯವರಿಗೆ ಆಭಾರಿಯಾಗಿದ್ದೇನೆ.
-ಸಿದ್ದರಾಮಯ್ಯ, ಮುಖ್ಯಮಂತ್ರಿ

- ರಾಜಕೀಯ ಜೀವನದಲ್ಲಿ ಎಷ್ಟು ಒಕ್ಕಲಿಗರನ್ನು ಮುಗಿಸಿದ್ದಾರೆ?
- ಸಾಮಾಜಿಕ ನ್ಯಾಯವಿರುವುದು ಕಾಂಗ್ರೆಸ್‌ನಲ್ಲಿ ಮಾತ್ರ

VS

ಸಿಎಂ ಸಿದ್ದರಾಮಯ್ಯ ಸಾಮಾಜಿಕ ನ್ಯಾಯದ ಸಂಹಾರಿ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇರುವ ಒಕ್ಕಲಿಗರ ಪ್ರೀತಿ ತೋರಿಸುವುದಕ್ಕೆ ಇದು ಸಕಾಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕಾಲೆಳೆದಿದ್ದಾರೆ.

ದೇವೇಗೌಡರು ಒಕ್ಕಲಿಗ ನಾಯಕರನ್ನು ಬೆಳೆಸಿಲ್ಲ ಎನ್ನುವ ಸಿದ್ದರಾಮಯ್ಯ ಆರೋಪಕ್ಕೆ ತಿರುಗೇಟು ನೀಡಿರುವ ಕುಮಾರಸ್ವಾಮಿ, ನಿಮಗೆ ಒಕ್ಕಲಿಗರ ಮೇಲೆ ಪ್ರೀತಿ ತೋರಿಸುವುದಕ್ಕೆ ಇದು ಸಕಾಲ, ಕೂಡಲೇ ಕುರ್ಚಿ ತ್ಯಜಿಸಿ. ನೀವು ಪಟ್ಟಿ ಮಾಡಿರುವ ಒಕ್ಕಲಿಗ ನಾಯಕರ ಹೆಸರುಗಳನ್ನು ಓದಿದೆ. ಪಾಪ.. ನೀವು ಅವರ ಹೆಸರುಗಳನ್ನು ಉಲ್ಲೇಖಿಸಿ ಅವರನ್ನೂ ಅಪಹಾಸ್ಯ ಮಾಡಿದ್ದೀರಿ. ನೀವೂ ಅಪಹಾಸ್ಯಕ್ಕೆ ತುತ್ತಾಗಿದ್ದಲ್ಲದೆ, ನಗೆಪಾಟಲಿಗೀಡಾಗಿದ್ದೀರಿ. ನಿಮ್ಮ ರಾಜಕೀಯ ಸ್ವಾರ್ಥಕ್ಕೆ ಆ 13 ಜನರ ಶೆಲ್ಟರ್ ಪಡೆದಿದ್ದೀರಿ ಎಂದು ಟೀಕಿಸಿದ್ದಾರೆ.

ಅವರೆಲ್ಲರೂ ದೇವೇಗೌಡರಿಂದ ಅಧಿಕಾರ ಅನುಭವಿಸಲೇ ಇಲ್ಲವೇ? ಆಗ ಅವರೆಲ್ಲರೂ ಕೂತಿದ್ದ ಅಧಿಕಾರ ಸ್ಥಾನಗಳಲ್ಲಿ ದೇವೇಗೌಡರೇ ಕೂತಿದ್ದರಾ? ಅವರೆಲ್ಲರೂ ನಿಮ್ಮಂತೆಯೇ ದೇವೇಗೌಡರ ಶ್ರಮ, ತ್ಯಾಗದಿಂದ ಅಧಿಕಾರ ಉಂಡು, ಪೊಗದಸ್ತಾಗಿ ಬೆಳೆದು ಬೇಲಿ ಹಾರಿದವರು! ನೀವು ಹೇಳಿದಂತೆ ಕುಟುಂಬವೇ ಮಿಗಿಲು ಎಂದು ಗೌಡರು ಭಾವಿಸಿದ್ದಿದ್ದರೆ ಈ ಪಟ್ಟಿಯಲ್ಲಿನ ಒಬ್ಬರೂ ಶಾಸಕ, ಮಂತ್ರಿ, ಸಂಸದನಾಗುತ್ತಲೇ ಇರಲಿಲ್ಲ, ನಿಮ್ಮನ್ನೂ ಸೇರಿಸಿ! ಏನಂತೀರಿ? ನೀವೆಲ್ಲರೂ ನೆರಳು ಕೊಟ್ಟ ವೃಕ್ಷಕ್ಕೆ ನಿರ್ದಯದಿಂದ ಕೊಡಲಿ ಹಾಕಿದಿರಿ. ಉಂಡು ಹೋದರಿ, ಕೊಂಡು ಹೋದರಿ! ಎಂದು ತಿರುಗೇಟು ನೀಡಿದ್ದಾರೆ.

ನಿಮ್ಮ ಸ್ವಾರ್ಥಕ್ಕೆ ಜಾತಿ ಎಳೆದು ತಂದಂತೆ ಹಿರಿಯರಾದ ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ಎಸ್.ಎಂ.ಕೃಷ್ಣ ಅವರನ್ನು ಏಕೆ ಎಳೆದು ತರುತ್ತೀರಿ? ಎಸ್.ಎಂ.ಕೃಷ್ಣ ಅವರ ಹೆಸರೇಳುವ ಸಾಸಿವೆ ಕಾಳಷ್ಟು ಯೋಗ್ಯತೆ, ನೈತಿಕತೆ ನಿಮಗಿದೆಯೇ? ಹಿಸ್ ಅನ್ ಪಾಲಿಷ್ಡ್ ಡೈಮಂಡ್ ಎಂದು ಸೋನಿಯಾ ಗಾಂಧಿ ಅವರ ಮುಂದೆ ಹೇಳಿ ನೀವು ಕಾಂಗ್ರೆಸ್ ಮೆಟ್ಟಿಲತ್ತಲು ಕಾರಣರಾದ ಎಸ್.ಎಂ.ಕೃಷ್ಣ ಅವರನ್ನು ಎಷ್ಟು ಕ್ರೂರವಾಗಿ ವಂಚಿಸಿದಿರೆನ್ನುವುದು ಜಗತ್ತು ಬಲ್ಲ ಸತ್ಯ. ರಾಜಕೀಯದ ಕಡೆಗಾಲದಲ್ಲಿ ಅವರನ್ನು ನೀವೆಷ್ಟು ತುಚ್ಛವಾಗಿ ನಡೆಸಿಕೊಂಡಿರಿ ಎನ್ನುವುದನ್ನು ಜನ ಮರೆತಿಲ್ಲ. ಅನ್ ಪಾಲಿಷ್ಡ್ ಡೈಮಂಡ್ ಕೃಷ್ಣರಿಗೆ ಚೂರಿ ಹಾಕಿದ್ದು ಎಲ್ಲರೂ ಬಲ್ಲರು ಎಂದು ಕಿಡಿಕಾರಿದ್ದಾರೆ.

ಒಕ್ಕಲಿಗರನ್ನು ಬೆಳೆಸಿದ್ದು ಕಾಂಗ್ರೆಸ್ಸು ಅಂತೀರಿ.. ಬರೀ ಬುರುಡೆ.. ವಿಧಾನಸೌಧ ಕಟ್ಟಿದ ಕೆಂಗಲ್ ಹನುಮಂತಯ್ಯ ಅವರಿಗೆ ನಿಮ್ಮ ನೆಹರು ಕೊಟ್ಟ ಕಿರುಕುಳ, ಮಾಡಿದ ಅಪಮಾನ ಅಷ್ಟಿಷ್ಟಾ? ಸಾಮಾಜಿಕ ನ್ಯಾಯದ ಹರಿಕಾರ ದೇವರಾಜ ಅರಸು ಅವರಿಗೆ ಬೆನ್ನಿಗಿರಿದ ದೂರ್ತರು ಯಾರು? ಯಾವ ಪಕ್ಷದವರು? ಒಕ್ಕಲಿಗರನ್ನು ಸಿಎಂ ಮಾಡುವುದು ಕಾಂಗ್ರೆಸ್ಸೇ ಎನ್ನುವುದಾದರೆ, ತತ್‌ಕ್ಷಣಕ್ಕೇ ನೀವು ಕುರ್ಚಿ ಬಿಡಬೇಕಲ್ಲವೇ? ಒಕ್ಕಲಿಗರ ಮೇಲೆ ನಿಮ್ಮ ಪ್ರೀತಿ ಪ್ರದರ್ಶನಕ್ಕೆ ಇದು ಸಕಾಲ ಟಾಂಗ್ ನೀಡಿದ್ದಾರೆ.

ಒಕ್ಕಲಿಗ ಸಮುದಾಯಕ್ಕೆ ಸಮರ್ಥ ನಾಯಕತ್ವ ನೀಡುವ ಕಾಂಗ್ರೆಸ್ ಉದಾರತೆಯನ್ನು ನಾನು ಸ್ವಾಗತಿಸುವೆ. ಈ ಉದಾರತೆ ನಿಮಗೂ ಬೇಕಲ್ಲವೇ? ಈಗ ನೀವು ಉದಾರತೆ ತೋರಬೇಕು. ಎರಡನೇ ಅವಧಿಗೆ ನೀವು ಸಿಎಂ ಆಗುವ ಮುನ್ನ ಅಗ್ರಿಮೆಂಟ್ ಆಗಿತ್ತಲ್ಲಾ, ಅದನ್ನು ಬಹಿರಂಗವಾಗಿ ಹೇಳುವ ಉದಾರತೆ ತೋರಿ. ದಿಲ್ಲಿಯಲ್ಲಿ ನಿಮ್ಮಿಬ್ಬರ ನಡುವೆ ಆಗಿದ್ದ ಆ ಅಗ್ರಿಮೆಂಟ್‌ಗೆ ಸಾಕ್ಷಿ ಆಗಿದ್ದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ವೇಣುಗೋಪಾಲ್, ಸುರ್ಜೇವಾಲಾಗೆ ನಿಮ್ಮ ಸಾಮಾಜಿಕ ನ್ಯಾಯ, ಒಕ್ಕಲಿಗ ಪ್ರೀತಿಯ ಪರಾಕಾಷ್ಠೆ ಈಗೀಗ ಅರ್ಥವಾಗಿದೆ ಎಂದು ಭಾವಿಸುತ್ತೇನೆ. ಅವರೆಲ್ಲರ ಮಾನಸಿಕ ಸ್ವಾಸ್ಥ್ಯ ಸರಿ ಇದೆ ಎಂದು ನಾನಾದರೂ ನಂಬಿದ್ದೇನೆ ಎಂದು ವ್ಯಂಗ್ಯವಾಡಿದ್ದಾರೆ.

ಸಾಮಾಜಿಕ ನ್ಯಾಯದ ಸೋಗುಕಾರ, ಸಾಮಾಜಿಕ ನ್ಯಾಯದ ಸಂಹಾರಿ ನೀವು. ನಿಮಗೆ ರಾಜಕೀಯ ಶಕ್ತಿ-ಬದುಕು ಕೊಟ್ಟ ದೇವೇಗೌಡರ ಕಡೆ ಬೆಟ್ಟು ಮಾಡುವುದು ಆಘಾತಕಾರಿ. ಸಿದ್ದರಾಮಯ್ಯನವರು ಕುರ್ಚಿಗಾಗಿ ಜಾತಿ ಎಳೆದು ತಂದಿದ್ದಾರೆ ಎಂದು ನಾನು ತಮಾಷೆಗೆ ಹೇಳಿದ್ದಲ್ಲ, ಸೀರಿಯಸ್ಸಾಗೇ ಹೇಳಿದ್ದೇನೆ. ತಮಾಷೆಗೆ ಹೇಳಿದ್ದೇನೆ ಎಂದಿಟ್ಟುಕೊಳ್ಳಿ, ನೀವು ಇಷ್ಟುದ್ದ ಉತ್ತರ ಬರೆಯುವ ಅಗತ್ಯವಿರಲಿಲ್ಲ. ಈ ಬಗ್ಗೆ ನೀವು ಸೀರಿಯಸ್ ಆಗಿದ್ದೀರಿ ಎಂಬುದನ್ನು ಬಲ್ಲೆ. ಹಾಗಿದ್ದರೂ ನನ್ನ ಹೇಳಿಕೆಯನ್ನು ನೀವು ತಮಾಷೆಯಾಗಿಯೇ ಸ್ವೀಕರಿಸಿ, ಅಭ್ಯಂತರವಿಲ್ಲ.
-ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ

- ಒಕ್ಕಲಿಗರ ಮೇಲೆ ಪ್ರೀತಿ ಪ್ರದರ್ಶನ ಮಾಡಲು ಇದು ಸಕಾಲ
- ಎಚ್‌ಡಿಡಿ, ಎಚ್‌ಡಿಕೆ ಒಕ್ಕಲಿಗರನ್ನು ಬೆಳೆಸಿಲ್ಲ ಎಂದಿದ್ದಕ್ಕೆ ತಿರುಗೇಟು

ಅದೊಂದು ಹೊರತುಪಡಿಸಿ ಇನ್ನುಳಿದ ಎಲ್ಲ ಹೇಳಿಕೆಗೂ ಬದ್ಧ: ಸ್ನೇಹಮಯಿ ಕೃಷ್ಣ

ಶಾಲಿನಿ ರಜನೀಶ್ ಹೆಸರು ಪ್ರಸ್ತಾಪಿಸಿದ್ದಕ್ಕೆ ಕ್ಷಮೆ

ಬೆಂಗಳೂರು: ಮುಡಾ ಮಾಜಿ ಆಯುಕ್ತ ನಟೇಶ್‌ಗೆ ಬಡ್ತಿಗೆ ನೀಡಿರುವ ಲಂಚದ ಆರೋಪದ ವಿಷಯದಲ್ಲಿ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಹೆಸರು ಪ್ರಸ್ತಾಪಿಸಿರುವುದೊಂದೇ ನಾನು ಮಾಡಿರುವ

ತಪ್ಪು ಎಂದು ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಹೇಳಿದ್ದಾರೆ.

ಈ ಬಗ್ಗೆ ಸುದೀರ್ಘ ಪೋಸ್ಟ್ ಮಾಡಿರುವ ಅವರು, ನಟೇಶ್ ಬಡ್ತಿಗೆ ಲಂಚ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ತಾವು ಯಾವುದೇ ತಪ್ಪು ಮಾಡಿಲ್ಲ. ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಹೆಸರನ್ನು ಉಲ್ಲೇಖ ಮಾಡಿದ್ದಕ್ಕೆ ಮಾತ್ರ ಕ್ಷಮೆ ಕೇಳುತ್ತೇನೆ. ಆದರೆ ನಟೇಶ್ ಬಡ್ತಿಗೆ ಲಂಚ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ಕ್ಷಮೆ ಕೇಳಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಪೂರಕ ಸಾಕ್ಷ್ಯಾಧಾರಗಳನ್ನು ಒದಗಿಸಿದ್ದೇನೆ. ತನಿಖೆ ನಡೆಸಿದಾಗ ಪ್ರಭಾವಿ ವ್ಯಕ್ತಿ ಯಾರು ಎಂಬ ಸತ್ಯ ಹೊರಬರುತ್ತದೆ ಎಂದು ಸ್ಫೋಟಕ ಮಾಹಿತಿ ನೀಡಿದರು.

ಈ ಹಿಂದೆ ಮುಡಾ ಪ್ರಕರಣದಲ್ಲಿ ನಾನು ಪ್ರಕರಣ ದಾಖಲು ಮಾಡುತ್ತಿದ್ದಂತೆಯೇ ತಮ್ಮ ತಪ್ಪನ್ನು ಒಪ್ಪಿಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 14 ನಿವೇಶನಗಳನ್ನು ವಾಪಸ್ ನೀಡಿದ್ದಾರೆ. ನಿವೇಶನಗಳನ್ನು ವಾಪಸ್ ಕೊಟ್ಟಿದ್ದಕ್ಕಿಂತ ದೊಡ್ಡ ತಪ್ಪನ್ನು ನಾನು ಮಾಡಿಲ್ಲ. ಮುಖ್ಯಮಂತ್ರಿಗಳು ವಿಧಾನಸೌಧದಲ್ಲಿ 14 ನಿವೇಶನಗಳನ್ನು ಕಾನೂನುಬದ್ಧವಾಗಿಯೇ ಪಡೆದಿದ್ದೇವೆಂದು ಉಲ್ಲೇಖಿಸಿದ್ದರು. ಆದರೆ ನಾನು ಪ್ರಕರಣ ದಾಖಲಿಸಿದ ತಕ್ಷಣವೇ ನಿವೇಶನಗಳನ್ನು ವಾಪಸ್ ನೀಡಿದ್ದರು. ನಟೇಶ್ ವಿಷಯದಲ್ಲಿ ವಿನೋದ್ ಎಂಬುವವರು ಈ ವಿಚಾರದಲ್ಲಿ ಉಲ್ಟಾ ಹೊಡೆದಿದ್ದಾರೆ ಎಂದು ಆರೋಪಿಸಿದ್ದಾರೆ. ಸದ್ಯ ಪ್ರಭಾವಿಗೆ ಲಂಚ ಕೊಟ್ಟಿರುವುದು ಸತ್ಯ. ಲಂಚ ಪಡೆದ ಪ್ರಭಾವಿ ಯಾರು ಎಂಬುದನ್ನು ತನಿಖೆಯ ಬಳಿಕ ಬಹಿರಂಗಪಡಿಸಲಿ ಎಂದು ಸವಾಲು ಹಾಕಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯರ ಹೇಳಿಕೆಯನ್ನು ಉಲ್ಲೇಖಿಸಿ, ಮನುಷ್ಯ ನಡೆಯುವಾಗ ಎಡವುವುದು ಸಹಜ. ಆದರೆ ತಪ್ಪನ್ನು ಒಪ್ಪಿಕೊಂಡು ಸರಿಪಡಿಸುವುದು ಮುಖ್ಯ ಎಂದು ಹೇಳಿದ್ದಾರೆ.

ಗಲಭೆ ಬಗ್ಗೆ ಕೂಲಂಕಷ ತನಿಖೆ

ಬಾಗಲಕೋಟೆ: ತಕ್ಷಣವೇ ಯಾರನ್ನೂ ಹಿಡಿಯಲಿಕ್ಕೆ ಆಗುವುದಿಲ್ಲ. ಅದಕ್ಕೆ ಟೈಮ್ ಬೇಕು. ಯಾರು ಭಾಗಿಯಾಗಿದ್ದಾರೆ ಎಂಬ

ವಿಡಿಯೋವನ್ನು ಪರಿಶೀಲನೆ ಮಾಡಬೇಕು. ತಪ್ಪಿತಸ್ಥರನ್ನು ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳುತ್ತಾರೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಶಿವಾಜಿ ಜಯಂತಿ ವೇಳೆ ಬಾಗಲಕೋಟೆಯಲ್ಲಿ ನಡೆದ ಕಲ್ಲು ತೂರಾಟ ಸಂಬಂಧ ಸುದ್ದಿಗಾರರ ಜತೆ ಇಲ್ಲಿ ಮಾತನಾಡಿದ ಅವರು,

ಪೊಲೀಸರು ಅವರ ಕರ್ತವ್ಯ ನಿರ್ವಹಿಸುತ್ತಾರೆ: ಜಿಲ್ಲಾಡಳಿತ ಶಾಂತಿ ಸಭೆ ನಡೆಸುವಲ್ಲಿ ವಿಫಲವಾಗಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಯಾರು ಬಂದರೂ ಆಯ್ತು, ಬಿಟ್ಟರೂ ಆಯ್ತು. ಪೊಲೀಸರು ಅವರ ಡ್ಯೂಟಿ ಮಾಡುತ್ತಾರೆ. ಪೊಲೀಸರು ತಮ್ಮ ಕರ್ತವ್ಯ ಸರಿಯಾಗಿ ಮಾಡುತ್ತಾರೆ ಎಂದು ನಾವೆಲ್ಲರೂ ನಂಬಿದ್ದೇವೆ ಎಂದರು.

ಮನೆಯಲ್ಲಿ ಇರುವವರಿಗೆ ತೊಂದರೆ ಕೊಡಲು ಆಗುವುದಿಲ್ಲ: ಹಿಂದೂ ಕಾರ್ಯಕರ್ತರನ್ನು ಬಂಧಿಸಿದರೆ, ನಾವು ರಾಜ್ಯಾದ್ಯಂತ ಹೋರಾಟಕ್ಕೆ ಮುಂದಾಗುತ್ತೇವೆ ಹಾಗೂ ಅಮಿತ್ ಶಾ ಅವರಿಗೆ ಪತ್ರ ಬರೆಯುತ್ತೇವೆ ಎಂದು ಮಾಜಿ ಸಚಿವ ಶ್ರೀರಾಮುಲು ಹೇಳಿದ್ದಾರೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಕಲ್ಲು ತೂರಾಟದಲ್ಲಿ ಹಿಂದೂಗಳಾಗಲಿ, ಯಾರೇ ಆಗಲಿ ಪಾಲ್ಗೊಂಡಿದ್ದರೂ ಅದನ್ನು ಪೊಲೀಸರು ಗುರುತಿಸುವ ಕೆಲಸ ಮಾಡುತ್ತಾರೆ. ಬೇರೆ ಯಾರಿಗೋ, ದಾರಿಯಲ್ಲಿ ಹೋಗುವವರಿಗೆ ಹಾಗೂ ಮನೆಯಲ್ಲಿ ಇರುವವರಿಗೆ ತೊಂದರೆ ಕೊಡಲು ಆಗುವುದಿಲ್ಲ. ಸರಕಾರ ಹಾಗೂ ಪೊಲೀಸರು ನೋಡುತ್ತಾರೆ ಎಂದು ಹೇಳಿದರು.

ದೆಹಲಿ ಪ್ರವಾಸ ಸಹಜ

ತಿಂಗಳಲ್ಲಿ ಎರಡು-ಮೂರು ಬಾರಿ ದೆಹಲಿಗೆ ಹೋಗುತ್ತೇವೆ. ಅಲ್ಲಿ ಇಲಾಖೆ ಕಾರ್ಯಕ್ರಮಗಳ ಜತೆಗೆ ಪಕ್ಷದ ಹೈಕಮಾಂಡ್‌ನ್ನು ಭೇಟಿ ಮಾಡುತ್ತೇವೆ. ಪಕ್ಷದ ಬೆಳವಣಿಗೆ ಮತ್ತು ರಾಜ್ಯದಲ್ಲಿ ಉಂಟಾದ ರಾಜಕೀಯ ಗೊಂದಲ ಕುರಿತು ಚರ್ಚೆ ಮಾಡುತ್ತೇವೆ. ಎಲ್ಲವೂ ಸಿಎಂ ಬದಲಾವಣೆ ನಡೆಯುತ್ತಿದೆ ಎಂದು ಸಮೀಕರಿಸುವುದು ಸರಿಯಲ್ಲ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಬಿಸಿಲಿನ ತಾಪ ಹೆಚ್ಚಳ; 26ರವರೆಗೆ ಮಳೆ ನಿರೀಕ್ಷೆ

ಬೆಂಗಳೂರು: ರಾಜ್ಯದಲ್ಲಿ ಬೇಸಿಗೆ ಕಾಲದ ರೀತಿಯ ವಾತಾವರಣ ಕಂಡು ಬರುತ್ತಿದ್ದು, ದಿನನಿತ್ಯ ಬಿಸಿಲ ತಾಪ ಹೆಚ್ಚುತ್ತಲೇ ಇದೆ.

ಭಾರಿ ಬಿಸಿಲಿನಿಂದಾಗಿ ಬೆಂಗಳೂರಿನ ಜನರು ತತ್ತರಿಸುತ್ತಿದ್ದು, ಮನೆಗಳಲ್ಲಿ, ಕಚೇರಿಗಳಲ್ಲಿ ಏರ್ ಕೂಲರ್‌ಗಳನ್ನು ಹಾಕಿಕೊಂಡು ಕೂರುವ ಪರಿಸ್ಥಿತಿ ಬಂದೊದಗಿದೆ. ಮುಂದಿನ ದಿನದಲ್ಲಿ ಬೆಂಗಳೂರಿನಲ್ಲಿ ಇನ್ನಷ್ಟು ತಾಪಮಾನ ಹೆಚ್ಚಾಗಲಿದ್ದು, ಮಾರ್ಚ್‌ನಿಂದ ಮೇ ತಿಂಗಳವರೆಗೆ ಬೇಸಿಗೆ ಬೇಗೆ ಮತ್ತಷ್ಟು ಹೆಚ್ಚಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಕಳೆದೊಂದು ವಾರದಿಂದ ಉದ್ಯಾನನಗರಿಯಲ್ಲಿ ತಾಪಮಾನ ಏರಿಕೆಯಾಗಿದ್ದು, ಮಾರ್ಚ್ 2ನೇ ವಾರದ ಬಳಿಕ ಬೆಂಗಳೂರಿನ ತಾಪಮಾನ 38-39 ಡಿಗ್ರಿ ತಲುಪಲಿದೆ. ಬಹುತೇಕ ಎಲ್ಲ ಭಾಗಗಳಲ್ಲಿಯೂ ಒಣಹವೆ ಕಂಡು ಬರುತ್ತಿದೆ. ಗರಿಷ್ಠ ತಾಪಮಾನ 36 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಈ ಮಧ್ಯೆ, ರಾಜ್ಯದಲ್ಲಿ ಮಳೆ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆಯು ಮುಂದಿನ ನಾಲ್ಕು ದಿನಗಳ ಕಾಲ ಅಲ್ಲಲ್ಲಿ ಮಳೆ ಆಗಲಿದೆ ಎಂದು ಎಚ್ಚರಿಕೆ ನೀಡಿದೆ.

ಹವಾಮಾನ ಇಲಾಖೆ ಬೆಂಗಳೂರು ಕೇಂದ್ರದ ಮುಖ್ಯಸ್ಥರು ಮತ್ತು ವಿಜ್ಞಾನಿ ಡಾ. ಎನ್. ಪುವಿಯರಸನ್ ಮಾತನಾಡಿ, ಕರಾವಳಿ ಹಾಗೂ ಉತ್ತರ ಒಳನಾಡು ಭಾಗಗಳಲ್ಲಿ ಒಣಹವೆ ಅರ್ಭಟ ಹೆಚ್ಚಾಗಿದೆ. ಗರಿಷ್ಠ ತಾಪಮಾನದಲ್ಲಿ ಏರಿಕೆ ಆಗುತ್ತಿದೆ. ಇನ್ನೂ ದಕ್ಷಿಣ ಒಳನಾಡಿನ ವ್ಯಾಪ್ತಿಯ ಮಲೆನಾಡು ಜಿಲ್ಲೆಗಳು ಸೇರಿ ವಿವಿಧೆಡೆ ಫೆಬ್ರವರಿ 26ರವರೆಗೆ ಮಳೆ ನಿರೀಕ್ಷೆ ಇದೆ. ದಕ್ಷಿಣ

ಕನ್ನಡ ಜಿಲ್ಲೆ, ಚಾಮರಾಜನಗರ, ಹಾಸನ, ಕೊಡಗು, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಒಂದೆರಡು ಕಡೆಗಳಲ್ಲಿ ಇಂದಿನಿಂದ ನಾಲ್ಕು ದಿನ ಹಗುರ ಮಳೆ/ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಗಂಟೆಗೆ 30-40 ಕಿ.ಮೀ ವೇಗದಲ್ಲಿ ಗಾಳಿ ಬಿಸಲಿದೆ ಎಂದು ತಿಳಿಸಿದ್ದಾರೆ.

ಕರ್ನಾಟಕದ ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಒಣ ಹವಾಮಾನ ಮುಂದುವರಿಯಲಿದೆ. ಬಳ್ಳಾರಿ, ಬೆಂಗಳೂರು ಗ್ರಾಮಾಂತರ ಮತ್ತು ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಕೋಲಾರ, ರಾಮನಗರ, ಶಿವಮೊಗ್ಗ, ತುಮಕೂರು ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಒಣಹವೆ ಮೇಲುಗೈ ಸಾಧಿಸಲಿದೆ ಎಂದು ಹೇಳಿದ್ದಾರೆ.

ಬೆಂಗಳೂರಿನಲ್ಲಿ ಮುಂದಿನ 24 ಗಂಟೆಗಳವರೆಗೆ ಬೆಳಗ್ಗೆ ಭಾಗಶಃ ಮೋಡ ಕವಿದ ವಾತಾವರಣ ಕಂಡು ಬರಲಿದ್ದು, ಒಣಹವೆಯ ವಾತಾವರಣ ಸಹ ನಿರ್ಮಾಣವಾಗಲಿದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನವು ಕ್ರಮವಾಗಿ 30 ಡಿಗ್ರಿ ಸೆಲ್ಸಿಯಸ್ ಮತ್ತು 19 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಾಧ್ಯತೆ ಇದೆ. ಭಾನುವಾರ ಫೆ.22 ರಂದು ಬೆಳಗ್ಗೆ 9 ಗಂಟೆಗೆ ನಗರದಲ್ಲಿ ಕನಿಷ್ಠ 19.7 ಡಿ.ಸೆ , ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಬಳಿ 18, ಬೆಂಗಳೂರು ಎಚ್‌ಎಎಲ್ 18.4 ಡಿ.ಸೆ ದಾಖಲಾಗಿದೆ. ಗರಿಷ್ಠ ಎಲ್ಲೆಡೆ 30-31 ಡಿಗ್ರಿ ಸೆಲ್ಸಿಯಸ್ ಕಂಡು ಬಂದಿದೆ ಎಂದು ಐಎಂಡಿ ವರದಿ ತಿಳಿಸಿದೆ.

ಚಂಡಮಾರುತ ಸಾಧ್ಯತೆ

ಹಿಂದೂ ಮಹಾಸಾಗರ ಮತ್ತು ಆಗ್ನೆಯ ಬಂಗಾಳ ಕೊಲ್ಲಿಯ ಮೇಲೆ ಕಡಿಮೆ ಒತ್ತಡದ ಪ್ರದೇಶ ನಿರ್ಮಾಣವು ಮುಂದುವರಿದಿದೆ. ಈ ಚಂಡಮಾರುತದ ಪರಿಚಲನೆಯು ಸರಾಸರಿ ಸಮುದ್ರಮಟ್ಟದಿಂದ 5.8 ಕಿ.ಮೀ ವರೆಗೆ ವಿಸ್ತರಿಸಿದೆ. ಇದು ಮುಂದಿನ 24 ಗಂಟೆಗಳಲ್ಲಿ ಪಶ್ಚಿಮ ಮತ್ತು ವಾಯುವ್ಯಕ್ಕೆ ಚಲಿಸುವ ನಿರೀಕ್ಷೆ ಇದೆ. ಅದೇ ರೀತಿ ಪಕ್ಕದ ನೈಋತ್ಯ ಬಂಗಾಳ ಕೊಲ್ಲಿಯ ಮೇಲಿನ ಇನ್ನೊಂದು ವಾಯು ಚಂಡಮಾರುತದ ಪರಿಚಲನೆಯು ಮೇಲಿನ ವೈಪರೀತ್ಯದೊಂದಿಗೆ ವಿಲೀನವಾಗಿದೆ. ಇದು ಲಕ್ಷದ್ವೀಪ ಪ್ರದೇಶದವರೆಗೂ ಕೇಂದ್ರೀಕೃತವಾಗಿದೆ. ಮುಂದಿನ ದಿನಗಳಲ್ಲಿ ಇವು ಮತ್ತಷ್ಟು ತೀವ್ರಗೊಂಡರೆ ಹವಾಮಾನ ಬದಲಾವಣೆ ಉಂಟಾಗಬಹುದು ಎಂದು ಐಎಂಡಿ ತಿಳಿಸಿದೆ.

ಕಾರು ಪಲ್ಟಿ: ಮಾಜಿ ಶಾಸಕ ಸುರೇಶ್ ಗೌಡಗೆ ಗಾಯ

ಮಂಡ್ಯ: ನಾಗಮಂಗಲದ ಜೆಡಿಎಸ್ ಮಾಜಿ ಶಾಸಕ ಸುರೇಶ್ ಗೌಡ ಕಾರು ಪಲ್ಟಿಯಾಗಿ ಅಪಘಾತ ಸಂಭವಿಸಿರುವ ಘಟನೆ ಮಂಡ್ಯದ ಬೊಂತೆಕೊಪ್ಪಲು ಸಮೀಪ ನಡೆದಿದೆ. ಕಾರ್ಯ ಕರ್ತರ ಮದುವೆಗೆ ಹೋಗುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾಗಿದೆ. ಅಪಘಾತದ ರಭಸಕ್ಕೆ ಕಾರು ಭಾಗಶಃ ಜಖಂಗೊಂಡಿದೆ. ಅಪಘಾತದಲ್ಲಿ ಸುರೇಶ್ ಗೌಡರ ಕೈಗೆ ಪೆಟ್ಟು ಬಿದ್ದಿದ್ದು, ಚಾಲಕನಿಗೂ ಗಾಯಗಳಾಗಿವೆ. ಕಾರು ಪಲ್ಟಿಯಾದ ತಕ್ಷಣ ಸುರೇಶ್ ಗೌಡ ಅವರ ಗನ್‌ಮ್ಯಾನ್ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ

ಪೊಲೀಸರು ಸುರೇಶ್ ಗೌಡರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ಇಬ್ಬರನ್ನೂ ಮೊದಲು ಮಂಡ್ಯದ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ಶಿಫ್ಟ್ ಮಾಡಲಾಗಿದೆ.

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾಗಿ

ನರೇಗಾ ಬಚಾವ್ ಆಂದೋಲನ ಇಂದು

ಚಿಕ್ಕಬಳ್ಳಾಪುರ: ಕೇಂದ್ರ ಸರಕಾರ ಜಾರಿಗೆ ತಂದಿರುವ ವಿಬಿಜಿರಾಮ್‌ಜಿ ಯೋಜನೆ ವಿರೋಧಿಸಿ ರಾಜ್ಯ ಕಾಂಗ್ರೆಸ್ ಸರಕಾರ ನರೇಗಾ ಬಚಾವ್ ಆಂದೋಲನ ಹಮ್ಮಿಕೊಂಡಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಆಗಲಗುರ್ಕಿ ಸಮೀಪದಲ್ಲಿ ನಡೆಯುವ ಕಾರ್ಯಕ್ರಮ ದಲ್ಲಿ ಆಂದೋಲನಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಚಾಲನೆ ನೀಡುವರು. ಎಐಸಿಸಿ ಅಧ್ಯಕ್ಷ ಮಲ್ಲಿಕಾ ರ್ಜುನ ಸೇರಿ ಕಾಂಗ್ರೆಸ್‌ನ ಹಲವು ನಾಯಕರು ಪಾಲ್ಗೊಳ್ಳಲ್ಲಿದ್ದಾರೆ.

ತಾಲೂಕಿನ ಅಗಲಗುರ್ಕಿ ಗ್ರಾಮದ ಹೊರವಲಯ ರಾಷ್ಟ್ರೀಯ ಹೆದ್ದಾರಿ 44ರ ಸಮೀಪ ನಿರ್ಮಾಣಗೊಂಡಿರುವ ಬೃಹತ್ ವೇದಿಕೆಯಲ್ಲಿ ಗಣ್ಯರು ಸೇರಿದಂತೆ ಪಕ್ಷದ ಕಾರ್ಯಕರ್ತರಿಗೆ 1 ಲಕ್ಷಕ್ಕೂ ಹೆಚ್ಚಿನ ಆಸನಗಳ ವ್ಯವಸ್ಥೆ ಮಾಡಲಾಗಿದೆ.

ಸಿಎಂ ಆಗಮನದ ಹಿನ್ನೆಲೆ ಡಿಜಿಪಿ ಡಾ.ಎನ್.ಎ.ಸಲೀಂ ಭೇಟಿ ನೀಡಿದ್ದು, ಇವರೊಟ್ಟಿಗೆ ಎಸ್ಪಿ ಕುಶಾಲ್ ಚೌಕ್ಸೆ,ಎಸ್ಪಿ ಜಗನ್ನಾಥ್ ರೈ ಮತ್ತಿತರರು ಇದ್ದು ಕಾರ್ಯಕ್ರಮದ ಸಿದ್ಧತೆ ರೂಪುರೇಷೆಗಳನ್ನು ಪರಿಶೀಲಿಸಿದರು.

ರಾಜ್ಯ ಕಾಂಗ್ರೆಸ್ ಸರಕಾರ ಹಮ್ಮಿಕೊಂಡಿರುವ ನರೇಗಾ ಬಚಾವ್ ಆಂದೋಲನ ಹಿನ್ನೆಲೆ ಚಿಕ್ಕಬಳ್ಳಾಪುರದಲ್ಲಿ ಸಿದ್ಧಗೊಂಡಿರುವ ಕಾರ್ಯಕ್ರಮದ ಬೃಹತ್ ವೇದಿಕೆ.

ಸುಧಾಕರ್, ಪ್ರದೀಪ್ ಈಶ್ವರ್ ಉಸ್ತುವಾರಿ

ಕೋಲಾರ ಚಿಕ್ಕಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಒಳಗೊಂಡಂತೆ ನಡೆಯುತ್ತಿರುವ ಮನರೇಗಾ ಫಲಾನುಭವಿಗಳ ಬೃಹತ್ ಸಮಾವೇಶವಾದ ನರೇಗಾ ಬಚಾವ್ ಕಾರ್ಯಕ್ರಮ ಶಾಸಕ ಪ್ರದೀಪ್ ಈಶ್ವರ್, ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಪಾಲಿಗೆ ಪ್ರತಿಷ್ಠೆಯ ಕಾರ್ಯಕ್ರಮವಾಗಲಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಜನತೆಯನ್ನು ಸೇರಿಸಲು ಸಿದ್ಧತೆಗಳು ಜೋರಾಗಿ ಸಾಗಿವೆ. ಚಿಕ್ಕಬಳ್ಳಾಪುರದ ಮುಖ್ಯ ರಸ್ತೆ ಪಕ್ಕದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಚಿವ ಎಂ.ಸಿ.ಸುಧಾಕರ್, ಶಾಸಕ ಪ್ರದೀಪ್ ಈಶ್ವರ್ ಬ್ಯಾನರ್, ಕಟೌಟ್‌ಗಳು ರಾರಾಜಿಸುತ್ತಿವೆ.

ಗೋಕರ್ಣ ಸಮೀಪದ ಗಂಗಾವಳಿ-ಮಂಜಗುಣಿ ಸೇತುವೆ ಉದ್ಘಾಟನೆ

ಜೂನ್ ಒಳಗೆ ಜಿಪಂ, ತಾಪಂ ಚುನಾವಣೆ

ಅಂಕೋಲಾ: ಜೂನ್ ಒಳಗೆ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಚುನಾವಣೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ತಾಲೂಕಿನ ಮಂಜಗುಣಿಯಲ್ಲಿ ಭಾನುವಾರ ಗಂಗಾವಳಿ-ಮಂಜಗುಣಿ ಸೇತುವೆ ಉದ್ಘಾಟಿಸಿ ಮಾತನಾಡಿದ ಅವರು, ಗೋಕರ್ಣವನ್ನು ಪಟ್ಟಣ ಪಂಚಾಯಿತಿ ಮೇಲ್ದರ್ಜೆಗೇರಿಸಲು ಬೇಡಿಕೆ ಇದೆ. ಆದರೆ, ಚುನಾವಣೆಗಳು ಸಮೀಪಿಸಿದೆ. ಜನಗಣತಿಯೂ ನಡೆಯಲಿದೆ. ಹೀಗಾಗಿ, ಸದ್ಯ ಹೊಸದಾಗಿ ಪಟ್ಟಣ ಪಂಚಾಯಿತಿ ರಚನೆ ಸಾಧ್ಯವಾಗದು. ಚುನಾವಣೆಗಳು ಮುಗಿದ ಬಳಿಕ ಗೋಕರ್ಣ ಪಟ್ಟಣ ಪಂಚಾಯಿತಿ ರಚನೆ ಮಾಡಲಾಗುವುದು ಎಂದರು.

‘ಹಾಲಕ್ಕಿ ಒಕ್ಕಲಿಗರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಸ್ತಾವವನ್ನು ಕೇಂದ್ರ ಸರಕಾರ ತಿರಸ್ಕರಿಸಿದೆ. ಪುನರ್ ಪ್ರಸ್ತಾವ ಸಲ್ಲಿಸಲು ರಾಜ್ಯ ಸರಕಾರ ನಿರ್ಧರಿಸಿದೆ’ ಎಂದರು.

ಮಂಜಗುಣಿ-ಗಂಗಾವಳಿ ಸೇತುವೆ ನಿರ್ಮಾಣದಿಂದ ಅಂಕೋಲಾ ಮತ್ತು ಗೋಕರ್ಣ ಭಾಗದ ಜನರು 18 ಕಿ.ಮೀ ಸುತ್ತು ಬಳಸಿ ಸಾಗುವ ಸಮಸ್ಯೆ ತಪ್ಪಿದಂತಾಗಿದೆ. ಈ ಸೇತುವೆ ಕಾಮಗಾರಿಗೆ 2017ರಲ್ಲಿ ನಾನೇ ಮುಖ್ಯಮಂತ್ರಿ ಆಗಿದ್ದಾಗ ಚಾಲನೆ ನೀಡಿದ್ದೆ. ನಂತರ ಬಂದ ಬಿಜೆಪಿ ಸರಕಾರ ಕಾಮಗಾರಿ ಪೂರ್ಣಗೊಳಿಸಲಿಲ್ಲ. ನಾನು ಚಾಲನೆ ನೀಡಿದ ಕಾಮಗಾರಿಯನ್ನು ನಾನೇ ಉದ್ಘಾಟಿಸಿದ್ದೇನೆ ಎಂದರು. ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಶಾಸಕರಾದ ಆರ್.ವಿ.ದೇಶಪಾಂಡೆ, ಸತೀಶ ಸೈಲ್, ದಿನಕರ ಶೆಟ್ಟಿ, ಭೀಮಣ್ಣ ನಾಯ್ಕ, ಇತರರು ಪಾಲ್ಗೊಂಡಿದ್ದರು.



ಕರಾವಳಿ ಭಾಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಹೊಸ ನೀತಿ ರೂಪಿಸಲಾಗುತ್ತಿದೆ. ಗೋವಾಕ್ಕಿಂತ ಕರ್ನಾಟಕದತ್ತ ಪ್ರವಾಸಿಗರನ್ನು ಸೆಳೆಯುವಂತೆ ಯೋಜನೆಗಳನ್ನು ಕಾರ್ಯಗತ ಮಾಡಲಾಗುವುದು.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ವಿಶ್ವವಾಣಿ

ಸಂಪಾದಕೀಯ

ಮೆರೆದವರೆಲ್ಲ ಇಳಿಯುವುದು ಸತ್ಯ

ಅಮೆರಿಕದ ಅಧ್ಯಕ್ಷೀಯ ಗದ್ದುಗೆಗೆ ಎರಡನೆಯ ಬಾರಿಗೆ ಏರಿದಾಗಿನಿಂದಲೂ ವಿಲಕ್ಷಣವಾಗಿ ವರ್ತಿಸುತ್ತಿದ್ದರು ಡೊನಾಲ್ಡ್ ಟ್ರಂಪ್. ಮೊದಲ ಅಧಿಕಾರಾವಧಿಯಲ್ಲೇ ಇದರ 'ಝಲಕ್'ಗಳನ್ನು ಬಹುತೇಕರು ನೋಡಿದ್ದರಿಂದ, ಈ ವಿಲಕ್ಷಣ ವರ್ತನೆಯಿಂದ ಇಂಥವರಿಗೆ ಹೆಚ್ಚಿನ ಅಚ್ಚರಿಯೇನೂ ಆಗಲಿಲ್ಲ ಎನ್ನಬೇಕು. ಆದರೆ, 'ಅಮೆರಿಕದ ಹಿತಾಸಕ್ತಿಯ ರಕ್ಷಣೆ' ಎಂಬ ಕುಂಟುನೆಪವನ್ನು ಮುಂದುಮಾಡಿಕೊಂಡು ಟ್ರಂಪ್ ಮಹಾಶಯರು ಐಲುಪೈಲು ದೊರೆಯಂತೆ ಆಡತೊಡಗಿದಾಗ, ಒಂದಿಡೀ ಜಗತ್ತೇ 'ಎಲ್ಲೋ ಏನೋ ಎಡವಟ್ಟಾಗಿದೆ' ಎನ್ನುವಂತೆ ಭಾವಿಸತೊಡಗಿತು. ಇದು, ವಿಶ್ವದ ವಿವಿಧ ದೇಶಗಳ ಸರಕುಗಳ ಮೇಲೆ ಟ್ರಂಪ್ ಅವರು ಮನಬಂದಂತೆ ಸುಂಕವನ್ನು ಏರಿಸಿದಾಗ ಜಾಗತಿಕ ಸಮುದಾಯದಲ್ಲಿ ಸ್ಫುರಿಸಿದ ಗ್ರಹಿಕೆ. ಆದರೆ ಅಮೆರಿಕದ ಸರ್ವೋಚ್ಚ ನ್ಯಾಯಾಲಯವು ತಲೆಗೆ ಮೊಟಕಿರುವ ಪರಿಣಾಮವಾಗಿ ಟ್ರಂಪ್ ಈಗ ತಮ್ಮ ಹುಚ್ಚಾಟಕ್ಕೆ ಪೂರ್ಣವಿರಾಮವನ್ನು ಹಾಕಬೇಕಾಗಿ ಬಂದಿದೆ. ಅಂದರೆ, ಮುಂದಿನ 150 ದಿನಗಳ ಕಾಲ, ವಿವಿಧ ದೇಶಗಳ ಸರಕುಗಳ ಮೇಲೆ ಅವರು ಹೇರಿದ್ದ ಶೇ.50ರ ಸುಂಕವು ರದ್ದಾಗಿ, ಶೇ.10ರ ಸ್ತರಕ್ಕೆ ಅದು ಇಳಿಯಲಿದೆ. ಇದು ಜಾಗತಿಕ ಸಮುದಾಯದ ಎದುರು ಟ್ರಂಪ್‌ರ ಅಹಂ ಅನ್ನು ತಗ್ಗಿಸಿರುವುದರ ಜತೆಗೆ, 'ಮೆರೆದವರೆಲ್ಲ ಇಳಿಯುವುದು ಸತ್ಯ' ಎಂಬ ಸಾರ್ವಕಾಲಿಕ ಗ್ರಹಿಕೆಗೂ ಮತ್ತಷ್ಟು ಪುಷ್ಟಿ ನೀಡಿದೆ. ರಾಜತಂತ್ರದಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ಅಂತಾರಾಷ್ಟ್ರೀಯ ಸಂಬಂಧಗಳ ವಿಷಯದಲ್ಲಿ ದುಡುಕುವುದು ಸಲ್ಲ ಎಂಬ ಸೂಚನೆಯನ್ನೂ ಇದು ಸ್ಪಷ್ಟವಾಗಿ ನೀಡಿದೆ. ಮಾನವಕುಲವು ಭೂಗೋಳದ ವಿವಿಧ ಭಾಗಗಳಲ್ಲಿ ಹಂಚಿಹೋಗಿದ್ದರೂ, 'ವಸುಧೈವ ಕುಟುಂಬಕಂ' ಎಂಬ ಸದಾಶಯದ ಅಡಿಯಲ್ಲಿ ಎಲ್ಲರೂ ಪರಸ್ಪರರ ಹಿತಕ್ಕಾಗಿ ಬಾಳಬೇಕು ಎಂಬುದು ಭಾರತದ ಕನವರಿಕೆ. ಇದು ಟ್ರಂಪ್ ಅವರಿಗೆ ಮತ್ತು ಅವರಂಥ ಇನ್ನಷ್ಟು ಆಳುಗರಿಗೆ ಅರ್ಥವಾದರೆ ಸಾಕು...!

ಸೊಂಪಾದಕೀಯ

ಇಲಿಸುಂಡಕ್ಕೂ ಪೂಜೆಭಾಗ್ಯ..!

ದಾವಣಗೆರೆ ಜಿಲ್ಲೆಯ ಕೆಲವು ಭಾಗಗಳಲ್ಲಿ ಇಲಿಗೆ ಪೂಜೆ ಮಾಡುತ್ತಾರಂತೆ ಅನ್ನೋದು ಒಂದು ವರ್ಷದ ಹಿಂದೆ ಸುದ್ದಿಯಾಗಿತ್ತು. ಇದರಲ್ಲಿ ಏನು ವಿಶೇಷ, ಸಣ್ಣ ಪುಟ್ಟ ಮನೆಗಳಲ್ಲಿರುವ ಮಧ್ಯಮ ವರ್ಗದ ಜನ ತಮ್ಮ ಮನೆಯ ಸಂದಿ-ಗೊಂದಿಗಳಲ್ಲಿ ಸಿಗುವ ಇಲಿಗಳಿಗೆ ತಕ್ಕ ಪೂಜೆ ಮಾಡುವುದು ಮಾಮೂಲಿ ವಿಷಯ ಅಲ್ಲವೇ? ಅಂತ ನೀವು ಕೇಳಬಹುದು. ಮೂಲೆಗಳಲ್ಲಿ ಅಡಗಿ ಕುಳಿತ ಇಲಿ ಹಿಡಿಯಲು ಬೋನು ಹಾಕುವುದು ಬೇರೆ ವಿಷಯ. ಆದರೆ ಇದು ಇಲಿಯ ಪೂಜೆಗೆ ಸಂಬಂಧಪಟ್ಟ ವಿಷಯ. 'ಇಲಿಯನ್ನು ಆರಾಧಿಸುತ್ತಾರಾ?' ಎಂದು ನೀವು ಆಶ್ಚರ್ಯದಿಂದ ಕೇಳಬಹುದು. ಇದು ಮೇಲ್ನೋಟಕ್ಕೆ ಪೂಜೆ ಎನಿಸಿದರೂ, ಇಲ್ಲಿನ ಉದ್ದೇಶ ಮನೆಯಲ್ಲಿರುವ ಕಿರಿಕಿರಿಕಾರಕ ಇಲಿಗಳನ್ನು ತಡೆಗಟ್ಟುವುದೇ ಆಗಿದೆಯಂತೆ. ಆದರೆ ಇಲ್ಲಿ 'ದಂಡಂ ದಶಗುಣಂ' ಮಂತ್ರ ಬಳಸದೆ ಇಲಿಗಳನ್ನು ಪೂಜೆ ಮಾಡಿ ಬೇಡಿಕೊಳ್ಳುವ ಶಾಂತಿ-ತಂತ್ರ ಅನುಸರಿಸುತ್ತಾರಂತೆ. ಗಣೇಶನ ಹಬ್ಬದ ಸಮಯದಲ್ಲಿ ಎಲ್ಲರೂ ಗಣೇಶನ ಮೂರ್ತಿಗೆ ಪೂಜೆ ಮಾಡಿದರೆ ಇಲ್ಲಿ ಮಾತ್ರ ಅವನ ವಾಹನಕ್ಕೆ 'ನಮಗೆ ಏನೂ ತೊಂದರೆ ಕೊಡಬೇಡಪ್ಪ' ಅಂತ ಬೇಡಿಕೊಳ್ಳಲಾಗುತ್ತದೆಯಂತೆ. ಈ ಪೂಜೆ ಮಾಡುವವರು ಬಟ್ಟೆ ವ್ಯಾಪಾರಿಗಳಂತೆ. ಅವರು ಬಟ್ಟೆಯ ದಾಸ್ತಾನು ಮಾಡಿಟ್ಟುಕೊಂಡಿರುತ್ತಾರೆ. ಆದರೆ ಈ ಬಟ್ಟೆಗಳಿಗೆ ಇಲಿಗಳಿಂದ ಸಿಕ್ಕಾಪಟ್ಟೆ ಕಾಟ ಇದೆಯಂತೆ. ಈ ಕಿಡಿಗೇಡಿ ಇಲಿಗಳಿಂದಾಗಿ ತಮ್ಮ ಬಟ್ಟೆ ಉದ್ಯಮಕ್ಕೆ ತೊಂದರೆ ಅನ್ನುವುದು ಅವರ ಅಳಲಂತೆ. ಒಂದೊಂದೇ ಇಲಿಗಳನ್ನು ಹುಡುಕಿ ಹೊಡೆಯುವುದು ಹರಸಾಹಸದ ಕೆಲಸ ಎನ್ನುವುದಕ್ಕೋ ಏನೋ ಅವರು ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುವ ದಾರಿ ಹುಡುಕಿಕೊಂಡಿದ್ದಿರಬಹುದು. ಇಲಿಗಳಿಗೆ ಹೀಗೆ ಪೂಜೆ ಸಲ್ಲಿಸುವ ವೇಳೆ 'ಬಟ್ಟೆಗಳನ್ನು ಹಾಳುಮಾಡಿ ಉದ್ಯಮಕ್ಕೆ ತೊಂದರೆ ಕೊಡಬೇಡ' ಎಂದು ಬೇಡಿಕೊಳ್ಳಲಾಗುತ್ತದಂತೆ. ಕೋಲು, ಪೊರಕೆ, ಬೋನುಗಳ ಬಡಪೆಟ್ಟಿಗೆ ಬಗ್ಗದ ಇಲಿರಾಯ ಪೂಜೆ ಆರಾಧನೆಗೆ ಬಗ್ಗುತ್ತಾನೆ ಅನ್ನೋದೇ ಇದರ ವಿಶೇಷ.

ಸಂಪಾದಕರ ಸದ್ಯಶೋಧನೆ

ಎಐ ಯುಗದಲ್ಲಿ ಮನುಷ್ಯ

ನಿತಿನ್ ಸೇಠ್ ಅವರು ಬರೆದ 'The Human Edge in the AI Age' ಎಂಬ ಕೃತಿಯನ್ನು ಇತ್ತೀಚೆಗೆ ಓದುತ್ತಿದ್ದೆ. ಇದು Mastering the Data Paradox ಪುಸ್ತಕದ ನಂತರದ ಅತ್ಯಂತ ಪ್ರಮುಖ ಕೃತಿ. ಈ ಪುಸ್ತಕವು ಇಂದಿನ ತಾಂತ್ರಿಕ ಯುಗದಲ್ಲಿ ಕೇವಲ 'ಬುದ್ಧಿವಂತಿಕೆ' ಇದ್ದರೆ ಸಾಲದು, ಬದಲಿಗೆ ಮನುಷ್ಯರಲ್ಲಿ ಮಾತ್ರ ಇರುವ ವಿಶಿಷ್ಟ 'ಮಾನವೀಯ ಗುಣಗಳು' ಹೇಗೆ ನಮ್ಮನ್ನು ಯಶಸ್ಸಿನತ್ತ ಕೊಂಡೊಯ್ಯುತ್ತವೆ ಎಂಬುದನ್ನು ವಿವರಿಸುತ್ತದೆ. ಕೃತಕ ಬುದ್ಧಿಮತ್ತೆ (AI) ಇಂದು ಮನುಷ್ಯನಿಗಿಂತ ವೇಗವಾಗಿ ಕೆಲಸ ಮಾಡುತ್ತಿದೆ, ಸಂಕೀರ್ಣ ಲೆಕ್ಕಾಚಾರಗಳನ್ನು ಮಾಡುತ್ತಿದೆ ಮತ್ತು ಕವಿತೆಗಳನ್ನೂ ಬರೆಯುತ್ತಿದೆ. ಇಂಥ ಸಂದರ್ಭದಲ್ಲಿ ನಮ್ಮ ಕೆಲಸ ಉಳಿಯುತ್ತದೆಯೇ? ಎಂಬ ಆತಂಕ ಎಲ್ಲರಲ್ಲಿದೆ. ನಿತಿನ್ ಸೇಠ್ ಈ ಪುಸ್ತಕದಲ್ಲಿ ಒಂದು ಆಶಾದಾಯಕ ಸಂದೇಶ ನೀಡುತ್ತಾರೆ: 'ಎಐ'ಗೆ 'ಪ್ರೋಗ್ರಾಮಿಂಗ್' ಇದೆ, ಆದರೆ ಮನುಷ್ಯನಿಗೆ 'ಪರ್ಪಸ್' (ಉದ್ದೇಶ) ಇದೆ. ಸೇಠ್ ಮನುಷ್ಯನ ಶಕ್ತಿಯನ್ನು 'Human Edge' ಎಂದು ಕರೆಯುತ್ತಾರೆ. ಇದು ಕೇವಲ ಮಿದುಳಿನ ಶಕ್ತಿಯಲ್ಲ, ಜತೆಗೆ ಹೃದಯ ಮತ್ತು ಆತ್ಮದ ಶಕ್ತಿ. ಈ ಪುಸ್ತಕದಲ್ಲಿ ಬರುವ ಒಂದು ಪ್ರಸಿದ್ಧ ದೃಷ್ಟಾಂತವೆಂದರೆ ಚೆಸ್ ಆಟಗಾರ ಗ್ಯಾರಿ ಕಾಸ್ಪರೋವ್ ಕಥೆ. 1997ರಲ್ಲಿ ಐಬಿಎಂನ 'ಡೀಪ್ ಬ್ಲೂ' ಕಂಪ್ಯೂಟರ್ ವಿರುದ್ಧ ಅವರು ಸೋತಾಗ, ಜಗತ್ತು ಮನುಷ್ಯನ ಸೋಲನ್ನು ಸಂವೇದಿಸಿತು. ಆದರೆ ನಂತರದ ವರ್ಷಗಳಲ್ಲಿ 'ಅಡ್ವಾನ್ಸ್ಡ್ ಚೆಸ್' ಎಂಬ ಹೊಸ ಪದ್ಧತಿ ಜಾರಿಗೆ ಬಂದಿತು. ಇಲ್ಲಿ ಮನುಷ್ಯ ಒಬ್ಬನೇ ಆಡುವುದಿಲ್ಲ ಅಥವಾ ಕಂಪ್ಯೂಟರ್ ಒಂದೇ ಆಡುವುದಿಲ್ಲ. ಬದಲಿಗೆ ಮನುಷ್ಯ ಮತ್ತು ಕಂಪ್ಯೂಟರ್ ಸೇರಿ ತಂಡವಾಗಿ ಆಡುತ್ತಾರೆ. ಇಲ್ಲಿ ಸೋಲಿಸಲಾಗದ ಶಕ್ತಿ ಯಾವುದು ಗೊತ್ತೇ? ಅದು ಅತ್ಯಂತ ಶಕ್ತಿಶಾಲಿ ಕಂಪ್ಯೂಟರ್ ಅಲ್ಲ, ಬದಲಿಗೆ 'ಸಾಮಾನ್ಯ ಕಂಪ್ಯೂಟರ್ ಬಳಸುವ ಒಬ್ಬ ಸ್ಮಾರ್ಟ್ ಮನುಷ್ಯ'. 'ಎಐ' ಎನ್ನುವುದು ಮನುಷ್ಯನಿಗೆ ಪರ್ಯಾಯವಲ್ಲ, ಅದು ಮನುಷ್ಯನ ಸಾಮರ್ಥ್ಯವನ್ನು ಹೆಚ್ಚಿಸುವ ಒಂದು 'ಎಕ್ಸ್‌ಟೆನ್ಷನ್'. ಹಿಂದಿನ ಕಾಲದಲ್ಲಿ ನಾಯಕ ಎಂದರೆ 'ಕಮಾಂಡರ್' ತರಹ ಇರಬೇಕಿತ್ತು. ಅಂದರೆ ಆದೇಶ ನೀಡುವವನು. ಆದರೆ 'ಎಐ' ಯುಗದಲ್ಲಿ ಎಲ್ಲ ಮಾಹಿತಿಯೂ ಯಂತ್ರಗಳ ಬಳಿ ಇರುವುದರಿಂದ, ಆದೇಶ ನೀಡುವ ನಾಯಕನಿಗಿಂತ 'ಕೋಚ್'ನಂತಿರುವ ನಾಯಕನಿಗೆ ಬೆಲೆ ಹೆಚ್ಚು ಎಂದು ಸೇಠ್ ವಿವರಿಸುತ್ತಾರೆ. ಒಬ್ಬ ಕಂಪನಿಯ ಮ್ಯಾನೇಜರ್ ತನ್ನ ಉದ್ಯೋಗಿಗಳಿಗೆ 'ಏನು ಮಾಡಬೇಕು' ಎಂದು ಹೇಳುವುದಕ್ಕಿಂತ, ಅವರು ತಮ್ಮ ಕೆಲಸದಲ್ಲಿ ಹೇಗೆ ಉತ್ತಮವಾಗಬಹುದು ಎಂದು ಪ್ರೇರೇಪಿಸುವುದು ಮುಖ್ಯ. 'ಎಐ'ಗೆ ಡೇಟಾ ವಿಶ್ಲೇಷಣೆ ಮಾಡಲು ಬರಬಹುದು, ಆದರೆ ಒಬ್ಬ ಉದ್ಯೋಗಿಯ ವೈಯಕ್ತಿಕ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವನಲ್ಲಿ ಸ್ಫೂರ್ತಿ ತುಂಬಲು ಸಾಧ್ಯವಿಲ್ಲ. ಇದನ್ನೇ ಲೇಖಕರು 'Empathy-led Leadership' ಎನ್ನುತ್ತಾರೆ. 'ಎಐ'ಗೆ ನಾವು ನೀಡುವ ಡೇಟಾದ ಆಧಾರದ ಮೇಲೆ ಅದು ಉತ್ತರ ನೀಡುತ್ತದೆ. ಒಂದು ವೇಳೆ ನಾವು ನೀಡುವ ಡೇಟಾ ತಪ್ಪಾಗಿದ್ದರೆ ಅಥವಾ ಪಕ್ಷಪಾತದಿಂದ ಕೂಡಿದ್ದರೆ, 'ಎಐ' ನೀಡುವ ಉತ್ತರವೂ ಅಪಾಯಕಾರಿಯಾಗಿರುತ್ತದೆ. ಅಮೆರಿಕದಲ್ಲಿ ಅಪರಾಧಿಗಳಿಗೆ ಶಿಕ್ಷೆ ನೀಡುವ ಪ್ರಮಾಣವನ್ನು ಅಳೆಯಲು ಒಂದು 'ಎಐ' ತಂತ್ರಜ್ಞಾನ ಬಳಸಲಾಗಿತ್ತು. ಆದರೆ ಆ ಸಿಸ್ಟಮ್ ಕೇವಲ ಹಳೆಯ ರೆಕಾರ್ಡ್‌ಗಳನ್ನು ನೋಡಿ ಒಂದು ನಿರ್ದಿಷ್ಟ ಸಮುದಾಯದವರೇ ಹೆಚ್ಚು ತಪ್ಪು ಮಾಡುತ್ತಾರೆ ಎಂದು ತೀರ್ಪು ನೀಡಲು ಶುರುಮಾಡಿತು. ಇಲ್ಲಿ ಮನುಷ್ಯನ ಹಸ್ತಕ್ಷೇಪ ಬೇಕಾಯಿತು. ಏಕೆಂದರೆ ಮನುಷ್ಯನಿಗೆ ಮಾತ್ರ ಆ ತೀರ್ಪಿನ ಹಿಂದಿರುವ ಸಾಮಾಜಿಕ ಮತ್ತು ಮಾನವೀಯ ಆಯಾಮಗಳನ್ನು ಅರ್ಥಮಾಡಿಕೊಳ್ಳುವ Contextual Intelligence (ಸಂದರ್ಭೋಚಿತ ಬುದ್ಧಿವಂತಿಕೆ) ಇರುತ್ತದೆ. ನಿತಿನ್ ಸೇಠ್ ಸೃಜನಶೀಲತೆಯನ್ನು ಎರಡು ಭಾಗಗಳಾಗಿ ವಿಂಗಡಿಸುತ್ತಾರೆ. ಮೊದಲನೆಯದು, ಅಸ್ತಿತ್ವದಲ್ಲಿರುವುದನ್ನು ಸ್ವಲ್ಪ ಬದಲಾಯಿಸುವುದು (ಇದನ್ನು AI ಮಾಡಬಲ್ಲದು) ಹಾಗೂ ಎರಡನೆಯದು, ಸಂಪೂರ್ಣವಾಗಿ ಹೊಸತನ್ನು ಸೃಷ್ಟಿಸುವುದು (ಇದು ಮನುಷ್ಯನಿಗೆ ಮಾತ್ರ ಸಾಧ್ಯ). ಸ್ಟೀವ್ ಜಾಬ್ಸ್ ಐಫೋನ್ ಕಂಡುಹಿಡಿದಾಗ ಜಗತ್ತಿನಲ್ಲಿ ಅಂಥ ಯಾವುದೇ ಸಾಧನವಿರಲಿಲ್ಲ. ಜನರು 'ನಮಗೆ ಇಂಥ ಫೋನ್ ಬೇಕು' ಎಂದು ಕೇಳಿರಲಿಲ್ಲ. ಆದರೆ ಜಾಬ್ಸ್ ತಮ್ಮ ಅಂತಃಪ್ರಜ್ಞೆಯ ಮೂಲಕ ಅದನ್ನು ಸೃಷ್ಟಿಸಿದರು. 'ಎಐ' ಯಾವತ್ತೂ ಮಾರುಕಟ್ಟೆಯಲ್ಲಿ ಇಲ್ಲದ ಹೊಸದನ್ನು ಊಹಿಸಲಾರದು; ಅದು ಕೇವಲ ಹಳೆಯ ಅಂಕಿ-ಅಂಶಗಳನ್ನು ಮರುಸಂಸ್ಕರಿಸಬಲ್ಲದು. 'ಎಐ' ಯುಗದಲ್ಲಿ ನಾವು ಕಲಿತ ಪದವಿಗಳು ಐದು ವರ್ಷಗಳಲ್ಲಿ ಹಳತಾಗುತ್ತವೆ. ಆದ್ದರಿಂದ, 'ಏನು ಕಲಿತಿದ್ದೇವೆ' ಎನ್ನುವುದಕ್ಕಿಂತ, 'ಎಷ್ಟು ವೇಗವಾಗಿ ಹೊಸದನ್ನು ಕಲಿಯುತ್ತೇವೆ' ಎನ್ನುವುದು ಮುಖ್ಯ.

ಪರಂ-ಕುಮಾರಸ್ವಾಮಿ ತಾಜ್ ಮೀಟಿಂಗ್ ರಹಸ್ಯವೇನು?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕರ್ನಾಟಕ ಸರಕಾರದ ಲೋಕೋಪಯೋಗಿ ಖಾತೆ ಸಚಿವ ಸತೀಶ್ ಜಾರಕಿಹೊಳಿ ನೇತೃತ್ವದ ನಿಯೋಗವು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕಳೆದ ವಾರ ಭೇಟಿ ಮಾಡಿದೆ. ಈ ಸಂದರ್ಭದಲ್ಲಿ ಸಿಎಂ ಹುದ್ದೆಯ ವಿಷಯದಲ್ಲಿ ನಡೆಯುತ್ತಿರುವ ಹಗ್ಗ ಜಗ್ಗಾಟವೂ ಸೇರಿದಂತೆ ಹಲವು ವಿಷಯಗಳ ಬಗ್ಗೆ ಅದು ಪ್ರಸ್ತಾಪಿಸಿದೆ.

ಅಂದ ಹಾಗೆ, ''ಸಿಎಂ ಹುದ್ದೆಯ ವಿಷಯದಲ್ಲಿ ನಡೆಯುತ್ತಿರುವ ಹಗ್ಗ ಜಗ್ಗಾಟದಿಂದ ಆಡಳಿತ ಯಂತ್ರದ ಮೇಲೆ ಪ್ರತಿಕೂಲ ಪರಿಣಾಮವಾಗಿದೆ. ಹೀಗಾಗಿ ಮೊದಲು ಈ ವಿಷಯದಲ್ಲಿ ಹೈಕಮಾಂಡ್ ಸ್ಪಷ್ಟವಾಗಿ ಮಾತನಾಡಬೇಕು'' ಎಂದು ನಿಯೋಗ ವಿವರಿಸಿದಾಗ, ''ಈ ವಿಷಯದಲ್ಲಿ ಹೈಕಮಾಂಡ್ ಒಂದು ತೀರ್ಮಾನಕ್ಕೆ ಬಂದಿದೆ. ಸದ್ಯದಲ್ಲೇ ಈ ಕುರಿತು ಮಾತನಾಡಲಿದೆ'' ಅಂತ ಖರ್ಗೆ ಹೇಳಿದ್ದಾರೆ.

ಕುತೂಹಲದ ಸಂಗತಿ ಎಂದರೆ ಸತೀಶ್ ಜಾರಕಿಹೊಳಿ ನೇತೃತ್ವದ ನಿಯೋಗ ಖರ್ಗೆಯವರನ್ನು ಭೇಟಿ ಮಾಡಿ ಬಂದ ನಂತರ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಪಾಳಯಗಳಿಗೆ ವ್ಯತಿರಿಕ್ತ ಸಂದೇಶ ರವಾನೆಯಾಗಿದೆ. ಅದರ ಪ್ರಕಾರ, ಕರ್ನಾಟಕದಲ್ಲಿ ಅಧಿಕಾರ ಹಂಚಿಕೆಗಾಗಿ ನಡೆಯುತ್ತಿರುವ ಕದನವು ಏಪ್ರಿಲ್ ಶುರುವಿನಲ್ಲಿ ಬಗೆಹರಿಯಲಿದ್ದು ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟುಕೊಡಲಿದ್ದಾರೆ ಎಂಬ ಮಾತು ಡಿಕೆಶಿ ಪಾಳಯದಿಂದ ಕೇಳಿಬರುತ್ತಿದೆ.

ಅಂದ ಹಾಗೆ, ಮಾರ್ಚ್ 6ರಿಂದ ಬಜೆಟ್ ಅಧಿವೇಶನ ಆರಂಭವಾಗಲಿದ್ದು, ಬಜೆಟ್‌ಗೆ ಅನುಮೋದನೆ ದೊರೆಯುವ ತನಕ ಸಿದ್ದರಾಮಯ್ಯ ಅವರನ್ನು ಬದಲಿಸುವುದು ಹೈಕಮಾಂಡ್‌ಗೂ ಕಷ್ಟ. ಹೀಗಾಗಿ ಬಜೆಟ್‌ಗೆ ವಿಧಾನಮಂಡಲದಲ್ಲಿ ಅನುಮೋದನೆ ಪಡೆದ ನಂತರ ಸಿದ್ದರಾಮಯ್ಯ ತಮ್ಮ ರಾಜೀನಾಮೆ ನಿರ್ಧಾರವನ್ನು ಪ್ರಕಟಿಸಲಿದ್ದಾರೆ. ಹೀಗಾಗಿ ಈಗಲೇ ಅಧಿಕಾರ ಬಿಟ್ಟು ಕೊಡಬೇಕು ಅಂತ ರಚ್ ಮಾಡಿಕೊಳ್ಳುವುದು ಡಿ.ಕೆ.ಶಿವಕುಮಾರ್ ಅವರಿಗೂ ಬೇಕಾಗಿಲ್ಲ. ಆದ್ದರಿಂದ ಅಲ್ಲಿಯವರೆಗೆ ಕಾಯಲು ಅವರು ನಿರ್ಧರಿಸಿದ್ದಾರೆ.

ಇವತ್ತು ಕರ್ನಾಟಕದಲ್ಲಿ ನಡೆಯುತ್ತಿರುವ ಅಧಿಕಾರ ಹಂಚಿಕೆ ಸಂಘರ್ಷವನ್ನು ಪರಿಹರಿಸಲು ಹೈಕಮಾಂಡ್ ಒಂದು ತೀರ್ಮಾನಕ್ಕೆ ಬಂದಿದೆ ಎಂದು ಖರ್ಗೆಯವರು ಹೇಳಿರುವುದರ ಅರ್ಥ ಇಷ್ಟೇ ಎಂಬುದು ಡಿಕೆಶಿ ಪಾಳಯದ ಮಾತು.

ಹೀಗೆ ಸತೀಶ್ ಜಾರಕಿಹೊಳಿ ನೇತೃತ್ವದ ನಿಯೋಗ ದಿಲ್ಲಿಗೆ ಹೋಗಿ ಬಂದ ನಂತರ ಡಿ.ಕೆ.ಶಿವಕುಮಾರ್ ಅವರ ಪಾಳಯಕ್ಕೆ ಒಂದು ಬಗೆಯ ಸಂದೇಶ ರವಾನೆಯಾಗಿದ್ದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾಳಯಕ್ಕೆ ಮತ್ತೊಂದು ಬಗೆಯ ಸಂದೇಶ ರವಾನೆಯಾಗಿದೆ. ಅದರ ಪ್ರಕಾರ, ಪಕ್ಷದ ವರಿಷ್ಠರು ಸದ್ಯದಲ್ಲೇ ಡಿ.ಕೆ.ಶಿವಕುಮಾರ್ ಅವರಿಗೆ ಸ್ಪಷ್ಟ ಸಂದೇಶ ನೀಡಲಿದ್ದಾರಲ್ಲದೆ, ಜೂನ್ ತಿಂಗಳ ತನಕ ಈ ವಿಷಯದಲ್ಲಿ ಏನೂ ಮಾತನಾಡುವಂತಿಲ್ಲ ಎಂದು ಹೇಳಲಿದ್ದಾರೆ. ಕಾರಣ? ಮಾರ್ಚ್ ತಿಂಗಳಲ್ಲಿ ಬಜೆಟ್ ಅಧಿವೇಶನ ಇದ್ದರೆ, ಏಪ್ರಿಲ್-ಮೇ ತಿಂಗಳಲ್ಲಿ ಐದು ರಾಜ್ಯಗಳ ವಿಧಾನಸಭೆಗೆ ಚುನಾವಣೆ ನಡೆಯಲಿದೆ. ಇದಾದ ನಂತರ ಜೂನ್ ಹೊತ್ತಿಗೆ ಕರ್ನಾಟಕ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಮತ್ತು ವಿಧಾನಪರಿಷತ್ತಿನ ಹಲವು ಸ್ಥಾನಗಳಿಗೆ ಚುನಾವಣೆ ನಡೆಯಲಿದೆ.

ಇಂಥ ಸಂದರ್ಭದಲ್ಲಿ ನಾಯಕತ್ವ ಬದಲಾವಣೆಯ ಬಗ್ಗೆ ಮಾತನಾಡಿದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ. ಹೀಗಾಗಿ ಜೂನ್‌ವರೆಗೆ ನಾಯಕತ್ವದ ವಿಚಾರ ಚರ್ಚೆಗೆ ಬರಬಾರದು ಎಂದು ವರಿಷ್ಠರು ಡಿಕೆಶಿ ಅವರಿಗೆ ಹೇಳಲಿದ್ದಾರೆ ಎಂಬುದು ಸಿದ್ದು ಪಾಳಯದ ಮಾತು. ಅರ್ಥಾತ್, ಕಳೆದ ಹಲವು ತಿಂಗಳುಗಳಿಂದ ನಡೆಯುತ್ತಿರುವ ಅಧಿಕಾರ ಹಂಚಿಕೆಯ ಜಗ್ಗಾಟಕ್ಕೆ ಬ್ರೇಕ್ ಬೀಳಲಿದೆ ಎಂಬುದು ಸಿದ್ದರಾಮಯ್ಯ ಪಾಳಯದ ವಿಶ್ವಾಸ. ಗಮನಿಸಬೇಕಾದ ಸಂಗತಿ ಎಂದರೆ ಖರ್ಗೆಯವರ ಮಾತಿನ ನಂತರ ಸಿದ್ದು-ಡಿಕೆಶಿ ಬಣಗಳಲ್ಲಿ ಕಾಣಿಸಿಕೊಂಡಿರುವ ನಂಬಿಕೆ ಎಷ್ಟು ದೃಢವಾಗಿದೆ ಎಂದರೆ ತಮ್ಮ ನಂಬಿಕೆಗೆ ವಿರುದ್ಧವಾಗಿ ಏನೂ ನಡೆಯುವುದಿಲ್ಲ ಎಂಬ ಆತ್ಮವಿಶ್ವಾಸ ವ್ಯಕ್ತವಾಗುತ್ತಿದೆ.

ಆಪ್ತ ಸಚಿವರ ಖಡಕ್ ಸಂದೇಶ?

ಅಂದ ಹಾಗೆ, ಸತೀಶ್ ಜಾರಕಿಹೊಳಿ ನೇತೃತ್ವದ ನಿಯೋಗವು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರನ್ನು ಭೇಟಿ ಮಾಡಿದ ನಂತರ ಉಭಯ ಬಣಗಳಲ್ಲಿ ಕಾಣಿಸಿಕೊಂಡ ವಿಶ್ವಾ

ಸದ ಕತೆ ಒಂದೆಡೆಯಾದರೆ, ಮತ್ತೊಂದೆಡೆ ಸಿದ್ದರಾಮಯ್ಯ ಅವರ ಪರಮಾಪ್ತರು ಹೈಕಮಾಂಡ್ ವರಿಷ್ಠರಿಗೆ ಖಡಕ್ಕಾದ ಸಂದೇಶಗಳನ್ನು ರವಾನಿಸುತ್ತಲೇ ಇದ್ದಾರೆ. ಅವರ ಪ್ರಕಾರ, ಸಿದ್ದರಾಮಯ್ಯ ಅವರನ್ನು ಸಿಎಂ ಹುದ್ದೆಯಿಂದ ಇಳಿಸಿದರೆ ಸರಕಾರ ಉರುಳುವುದು ಖಂಡಿತ. ಇವತ್ತು ಕರ್ನಾಟಕದ ನೆಲೆಯಲ್ಲಿ ಕಾಂಗ್ರೆಸ್ ಪಕ್ಷಕ್ಕಿರುವ ಜನನಾಯಕರೆಂದರೆ ಸಿದ್ದರಾಮಯ್ಯ ಅವರು ಮಾತ್ರ. ಇವತ್ತು ಸಿದ್ದರಾಮಯ್ಯ ಅವರಿಗೆ ತಮ್ಮದೇ ಸಮುದಾಯದ ಸಾಲಿಡ್ಡು ಬೆಂಬಲವಿದೆ. ಅಹಿಂದ ವರ್ಗಗಳ ಶಕ್ತಿ ಇದೆ. ಹೀಗೆ ತಮ್ಮ ಸಮುದಾಯ ಮತ್ತು ಪವರ್‌ಫುಲ್ ಮತಬ್ಯಾಂಕಿನ ಬೆಂಬಲ ಹೊಂದಿರುವ ಮತ್ತೊಬ್ಬ ನಾಯಕರು ಕಾಂಗ್ರೆಸ್ ಪಕ್ಷದಲ್ಲಿಲ್ಲ, ಇವತ್ತು ನಾವು ಸೈದ್ಧಾಂತಿಕವಾಗಿ ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರನ್ನು ವಿರೋಧಿಸಬಹುದು. ಆದರೆ ಅವರಿಗೆ ತಮ್ಮ ಸಮುದಾಯದ ಬೆಂಬಲವಿದೆಯಲ್ಲದೆ ನಿರ್ದಿಷ್ಟ ಮತಬ್ಯಾಂಕಿನ ಪವರ್ ಇದೆ. ಹೀಗಾಗಿ ಅವರು ಜನನಾಯಕ. ಇದೇ ರೀತಿ ಬಿಜೆಪಿಯ ಯಡಿಯೂರಪ್ಪನವರಿಗೆ ತಮ್ಮ ಸಮುದಾಯದ ಸಾಲಿಡ್ಡು ಬೆಂಬಲವಿದೆ. ಅದೇ ಕಾಲಕ್ಕೆ ಆರೆಸ್ಸೆಸ್‌ನ ಶಕ್ತಿ ಬೆನ್ನಿಗಿದೆ. ಹೀಗಾಗಿ ಅವರೂ ಜನನಾಯಕ. ಹೀಗೆ ಜನನಾಯಕರಾಗಿರುವವರನ್ನು ಅಧಿಕಾರದಲ್ಲಿದ್ದಾಗ ಅಲುಗಾಡಿಸುವುದು ಕಷ್ಟ. ಹಾಗೇನಾದರೂ ಮಾಡಿದರೆ ಸರಕಾರ ಉರುಳುತ್ತದೆ ಎಂಬ ಅವರ ಸಂದೇಶ ದಿಲ್ಲಿಯ ಕೈ ನಾಯಕರನ್ನು ಕಂಗೆಡಿಸಿದೆ ಮತ್ತು ಇದೇ ಕಾರಣಕ್ಕಾಗಿ ಅವರು ಜೂನ್‌ವರೆಗೆ ಅಧಿಕಾರ ಹಂಚಿಕೆಯ ಮಾತಿಗೆ ಬ್ರೇಕ್ ಹಾಕಲಿದ್ದಾರೆ ಎಂಬುದು ಸಿದ್ದರಾಮಯ್ಯ ಅವರ ಪಾಳಯದ ಮಾತು.

ಡಿಕೆಶಿ ರವಾನಿಸಿದ ಸಂದೇಶ?: ಹೀಗೆ ಸಿದ್ದು ಪಾಳಯದ ಆತ್ಮವಿಶ್ವಾಸಕ್ಕೆ ಒಂದು ಕಾರಣವಿದ್ದರೆ, ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಪಾಳಯಕ್ಕೂ ಒಂದು ಆತ್ಮವಿಶ್ವಾಸವಿದೆ. ಅದರ ಪ್ರಕಾರ, ಕೆಲ ತಿಂಗಳ ಹಿಂದೆ ಡಿ.ಕೆ.ಶಿವಕುಮಾರ್ ಅವರಿಗಿದ್ದ ಶಾಸಕ ಬಲ ಈಗ ಗಣನೀಯವಾಗಿ ಏರಿಕೆಯಾಗಿದೆ. ಅಷ್ಟೇ ಅಲ್ಲ, ಸನ್ನಿವೇಶ ಎದುರಾದರೆ ಪ್ರತಿಪಕ್ಷಗಳ ಪಾಳಯದಿಂದ ಹದಿನೈದರಷ್ಟು ಮಂದಿ ಶಾಸಕರು ಡಿಕೆಶಿ ಜತೆ ಕೈ ಜೋಡಿಸಲು ತಯಾರಿದ್ದಾರೆ. ಹೀಗೆ ಸ್ವಪಕ್ಷದ ಶಾಸಕರ ಬಲವನ್ನು ಹಿಗ್ಗಿಸಿಕೊಳ್ಳುತ್ತಾ ನಡೆದಿರುವ ಡಿಕೆಶಿ, ಅದೇ ಕಾಲಕ್ಕೆ ವಿಪಕ್ಷಗಳ ಕೋಟೆಗೂ ಲಗ್ಗೆ ಹಾಕುತ್ತಾ ಪವರ್‌ಫುಲ್ಲಾಗಿದ್ದಾರೆ ಎಂಬುದು ವರಿಷ್ಠರಿಗೆ ಮನವರಿಕೆಯಾಗಿದೆ. ಈ ಅಂಶವನ್ನೇ ಮುಂದಿಟ್ಟುಕೊಂಡು ಪ್ರಿಯಾಂಕಾ ಗಾಂಧಿಯವರು ತಮ್ಮ ಸಹೋದರ ರಾಹುಲ್ ಗಾಂಧಿಯವರಿಗೆ ಕನ್ವಿನ್ಸು ಮಾಡಿದ್ದು, ರಾಹುಲ್ ಗಾಂಧಿಯವರಿಗೂ ಇದು ಹೌದೆನ್ನಿಸಿದೆ. ಹೀಗಾಗಿ ಅವರು ಸಿದ್ದರಾಮಯ್ಯ ಅವರನ್ನು ದಿಲ್ಲಿಗೆ ಕರೆಸಿ ಪಟ್ಟ ಬಿಟ್ಟು ಕೊಡುವಂತೆ ಸೂಚಿಸಲಿದ್ದಾರೆ. ಆ ಮೂಲಕ ಏಪ್ರಿಲ್ ಶುರುವಿನಲ್ಲಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಡಿಕೆಶಿ ಪಾಳಯ ಹೇಳುತ್ತಿದೆ.

ಪರಮೇಶ್ವರ ಚರಿತೆ ಆರಂಭವಾಗಲಿದೆ: ಈ ಮಧ್ಯೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಜೆಡಿಎಸ್ ನಾಯಕ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿದ ಬೆಳವಣಿಗೆ ರಾಜಕೀಯ ವಲಯಗಳಲ್ಲಿ ಸಂಚಲನ ಮೂಡಿಸಿದೆ. ಬೆಂಗಳೂರಿನ ತಾರಾ ಹೋಟೆಲ್ ಒಂದರಲ್ಲಿ ಕಳೆದ ಶನಿವಾರ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿದ ಪರಮೇಶ್ವರ್ 45 ನಿಮಿಷಗಳ ಕಾಲ ರಹಸ್ಯವಾಗಿ ಚರ್ಚಿಸಿದ್ದು ಕೈ ಪಾಳಯದಲ್ಲಿ ಸಂಭವಿಸಲಿರುವ ಅಪಾಯದ ಮುನ್ಸೂಚನೆ ಎಂಬುದು ಮೂಲಗಳ ಅಭಿಪ್ರಾಯ.

ಅಂದ ಹಾಗೆ, ಇವತ್ತು ಸಿಎಂ ಆಗಿರುವ ಸಿದ್ದರಾಮಯ್ಯ ಮತ್ತು ಸಿಎಂ ಹುದ್ದೆ ನನಗೆ ಬೇಕೇ ಬೇಕು ಎಂದು ಪಟ್ಟು ಹಿಡಿದಿರುವ ಡಿಕೆಶಿ ಅವರು ನೇರವಾಗಿ ಕುಮಾರಸ್ವಾಮಿ ಅವರ ವಿರೋಧಿಗಳು. ಇದು ಗೊತ್ತಿದ್ದ ಮೇಲೂ ಕುಮಾರಸ್ವಾಮಿ ಅವರನ್ನು ಪರಮೇಶ್ವರ್ ಭೇಟಿಯಾಗುತ್ತಾರೆ ಎಂದರೆ ನಿರ್ದಿಷ್ಟ ಸಹಾಯವನ್ನು ಅವರು ಕೋರಿದ್ದಾರೆ ಅಂತಲೇ ಅರ್ಥ. ಈ ಸಹಾಯದ ಸ್ವರೂಪ ಏನು? ಎಂಬುದೇ ಸದ್ಯದ ಕುತೂಹಲ.

ಅಂದ ಹಾಗೆ, ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಸಂಘರ್ಷ ತಾರಕಕ್ಕೇರಿ ಸರಕಾರಕ್ಕೆ ಅಪಾಯ ಎದುರಾಗುವ ಲಕ್ಷಣ ಕಂಡರೆ, ಸಿಎಂ ಆಗಿ ಎಮರ್ಜ್ ಆಗಲು ಪರಮೇಶ್ವರ್ ಮುಂದಾಗುವುದು ಗ್ಯಾರಂಟಿ. ಹೀಗಾಗಿ ಅಂಥ ಅಪಾಯದ ಸನ್ನಿವೇಶದಲ್ಲಿ ಜೆಡಿಎಸ್ ಶಾಸಕರ ಬೆಂಬಲ ತಮಗಿರಲಿ ಅಂತ ಪರಮೇಶ್ವರ್ ಅವರು ಕುಮಾರಸ್ವಾಮಿ ಅವರನ್ನು ಕೋರಿದರೇ? ಗೊತ್ತಿಲ್ಲ. ಆದರೆ ಹಾಗೆ ಕೋರಿದರೂ ಕುಮಾರಸ್ವಾಮಿ ಅವರು ಪರಮೇಶ್ವರ್‌ರ ಬೆಂಬಲಕ್ಕೆ ನಿಲ್ಲಲು ಸಾಧ್ಯವಿಲ್ಲ, ಯಾಕೆಂದರೆ ಬಿಜೆಪಿ ಜತೆಗಿನ ಮೈತ್ರಿ ಗಟ್ಟಿಯಾಗಿರುವಾಗ, ಪರಮೇಶ್ವರ್ ಅವರಿಗೆ ಜೆಡಿಎಸ್ ಶಾಸಕರು ಬೆಂಬಲ ನೀಡುವುದು ಅಸಾಧ್ಯ.

ಹೀಗಾಗಿ ಕುಮಾರಸ್ವಾಮಿ-ಪರಮೇಶ್ವರ್ ಅವರ ಮಧ್ಯೆ ಈ ವಿಷಯದಲ್ಲಿ ಯಾವುದೇ ಒಪ್ಪಂದವಾಗಿರಲು ಸಾಧ್ಯವಿಲ್ಲ. ಆದರೆ ಕಾಂಗ್ರೆಸ್‌ನಲ್ಲಿನ ಬಣ ಸಂಘರ್ಷ ತಾರಕಕ್ಕೇರಿದ ಸಂದರ್ಭದಲ್ಲಿ ಬಿಜೆಪಿಯ ಟಾಪ್ ಲೀಡರುಗಳು ಫೀಲ್ಡಿಗೆ ಎಂಟ್ರಿ ಆಗಬಹುದು. ಹಾಗೇನಾದರೂ ಅವರು ಎಂಟ್ರಿಯಾದರೆ ಸರಕಾರ ಅಲುಗಾಡಬಹುದು. ಆ ಸಂದರ್ಭದಲ್ಲಿ ಸರಕಾರಕ್ಕೆ ಅಪಾಯವಾಗದಂತೆ ಶಾಸಕ ಬಲವನ್ನು ಹಿಡಿದಿಟ್ಟುಕೊಳ್ಳುವವರು ಬೇಕು. ಹೀಗಾಗಿ ಅಂಥ ಸನ್ನಿವೇಶ ಎದುರಾದರೆ ತಮಗೆ ಬಿಜೆಪಿಯ ಟಾಪ್ ಲೀಡರುಗಳಿಂದ ತೊಂದರೆಯಾಗದಂತೆ ನೋಡಿಕೊಳ್ಳಿ ಅಂತ ಪರಮೇಶ್ವರ್ ಅವರು ಕುಮಾರಸ್ವಾಮಿ ಅವರನ್ನು ಕೋರಿರುವ ಸಾಧ್ಯತೆ ಹೆಚ್ಚು.

ಹಾಗೊಂದು ವೇಳೆ ಈ ವಿಷಯದಲ್ಲಿ ಕುಮಾರಸ್ವಾಮಿ ಅವರು ನೆರವು ನೀಡಿದರೆ, ಬಿಜೆಪಿ ಸುಪ್ರಿಮೋಗಳಿಂದ ಅಪಾಯವಾಗದಂತೆ ನೋಡಿಕೊಂಡರೆ ಬಿಜೆಪಿ-ಜೆಡಿಎಸ್ ಮಿತ್ರಕೂಟದ ಬಗ್ಗೆ ಒಂದು ಪಾಸಿಟಿವ್ ಸಂದೇಶ ರವಾನೆಯಾಗುತ್ತದೆ. ಕರ್ನಾಟಕದಲ್ಲಿ ದಲಿತ ಸಮುದಾಯದ ನಾಯಕರೊಬ್ಬರು ಮುಖ್ಯಮಂತ್ರಿಯಾಗಲು ನೆರವು ಕೊಟ್ಟ ಖ್ಯಾತಿ ದಕ್ಕುತ್ತದೆ. ಹಾಗಾಗುತ್ತದಾ? ಗೊತ್ತಿಲ್ಲ. ಆದರೆ ಪರಮೇಶ್ವರ್ ಅವರು ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ನಡೆಸಿದ ಚರ್ಚೆ ಇಂಥ ಸಾಧ್ಯತೆಗಳನ್ನು ಎತ್ತಿ ತೋರಿಸುತ್ತಿರುವುದು ಮಾತ್ರ ನಿಜ.

ಗೌಡರ ನಡೆ ರಾಜ್ಯಸಭೆ ಕಡೆ?: ಈ ಮಧ್ಯೆ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡರು ರಾಜ್ಯಸಭೆ ಪ್ರವೇಶಿಸುವ ಗಳಿಗೆ ಹತ್ತಿರವಾಗುತ್ತಿದೆ. ಬಿಜೆಪಿ ಮೂಲಗಳ ಪ್ರಕಾರ, ಜೂನ್ ತಿಂಗಳಲ್ಲಿ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಸದಾನಂದಗೌಡರು ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ. ವಿಧಾನಸಭೆಯ ಬಲಾಬಲಗಳ ಪ್ರಕಾರ, ಆಡಳಿತಾರೂಢ ಕಾಂಗ್ರೆಸ್ ಮೂರು ಸ್ಥಾನಗಳಲ್ಲಿ ಗೆಲುವು ಗಳಿಸುವ ಶಕ್ತಿ ಹೊಂದಿದ್ದು, ಬಿಜೆಪಿ ಒಂದು ಸ್ಥಾನ ಗೆಲ್ಲುವ ಶಕ್ತಿ ಹೊಂದಿದೆ.

ಅಂದ ಹಾಗೆ, ಸದಾನಂದಗೌಡರು ರಾಜ್ಯಸಭೆ ಪ್ರವೇಶಿಸುವ ವಿಷಯದಲ್ಲಿ ಬಿಜೆಪಿ ಹೈಕಮಾಂಡ್‌ಗಾಗಲೀ, ಮಾಜಿ ಸಿಎಂ ಯಡಿಯೂರಪ್ಪ ಅವರಿಗಾಗಲೀ ತಕರಾರು ಇಲ್ಲ, ಎಷ್ಟೇ ಆದರೂ ಮುಖ್ಯಮಂತ್ರಿಯಾದ ನಾಯಕ. ಅವರು ಹಾಗೇ ಕೂರುವುದು ವರಿಷ್ಠರಿಗೆ ಬೇಕಿಲ್ಲ. ಇನ್ನು ಸಿಎಂ ಹುದ್ದೆಯಿಂದ ಕೆಳಗಿಳಿದ ನಂತರ ಯಡಿಯೂರಪ್ಪ ಅವರ ವಿರುದ್ಧ ಸದಾನಂದಗೌಡರು ಮುನಿಸಿಕೊಂಡಿದ್ದರಾದರೂ ಈಗ ಆ ಮುನಿಸು ಅವರಲ್ಲಿ ಉಳಿದುಕೊಂಡಿಲ್ಲ. ಹೀಗಾಗಿ ಅವರು ಯಡಿಯೂರಪ್ಪ ಅವರ ಪುತ್ರ, ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಸಲಹೆ ಕೊಡುತ್ತಾ, ಕರ್ನಾಟಕದ ನೆಲೆಯಲ್ಲಿ ಪಕ್ಷಕ್ಕೆ ಯಡಿಯೂರಪ್ಪ ಎಷ್ಟು ಅನಿವಾರ್ಯ ಅಂತ ವರಿಷ್ಠರಿಗೆ ಸಿಗ್ನಲ್ಲು ಕೊಡುತ್ತಾ ಸಂಘಟನೆಗೆ ಶಕ್ತಿ ತುಂಬುವ ಕೆಲಸ ಮಾಡುತ್ತಿದ್ದಾರೆ.

ಇಂಥ ಸದಾನಂದಗೌಡರನ್ನು ರಾಜ್ಯಸಭೆಗೆ ಕಳಿಸುವ ವಿಷಯದಲ್ಲಿ ಈಗ ಯಾರ ತಕರಾರೂ ಇಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಸದಾನಂದಗೌಡರು ಕರಾವಳಿ ಕರ್ನಾಟಕ ಭಾಗಕ್ಕೆ ಸೇರಿದವರಾದ್ದರಿಂದ, ಅವರಿಗೆ ಅವಕಾಶ ನೀಡುವುದು ಆ ಭಾಗಕ್ಕೆ ನೀಡುವ ಆದ್ಯತೆ ಎಂಬುದು ಎಲ್ಲರ ಲೆಕ್ಕಾಚಾರ. ಎಷ್ಟೇ ಆದರೂ ಕರಾವಳಿ ಕರ್ನಾಟಕ ಎಂದರೆ ರಾಜ್ಯ ಬಿಜೆಪಿಯ ಪಾಲಿಗೆ ಪಿಲ್ಲರ್ ಏರಿಯಾ. ಹೀಗಾಗಿ ಗೌಡರ ನಡೆ ರಾಜ್ಯಸಭೆಯ ಕಡೆ ಎಂಬುದು ದಿನ ಕಳೆದಂತೆ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ.

ಎಐ ಯುಗ: ಅವಕಾಶಗಳು, ಸವಾಲುಗಳು ಮತ್ತು ಭಾರತದ ಪಾತ್ರ

ಸ್ವಯಂಪ್ರಕಾಶ

ಪ್ರಕಾಶ ಹೆಗಡೆ
vveditoped@gmail.com

ಚರ್ಮ ಕುಟೀರದ ಶ್ರಮಿಕ ಬೂಟ್ ಪಾಲಿಷ್ ಮಾಡುತ್ತ ಕೇಳಿದ- ''ಎಐನಿಂದ ನನ್ನ ಮಗನ ಕೆಲಸಕ್ಕೇನಾದರೂ ತೊಂದರೆಯಾಗುತ್ತಾ ಸರ್?''.

ಸುಕ್ಕುಗಟ್ಟಿದ ಮುಖದಲ್ಲಿ ಆತಂಕದ ಗೆರೆಗಳಿದ್ದವು. ಅವನ ಮಗ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಎಂಜಿನಿಯರ್. ಆ ಶ್ರಮಿಕನಿಗೆ ಸಂದರ್ಭಕ್ಕನುಗುಣವಾಗಿ ಸಮಾಧಾನಕರ ಉತ್ತರ ಕೊಟ್ಟು ಹೊರಟೆನಾದರೂ, ಕೃತಕ ಬುದ್ಧಿಮತ್ತೆಯ (ಎಐ) 'ಮಿಥ್' ಅಥವಾ ಜಿಜ್ಞಾಸೆಯ ಕುರಿತಾಗಿ ಸಾಮಾನ್ಯರಿಗೆ ಅದಷ್ಟು ಸರಳವಾಗಿ ತಿಳಿಸುವ ಪ್ರಯತ್ನ ಮಾಡಬೇಕೆನಿಸಿತು.

ಈಗ ಪ್ರತಿಯೊಂದು ಮೀಡಿಯಾಗಳಲ್ಲೂ ಹಾಗೂ ಸಾರ್ವಜನಿಕ ಸಂಭಾಷಣೆಗಳಲ್ಲೂ ಚರ್ಚೆಯಾಗುತ್ತಿರುವ ಕೇಂದ್ರೀಕೃತ ವಿಷಯವೆಂದರೆ ಕೃತಕ ಬುದ್ಧಿಮತ್ತೆಯೆಂಬ ಪೆಡಂಭೂತ. ಬಹುಜನರ ತಿಳಿವಳಿಕೆಯಲ್ಲಿ ಇದು ದೆವ್ವವಾದರೆ, ತಿಳಿದವರಲ್ಲಿ ಇದು ದೇವತೆ. ಅಂಥ ತಿಳಿದವರಲ್ಲಿ ದಿಗ್ಗಜರೆನಿಸಿದ ಟಾಟಾ ಸನ್ಸ್‌ನ ಅಧ್ಯಕ್ಷರಾದ ನಟರಾಜನ್ ಚಂದ್ರಶೇಖರನ್, ಎಐ ಕುರಿತು ಇತ್ತೀಚೆಗೆ ನಡೆದ ಚರ್ಚೆಯೊಂದರಲ್ಲಿ ಸರಳವಾಗಿ ವಿವರಿಸುತ್ತಾ, ''ಎಐ ಒಂದು ಮೂಲಭೂತ ನಾಗರಿಕ ಹಾಗೂ ಮೂಲಸೌಕರ್ಯಾತ್ಮಕ ಬುದ್ಧಿಮತ್ತೆಯ ಬದಲಾವಣೆ. ವಿಜ್ಞಾನದ ಇತಿಹಾಸದಲ್ಲಿ ಸ್ಟೀಮ್ ಎಂಜಿನ್, ವಿದ್ಯುತ್ ಮತ್ತು ಇಂಟರ್ನೆಟ್‌ನಂಥ ಮೂಲಸೌಕರ್ಯ ಬದಲಾವಣೆಗಳು ಜಾಗತಿಕ ಅಭಿವೃದ್ಧಿಯನ್ನು ವೇಗಗೊಳಿಸಿದಂತೆ, ಎಐ ಕೂಡ ಅಂಥದೇ ಕ್ರಾಂತಿಯನ್ನು ಸೃಷ್ಟಿಸಲಿದೆ; ಎಐ ಸಹಾಯದಿಂದ ಕಡಿಮೆ ಸಮಯದಲ್ಲಿ ಕಡಿಮೆ ಖರ್ಚಿನಲ್ಲಿ ಅಗಾಧ ಗಾತ್ರದ ಕೆಲಸಗಳನ್ನು ಮಾಡುವುದು ಸಾಧ್ಯವಾಗುತ್ತಿದ್ದು, ಇದು ಉತ್ಪಾದಕತೆಯನ್ನು ಗಣನೀಯವಾಗಿ ಹೆಚ್ಚಿಸುತ್ತದೆ'' ಎಂದು ಅಭಿಪ್ರಾಯಪಟ್ಟರು.

ಇನ್ನು ತಾಂತ್ರಿಕವಾಗಿ ಹೇಳಬೇಕೆಂದರೆ ಕೃತಕ ಬುದ್ಧಿಮತ್ತೆಯು ಮಾನವನಂತೆ ಯೋಚಿಸಲು, ಕಲಿಯಲು ಮತ್ತು ತೀರ್ಮಾನ ತೆಗೆದುಕೊಳ್ಳಲು ಯಂತ್ರಗಳಿಗೆ ಸಾಮರ್ಥ್ಯ ನೀಡುವ ತಂತ್ರಜ್ಞಾನ. ಈ ತಂತ್ರಜ್ಞಾನದಲ್ಲಿ ಯಂತ್ರಗಳು ತಮ್ಮಲ್ಲಿರುವ ಮಾಹಿತಿಯಿಂದ ಕಲಿತು, ಅನುಭವದ ಆಧಾರದ ಮೇಲೆ ತಮ್ಮ ಕಾರ್ಯಕ್ಷಮತೆಯನ್ನು ಸುಧಾರಿಸುತ್ತ ಬೆಳೆಯುತ್ತವೆ. ಕೃತಕ ಬುದ್ಧಿಮತ್ತೆಯನ್ನು ಎಲ್ಲಾ ಕ್ಷೇತ್ರಗಳಲ್ಲೂ ವ್ಯಾಪಕವಾಗಿ ಬಳಸಲಾಗುತ್ತಿದೆ.

ಕೃತಕ ಬುದ್ಧಿಮತ್ತೆಯ ಬಗೆಗೆ ಚರ್ಚಿಸುವ ಮೊದಲು ಅದರ ರಚನಾ ಸ್ವರೂಪವನ್ನು ತಿಳಿದುಕೊಳ್ಳಬೇಕು. ಕೇಕ್‌ನಂತೆಯೇ ಪದರಗಳಿಂದ ನಿರ್ಮಿತವಾಗಿರುವ ಸಂಕೀರ್ಣ ವ್ಯವಸ್ಥೆಯಿದು. ಕೆಳಗೆ ತಿಳಿಸಿರುವ ಪದರಗಳು ಒಂದಕ್ಕೊಂದು ಅವಲಂಬಿತವಾಗಿದ್ದು ಪರಿಣಾಮಕಾರಿಯಾಗಿರಲು ಒಟ್ಟಾಗಿ ಕಾರ್ಯನಿರ್ವಹಿಸಬೇಕು:

- ಅಡಿಪಾಯ/ಇಂಧನ ಪದರ: ಡೇಟಾ ಕೇಂದ್ರಗಳು ಕಾರ್ಯನಿರ್ವಹಿಸಲು ಅಗತ್ಯವಿರುವ ಅಪಾರ ವಿದ್ಯುತ್ ಮತ್ತು ಶಕ್ತಿಯ ಅವಶ್ಯಕತೆಯನ್ನು ಪ್ರತಿನಿಧಿಸುತ್ತದೆ.
- ಗಣನಾ ಮೂಲಸೌಕರ್ಯ: ತರಬೇತಿ ಮತ್ತು ನಿರ್ವಹಣೆಗೆ ಅಗತ್ಯವಾದ ಕಚ್ಚಾ ಗಣನಾ ಶಕ್ತಿಯನ್ನು ಒದಗಿಸುವ ವಿಶೇಷ ಪ್ರೊಸೆಸರ್‌ಗಳು (ಎನ್ವಿಡಿಯಾ ಕಂಪನಿಯ ಜಿಪಿಯು) ಹಾಗೂ ಡೇಟಾವನ್ನು ವೇಗವಾಗಿ ವಿನಿಮಯಗೊಳಿಸಲು ಅಗತ್ಯವಾದ ನೆಟ್‌ವರ್ಕಿಂಗ್ ಉಪಕರಣಗಳಿರುವ ಹಾರ್ಡ್‌ವೇರ್ ಪದರವಿದು.
- ಡೇಟಾ ಕೇಂದ್ರಗಳು: ಕಾರ್ಖಾನೆಯೆನ್ನಬಹುದಾದ ಪದರವು ಡೇಟಾವನ್ನು ಸಂಗ್ರಹಿಸುವುದು ಮತ್ತು 'ಎಐ' ಮಾದರಿಗಳಿಗೆ ತರಬೇತಿ ನೀಡುವ ಡೇಟಾ ಕೇಂದ್ರಗಳು ಹಾಗೂ ವರ್ಚುವಲೈಸ್ಡ್ ಕ್ಲೌಡ್ ಪರಿಸರಗಳನ್ನು ಹೊಂದಿರುತ್ತವೆ.
- ಎಐ ಮಾದರಿಗಳು: ಜ್ಞಾನಾತ್ಮಕ ಮಿದುಳು ಎನ್ನಲಾಗುವ ಈ ಪದರದಲ್ಲಿ ಮೂಲಭೂತ ಲಾರ್ಜ್ ಲ್ಯಾಂಗ್ವೇಜ್ ಮಾದರಿಗಳು (ಚಾಟ್ ಜಿಪಿಟಿ), ಪರಿಣಾಮಕಾರಿ, ಸುರಕ್ಷಿತ ಮತ್ತು ನಿಖರವಾಗಿಸುವ ತರಬೇತಿ, ಸೂಕ್ಷ್ಮ ಹೊಂದಾಣಿಕೆಯ ಕಾರ್ಯಾಚರಣೆಗಳನ್ನು ನಡೆಸಲಾಗುತ್ತವೆ.
- ಅನ್ವಯಿಕೆ/ಬಳಕೆ: ಕೇಕ್‌ನ ಐಸಿಂಗ್ ಎನ್ನಬಹುದಾದ ಉತ್ತುಂಗದ ಪದರವು ಬಳಕೆದಾರರೊಂದಿಗೆ ವ್ಯವಹರಿಸುತ್ತದೆ. ಇದರಲ್ಲಿ ಚಾಟ್‌ಬಾಟ್‌ಗಳು/ವರ್ಚುವಲ್ ಅಸಿಸ್ಟೆಂಟ್‌ಗಳು, ಆರೋಗ್ಯ, ಶಿಕ್ಷಣ, ಕೃಷಿ, ಹಣಕಾಸು ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಸಂಬಂಧಿಸಿದ ಪರಿಹಾರಗಳನ್ನು ಒದಗಿಸುತ್ತವೆ.

ತಂತ್ರಜ್ಞಾನದ ಎಲ್ಲಾ ಐದು ಪದರಗಳ ಮೇಲೂ ಗಮನಹರಿಸುವ ಮೂಲಕ ಭಾರತವು ಉನ್ನತ ಮಟ್ಟದ 'ಎಐ'ಗೆ ಸಿದ್ಧ ರಾಷ್ಟ್ರವಾಗಿ ತನ್ನ ಸ್ಥಾನವನ್ನು ಸ್ಥಾಪಿಸಿಕೊಳ್ಳುತ್ತಿದೆ. ಇದರ ಫಲವಾಗಿ, 'ಎಐ' ಸಿದ್ಧತೆಯಲ್ಲಿ ಭಾರತವು ಜಾಗತಿಕ ಮಟ್ಟದಲ್ಲಿ ಅಮೆರಿಕ ಮತ್ತು ಚೀನಾದ ನಂತರ ಮೂರನೇ ಸ್ಥಾನವನ್ನು ಪಡೆದಿದೆ. ಭಾರತದಲ್ಲಿ 'ಎಐ' ಕ್ಷೇತ್ರದಲ್ಲಿ ಭಾರಿ ಹೂಡಿಕೆ ಮಾಡುತ್ತಿರುವ ಕಂಪನಿಗಳಲ್ಲಿ ರಿಲಯನ್ಸ್, ಅದಾನಿ, ಟಾಟಾ, ಇನ್ಫೋಸಿಸ್, ವಿಪ್ರೋ, ಎಲ್ ಆ್ಯಂಡ್ ಟಿ, ಬಾಷ್ ಮತ್ತು ಫ್ರಾಕ್ಟಲ್ ಅನಾಲಿಸಿಸ್ ಪ್ರಮುಖವಾಗಿವೆ. ಈ ಕಂಪನಿಗಳು ಲಕ್ಷಾಂತರ ಕೋಟಿ ಹೂಡಿಕೆಯಿಂದ ಸ್ವದೇಶಿ ಸಾವರಿನ್ 'ಎಐ' ಮೂಲಸೌಕರ್ಯವನ್ನು ನಿರ್ಮಿಸುತ್ತಿವೆ. ಈ ಪ್ರಯತ್ನಗಳಲ್ಲಿ ಡೇಟಾ ಸೆಂಟರ್ ಸಾಮರ್ಥ್ಯ ವಿಸ್ತರಣೆ ಹಾಗೂ ಸ್ಥಳೀಯ ಅಗತ್ಯಗಳಿಗೆ ಹೊಂದುವ 'ಎಐ' ಮಾದರಿಗಳ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗುತ್ತಿದೆ. ವಿದೇಶಿ ಕಂಪನಿಗಳ ಮೇಲಿನ ಅವಲಂಬನೆ ಕಡಿಮೆಮಾಡುವಲ್ಲಿ ಇವು ಯಶಸ್ವಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಇತ್ತೀಚಿನ ದಿನಗಳಲ್ಲಿ ಐಟಿ ವಿಭಾಗದಲ್ಲಿ ಸುನಾಮಿ ಸೃಷ್ಟಿಸಿರುವುದು 'ಎಐ'ನ ಮುಂದಿನ ಆವಿಷ್ಕಾರವಾದ ಆರ್ಟಿಫಿಷಿಯಲ್ ಜನರೇಟಿವ್ ಇಂಟೆಲಿಜೆನ್ಸ್ (ಎಜಿಐ). ಈ ಮುಂದುವರಿದ ತಂತ್ರಜ್ಞಾನವು ಬೃಹತ್ ಪ್ರಮಾಣದ ಡೇಟಾವನ್ನು ವಿಶ್ಲೇಷಿಸಿ ಮಾದರಿಗಳನ್ನು ಗುರುತಿಸಿ, ಮಾನವನ ಸೃಜನಶೀಲತೆಗೆ ಸಮಾನವಾದ ಹೊಸ ವಿಷಯಗಳನ್ನು ಸ್ವತಂತ್ರವಾಗಿ ಉತ್ಪಾದಿಸುತ್ತದೆ. ಅಮೆರಿಕದ ಆಂಥ್ರೊಪಿಕ್ ಸಂಸ್ಥೆ ಬಿಡುಗಡೆ ಮಾಡಿರುವ 'ಕ್ಲಾಡ್' ಅಂಥದೊಂದು ಲಾರ್ಜ್ ಲ್ಯಾಂಗ್ವೇಜ್ ಮಾಡೆಲ್. ಇದನ್ನೇ ಭಾರತದ ಹೆಚ್ಚಿನ ಐಟಿ ಕಂಪನಿಗಳು ಸಾವಿರಾರು ಎಂಜಿನಿಯರ್‌ಗಳ ಮೂಲಕ ಮಾಡುತ್ತಿರುವುದು. ಇನ್ನು ಮುಂದೆ 'ಎಜಿಐ' ಮಾಡೆಲ್‌ಗಳು ಕೆಲವೇ ಕುಶಲಕರ್ಮಿಗಳ ಸಹಾಯದಿಂದ ಹೆಚ್ಚು ಉತ್ಪಾದಕತೆಯನ್ನು ನೀಡುತ್ತವೆ. ಸನ್ ಮೈಕ್ರೋಸಿಸ್ಟಮ್‌ನ ಸಂಸ್ಥಾಪಕರಾದ ರಾಜ್ ಖೋಸ್ಲಾ ಅವರು ದೆಹಲಿಯ ಸಮ್ಮೇಳನದಲ್ಲಿ ಸ್ಫೋಟಕ ಹೇಳಿಕೆ ನೀಡಿ ಸಂಚಲನ ಸೃಷ್ಟಿಸಿದರು: ''ಪ್ರಸಕ್ತ ರೂಪದ ಐಟಿ ಸೇವೆಗಳು 2030ರ ವೇಳೆಗೆ ಸಂಪೂರ್ಣ ಮಾಯವಾಗುತ್ತವೆ. ಭವಿಷ್ಯದಲ್ಲಿ ಐಟಿ/ಬಿಪಿಒ ಸೇವೆಗಳು ನಶಿಸಿಹೋಗುತ್ತವೆ''. ಗೂಗಲ್ ಡೀಪ್ ಮೈಂಡ್‌ನ ಸಿಇಒ ಡೆಮಿಸ್ ಹಸ್ಸಾಬಿಸ್ ಅವರು ಅದೇ ಸಮ್ಮೇಳನದಲ್ಲಿ, ''ಎಜಿಐ ವ್ಯಾಪಕವಾಗಿ ಬಳಕೆಯಾಗಲು ಐದರಿಂದ ಹತ್ತು ವರ್ಷಗಳ ಸಮಯ ಬೇಕು'' ಎಂದಿದ್ದಾರೆ. ಈ ಅವಧಿಯಲ್ಲಿ ಐಟಿ ಕ್ಷೇತ್ರದಲ್ಲಿ ಮಹತ್ವದ ಪ್ರಗತಿ ಸಾಧಿಸಲು ಸಾಕಷ್ಟು ಅವಕಾಶಗಳಿದ್ದು, ಉದ್ಯೋಗಗಳು ನಾಶವಾಗುವುದಕ್ಕಿಂತಲೂ ಹೊಸ ರೂಪಗಳಲ್ಲಿ ಬದಲಾಗುವ ಸಾಧ್ಯತೆ ಹೆಚ್ಚು ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ. ಭಾರತದ ಐಟಿ ಕಂಪನಿಗಳು ತಮ್ಮ ವಿಶಾಲ ಹಾಗೂ ಬುದ್ಧಿವಂತ ಎಂಜಿನಿಯರ್ ವೇದಿಕೆಯನ್ನು ಬಳಸಿ ಜನರೇಟಿವ್ ಐಟಿ ಸೇವೆಗಳತ್ತ ತ್ವರಿತವಾಗಿ ಮರುಹೊಂದಾಣಿಕೆ ಮಾಡಿಕೊಳ್ಳಲು ಆಸ್ಪದವಿರುತ್ತದೆ. 'ಡಿಸ್ರಪ್ಟಿವ್' ಪರಿಸರವಿದ್ದರೂ ಅವುಗಳನ್ನು ಗೆಲ್ಲಲು ವಿಪುಲ ಅವಕಾಶಗಳು ಲಭ್ಯವಿರುತ್ತವೆ. ಇಂಥ ಡಿಸ್ರಪ್ಷನ್ ವಾತಾವರಣ ಸೃಷ್ಟಿಸಿರುವ ಆಂಥ್ರೊಪಿಕ್ ಸಂಸ್ಥೆಯು ಭಾರತದಲ್ಲಿರುವ ಅವಕಾಶಗಳ ಆಗರವನ್ನು ಅರಿತು ಬೆಂಗಳೂರಿನಲ್ಲಿ ತನ್ನ ನೆಲೆಯನ್ನು ವಿಸ್ತರಿಸುವುದಾಗಿ ಸಾರಿದೆ. ಆಂಥ್ರೊಪಿಕ್ ಕಂಪನಿಯ ಬದ್ಧವೈರಿಯಾದ 'ಓಪನ್ ಎಐ' ತಾನು ಕೂಡ ಬೆಂಗಳೂರಿನಲ್ಲಿ 'ಎಐ' ನೆಲೆ ಸ್ಥಾಪಿಸುವುದಾಗಿ ಕೂಡಲೇ ಹೇಳಿದೆ. ಅನೇಕ ಬೃಹತ್ ಎಂಎನ್‌ಸಿಗಳು ಅವಕಾಶಗಳನ್ನು ಬಾಚಿಕೊಳ್ಳಲು ಭಾರತದತ್ತ ಧಾವಿಸುತ್ತಿವೆ. ಬೆಂಬಲವಾಗಿ, ಬ್ಲ್ಯಾಕ್‌ಸ್ಟೋನ್‌ನಂಥ ದೈತ್ಯ ಖಾಸಗಿ ಇಕ್ವಿಟಿ ಹಣಕಾಸು ಸಂಸ್ಥೆಗಳು 'ಎಐ' ಕಂಪನಿಗಳಲ್ಲಿ ಭಾರಿ ಹೂಡಿಕೆಯನ್ನು ಮಾಡಿ 'ಎಐ' ಕಂಪನಿಗಳ ವಿತ್ತದ ಅಂತರದ ಸೇತುವೆಯಾಗುತ್ತಿವೆ. ಮುಂದಿನ ಎರಡು ವರ್ಷಗಳಲ್ಲಿ ಭಾರತದಲ್ಲಿ ಸುಮಾರು ಮುನ್ನೂರು ಬಿಲಿಯನ್ ಡಾಲರ್‌ನಷ್ಟು ಹಣದ ಹೊಳೆಯು 'ಎಐ' ತಂತ್ರಜ್ಞಾನಕ್ಕೆ ಹರಿದುಬರಲಿದೆ.

ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರತಿ ಕ್ಷಣವೂ ಹೊಸ ಆವಿಷ್ಕಾರಗಳಿಂದ ಕ್ರಾಂತಿಯಾಗುತ್ತಲೇ ಇರುತ್ತದೆ. 'ಎಐ' ಮತ್ತು 'ಎಜಿಐ'ನ ನಂತರದ ಮುಂದಿನ ಆವಿಷ್ಕಾರ 'ಏಜೆಂಟಿಕ್ ಎಐ'. ಇಲ್ಲಿ ಡಿಜಿಟಲ್ ಏಜೆಂಟ್‌ಗಳು ಕೇವಲ ಶಿಫಾರಸು ಮಾಡುವುದಲ್ಲ, ಕಾರ್ಯಗಳನ್ನು ಸ್ವಯಂಚಾಲಿತವಾಗಿ ನಿರ್ವಹಿಸುತ್ತವೆ. ಈಗಾಗಲೇ ಈ ನಿಟ್ಟಿನಲ್ಲಿ ವ್ಯಾಪಕ ಪ್ರಾರಂಭಿಕ ಸಂಶೋಧನೆಗಳು ದಾಪುಗಾಲಿಟ್ಟು ಮುನ್ನಡೆಯುತ್ತಿವೆ. ಈ ಹಂತದ ಡಿಸ್ರಪ್ಷನ್‌ಗಳಿಗೂ ಸಿದ್ಧವಾಗಲೇಬೇಕಾಗಿದೆ.

ಸೇಲ್ಸ್‌ಫೋರ್ಸ್ ಕಂಪನಿಯ ಭಾರತದ ಅಧ್ಯಕ್ಷೆ ಮತ್ತು ಸಿಇಒ (ಹಿಂದಿನ ಎಸ್‌ಬಿಐ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಅಧ್ಯಕ್ಷೆ) ಅರುಂಧತಿ ಭಟ್ಟಾಚಾರ್ಯರವರ ಮಾತಿನಂತೆ, 'ಎಐ' ಪ್ರಗತಿಗಳು ಮಾನವಕುಲಕ್ಕೆ ವರದಾನವಾಗಿದೆ. 'ಎಐ' ಕೆಲವು ಸಾಂಪ್ರದಾಯಿಕ ಉದ್ಯೋಗಗಳನ್ನು ಅನಗತ್ಯಗೊಳಿಸಬಹುದು. ಆದರೆ ಸಮಾನಾಂತರವಾಗಿ ಪ್ರಾಂಪ್ಟ್ ಎಂಜಿನಿಯರ್‌ಗಳು, ಮೆಷಿನ್ ಲರ್ನಿಂಗ್ ತಂತ್ರಜ್ಞರು ಮತ್ತು 'ಎಐ' ಅನುಸರಣಾಧಿಕಾರಿಗಳಂಥ ಹೊಸ ಹಾಗೂ ಹೆಚ್ಚಿನ ಮೌಲ್ಯದ ಉದ್ಯೋಗಗಳನ್ನು ಅದು ಸೃಷ್ಟಿಸುತ್ತದೆ. ಸಾಮಾನ್ಯ ಮತ್ತು ಪುನರಾವರ್ತಿತ ಕೆಲಸಗಳನ್ನು ಸ್ವಯಂಚಾಲಿತಗೊಳಿಸುವ ಮೂಲಕ, ಉದ್ಯೋಗಿಗಳು ಭಾವನಾತ್ಮಕ ಬುದ್ಧಿಮತ್ತೆ, ಸೃಜನಶೀಲತೆ ಮತ್ತು ವಿಮರ್ಶಾತ್ಮಕ ಚಿಂತನೆ ಅಗತ್ಯವಿರುವ ಹೆಚ್ಚಿನ ಮೌಲ್ಯದ ಕೆಲಸಗಳಿಗೆ ಗಮನ ಹರಿಸಲು ಸಾಧ್ಯವಾಗುತ್ತದೆ. ಈ ಬದಲಾವಣೆ ಪ್ರಕ್ರಿಯೆಯು ಕೆಲವಷ್ಟು ಕಠಿಣವಾದರೂ, ಅಂತಿಮವಾಗಿ ಹೆಚ್ಚು ಉತ್ಪಾದಕ, ಉತ್ತಮ ಮತ್ತು ಸಮಾವೇಶಿತ ಕೆಲಸದ ವಾತಾವರಣವನ್ನು ನಿರ್ಮಿಸುತ್ತದೆ. 'ಎಐ' ಎಂಬುದು ಮಾನವರನ್ನು ಸಂಪೂರ್ಣವಾಗಿ ಬದಲಿಸುವುದಕ್ಕಿಂತ, ಕೋ-ಪೈಲಟ್ ಆಗಿ ಕಾರ್ಯನಿರ್ವಹಿಸಿ ಮಾನವ ಸಾಮರ್ಥ್ಯವನ್ನು ವೃದ್ಧಿಸುತ್ತದೆ. 'ಎಐ ರಿಟ್ರೀವಲ್ ಆಗ್ಮೆಂಟೆಡ್ ಜನರೇಷನ್' (RAG) ಕೇಂದ್ರಗಳು ತಲೆಎತ್ತಲಿವೆ. 'ಆರ್‌ಎಜಿ'ಗಳು, ನವೀನ ಮತ್ತು ಸಂಬಂಧಿತ ಮಾಹಿತಿಯುಳ್ಳ ಡೇಟಾ ಗ್ರಂಥಾಲಯಗಳು ಅಗತ್ಯವಾಗಿದ್ದು, ಅವುಗಳಿಗೆ ಮಾಹಿತಿಯನ್ನು ಪೂರೈಸುವುದು ಭಾರಿ ಪ್ರಮಾಣದ, ಕಾರ್ಮಿಕಾಧಾರಿತ ಡೇಟಾ ಸಂಗ್ರಹ ಕಾರ್ಯವಾಗಿದೆ. ಈ ಕೇಂದ್ರಗಳು ಬಿಪಿಒಗಳ ಬದಲಾಗಿ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸುವ ಸಾಧ್ಯತೆಯಿದೆ.

ಜಾಗತಿಕ ಮಟ್ಟದಲ್ಲಿ 'ಎಐ' ಶೃಂಗಸಭೆಗಳು ಕಳೆದ ಕೆಲವು ವರ್ಷಗಳಿಂದ ನಡೆಯುತ್ತಿವೆ. ಹಿಂದಿನ ವರ್ಷ ಪ್ಯಾರಿಸ್‌ನಲ್ಲಿ ಇಂಥ ಸಭೆಯನ್ನು ನಡೆಸಲಾಗಿತ್ತು. ಮುಂದಿನ ಆವೃತ್ತಿ ಎನ್ನಬಹುದಾದ, ಇದೀಗ ದೆಹಲಿಯಲ್ಲಿ ಸಂಪನ್ನಗೊಂಡ 'ಎಐ' ಶೃಂಗಸಭೆಗೆ ಐದು ಲಕ್ಷಕ್ಕೂ ಹೆಚ್ಚು ಉತ್ಸುಕರು ಭೇಟಿಯಿತ್ತರು. ಮಾತ್ರವಲ್ಲದೆ, ಶಿಬಿರವನ್ನು ಆಸಕ್ತರಿಗಾಗಿ ಒಂದು ಹೆಚ್ಚುವರಿ ದಿನಕ್ಕೆ ವಿಸ್ತರಿಸಿದ್ದು ವಿಶೇಷವಾಗಿತ್ತು. ಈ ಶೃಂಗಸಭೆಯು ಮೂರು ಮೂಲಭೂತ ಸೂತ್ರಗಳ ಮೇಲೆ ಆಧಾರಿತವಾಗಿತ್ತು: ಜನತೆ (ಜನರನ್ನು ಸಬಲಗೊಳಿಸುವುದು), ಭೂಮಿ (ಕೃಷಿಯಲ್ಲಿ ಹೆಚ್ಚು ಬುದ್ಧಿವಂತ ಮತ್ತು ದೀರ್ಘಕಾಲಿಕ ವಿಧಾನಗಳನ್ನು ಅಳವಡಿಸುವುದು), ಹಾಗೂ ಪ್ರಗತಿ (ಎಲ್ಲರಿಗೂ ಲಭ್ಯವಾಗುವ, ಸಮಾವೇಶಿತ ತಂತ್ರಜ್ಞಾನವನ್ನು ಉತ್ತೇಜಿಸುವುದು). ಶೃಂಗಸಭೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು 'ಮಾನವ್' ಚೌಕಟ್ಟನ್ನು ಘೋಷಿಸಿದರು. MANAV ಎಂದರೆ ಮಾನವಕೇಂದ್ರಿತ, ಜವಾಬ್ದಾರಿಯುತ ಮತ್ತು ನೈತಿಕ ಕೃತಕ ಬುದ್ಧಿಮತ್ತೆ ಬಳಕೆಯನ್ನು ಉತ್ತೇಜಿಸುವ ಭಾರತೀಯ 'ಎಐ' ಉಪಕ್ರಮ. ಶೃಂಗಸಭೆಯ ಮುಖ್ಯ ರೂಪಶಿಲ್ಪಿಯಾಗಿ ಭಾರತ ಹೊರಹೊಮ್ಮಿದ್ದು, ಜಾಗತಿಕ ದಕ್ಷಿಣಾರ್ಧ ಗೋಳದ ದೇಶಗಳ ಮುಂಚೂಣಿಯ ಶಕ್ತಿಯೆಂದೆನಿಸಿದೆ. ಮಹಾಸಮ್ಮೇಳನದಲ್ಲಿ 300ಕ್ಕೂ ಅಧಿಕ ಪ್ರದರ್ಶಕರು, 500ಕ್ಕೂ ಹೆಚ್ಚು ಜಾಗತಿಕ 'ಎಐ' ನಾಯಕರು, 20 ರಾಷ್ಟ್ರಗಳ ಮುಖ್ಯಸ್ಥರು ಭಾಗವಹಿಸಿದ್ದರಿಂದಾಗಿ ಇದು ಇತಿಹಾಸದಲ್ಲೇ ಅತಿ ದೊಡ್ಡ ಜಾಗತಿಕ 'ಎಐ' ಸಮ್ಮೇಳನವೆಂದು ಪ್ರಚಲಿತವಾಯಿತು. ಎಂಬತ್ತಕ್ಕೂ ಅಧಿಕ ದೇಶಗಳು ತಾಂತ್ರಿಕ/ವ್ಯಾವಹಾರಿಕ ನಿರ್ಣಯಕ್ಕೆ ಒಪ್ಪಿಗೆ ನೀಡಿವೆ. ಭಾರತವು ಅಮೆರಿಕ ನೇತೃತ್ವದ ಪ್ಯಾಕ್ಸ್ ಸಿಲಿಕಾ ಮೈತ್ರಿಕೂಟಕ್ಕೆ ಹನ್ನೊಂದನೇ ಸದಸ್ಯನಾಗಿ ಅಧಿಕೃತವಾಗಿ ಸೇರ್ಪಡೆಯಾಗಿದೆ.

'ಎಐ' ಸ್ವೀಕಾರವು ದಾಖಲೆ ಮಟ್ಟದಲ್ಲಿ ವೇಗವಾಗಿ ವೃತ್ತಿ, ಲಿಂಗ ಮತ್ತು ಕೆಲಸದ ವೈಖರಿಯ ಮೇಲೆ ಅವಲಂಬಿತವಾಗಿ ಪ್ರಗತಿಯಾಗುತ್ತಿದೆ. ಹಣಕಾಸು ಮತ್ತು ಲೆಕ್ಕಪತ್ರ ಕ್ಷೇತ್ರಗಳ ವೃತ್ತಿಪರರು 'ಎಐ'ಯನ್ನು ಅತಿ ಕಡಿಮೆ ಬಳಸುವವರಾಗಿದ್ದರೆ, ಪತ್ರಕರ್ತರು, ಸಾಫ್ಟ್‌ವೇರ್ ಎಂಜಿನಿಯರ್‌ಗಳು ಮತ್ತು ಮಾರುಕಟ್ಟೆ ವೃತ್ತಿಪರರು 'ಎಐ'ಯನ್ನು ಅತ್ಯಂತ ವ್ಯಾಪಕವಾಗಿ ಬಳಸುತ್ತಿದ್ದಾರೆ. ಇತ್ತೀಚಿನ ಸಂದರ್ಶನವೊಂದರಲ್ಲಿ 'ಓಪನ್ ಎಐ' ಕಂಪನಿಯ ಮುಖ್ಯಸ್ಥರಾದ ಸ್ಯಾಮ್ ಆಲ್ಟ್‌ಮನ್ ಅವರು, ''ಚ್ಯಾಟ್ ಜಿಪಿಟಿಗೆ ಭಾರತದಲ್ಲಿ ಪ್ರತಿವಾರ ಹತ್ತು ಕೋಟಿಗಿಂತ ಹೆಚ್ಚು ಸಕ್ರಿಯ ಬಳಕೆದಾರರಿದ್ದಾರೆ'' ಎಂದರು. ಅಮೆರಿಕದ ನಂತರ ಭಾರತವು ಈ ವೇದಿಕೆಯ ಅತ್ಯಂತ ಸಕ್ರಿಯ ಮಾರುಕಟ್ಟೆ; ಇಲ್ಲಿ ಗಮನಾರ್ಹ ವಿಷಯವೆಂದರೆ, ಪ್ರಸ್ತುತ 900 ಮಿಲಿಯನ್ ಬಳಕೆದಾರರನ್ನು ಹೊಂದಿರುವ ಚ್ಯಾಟ್ ಜಿಪಿಟಿ, ಅತ್ಯಂತ ಜನಪ್ರಿಯ ಸಾಮಾಜಿಕ ಮಾಧ್ಯಮಗಳಾದ ಇನ್ಸ್ಟಾಗ್ರಾಮ್, ಟಿಕ್‌ಟಾಕ್ ಅಥವಾ ನೆಟ್‌ಫ್ಲಿಕ್ಸ್‌ಗಳಿಗಿಂತಲೂ ಬಹಳ ಕಡಿಮೆ ಅವಧಿಯಲ್ಲಿ ಈ ಮಟ್ಟವನ್ನು ತಲುಪಿ, 'ಎಐ' ನಮ್ಮ ಜೀವನದಲ್ಲಿ ದೈನಂದಿನ ಕಾರ್ಯಗಳಿಗೆ ಅನಿವಾರ್ಯ ಮಾಧ್ಯಮವೆನಿಸಿದೆ. ಚ್ಯಾಟ್ ಜಿಪಿಟಿಗೆ ಸ್ಪರ್ಧಿಯಾಗಿ ಜಾಗತಿಕ ಮಟ್ಟದಲ್ಲಿ ಗೂಗಲ್‌ನ ಜೆಮಿನೈ, ಮೈಕ್ರೋಸಾಫ್ಟ್‌ನ ಕ್ಯಾಪಿಲೋಟ್, ಮೆಟಾದ ಲ್ಲಾಮಾ ವೇದಿಕೆಗಳು ಪೈಪೋಟಿ ನಡೆಸಿವೆ. ಇವೆಲ್ಲವನ್ನೂ ಚ್ಯಾಟ್ ಜಿಪಿಟಿಯಷ್ಟು ವೇಗವಾಗಲ್ಲದಿದ್ದರೂ ವ್ಯಾಪಕವಾಗಿ ಬಳಸಲಾಗುತ್ತಿದ್ದು, ಅವು ತ್ವರಿತವಾಗಿ ಎಲ್ಲೆಡೆ ವಿಸ್ತರಿಸುತ್ತಿವೆ. 'ಸರ್ವಮ್ ಎಐ' ಮತ್ತು 'ಭಾರತ್‌ಜೆನ್' ನಮ್ಮ ದೇಶದಲ್ಲಿ ಅಭಿವೃದ್ಧಿಯಾಗುತ್ತಿರುವ ಪ್ರಮುಖ ಜನರೇಟಿವ್ 'ಎಐ' ಪ್ರಯತ್ನಗಳಾಗಿವೆ. ಸರ್ವಮ್ ಮಾದರಿಗಳು, ಭಾರತಕ್ಕೆ ಹೊಂದುವ ಸಂಭಾಷಣಾತ್ಮಕ 'ಎಐ' ಪರಿಹಾರಗಳತ್ತ ಗಮನ ಹರಿಸಿದೆ. ಭಾರತ್‌ಜೆನ್ ಯೋಜನೆಯು ಭಾರತೀಯ ಭಾಷೆಗಳು, ಸಂಸ್ಕೃತಿ ಮತ್ತು ಸಾರ್ವಜನಿಕ ಡೇಟಾವನ್ನು ಒಳಗೊಂಡ ಸ್ವದೇಶಿ ಮಾದರಿಗಳನ್ನು ನಿರ್ಮಿಸುವ ಉದ್ದೇಶ ಹೊಂದಿದ್ದು, ಶಿಕ್ಷಣ, ಆಡಳಿತ ಮತ್ತು ಉದ್ಯಮ ಕ್ಷೇತ್ರಗಳಲ್ಲಿ ಬಳಸಬಹುದಾದ 'ಎಐ' ಪರಿಹಾರಗಳನ್ನು ನೀಡಲು ಪ್ರಯತ್ನಿಸುತ್ತಿದೆ.

ಮೇಲೆ ಉಲ್ಲೇಖಿಸಲಾದ ಚರ್ಮಕುಟೀರಕ್ಕೆ ಕೆಲ ದಿನಗಳ ನಂತರ ಮತ್ತೆ ಭೇಟಿಯಿತ್ತಿದ್ದೆ. ಪರಿಚಯದ ಆ ಶ್ರಮಿಕನಿಗೆ ಕೃತಕ ಬುದ್ಧಿಮತ್ತೆಯ ಕುರಿತಾಗಿ ಸರಳಭಾಷೆಯಲ್ಲಿ ತಿಳಿಹೇಳಿದೆ. ಅವನ ಸುಕ್ಕುಗಟ್ಟಿದ ಮುಖದಲ್ಲಿ ಮೂಡಿದ ಮಂದಹಾಸದ ಗೆರೆಗಳು, ವಿಷಯವು ಅವನಿಗೆ ಅರ್ಥವಾಯಿತೆಂಬ ಸಂದೇಶ ನೀಡಿದವು....

(ಲೇಖಕರು ಚಾರ್ಟರ್ಡ್ ಅಕೌಂಟೆಂಟ್ ಮತ್ತು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಭಟ್ಟರ್ ಸ್ಕಾಚ್

- **ಸದಾಶಿವ ಕೊಣಗೂರು, (ಇಮೇಲ್ ಮೂಲಕ)**
ಭಟ್ರೇ, ಗಗನಸಖಿಯರು ಕನ್ನಡದಲ್ಲಿ ಮಾತಾಡುವುದಿಲ್ಲವಲ್ಲ?
– **ಈ ಪ್ರಶ್ನೆಯನ್ನು ನಾರಾಯಣ ಗೌಡರಿಗೆ ಫಾರ್ವರ್ಡ್ ಮಾಡುತ್ತೇನೆ!**

- **ಸೌಮ್ಯ ರಾಜೇಶ್, ಬೆಂಗಳೂರು**
ಭಟ್ರೇ, ಡಿಕೆಶಿಗೆ ದಿನವೂ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತ ಕನಸು ಬೀಳುತ್ತದಂತೆ?
– **ಇನ್ನೇನು ಪ್ರಮಾಣವಚನ ಸ್ವೀಕರಿಸಬೇಕು ಅನ್ನೋವಷ್ಟರಲ್ಲಿ ಎಚ್ಚರವಾಗುತ್ತದಂತೆ!**

- **ದೇವದಾಸ ಬಿ., ತುಮಕೂರು**
ಭಟ್ರೇ, ಬೆಳಗಿನ ಮಂಜಿನ ಹನಿಗಳಂತೆ ನಿನ್ನ ನಾಗು ಅಂತಾಳಲ್ಲ?
– **ತೀರಾ ಕುಸುಮಾ ಆಯರಹಳ್ಳಿ ಥರ ಮಾತಾಡಿದ್ರೆ ಅರ್ಥವಾಗೊಲ್ಲ ಅಂತ ಹೇಳಬೇಕಿತ್ತು!**

- **ಸಿ. ರಂಗ, (ಇಮೇಲ್ ಮೂಲಕ)**
ಭಟ್ರೇ, ಗಂಡನ ಮಾತನ್ನು ಕೇಳದ ಹೆಂಡತಿಯನ್ನು ಏನಂತಾರೆ?
– **ಉತ್ತಮ ಗೃಹಿಣಿ ಅಂತಾರೆ!**

- **ಗಿರಿ ಶಾಮಾಚಾರ್, ಕತ್ತರಿಗುಪ್ಪ**
ಭಟ್ರೇ, ಕಳೆದ ಒಂದು ತಿಂಗಳಿನಿಂದ ನೀವು ದೇಶದಲ್ಲೇ ಇದ್ದೀರಲ್ಲ?
– **ಟಾಶ್ಕೆಂಟ್, ದೋಹಾ ಭಾರತದಲ್ಲಿವೆಯಾ?!**

- **ನಾಗರಾಜ ಪಿ. ಮಲ್ಲಹಳ್ಳಿ, ಕುಷ್ಟಗಿ**
ಭಟ್ರೇ, ನನಗೆ ಪ್ರವಾಸ ಅಂದ್ರೆ ಇಷ್ಟ, ಪ್ರವಾಸಿ ಪ್ರಪಂಚದಲ್ಲಿ ಕೆಲಸ ಕೊಡ್ತೀರಾ?
– **ಬರೆಯೋದು ಅಂದ್ರೆ ಇಷ್ಟ ಅಂತಾನೂ ಹೇಳಿದ್ದಿದ್ರೆ ಕೊಡಬಹುದಿತ್ತು!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಕರ್ನಾಟಕದ ಯಾವ ಸಚಿವರು ಒಳ್ಳೆಯ ಇಂಗ್ಲಿಷ್ ಮಾತಾಡುತ್ತಾರೆ?
– **ಎಣ್ಣೆ ಹೊಡೆದವರು ಒಳ್ಳೆಯ ಇಂಗ್ಲಿಷ್ ಮಾತಾಡ್ತಾರೆ ಅಂತಿದ್ರೆ ಅಬಕಾರಿ ಸಚಿವ ತಿಮ್ಮಾಪುರಗೆ ಆ ಬಹುಮಾನ ಕೊಡಬಹುದಿತ್ತು!**

ಬವಣೆಯ ಬೆಂಕಿಯಲ್ಲಿ ಬೆಂದು ಬಳಲಿ ಬಂದ ಬೆನ್ಜ್ ಕಾರು

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಹೆಸರಿನಲ್ಲಿಯೇ Car ಇರುವಾಗ ಕಾರು ತಯಾರು ಮಾಡದೆ ಅವರಾದರೂ ಹೇಗೆ ಸುಮ್ಮನೆ ಕುಳಿತಾರು? ಅವರಿಗೆ ಕಷ್ಟವಾಯಿತು, ಸಾಕಷ್ಟು ಅಡೆತಡೆಗಳು ಎದುರಾದವು. ಅವನ್ನೆಲ್ಲ ಮೀರಿ ಇಂದಿಗೂ ಶಾಶ್ವತವಾಗಿ ನಿಲ್ಲುವ ಕಾರಿನ ಹೆಸರೊಂದನ್ನು ಅವರು ನೂರಕ್ಕೂ ಹೆಚ್ಚು ವರ್ಷದ ಹಿಂದೆಯೇ ಬರೆದಿಟ್ಟಿದ್ದರು.

ನಾನು ಪ್ರೌಢಶಾಲೆಗೆ ಬರುವವರೆಗೂ ಆ ಹೆಸರನ್ನು ಕೇಳಿದ ನೆನಪಿಲ್ಲ. ಪ್ರಾಥಮಿಕ ಶಾಲೆಯಲ್ಲಿ ಎಲ್ಲೋ ಒಂದೆರಡು ಬಾರಿ ಕೇಳಿದ್ದರೂ ನೆನಪಿಟ್ಟುಕೊಳ್ಳುವಷ್ಟು ಅದು ಸುಲಭವಾಗಿರಲಿಲ್ಲ. ಆ ದಿನಗಳಲ್ಲಿ ನಮ್ಮೂರಲ್ಲಿ ಅಂಬಾಸಿಡರ್, ಫಿಯೆಟ್ ಬಿಟ್ಟರೆ ಆ ಹೆಸರಿನ ಕಾರು ಇದ್ದದ್ದಾಗಲಿ, ಇದ್ದರೂ ನನ್ನ ಕಣ್ಣಿಗೆ ಬಿದ್ದದ್ದಾಗಲಿ ನೆನಪಾಗುತ್ತಿಲ್ಲ. ಕಾಲೇಜು ಮುಗಿಸಿ ನೌಕರಿಗೆ ಸೇರಿಕೊಂಡಾಗಲೂ ಆ ಹೆಸರಿನ ಕಾರು ಮಾತ್ರ ತಯಾರಾಗುತ್ತದೆ ಎಂದೇ ಭಾವಿಸಿದ್ದೆ. ನಾನು ಉದ್ಯೋಗಕ್ಕಾಗಿ ಸೌದಿ ಅರೇಬಿಯಾಕ್ಕೆ ಬಂದಾಗ, ಮೊದಲ ಬಾರಿ ಆ ಕಂಪನಿಯವರು ಕಾರನ್ನಷ್ಟೇ ಅಲ್ಲ, ಬಸ್, ಟ್ರಕ್ ಇತ್ಯಾದಿ ವಾಹನಗಳನ್ನೂ ತಯಾರಿಸುತ್ತಾರೆ ಎಂದು ಗೊತ್ತಾದದ್ದು.

ಈಗಂತೂ ಕೇಳುವುದೇ ಬೇಡ. ವಿಶ್ವದ ಅತ್ಯಂತ ಹಳೆಯ ಮತ್ತು ಐಷಾರಾಮಿ ಕಾರು ಕಂಪನಿಗಳಲ್ಲಿ ಇದು ಒಂದಾಗಿದ್ದು, ಸುಮಾರು 80 ಬಿಲಿಯನ್ ಡಾಲರ್ ಮೌಲ್ಯವುಳ್ಳ ಸಂಸ್ಥೆಯಾಗಿದೆ. ಟಾಂಗಾಕ್ಕೆ ಕುದುರೆ ಕಟ್ಟಿಕೊಂಡು ಓಡಾಡುತ್ತಿದ್ದ ಆ ಕಾಲದಲ್ಲಿ, ಕುದುರೆರಹಿತ ಗಾಡಿಯನ್ನು ನಿರ್ಮಿಸುವ ದಾರಿಯಲ್ಲಿ ಅದೆಷ್ಟೋ ಕಷ್ಟ, ಸವಾಲು, ಅನುಮಾನ, ಅವಮಾನ ಮತ್ತು ವೈಫಲ್ಯಗಳನ್ನು ಎದುರಿಸಿ, ಕನಸನ್ನು ಸಾಕಾರಗೊಳಿಸಿಕೊಂಡ ವ್ಯಕ್ತಿ ಅವರು. 19ನೇ ಶತಮಾನದ ಉತ್ತರಾರ್ಧದಲ್ಲಿ ತಮ್ಮ ಸಣ್ಣ ಉದ್ಯಮವನ್ನು ವಿಶ್ವದ ಪ್ರಥಮ ಮತ್ತು ಅತಿ ದೊಡ್ಡ ಕಾರು ಉತ್ಪಾದನಾ ಕಂಪನಿಯಾಗಿ ಪರಿವರ್ತಿಸಿದ ಮಹಾನುಭಾವ ಅವರು. ಆಟೋಮೊಬೈಲ್ ಉದ್ಯಮಕ್ಕೆ ಉಸಿರು ಕೊಟ್ಟು, ಜೀವ ತುಂಬಿದ ವ್ಯಕ್ತಿ ಅವರು ಎಂದರೆ ತಪ್ಪಾಗಲಾರದು. ಜತೆಗೆ, ಅವರಿಗಿಂತಲೂ ಅವರ ಮಡದಿಯಿಂದಾಗಿ ಇದೆಲ್ಲ ಸಾಧ್ಯವಾಯಿತು, ಇದರಲ್ಲಿ ಬಹುಪಾಲು ಶ್ರೇಯ ಮಡದಿಗೂ ಸಲ್ಲಬೇಕು ಎಂದರೆ ಅತಿಶಯೋಕ್ತಿಯಾಗಲಾರದು.

Carl Benz ಹುಟ್ಟಿದ್ದು 1844ರ ನವೆಂಬರ್‌ನಲ್ಲಿ, ಜರ್ಮನಿಯ ಮ್ಯುಲ್ಬರ್ಗ್‌ನಲ್ಲಿ. ಆರ್ಥಿಕವಾಗಿ ಅಷ್ಟೇನೂ ಸದೃಢವಾಗಿರದ ಕುಟುಂಬದಲ್ಲಿ. ತಂದೆ ರೈಲ್ವೆ ಚಾಲಕರಾಗಿದ್ದರಿಂದ ಸಂಸಾರವೇನೋ ನಡೆಯುತ್ತಿತ್ತು. ಆದರೆ ಕಾರ್ಲ್ ಬೆನ್ಜ್‌ಗೆ ಎರಡು ವರ್ಷ ತುಂಬುತ್ತಿದ್ದಂತೆ ತಂದೆ ತೀರಿ ಹೋದರು, ತಾಯಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದರು. ಬಡತನದ ಬದುಕು, ಖಾಲಿ ಹೊಟ್ಟೆಯಲ್ಲಿ ಮಲಗುತ್ತಿದ್ದ ಕಾರ್ಲ್ ಬೆನ್ಜ್ ಬಾಲ್ಯ ಸುಲಭವಾಗಿರಲಿಲ್ಲ. ಎಷ್ಟೇ ಕಷ್ಟವಾದರೂ ಮಗನಿಗೆ ಉತ್ತಮ ಶಿಕ್ಷಣ ಕೊಡಿಸುವುದಕ್ಕಾಗಿ ತಾಯಿ, ತಮ್ಮಿಂದ ಸಾಧ್ಯವಿರುವ ಎಲ್ಲವನ್ನೂ ಮಾಡಿದರು. ಅದರಿಂದಾಗಿ ಕಾರ್ಲ್ ಶಿಕ್ಷಣದಿಂದ ದೂರ ಇರುವುದು ತಪ್ಪಿತು. ಪ್ರತಿಭಾವಂತರಾಗಿದ್ದ ಕಾರಣ 15ನೇ ವರ್ಷಕ್ಕೆ ಮೆಕ್ಯಾನಿಕಲ್ ಎಂಜಿನಿಯರಿಂಗ್‌ಗೆ ಪ್ರವೇಶ ಪಡೆದ ಕಾರ್ಲ್ ಉತ್ತೀರ್ಣರೂ ಆದರು.

ಎಂಜಿನಿಯರಿಂಗ್ ಓದುತ್ತಿದ್ದಾಗ ಕಾರ್ಲ್‌ಗೆ ಫರ್ಡಿನಾಂಡ್ ರೆಡನ್‌ಬಾಕರ್ ಎಂಬ ಶಿಕ್ಷಕರ ಪರಿಚಯವಾಯಿತು. ಆ ಕಾಲದಲ್ಲಿ ಜರ್ಮನಿಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಅನ್ನು ಕಾರ್ಯಾಗಾರದಿಂದ ತಾಂತ್ರಿಕ ವಿಜ್ಞಾನವಾಗಿ ಪರಿವರ್ತಿಸಿದ ಪ್ರಮುಖ ವ್ಯಕ್ತಿ ಎಂದು ಫರ್ಡಿನಾಂಡ್‌ರನ್ನು ಪರಿಗಣಿಸಲಾಗುತ್ತಿತ್ತು. ಆ ಕಾಲದಲ್ಲಿ ಹೆಚ್ಚಾಗಿ ರೈಲ್ವೆ ಮತ್ತು ದೋಣಿಗಳಿಗೆ ಬಳಸಲಾಗುತ್ತಿದ್ದ ಉಗಿಯಂತ್ರಗಳು ಹಳೆಯದಾಗುತ್ತಿವೆ, ಪ್ರಪಂಚಕ್ಕೆ ಹೊಸತೇನಾದರೂ ಕೊಡಬೇಕು ಎಂದು ಸೈಕಲ್‌ನಲ್ಲಿ ಸುತ್ತುತ್ತಿದ್ದ ಕಾರ್ಲ್ ಕನಸು ಕಾಣುತ್ತಿದ್ದರು, ಸಂಭಾವ್ಯ ಮಾರ್ಗಗಳ ಹುಡುಕಾಟದಲ್ಲಿ ತೊಡಗಿದ್ದರು. ಆ ಹೊತ್ತಿಗಾಗಲೇ ಕೆಲ ಸಂಶೋಧಕರು ಆಟೋಮೊಬೈಲ್ ಯಂತ್ರವನ್ನು ಪ್ರಯತ್ನಿಸಿದ್ದರು. ಅವರಲ್ಲಿ ಕೆಲವರು ಸ್ವಯಂಚಾಲಿತ ವಾಹನಗಳನ್ನು ನಿರ್ಮಿಸುವಲ್ಲಿ ಯಶಸ್ವಿಯೂ ಆಗಿದ್ದರು. ಆದರೆ ಆರಂಭಿಕ ಆವಿಷ್ಕಾರಗಳು ಸಂಪೂರ್ಣವಾಗಿ ಪ್ರಾಯೋಗಿಕವಾಗಿರಲಿಲ್ಲ, ಯಶಸ್ವಿಯೂ ಆಗಿರಲಿಲ್ಲ. ಏಕೆಂದರೆ ಅವುಗಳಲ್ಲಿ ಹೆಚ್ಚಿನ ವಾಹನಗಳು ಉಗಿಯಂತ್ರ ತಂತ್ರಜ್ಞಾನವನ್ನು ಆಧರಿಸಿದ್ದವು. ಇದಕ್ಕೆಲ್ಲ ಶಿಕ್ಷಕ ರೆಡನ್‌ಬಾಕರ್ ಅವರೇ ಮಾರ್ಗದರ್ಶಕರಾಗಿದ್ದಾರೆ ಎನ್ನುವುದು ಕಾರ್ಲ್ ಗಮನಕ್ಕೆ ಬಂದಿತ್ತು. ಇದೆಲ್ಲವನ್ನು ಮೀರಿ ಸಂಪೂರ್ಣವಾಗಿ ವಿಭಿನ್ನ ಪರಿಕಲ್ಪನೆಯ ಯಂತ್ರವನ್ನು ತಯಾರಿಸಬೇಕು ಎಂದು ಕಾರ್ಲ್ ಮೊದಲ ಬಾರಿ ಹೇಳಿಕೊಂಡಾಗ ಜನರು ನಕ್ಕಿದ್ದರು. ಯಾವತ್ತೂ ಹಾಗೆಯೇ, ಈ ಲೋಕದಲ್ಲಿ ಹೊಸ ಅನ್ವೇಷಣೆ ಅರ್ಥವಾಗದಿದ್ದಾಗ ನಗುವವರೇ ಹೆಚ್ಚು. ಆದರೆ ಕಾರ್ಲ್ ತಲೆಕೆಡಿಸಿಕೊಳ್ಳಲಿಲ್ಲ. ಎಂಜಿನಿಯರಿಂಗ್ ಪದವಿ ಪಡೆದ ನಂತರ 19ನೇ ವಯಸ್ಸಿನಲ್ಲಿ ಎಂಜಿನಿಯರಿಂಗ್ ಮತ್ತು ನಿರ್ಮಾಣ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. 7 ವರ್ಷ ಕಾಲ ಉದ್ಯೋಗ ಮಾಡಿದರೂ ಅದಕ್ಕೆ ಅವರಿಗೆ ಹೊಂದಿಕೊಳ್ಳಲು ಸಾಧ್ಯವಾಗಲಿಲ್ಲ. ಏಕೆಂದರೆ ಅವರ ಬಯಕೆಗಳು, ಆಕಾಂಕ್ಷೆಗಳು ಬೇರೆಯೇ ಆಗಿದ್ದವು. 1871ರಲ್ಲಿ, 27ನೇ ವಯಸ್ಸಿನಲ್ಲಿ ತಮ್ಮದೇ ಉದ್ಯಮವನ್ನು ಅವರು ಆರಂಭಿಸಿದ್ದರು. ಆಗಸ್ಟ್ ರಿಟ್ಟರ್ ಎಂಬ ಮೆಕ್ಯಾನಿಕ್ ಜತೆ ಕಾರ್ಲ್ ಪಾಲುಗಾರಿಕೆಯ ಒಪ್ಪಂದ ಮಾಡಿಕೊಂಡರು. ಆರಂಭದಲ್ಲಿ ಕಬ್ಬಿಣದ ಫೌಂಡ್ರಿ ಮತ್ತು ಮೆಕ್ಯಾನಿಕಲ್ ಕಾರ್ಯಾಗಾರವನ್ನು ಆರಂಭಿಸಿದರು. ಜತೆಗೆ ಯಂತ್ರೀಕೃತ ಕ್ಯಾರೇಜನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸುತ್ತಲೇ ಇದ್ದರು. ಆದರೆ ಅದೃಷ್ಟ ಕೈಕೊಟ್ಟಿತು. ಪಾಲುದಾರನಾಗಿ ಬಂದಿದ್ದ ಅಗಸ್ಟ್ ವಿಶ್ವಾಸಕ್ಕೆ ಅರ್ಹನಲ್ಲ ಎಂದು ಅವರಿಗೆ ಅರ್ಥವಾಯಿತು. ಅದರಿಂದ ನಷ್ಟ ಅನುಭವಿಸಿದರು. ಸಾಲದು ಎಂಬಂತೆ ಅವರ ಉಪಕರಣಗಳನ್ನು ಸ್ಥಳೀಯ ಅಧಿಕಾರಿಗಳು ವಶಪಡಿಸಿಕೊಂಡರು. ಒಂದು ವರ್ಷದಲ್ಲಿಯೇ ಕಾರ್ಲ್ ಹೈರಾಣಾಗಿಬಿಟ್ಟಿದ್ದರು. ಅದೃಷ್ಟ ಸದಾ ಒಂದೇ ರೀತಿ ಇರುವುದಿಲ್ಲ. ಒಂದು ಕಡೆ ಅದೃಷ್ಟ ಕೈಕೊಟ್ಟರೂ ಇನ್ನೊಂದು ಕಡೆ ಅದೃಷ್ಟವೇ ಅವರ ಕೈ ಹಿಡಿಯಿತು. ಅವರಿಗೆ ಬರ್ತಾ ರಿಂಗರ್ ಎಂಬ ಮಹಿಳೆ ಭೇಟಿಯಾದರು. ಶ್ರೀಮಂತ ಕುಟುಂಬದ ಬರ್ತಾ, ಅಗಸ್ಟ್ ಜಾಗದಲ್ಲಿ ಪಾಲುದಾರರಾಗಿ ಬಂದರು. ಅವರು ಸಮಾನವಾಗಿ ಜವಾಬ್ದಾರಿಯನ್ನೂ ಹಂಚಿಕೊಂಡರು. ವ್ಯವಹಾರದಲ್ಲಿ ಸಂಪೂರ್ಣ ನಿಯಂತ್ರಣವನ್ನೂ ಇಟ್ಟುಕೊಂಡರು. ಇದರಿಂದಾಗಿ ಮುಂದಿನ ಹತ್ತು ವರ್ಷ ವ್ಯವಹಾರ ಸುಗಮವಾಗಲು ಸಾಧ್ಯವಾಯಿತು.

ಕಾರ್ಲ್ ತಮ್ಮ ಹುಡುಕಾಟದ ಹಾದಿಯಲ್ಲಿ ಒಂದು ಹಂತದ ಯಶಸ್ಸನ್ನು ಸಾಧಿಸಿದ್ದರು. 1879ರ ವೇಳೆಗೆ 2 ಸ್ಟ್ರೋಕ್ ಗ್ಯಾಸೋಲಿನ್ ಎಂಜಿನ್ ಅಭಿವೃದ್ಧಿಪಡಿಸಿದ್ದರು. ಎಂಜಿನ್‌ನ ವೇಗದ ನಿಯಂತ್ರಣ ವ್ಯವಸ್ಥೆ, ಬ್ಯಾಟರಿ ವ್ಯವಸ್ಥೆಯ ಮೂಲಕ ಇಗ್ನಿಷನ್, ಸ್ಪಾರ್ಕ್ ಪ್ಲಗ್, ಕಾರ್ಬರೇಟರ್, ಗೇರ್ ಶಿಫ್ಟ್ ಮತ್ತು ರೇಡಿಯೇಟರ್‌ನಂಥ ಆವಿಷ್ಕಾರಗಳನ್ನು ಮಾಡಿದರು. ಅದಕ್ಕೆಲ್ಲ ಅಮೆರಿಕದಿಂದ ಪೇಟೆಂಟ್ ಪಡೆದರು. ಇದರಿಂದಾಗಿ ವ್ಯಾಪಾರದಲ್ಲಿ ಹೆಚ್ಚಿನ ಉತ್ಪನ್ನಗಳನ್ನು ಸೇರಿಸಿಕೊಳ್ಳಲು ಅವರಿಗೆ ಅವಕಾಶವಾಯಿತು. ಆದರೆ ಇವುಗಳೆಲ್ಲದರ ಉತ್ಪಾದನಾ ವೆಚ್ಚ ಹೆಚ್ಚು ಎಂದು ಅವರಿಗೆ ಅನ್ನಿಸುತ್ತಿತ್ತು. ಏಕೆಂದರೆ ವ್ಯಾಪಾರ ಕೆಲವು ದಿನ ಉತ್ತಮವಾಗಿ ನಡೆದರೂ, ಕ್ರಮೇಣ ಇದನ್ನು ಕೊಳ್ಳುವವರು ಕಡಿಮೆಯಾದರು. ಆಗ ಬೇರೆ ಹೂಡಿಕೆದಾರರನ್ನು ಜತೆಗೂಡಿಸಿಕೊಳ್ಳಲು ಬ್ಯಾಂಕ್‌ನವರು ಒತ್ತಾಯಿಸಿದರು.

1882ರಲ್ಲಿ ಕಾರ್ಲ್ ತಮ್ಮ ಉದ್ಯಮವನ್ನು ಜಂಟಿ ಸ್ಟಾಕ್ ಕಂಪನಿಯಾಗಿ ಪರಿವರ್ತಿಸಿಕೊಂಡರು. ಆದರೆ ಆ ಕಂಪನಿಯ ಷೇರುಗಳಲ್ಲಿ 5 ಪ್ರತಿಶತ ಮಾತ್ರ ಅವರಿಗೆ ಸಿಗುತ್ತಿತ್ತು. ಆದ್ದರಿಂದ ಪ್ರಮುಖ ಸ್ಥಾನದಿಂದ ಕಾರ್ಲ್‌ರನ್ನು ಕೆಳಗೆ ಇಳಿಸಲಾಯಿತು. ಕ್ರಮೇಣ ಹೊಸ ಹೂಡಿಕೆದಾರರು ಕಾರ್ಲ್‌ರ ಆಲೋಚನೆಗಳನ್ನೂ ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಅಲ್ಲದೆ, ಹೊಸ ಉತ್ಪನ್ನಗಳ ಕಡೆಗೆ ಹೆಚ್ಚಿನ ಗಮನಹರಿಸಿದ್ದರು. ಇದರಿಂದ ಕಾರ್ಲ್ ಅವರ ಅನ್ವೇಷಣೆಗಾಗಲಿ, ವಿನ್ಯಾಸಕ್ಕಾಗಲಿ ಯಾವ ಮಹತ್ವವೂ ಸಿಗುತ್ತಿರಲಿಲ್ಲ. ಇದರಿಂದ ಹತಾಶರಾದ ಕಾರ್ಲ್ ಬೆನ್ಜ್ ತಮ್ಮ ವಸ್ತುಗಳನ್ನು ಕಟ್ಟಿಕೊಂಡು ಕಂಪನಿಯಿಂದ ಹೊರ ನಡೆದರು.

ತಾವೇ ಸ್ಥಾಪಿಸಿದ ಕಂಪನಿಯಿಂದ ಹೊರಬರುವ ನಿರಾಶೆ ಮತ್ತು ವೇದನೆ ಕಾರ್ಲ್ ಬೆನ್ಜ್ ಅವರನ್ನು ಯಶಸ್ಸಿನ ದಾರಿಯಲ್ಲಿ ನಡೆಯಲು ಗಟ್ಟಿಗೊಳಿಸಿತು. ಅವರು ಪತ್ನಿಯೊಂದಿಗೆ ಇನ್ನಿಬ್ಬರನ್ನು ಸೇರಿಸಿಕೊಂಡು ಇನ್ನೊಂದು ಸಂಸ್ಥೆಯನ್ನು ಕಟ್ಟಿದರು. ಅದು ಅಲ್ಪಾವಧಿಯಲ್ಲಿಯೇ ಸಾಕಷ್ಟು ಲಾಭದಾಯಕವಾಗಿದ್ದರಿಂದ ಇಪ್ಪತ್ತೈದು ಜನ ಸಿಬ್ಬಂದಿಯನ್ನು ಸಂಸ್ಥೆಗೆ ಸೇರಿಸಿಕೊಂಡರು. 1885ರಲ್ಲಿ ಅವರು ನಿರ್ಮಿಸಿದ ಮೂರು ಗಾಲಿಯ, ಎರಡು ಆಸನದ ವಾಹನ, ಮೊದಲ ಮೋಟರ್ ವ್ಯಾಗನ್ ಎಂದೇ ಜನರು ಪರಿಗಣಿಸಿದರು. ವಾಹನ ಗಂಟೆಗೆ 7 ಮೈಲುಗಳಷ್ಟು ಮಾತ್ರ ಚಲಿಸಬಹುದಾಗಿತ್ತು. ಒಂದು ವರ್ಷ ಪರೀಕ್ಷಿಸಿ, ಪರಿಷ್ಕರಿಸಿ, 1886ರ ವೇಳೆಗೆ ಸಾರ್ವಜನಿಕರು ಓಡಿಸಲು ಯೋಗ್ಯವಾದ ವಾಹನ ಸಿದ್ಧವಾಗಿತ್ತು.

ಆದರೆ ಎಲ್ಲ ಊರಿನಲ್ಲೂ, ಎಲ್ಲ ದೇಶದಲ್ಲೂ ವಿಮರ್ಶಕರು ಇದ್ದೇ ಇರುತ್ತಾರೆ. ಕೆಲವರು ಕಾರ್ಲ್ ಬೆನ್ಜ್ ಅವರ ವಾಹನವನ್ನು ಮೆಚ್ಚಿದರು. ಹೆಚ್ಚಿನ ಜನರು ಯಂತ್ರದ ಬಗ್ಗೆ ಸಂಶಯ ವ್ಯಕ್ತಪಡಿಸಿದರು. ಆ ಕಾಲದಲ್ಲಿ ಜನರಲ್ಲಿ ಭಯ ಹೇಗಿತ್ತು ಎಂದರೆ, ಅವರೆಲ್ಲ ವಾಹನ ಸ್ಫೋಟಗೊಳ್ಳಬಹುದು ಎಂಬ ಆತಂಕಕ್ಕೆ ಒಳಗಾಗಿದ್ದರು. ಅದರಿಂದ ವಾಹನದಲ್ಲಿ ಕುಳಿತು ಓಡಾಡುವವರು ಒಂದು ಕಡೆ ಇರಲಿ, ಆ ವಾಹನ ಬೀದಿಗಿಳಿದಾಗ ಅಕ್ಕಪಕ್ಕದಲ್ಲಿ ಓಡಾಡುವುದನ್ನೂ ಕೆಲವರು ಬಯಸುತ್ತಿರಲಿಲ್ಲ. ಕಾರ್ಲ್ ಅವರ ಕಂಪನಿಯ ಪಾಲುದಾರರಿಗೂ ಇದರ ಬಗ್ಗೆ ಹೆಚ್ಚು ಸಮಾಧಾನವಿರಲಿಲ್ಲ. ಕಾರ್ಲ್ ಬೆನ್ಜ್ ಅವರ ಆವಿಷ್ಕಾರ ಹೇಗೆ ಉಪಯುಕ್ತವಾಗಬಹುದು ಎಂದು ಅವರಿಗೆ ಅರ್ಥವೇ ಆಗಲಿಲ್ಲ. ''ಈ ವಾಹನಕ್ಕಿಂತ ವೇಗವಾಗಿ ಹೋಗುವ ಕುದುರೆ ಟಾಂಗ ಇರುವಾಗ, ಇದನ್ನು ಯಾರಾದರೂ ಯಾಕೆ ಖರೀದಿಸುತ್ತಾರೆ?'' ಎಂದು ಅವರು ವಾದಿಸುತ್ತಿದ್ದರು. ಆದರೆ ಯಾವುದಕ್ಕೂ ಜಗ್ಗದ ಕಾರ್ಲ್ 1888ರಲ್ಲಿ ಮಾರಾಟ ಮಾಡಲೆಂದು ಕಾರುಗಳನ್ನು ತಯಾರಿಸಲು ಪ್ರಾರಂಭಿಸಿದ ವಿಶ್ವದ ಮೊದಲ ವ್ಯಕ್ತಿಯಾದರು. ಕಾರಿನಲ್ಲಿ ಆಗಾಗ ಯಾಂತ್ರಿಕ ಸಮಸ್ಯೆಗಳು ಕಂಡುಬರುತ್ತಿದ್ದವು. ಅದರ ಬೆಲೆಯೂ ಹೆಚ್ಚಾಗಿತ್ತು. ಆದ್ದರಿಂದ ಶ್ರೀಮಂತರು ಮಾತ್ರ ಇದನ್ನು ಖರೀದಿಸಲು ಸಾಧ್ಯವಾಗುತ್ತಿತ್ತು. ಬಹುತೇಕ ಜನರು ಈ ಕಾರಿನಲ್ಲಿ ಪ್ರಯಾಣಿಸುವಾಗ ಜತೆಗೆ ಒಬ್ಬ ಮೆಕ್ಯಾನಿಕ್ ಅನ್ನು ಕರೆದುಕೊಂಡು ಹೋಗುತ್ತಿದ್ದರು ಎಂದರೆ ನಗಬೇಡಿ. ಕಾರು ರಸ್ತೆಯಲ್ಲಿ ಓಡಾಡಬೇಕು ಎಂದರೆ ಪೊಲೀಸರ ಪರವಾನಗಿ ಬೇಕಾಗಿತ್ತು ಎಂದರೆ ಆಶ್ಚರ್ಯ ಪಡಬೇಡಿ. ಆ ಕಾಲದಲ್ಲಿ ಹಾಗೆಯೇ ಇತ್ತು.

ಹೀಗಿರುವಾಗ, ಒಂದು ದಿನ ಬೆಳಗ್ಗೆ ಕಾರ್ಲ್ ಇನ್ನೂ ಹಾಸಿಗೆಯಲ್ಲಿರುವಾಗಲೇ ಅವರ ಮಡದಿ ಬೇಗನೆ ಎದ್ದು ತಮ್ಮ ಇಬ್ಬರು ಗಂಡು ಮಕ್ಕಳನ್ನು ಕರೆದುಕೊಂಡು 66 ಮೈಲು ದೂರದಲ್ಲಿರುವ ತನ್ನ ತಾಯಿಯನ್ನು ಭೇಟಿ ಮಾಡಲು ಹೊರಟರು. ಅದರಲ್ಲೇನು ವಿಶೇಷ ಎಂದು ಕೇಳಬೇಡಿ. ನನ್ನ ಪ್ರಕಾರ ಆಟೋಮೊಬೈಲ್ ಇತಿಹಾಸದಲ್ಲಿ ಅತ್ಯಂತ ಪ್ರಮುಖ ಪ್ರಯಾಣ ಇದು. ಏಕೆಂದರೆ ತಮ್ಮ ತವರುಮನೆಗೆ ಹೋಗಲು ಆಕೆ ಬಳಸಿದ್ದು ಕಾರ್ಲ್ ಬೆನ್ಜ್ ತಯಾರಿಸಿದ ಕಾರನ್ನು. ಆದರೆ ಅವರು ಈ ಕಾರಿನಲ್ಲಿ ಹೋಗುತ್ತಿದ್ದೇನೆ ಎಂಬ ವಿಷಯವನ್ನು ತಮ್ಮ ಪತಿಗಾಗಲಿ ಅಥವಾ ಪೊಲೀಸರಿಗಾಗಲಿ ತಿಳಿಸಿರಲಿಲ್ಲ. ಏಕೆಂದರೆ ಅವರು ಹಾಗೆ ಹೋಗಲು ತಮಗೆ ಬಿಡುವುದಿಲ್ಲ ಎಂದು ಆಕೆಗೆ ಚೆನ್ನಾಗಿ ತಿಳಿದಿತ್ತು. ಅಲ್ಲಿಯವರೆಗೆ ಯಾವುದೇ ಕಾರು ಅಥವಾ ಸಣ್ಣ ಮೋಟಾರು ವಾಹನ ಅಷ್ಟು ದೀರ್ಘ ಪ್ರಯಾಣವನ್ನು ಪ್ರಯತ್ನಿಸಿರಲಿಲ್ಲ. ತಮ್ಮ ಗಂಡನ ಆವಿಷ್ಕಾರದ ಮಹತ್ವವನ್ನು ಸಾಬೀತುಪಡಿಸಲು ಆಕೆ ದೃಢವಾಗಿ ನಿಶ್ಚಯಿಸಿದ್ದರು. ಕುದುರೆ ಗಾಡಿಗಳಿಗಾಗಿ ನಿರ್ಮಿಸಲಾದ ರಸ್ತೆಯಲ್ಲಿ ಧೂಳು, ಕಲ್ಲು ಇತ್ಯಾದಿಗಳು ತುಂಬಿಕೊಂಡಿದ್ದು, ವಾಹನ ಚಲಿಸಲು ಯೋಗ್ಯವಾಗಿರಲಿಲ್ಲ. ಆಗಾಗ ಯಾಂತ್ರಿಕ ತೊಂದರೆಗಳು ಎದುರಾಗುತ್ತಿದ್ದವು. ಬರ್ತಾ ಆಗಾಗ ಅದನ್ನು ದುರಸ್ತಿ ಮಾಡಿಕೊಂಡು ಮುಂದುವರಿಬೇಕಾಯಿತು. 66 ಮೈಲಿಯ ಪ್ರಯಾಣ ಬರ್ತಾ ಮತ್ತು ಮಕ್ಕಳಿಗೆ ಹನ್ನೆರಡು ಗಂಟೆಗಳಿಗಿಂತ ಹೆಚ್ಚು ಸಮಯವನ್ನು ತೆಗೆದುಕೊಂಡಿತ್ತು. ಆದರೆ ಅಂತಿಮವಾಗಿ ಅವರು ತಮ್ಮ ತವರುಮನೆ ಸೇರಲು ಯಶಸ್ವಿಯಾದರು. ಪ್ರಯಾಣದಲ್ಲಿ ಎಷ್ಟೇ ಕಷ್ಟವಾದರೂ ಎಲ್ಲರೂ ತಮ್ಮ ಪ್ರಯಾಣದ ಗುರಿ ತಲುಪಿದ ಸಂತೋಷದಲ್ಲಿದ್ದರು.

ಅಷ್ಟು ದೂರದ ಪ್ರಯಾಣ ಎಲ್ಲರಲ್ಲೂ ಅಚ್ಚರಿಯನ್ನು ಮೂಡಿಸಿತು. ಅದರ ನಂತರವೂ ಮರ್ಸಿಡಿಸ್ ಸಂಸ್ಥೆಯಲ್ಲಿ ಸಾಕಷ್ಟು ಆವಿಷ್ಕಾರಗಳು ನಡೆದವು. ಕಾರ್ಲ್‌ಗೆ ಕಷ್ಟಗಳನ್ನು ಎದುರಿಸುವ ಪ್ರಸಂಗವೂ ಒದಗಿಬಂತು. ಅಂದಿನ ಮರ್ಸಿಡಿಸ್ ಆವಿಷ್ಕಾರದ, ಸ್ಥಾಪನೆಯ, ಪ್ರಯಾಣದ ಹಾದಿ ಇಂದಿನ ಮರ್ಸಿಡಿಸ್ ಕಾರಿನೊಳಗೆ ಕುಳಿತು ಪ್ರಯಾಣಿಸುವಷ್ಟು ಸುಖವಾಗಂತೂ ಇರಲಿಲ್ಲ. ಸಾಕಷ್ಟು ಎಡರು-ತೊಡರುಗಳನ್ನು ಎದುರಿಸಿ, ಅಂದು ಕಾರ್ಲ್ ಬೆನ್ಜ್ ಕಷ್ಟಪಟ್ಟು ನಿರ್ಮಿಸಿದ ಮರ್ಸಿಡಿಸ್ ಕಾರು ಇಂದು ಕಾರುಗಳ ಲೋಕದಲ್ಲಿ ವಿಶೇಷವಾದ ಸ್ಥಾನ ಪಡೆದಿದೆ. ಎಲ್ಲದರ ನಡುವೆ, ಅಂದು ಬರ್ತಾ ತೆಗೆದುಕೊಂಡ ಧೈರ್ಯ ಮತ್ತು ಆಕೆಯ ಪ್ರವಾಸ, ಜಗತ್ತೇ ಆಟೋಮೊಬೈಲ್ ಉದ್ಯಮದ ಕಡೆ ತಿರುಗಿ ನೋಡುವಂತೆ ಮಾಡಿತು ಎನ್ನುವುದನ್ನು ಮಾತ್ರ ಮರೆಯುವಂತಿಲ್ಲ.

ಜನರೇ ಪ್ರಜಾಪ್ರಭುತ್ವವನ್ನು ಉಳಿಸಿದರು!

ಸಂಗತ

ಡಾ.ವಿಜಯ್ ದರಡಾ

ಇತ್ತೀಚೆಗೆ ಈಜಿಪ್ಟ್ ಪ್ರವಾಸಕ್ಕೆ ಹೋಗಿದ್ದೆ. ಆಶ್ಚರ್ಯವೆಂಬಂತೆ ಅಲ್ಲಿ ಬಹಳಷ್ಟು ಜನರು, ಬಾಂಗ್ಲಾದೇಶದಲ್ಲಿ ನಡೆಯಲಿರುವ ಚುನಾವಣೆ ಬಗ್ಗೆ ನನ್ನ ಬಳಿ ಕೇಳಿದ್ದರು. ಬಾಂಗ್ಲಾದೇಶದಲ್ಲಿ ಚುನಾವಣೆಯ ಗಾಳಿ ಯಾವ ಕಡೆಗೆ ಬೀಸುತ್ತಿದೆ ಎಂಬುದನ್ನು ತಿಳಿದುಕೊಳ್ಳುವ ಕುತೂಹಲ ಅವರಿಗಿತ್ತು. ಯಾರು ಗೆಲ್ಲುತ್ತಾರೆ ಎಂಬುದನ್ನು ತಿಳಿದುಕೊಳ್ಳಲು ಅವರು ಕಾತುರರಾಗಿದ್ದರು. ಬಾಂಗ್ಲಾದೇಶದ ಮತದಾರರಲ್ಲಿ ಸಂಪೂರ್ಣ ವಿಶ್ವಾಸ ಹೊಂದಿದ್ದ ನಾನು ಬಾಂಗ್ಲಾದೇಶ್ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಗೆಲ್ಲುತ್ತದೆ ಎಂದು ಹೇಳಿದ್ದೆ. ಏಕೆಂದರೆ ಬಾಂಗ್ಲಾದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕು ಅಂದರೆ ಬಿಎನ್‌ಪಿ ಗೆಲ್ಲಬೇಕಿತ್ತು. ಜಮಾತ್-ಎ-ಇಸ್ಲಾಮಿ ಮತ್ತು ನ್ಯಾಷನಲ್ ಸಿಟಿಜನ್ ಪಾರ್ಟಿಗಳು ಗೆದ್ದರೆ ಬಾಂಗ್ಲಾದೇಶವನ್ನು ಮೂಲಭೂತವಾದದತ್ತ ಕೊಂಡೊಯ್ಯುತ್ತವೆ ಎಂಬುದು ನನ್ನ ನಂಬಿಕೆಯಾಗಿತ್ತು. ಅಭಿವೃದ್ಧಿಯಲ್ಲಿ ನಂಬಿಕೆಯಿರಿಸಿರುವ ಬಾಂಗ್ಲಾದೇಶದ ಜನರು ಕೂಡ ಹೀಗೇ ಯೋಚಿಸುತ್ತಾರೆ ಎಂದು ಭಾವಿಸಿದ್ದೆ.

ನನ್ನ ನಂಬಿಕೆ ನಿಜವಾಗಿದೆ. ಬಿಎನ್‌ಪಿಯೇ ಗೆದ್ದಿದೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಬಾಂಗ್ಲಾದೇಶದ ಜನರು ತಮ್ಮ ಪ್ರಜಾಪ್ರಭುತ್ವವನ್ನು ಉಳಿಸಿಕೊಂಡಿದ್ದಾರೆ. ಒಂದೂವರೆ ವರ್ಷದ ಹಿಂದೆ ಆಗಿನ ಪ್ರಧಾನಿ ಶೇಖ್ ಹಸೀನಾ ಅವರ ಸರಕಾರವನ್ನು ತೀವ್ರವಾದಿ ಹೋರಾಟಗಾರರು ಹಿಂಸಾಚಾರದ ಮೂಲಕ ಕಿತ್ತೆಸೆದಿದ್ದರು. ಆಗಿನ ಪರಿಸ್ಥಿತಿಯನ್ನು ನೋಡಿದರೆ, ಪ್ರಜಾಪ್ರಭುತ್ವವನ್ನು ಬೆಂಬಲಿಸುತ್ತಾ ಬಂದಿರುವ ದೇಶವೀಗ ಮೂಲಭೂತವಾದದತ್ತ ಹೋಗುತ್ತಿದೆಯಲ್ಲಾ ಎಂದು ಆತಂಕವಾಗುತ್ತಿತ್ತು. ಅಲ್ಪಸಂಖ್ಯಾತ ಹಿಂದೂಗಳ ಮೇಲೆ ಪದೇಪದೆ ದೌರ್ಜನ್ಯಗಳನ್ನು ಎಸಗುವುದು, ಹಿಂದೂಗಳನ್ನು ಹೊಡೆದು ಕೊಲ್ಲುವುದು ನಡೆಯುತ್ತಿತ್ತು. ಈ ದೌರ್ಜನ್ಯಗಳ ಬಗ್ಗೆ ಭಾರತ ಆತಂಕಗೊಂಡಿತ್ತು. ಅದನ್ನೆಲ್ಲ ನಿಲ್ಲಿಸಬೇಕಿದ್ದ ಮಧ್ಯಂತರ ಸರಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಭಾರತ-ವಿರೋಧಿ ಭಾವನೆಗಳನ್ನೇ ಇನ್ನಷ್ಟು ಪೋಷಿಸಿ, ಉರಿಯುವ ಬೆಂಕಿಗೆ ತುಪ್ಪ ಸುರಿಯುತ್ತಿದ್ದರು. ಅವರ ಪ್ರಶಾಂತ ಮುಖದ ಹಿಂದೆ ಅದೇನೋ ಆತಂಕವಿರುವುದು ಸೂಕ್ಷ್ಮವಾಗಿ ಕಾಣಿಸುತ್ತಿತ್ತು. ತಮಗೆ ಲಭಿಸಿದ ಅಧಿಕಾರವನ್ನು ನಿರ್ಭೀತಿಯಿಂದ ಚಲಾಯಿಸುವುದರಲ್ಲಿ ಅವರಿಗೇನೋ ಸಮಸ್ಯೆಯಿತ್ತು. ಅವರು ಪಾಕಿಸ್ತಾನ ಮತ್ತು ಚೀನಾದತ್ತ ವಾಲುತ್ತಿದ್ದರು. ಅಧಿಕಾರ ಉಳಿಸಿಕೊಳ್ಳಲು ಸಾರ್ವತ್ರಿಕ ಚುನಾವಣೆ ನಡೆಸುವ ನಿರ್ಧಾರವನ್ನು ಪದೇಪದೆ ಮುಂದಕ್ಕೆ ಹಾಕುತ್ತಿದ್ದರು. ಕೊನೆಗೆ ಬಾಂಗ್ಲಾದೇಶದ ನರನಾಡಿಗಳಲ್ಲಿ ಮೂಲಭೂತವಾದ ಮತ್ತು ಧಾರ್ಮಿಕ ಮತಾಂಧತೆಯ ವಿಷ ಸಾಕಷ್ಟು ತುಂಬಿಕೊಂಡಿದೆ ಎಂಬುದು ಅವರಿಗೆ ಖಾತ್ರಿಯಾದ ಮೇಲೆ ಸಾರ್ವತ್ರಿಕ ಚುನಾವಣೆಯನ್ನು ಘೋಷಿಸಿದರು. ಚುನಾವಣೆ ನಡೆಸುವುದಕ್ಕೆ ಅವರ ಮೇಲೆ ಸಾಕಷ್ಟು ಒತ್ತಡವೂ ಇತ್ತೆನ್ನಿ. ಆ ಒತ್ತಡದಿಂದ ಅವರಿಗೆ ಕೈ ಕಟ್ಟಿಹಾಕಿದಂತಾಗಿತ್ತು. ಹೀಗಾಗಿ ವಿಧಿಯಿಲ್ಲದೆ ಚುನಾವಣೆ ನಡೆಸುವುದಾಗಿ ಪ್ರಕಟಿಸಿದರು. ಚುನಾವಣೆಯ ನಂತರವೂ ದೇಶದಲ್ಲಿ ಧಾರ್ಮಿಕ ಮತೀಯವಾದಿ ಶಕ್ತಿಗಳೇ ಅಧಿಕಾರಕ್ಕೆ ಬರುತ್ತವೆ, ಹೀಗಾಗಿ ತನ್ನ ಪ್ರಸ್ತುತತೆ ಹೀಗೇ ಮುಂದುವರಿಯುತ್ತದೆ ಎಂಬ ನಂಬಿಕೆ ಅವರಿಗಿತ್ತು.

ಇತ್ತ ಜಮಾತ್-ಎ-ಇಸ್ಲಾಮಿ ಮತ್ತು ನ್ಯಾಷನಲ್ ಸಿಟಿಜನ್ ಪಾರ್ಟಿಗೆ ತಾವೇ ಗೆಲ್ಲುತ್ತೇವೆ ಎಂಬ ಅದಮ್ಯ ವಿಶ್ವಾಸವಿತ್ತು. ಶೇಖ್ ಹಸೀನಾ ವಿರುದ್ಧದ ಚಳವಳಿಯ ಮೂಲಕ ಉದ್ಭವಗೊಂಡಿದ್ದ ರಾಜಕೀಯ ಪಕ್ಷಗಳಿವು. ಚುನಾವಣೆಯ ಬಳಿಕ ತಮ್ಮ ನಡುವೆ ಅಧಿಕಾರ ಹಂಚಿಕೆಯ ಒಪ್ಪಂದ ಏರ್ಪಡಬೇಕಾದ ಸನ್ನಿವೇಶ ಬರುತ್ತದೆ, ಹೀಗಾಗಿ ಬಾಂಗ್ಲಾದೇಶದ ಭವಿಷ್ಯದ ಆಡಳಿತದಲ್ಲಿ ತಾವೇ ಕೇಂದ್ರ ಪಾತ್ರ ವಹಿಸುತ್ತೇವೆ ಎಂದು ಈ ಪಕ್ಷಗಳು ನಂಬಿದ್ದವು. ಹೇಗಿದ್ದರೂ ಮಾಜಿ ಪ್ರಧಾನಿ ಖಲೀದಾ ಜಿಯಾ ಈಗ ಬದುಕಿಲ್ಲ, ಆಕೆಯ ಮಗ ತಾರೀಖ್ ರೆಹಮಾನ್ ಬರೋಬ್ಬರಿ 17 ವರ್ಷಗಳನ್ನು ವಿದೇಶದಲ್ಲಿ ಕಳೆದಿದ್ದಾರೆ. ಬಾಂಗ್ಲಾದೇಶದ ಜತೆಗೆ ಅಷ್ಟು ಬೇಗ ಮರು-ಸಂಪರ್ಕ ಸಾಧಿಸಲು ಆತನಿಗೆ ಸಾಧ್ಯವಿಲ್ಲ, ಹೀಗಾಗಿ ಅವರ ನೇತೃತ್ವದ ಬಿಎನ್‌ಪಿ ಅಧಿಕಾರಕ್ಕೆ ಬರುವ ಸಾಧ್ಯತೆ ಇಲ್ಲ ಎಂದು ಅವು ದೃಢವಾಗಿ ನಂಬಿದ್ದವು. ಆದರೆ ಎಲ್ಲರ ನಂಬಿಕೆಯನ್ನೂ ಹುಸಿಯಾಗಿಸಿ ತಾರೀಖ್ ರೆಹಮಾನ್ ಬಾಂಗ್ಲಾದೇಶದ ಜನರ ಮನಸ್ಸನ್ನು ಬಹಳ ಬೇಗ ಗೆದ್ದು, ಚುನಾವಣೆಯಲ್ಲಿ ತಮ್ಮ ತಾಯಿಯ ಪಕ್ಷವನ್ನು ಯಶಸ್ವಿಯಾಗಿ ಮುನ್ನಡೆಸಿ, ಉಳಿದೆಲ್ಲಾ ಪಕ್ಷಗಳಿಗೂ ಮಣ್ಣು ಮುಕ್ಕಿಸಿಬಿಟ್ಟರು. ಕಳೆದ ಡಿಸೆಂಬರ್‌ನಲ್ಲಿ ಅವರು ಢಾಕಾಗೆ ಮರಳಿದಾಗಲೇ ಬಿಎನ್‌ಪಿಯಲ್ಲಿ ಹೊಸ ಚೈತನ್ಯದ ಸಂಚಾರವಾಗಿತ್ತು. ಅವರು ಸಂಪೂರ್ಣ ಭಿನ್ನವಾದ ರೀತಿಯಲ್ಲಿ ಸಾರ್ವಜನಿಕರೊಂದಿಗೆ ಬೆರೆತರು. 19 ದಿನಗಳ ಚುನಾವಣಾ ಪ್ರಚಾರದ ವೇಳೆ 64 ರ್‍ಯಾಲಿಗಳಲ್ಲಿ ಪಾಲ್ಗೊಂಡರು. ಅವರ ಜತೆಗೆ ಪತ್ನಿ ಡಾ.ಜುಬೇದಾ ರೆಹಮಾನ್ ಮತ್ತು ಪುತ್ರಿ ಜೈಮಾ ರೆಹಮಾನ್ ಕೂಡ ಯಾವಾಗಲೂ ಕಾಣಿಸಿಕೊಳ್ಳುತ್ತಿದ್ದರು. ತನ್ಮೂಲಕ ತಾವೊಬ್ಬ 'ಫ್ಯಾಮಿಲಿ ಮ್ಯಾನ್' ಎಂಬಂತೆ ಅವರು ದೇಶದ ಮುಂದೆ ಬಿಂಬಿಸಿಕೊಂಡರು. ತಮ್ಮ ರ್‍ಯಾಲಿ ಮತ್ತು ಸಾರ್ವಜನಿಕ ಪ್ರಚಾರ ಸಭೆಗಳಲ್ಲಿ ಅವರು ಜನಸಾಮಾನ್ಯರನ್ನು ವೇದಿಕೆಯ ಮೇಲೆ ಬರುವಂತೆ ಕರೆಯುತ್ತಿದ್ದರು. ಅಲ್ಲಿ ಅವರೊಂದಿಗೆ ಆಪ್ತವಾಗಿ ಸಂವಾದ ನಡೆಸಿ, ಪ್ರಶ್ನೆಗಳನ್ನು ಕೇಳಿ, ಬಾಂಗ್ಲಾದೇಶಿಗರ ಮನಸ್ಥಿತಿಯನ್ನೂ, ಅವರ ಸಂಕಷ್ಟಗಳನ್ನೂ ಅರ್ಥ ಮಾಡಿಕೊಳ್ಳುತ್ತಿದ್ದರು. ಬಳಿಕ ತಮ್ಮ ಭಾಷಣದಲ್ಲಿ ಆ ಸಮಸ್ಯೆಗಳಿಗೆ ಪರಿಹಾರಗಳನ್ನು ತಿಳಿಸಿ, ಬಿಎನ್‌ಪಿ ಅಧಿಕಾರಕ್ಕೆ ಬಂದರೆ ದೇಶದಲ್ಲಿ ಏನು ಬದಲಾವಣೆಯಾಗಲಿದೆ ಎಂಬುದನ್ನು ಸರಳವಾದ ಭಾಷೆಯಲ್ಲಿ ಹೇಳುತ್ತಿದ್ದರು. ಈ ಉಪಾಯ ಚೆನ್ನಾಗಿ ಕೆಲಸ ಮಾಡಿತು. ಬಾಂಗ್ಲಾದೇಶದ ಮತದಾರರಿಗೆ 'ಫಾರಿನ್ ರಿಟರ್ನ್ಡ್' ನಾಯಕನಲ್ಲಿ ವಿಶ್ವಾಸ ಮೂಡಿತು. ಅವರು ತಾರೀಖ್ ರೆಹಮಾನ್‌ಗೆ ಹತ್ತಿರವಾದರು. ಪ್ರಚಾರದುದ್ದಕ್ಕೂ ಶಾಂತಿ, ಸಹಬಾಳ್ವೆ ಮತ್ತು ಪ್ರಜಾಪ್ರಭುತ್ವದ ಬಗ್ಗೆಯೇ ತಾರೀಖ್ ಮಾತನಾಡುತ್ತಿದ್ದರು. ಬಾಂಗ್ಲಾದೇಶದ ಸಾರ್ವಭೌಮತೆಯ ಬಗ್ಗೆ ಪ್ರಶ್ನೆ ಎದುರಾದಾಗ ಅವರು, 'ದಿಲ್ಲಿಯೂ ಅಲ್ಲ ಪಿಂಡಿಯೂ ಅಲ್ಲ' ಎಂಬ ಘೋಷಣೆ ಮೊಳಗಿಸಿದರು. ಅಂದರೆ ತಾವು ದೆಹಲಿಯ ಒತ್ತಡಗಳಿಗೂ ತಲೆಬಾಗುವುದಿಲ್ಲ, ರಾವಲ್ಪಿಂಡಿಯ ಒತ್ತಡಗಳಿಗೂ ತಲೆಬಾಗುವುದಿಲ್ಲ, ಬದಲಿಗೆ ತಾವು ತಲೆಬಾಗುವುದು ಬಾಂಗ್ಲಾದೇಶದ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಮಾತ್ರ ಎಂದು ಒತ್ತಿ ಹೇಳಿದರು. ಈ ಘೋಷಣೆಯು ಮತದಾರರ ಕಿವಿಯೊಳಗೆ ಗುಂಯ್‌ಗುಡುತ್ತಿತ್ತು. ಶೇಖ್ ಹಸೀನಾರ ಅವಾಮಿ ಲೀಗ್ ಪಕ್ಷದ ಕಾರ್ಯಕರ್ತರು ಅಲ್ಲಿಯವರೆಗೆ ತಾರೀಖ್ ರೆಹಮಾನ್‌ರನ್ನು ಇಷ್ಟಪಡುತ್ತಿರಲಿಲ್ಲ. ಆದರೆ ಅವರ ಪ್ರಚಾರದ ವೈಖರಿಯನ್ನು ನೋಡಿದ ಮೇಲೆ ಅವರಲ್ಲೂ ತಮ್ಮ ದೇಶದ ಬಗ್ಗೆ ಹೊಸ ಆಶಾಭಾವನೆ ಮೂಡಿತು. ಹೀಗಾಗಿ, ಅವಾಮಿ ಲೀಗ್‌ನ ಮತದಾರರಾಗಿದ್ದ ಸಾಕಷ್ಟು ಜನರು ಈ ಚುನಾವಣೆಯಲ್ಲಿ ತಾರೀಖ್ ರೆಹಮಾನ್‌ಗೆ ಮತ ಹಾಕಿದ್ದರೆ ಏನೂ ಆಶ್ಚರ್ಯವಿಲ್ಲ. ಅವಾಮಿ ಲೀಗ್‌ನ ಮೂಲ ಉದ್ದೇಶವೇ ಜಮಾತ್-ಎ-ಇಸ್ಲಾಮಿ ಮತ್ತು ನ್ಯಾಷನಲ್ ಸಿಟಿಜನ್ ಪಾರ್ಟಿ ಅಧಿಕಾರಕ್ಕೆ ಬರುವುದನ್ನು ತಪ್ಪಿಸುವುದಾಗಿತ್ತು. ಅದು ಈಡೇರಬೇಕು ಅಂದರೆ ತಾರೀಖ್ ರೆಹಮಾನ್‌ರನ್ನು ಬೆಂಬಲಿಸಲೇಬೇಕಿತ್ತು. ಈ ರಣತಂತ್ರ ಸಾಕಷ್ಟು ಕೆಲಸ ಮಾಡಿತು. ಜಮಾತ್-ಎ-ಇಸ್ಲಾಮಿ ಪಕ್ಷವು ಬಾಂಗ್ಲಾದೇಶದ ವಿರೋಧ ಪಕ್ಷವಾಗುವಷ್ಟು ಸ್ಥಾನಗಳನ್ನಾದರೂ ಪಡೆಯಿತು. ಆದರೆ, ವಿದ್ಯಾರ್ಥಿ ಚಳವಳಿಯ ಮೂಲಕ ಹುಟ್ಟಿದ ನ್ಯಾಷನಲ್ ಸಿಟಿಜನ್ ಪಾರ್ಟಿ ಹೀನಾಯವಾಗಿ ಸೋತಿತು.

ಹಾಗಂತ ತಾರೀಖ್ ರೆಹಮಾನ್‌ರ ಗೆಲುವಿನೊಂದಿಗೆ ಎಲ್ಲವೂ ಸುಖಾಂತ್ಯವಾಯಿತು ಎಂದೇನೂ ಭಾವಿಸಬೇಕಿಲ್ಲ. ಅವರು ಅಧಿಕಾರಕ್ಕೆ ಬರುವುದರೊಂದಿಗೆ ಇನ್ನಷ್ಟು ಪ್ರಶ್ನೆಗಳು ಹುಟ್ಟಿಕೊಂಡಿವೆ. ಅವರೆದುರು ಸಾಕಷ್ಟು ಸವಾಲುಗಳೂ ಇವೆ. ಅವರು ಬಾಂಗ್ಲಾದೇಶದಲ್ಲಿ ಶಾಂತಿ ಸ್ಥಾಪನೆ ಮಾಡಬಲ್ಲರೇ? ಆರ್ಥಿಕವಾಗಿ ತೀರಾ ದಯನೀಯ ಸ್ಥಿತಿಗೆ ತಲುಪಿರುವ ದೇಶವನ್ನು ಈ ಹಿಂದೆ ಶೇಖ್ ಹಸೀನಾರ ನಾಯಕತ್ವದಲ್ಲಿ ಸಾಧಿಸಿದ್ದ ಆರ್ಥಿಕ ಶ್ರೀಮಂತಿಕೆಯತ್ತ ಮತ್ತೆ ಕೊಂಡೊಯ್ಯಬಲ್ಲರೇ? ಅವರ ಮೇಲೆ ಚೀನಾ ಅಥವಾ ಪಾಕಿಸ್ತಾನ ಎಷ್ಟರ ಮಟ್ಟಿಗೆ ನಿಯಂತ್ರಣ ಸಾಧಿಸುತ್ತವೆ? ಎಲ್ಲಕ್ಕಿಂತ ಮುಖ್ಯವಾಗಿ, ಭಾರತದೊಂದಿಗೆ ಹದಗೆಟ್ಟಿರುವ ಬಾಂಗ್ಲಾದೇಶದ ಸಂಬಂಧವನ್ನು ಅವರು ಸುಧಾರಣೆ ಮಾಡಬಲ್ಲರೇ? ಭಾರತ-ಬಾಂಗ್ಲಾ ಸಂಬಂಧ ಸುಧಾರಣೆಯ ದಾರಿಗೆ ಬರುತ್ತಿದೆ ಎಂದು ಈಗಲೇ ಹೇಳಲು ನಾನು ಸಿದ್ಧನಿಲ್ಲ, ಏಕೆಂದರೆ ಎರಡೂ ದೇಶಗಳ ನಡುವೆ ಇನ್ನೂ ಬಹಳಷ್ಟು ವಿಷಯಗಳಲ್ಲಿ ಸಂಘರ್ಷವಿದೆ.

ಮೊದಲನೆಯದಾಗಿ, ಬಾಂಗ್ಲಾದೇಶದ ಆರ್ಥಿಕತೆಯನ್ನು ಸುಧಾರಿಸುವ ಬಹುದೊಡ್ಡ ಸವಾಲು ತಾರೀಖ್ ರೆಹಮಾನ್‌ರ ಮುಂದಿದೆ. ಮೊಹಮ್ಮದ್ ಯೂನಸ್‌ರ ನೇತೃತ್ವದಲ್ಲಿ ದೇಶದ ಆರ್ಥಿಕತೆ ಗಣನೀಯವಾಗಿ ಕುಸಿದಿದೆ. ಅದನ್ನು ಮೇಲೆತ್ತಿ, ಸ್ಥಿರತೆಯ ಮಟ್ಟಕ್ಕೆ ತರಲು ತಾರೀಖ್ ರೆಹಮಾನ್ ಅಮೆರಿಕದತ್ತ ನೋಡುವ ಸಾಧ್ಯತೆಯಿದೆ. ಚೀನಾ ಕೂಡ ಅವರ ಮೇಲೆ ಕಣ್ಣಿಡಲಿದೆ. ಬಾಂಗ್ಲಾದೇಶದಲ್ಲೊಂದು ಮಿಲಿಟರಿ ನೆಲೆ ಸ್ಥಾಪಿಸಬೇಕೆಂದು ಅಮೆರಿಕ ಬಹಳ ದಿನಗಳಿಂದ ಹವಣಿಸುತ್ತಿದೆ. ಅದಕ್ಕೆ ತಾರೀಖ್ ಅವಕಾಶ ನೀಡುತ್ತಾರೆಯೇ?

ಇನ್ನೂ ಸಾಕಷ್ಟು ಪ್ರಶ್ನೆಗಳಿವೆ. ಆದರೆ ಎಲ್ಲಕ್ಕಿಂತ ದೊಡ್ಡ ಪ್ರಶ್ನೆ ಭಾರತದ ಜತೆಗಿನ ಸಂಬಂಧ ಸುಧಾರಣೆ ಸಾಧ್ಯವಾಗಲಿದೆಯೇ ಎಂಬುದು. ಭೌಗೋಳಿಕವಾಗಿ ಭಾರತ ಮತ್ತು ಬಾಂಗ್ಲಾದೇಶಗಳು ಅತ್ಯಂತ ಹತ್ತಿರದ ನೆರೆರಾಷ್ಟ್ರಗಳು. ಬಾಂಗ್ಲಾದೇಶ ತನ್ನ ಶೇ.94ರಷ್ಟು ಗಡಿಯನ್ನು ಭಾರತದೊಂದಿಗೆ ಹಂಚಿಕೊಂಡಿದೆ. ಹೀಗಾಗಿ ಭಾರತದ ಜತೆಗೆ ಒಳ್ಳೆಯ ಸಂಬಂಧವನ್ನು ಹೊಂದಿರದೆ ಆರ್ಥಿಕವಾಗಿ ಪ್ರಗತಿ ಸಾಧಿಸುವುದನ್ನು ಬಾಂಗ್ಲಾದೇಶ ಊಹೆ ಮಾಡಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಬಾಂಗ್ಲಾದೇಶ್ ನ್ಯಾಷನಲ್ ಪಾರ್ಟಿ (ಬಿಎನ್‌ಪಿ) ಜಯ ಸಾಧಿಸುವುದಕ್ಕೂ ಮೊದಲೇ ಆ ದೇಶದ ಜತೆಗಿನ ಸಂಬಂಧ ಸುಧಾರಣೆ ಮಾಡಿಕೊಳ್ಳಲು ಭಾರತ ಒಂದು ಹೆಜ್ಜೆ ಇರಿಸಿತ್ತು. ತಾರೀಖ್ ರೆಹಮಾನ್‌ರ ತಾಯಿಯಾದ ಖಲೀದಾ ಜಿಯಾ ಅವರ ಅಂತ್ಯಕ್ರಿಯೆಯಲ್ಲಿ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಖುದ್ದಾಗಿ ಭಾಗವಹಿಸಿ, ಪ್ರಧಾನಿ ನರೇಂದ್ರ ಮೋದಿಯವರ ಸಂತಾಪ ಪತ್ರವನ್ನು ಹಸ್ತಾಂತರಿಸಿದ್ದರು.

ಈ ಹಿಂದೆ ಖಲೀದಾ ಜಿಯಾ ಬಾಂಗ್ಲಾದೇಶದ ಪ್ರಧಾನಿಯಾಗಿ ಕೆಲಸ ಮಾಡಿದ್ದ ಕೊನೆಯ ಅವಧಿಯಲ್ಲಿ ಭಾರತದ ಜತೆಗೆ ಅವರ ಸಂಬಂಧ ಅಷ್ಟೇನೂ ಉತ್ತಮವಾಗಿರಲಿಲ್ಲ. ಆದರೆ, ರಾಜಕೀಯ ಮತ್ತು ರಾಜತಾಂತ್ರಿಕ ವ್ಯವಹಾರಗಳಲ್ಲಿ ಬದಲಾವಣೆಗಳು ಯಾವಾಗ ಬೇಕಾದರೂ ಆಗಬಹುದು. ಇಲ್ಲಿ ಶಾಶ್ವತ ಸ್ನೇಹಿತರು ಹಾಗೂ ಶಾಶ್ವತ ಶತ್ರುಗಳು ಯಾರೂ ಇರುವುದಿಲ್ಲ. ಈಗ ಭಾರತದ ಜತೆಗೆ ಸ್ನೇಹದ ಹಾದಿಯಲ್ಲಿ ಸಾಗಲು ತಾರೀಖ್ ರೆಹಮಾನ್‌ರ ಸಮ್ಮುಖದಲ್ಲಿ ಸಾಕಷ್ಟು ಅವಕಾಶಗಳಿವೆ. ಹಾಗೆ ಮಾಡುವುದು ಬಾಂಗ್ಲಾದೇಶಕ್ಕೂ ಒಳ್ಳೆಯದು, ಭಾರತಕ್ಕೂ ಒಳ್ಳೆಯದು.

ಬಾಂಗ್ಲಾದೇಶದ ಭವಿಷ್ಯ ಉಜ್ವಲವಾಗಲಿ. ಅಲ್ಲಿನ ಹೊಸ ನಾಯಕನಿಗೆ ಅಭಿನಂದನೆಗಳು. ಜಮಾತ್-ಎ-ಇಸ್ಲಾಮಿಯಂಥ ಮೂಲಭೂತವಾದಿ ಶಕ್ತಿಗಳನ್ನು ಎದುರಿಸುವ ಶಕ್ತಿಯನ್ನು ಅವರಿಗೆ ದೇವರು ದಯಪಾಲಿಸಲಿ. ನನ್ನ ಪ್ರಾಮಾಣಿಕ ಕಳಕಳಿ ಇಷ್ಟೆ!

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ದೇವಪ್ರಭುತ್ವದ ವಿರುದ್ಧ ಭರ್ಜರಿ ಜನಾದೇಶ



ಅಕ್ಬರ್‌ನಾಮಾ

ಎಂ.ಜೆ.ಅಕ್ಬರ್
vveditoped@gmail.com

ಫೆಬ್ರವರಿ 12ರ ಬೆಳಗ್ಗೆ ಬಾಂಗ್ಲಾದೇಶದ ಜನರು ಎರಡು ಚೂರಿನ ಕನ್ನಡಿ ನೋಡುತ್ತಾ ಕವಲುದಾರಿಯಲ್ಲಿ ನಿಂತಿದ್ದರು. ಒಂದು ಕನ್ನಡಿಯ ಚೂರಿನಲ್ಲಿ ದಾರಿತಪ್ಪಿದ ರಾಷ್ಟ್ರೀಯವಾದ ಕಾಣಿಸುತ್ತಿತ್ತು. ಹದಗೆಟ್ಟ ಸಂದರ್ಭಗಳಿಂದಾಗಿ ಏಕಾಏಕಿ ಪ್ರವರ್ಧಮಾನಕ್ಕೆ ಬಂದ ಹುಸಿ ಹೋರಾಟಗಾರರು ಆ ರಾಷ್ಟ್ರೀಯವಾದವನ್ನು ಹುಟ್ಟುಹಾಕಿದ್ದರು. ಅವರು ಬಾಂಗ್ಲಾದೇಶವನ್ನು ಬಂಗಾಳಿ ಮತ್ತು ಬಾಂಗ್ಲಾದೇಶಿ ಎಂದು ಒಡೆಯಲು ಬಯಸಿದ್ದರು. ಸಂಸ್ಕೃತಿಯೇ ನಮ್ಮ ಗುರುತಿನ ವಂಶವಾಹಿ ಎಂಬ ನಂಬಿಕೆಯನ್ನು ಅವರು ತಿರುಚಿಹಾಕಲು ಯತ್ನಿಸುತ್ತಿದ್ದರು. ಅವರ ರಾಜಕೀಯ ಮುಖವಾಡವಾಗಿ ಮೇಣದ ರೆಕ್ಕೆಯೊಂದಿಗೆ ಸೂರ್ಯನ ಸಮೀಪಕ್ಕೆ ಹಾರುತ್ತಿರುವ ಸ್ವಯಂಘೋಷಿತ ದೇವರಕ್ಷಕರಿದ್ದರು. ದೇಶದಲ್ಲಿ ಅಲ್ಪಸಂಖ್ಯಾತರನ್ನು ಕೂಡ ಸಮಾನವಾದ ಪ್ರಜೆಗಳಂತೆ ಕಾಣುವ ಸಂವಿಧಾನವನ್ನು ಬದಲಿಸಿ, ಅವರನ್ನು ಇತಿಹಾಸದ ಪಳೆಯುಳಿಕೆಗಳು ಎಂಬಂತೆ ಕಾಣುವ ಧರ್ಮಾಧಾರಿತ ಸಂವಿಧಾನವನ್ನು ಜಾರಿಗೆ ತರುವ ಕನಸನ್ನು ಅವರು ಕಾಣುತ್ತಿದ್ದರು.

ಹೀಗಾಗಿ ಬಾಂಗ್ಲಾದೇಶದಲ್ಲಿ ನಡೆಯುತ್ತಿದ್ದ ಗಲಭೆಗಳನ್ನು ನಿಲ್ಲಿಸುವ ಸರಕಾರವನ್ನು ಮತದಾರರು ಆಯ್ಕೆ ಮಾಡಬೇಕಿತ್ತು. ಅವರ ಮುಂದೆ 1947 ಅಥವಾ 1971ರಲ್ಲಿ ಒಂದನ್ನು ಆಯ್ಕೆ ಮಾಡಬೇಕಾದ ಅನಿವಾರ್ಯತೆಯಿತ್ತು. 1947ರಲ್ಲಿ ಒಂದು ದೇಶ ಎಂಬ ಪರಿಕಲ್ಪನೆಗಿಂತ ಹೆಚ್ಚಾಗಿ ಭಾರತ-ವಿರೋಧಿ ಧೋರಣೆಯೊಂದಿಗೆ ಬಂಗಾಳಿ 'ಮಾಟಿಯ' ಮೇಲೆ ಪೂರ್ವ ಪಾಕಿಸ್ತಾನ ಜನಿಸಿತ್ತು. ಅಲ್ಲಿದ್ದ ಬಂಗಾಳಿಗಳಿಗೆ ಬಹಳ ಬೇಗನೆ ತಾವು ಮೋಸಹೋಗಿದ್ದು ಅರ್ಥವಾಗಿತ್ತು. ಅವರು ನಾಗರಿಕತೆಯ ಕಳ್ಳತನದ ಸಂತ್ರಸ್ತರಾಗಿದ್ದರು. ಅವರ ಗುರುತಿನ ತಳಹದಿಯಾಗಿದ್ದ ಭಾಷೆಯನ್ನೇ ಅವರಿಂದ ಪಾಕಿಸ್ತಾನದ ಮುಖ್ಯಭೂಮಿಯು ಕಿತ್ತುಕೊಳ್ಳುತ್ತಿತ್ತು.

ಇತಿಹಾಸದ ತಂಪುಕಣ್ಣಿನಿಂದ ಈಗಲೂ ಪರೀಕ್ಷಿಸಬೇಕಾದ ಒಂದು ವ್ಯಂಗ್ಯ ಏನೆಂದರೆ, ಪಾಕಿಸ್ತಾನದ ಮುಸ್ಲಿಂ ಲೀಗ್ ನಿರ್ಮಾತೃಗಳು ಉರ್ದು ಒಂದೇ ತಮ್ಮ ದೇಶದ ಅಧಿಕೃತ ಭಾಷೆಯಾಗಬೇಕೆಂದು ಒತ್ತಾಯಿಸುತ್ತಿದ್ದರು. ದೇಶ ವಿಭಜನೆಯ ಬಳಿಕ ಹುಟ್ಟಿದ ಪಾಕಿಸ್ತಾನಕ್ಕೆ ಭಾರತದ ಬೇರೆ ಬೇರೆ ಭಾಷಿಕ ಭೌಗೋಳಿಕ ಪ್ರದೇಶಗಳ ಬೇರೆ ಬೇರೆ ಚೂರುಗಳು ಸೇರ್ಪಡೆಯಾಗಿದ್ದವು. ಆದರೆ, ಈ ಎಲ್ಲಾ ಪ್ರದೇಶಗಳಲ್ಲೂ ಉರ್ದು ಭಾಷೆಯೇ ಅಧಿಕೃತ ಭಾಷೆಯಾಗಬೇಕೆಂದು ಪಾಕಿಸ್ತಾನದ ನಿರ್ಮಾತೃಗಳು ಬಯಸುತ್ತಿದ್ದರು. ಬಂಗಾಳದಲ್ಲಿ ಬಂಗಾಳಿ, ಪಂಜಾಬ್‌ನಲ್ಲಿ ಪಂಜಾಬಿ, ಸಿಂಧ್‌ನಲ್ಲಿ ಸಿಂಧಿ, ಬಲೂಚಿಸ್ತಾನದಲ್ಲಿ ಬಲೂಚಿ, ಫ್ರಂಟಿಯರ್‌ನಲ್ಲಿ ಪಶ್ತೋ ಭಾಷೆಗಳನ್ನು ಮಾತನಾಡುತ್ತಿದ್ದ ಜನರಿಗೆ ಏಕಾಏಕಿ 'ನಿಮ್ಮ ಭಾಷೆ ಉರ್ದು' ಎಂದು ಪಾಕಿಸ್ತಾನದ ಆಡಳಿತಗಾರರು ಫರ್ಮಾನು ಹೊರಡಿಸಿದರೆ ಏನಾಗಬೇಡ? ವಾಸ್ತವವಾಗಿ ಉರ್ದು ಎಂಬುದು ಮಧ್ಯ ಭಾರತದಲ್ಲಿ ಬಳಕೆಯಲ್ಲಿದ್ದ ಸಂಗೀತಮಯ ಭಾಷೆಯಾಗಿತ್ತು. ಅದನ್ನು ಕೃತಕವಾಗಿ ಸೃಷ್ಟಿಸಿದ ದೇಶದಲ್ಲಿ ಬಂಧಿಸಲು ಸಾಧ್ಯವೇ ಇರಲಿಲ್ಲ. ಹೀಗಾಗಿ 1971ರಲ್ಲಿ ಬಂಗಾಳಿಗಳು ಕೃತಕವಾಗಿ ಸೃಷ್ಟಿಸಿದ ದೇಶದ ಬದಲು ನಾಗರಿಕತೆಯಿಂದ ಬಳುವಳಿ ಪಡೆದ ದೇಶವನ್ನು ಆಯ್ಕೆ ಮಾಡಿಕೊಂಡರು. ಬಾಂಗ್ಲಾದೇಶ ರಚನೆಯಾಯಿತು.

2020ರ ದಶಕದಲ್ಲಿ ಕೆಲ ವಿದೇಶಿ ಶಕ್ತಿಗಳ ಬೆಂಬಲದೊಂದಿಗೆ ಬಾಂಗ್ಲಾದೇಶದ ಪಟ್ಟಭದ್ರರು 1971ರ ವಿದ್ಯಮಾನವನ್ನು ಹಿಮ್ಮುಖಗೊಳಿಸಲು ಯತ್ನಿಸಿದರು. ಭೌಗೋಳಿಕವಾಗಿ ಅಲ್ಲದಿದ್ದರೂ ಸೈದ್ಧಾಂತಿಕವಾಗಿ ಹಿಂದೆ ನಡೆದಿದ್ದರ ದಾಖಲೆಗಳನ್ನು ಅಳಿಸಿಹಾಕುವುದು ಅವರ ಉದ್ದೇಶವಾಗಿತ್ತು. ಅದಕ್ಕಾಗಿ ಚುನಾವಣೆಯ ಮಾರ್ಗವನ್ನು ಆಯ್ಕೆ ಮಾಡಿಕೊಂಡರು. ಮತದಾರರ ಮನದಲ್ಲಿ ಭಾರತದ ವಿರುದ್ಧ ದ್ವೇಷವನ್ನು ಬಿತ್ತಿದರು. ಚುನಾವಣಾ ಯಂತ್ರವನ್ನು ದುರ್ಬಳಕೆ ಮಾಡಿಕೊಂಡು ಪಟ್ಟಭದ್ರರು ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳಲು ಯತ್ನಿಸಿದರು. ಜನರನ್ನು ಶೋಷಿಸಿ, ಅವರನ್ನು ರೊಚ್ಚಿಗೆಬ್ಬಿಸಿ, ಭಾರತದ ವಿರುದ್ಧ ಎತ್ತಿಕಟ್ಟಿ ಲಾಭ ಮಾಡಿಕೊಳ್ಳುವುದು ಅವರ ಉದ್ದೇಶವಾಗಿತ್ತು. ಈ ಕುತಂತ್ರಕ್ಕೆ ಮೊದಲು ಕ್ರಿಕೆಟ್ ಬಲಿಯಾಯಿತು. ಟಿ-20 ವಿಶ್ವಕಪ್‌ನಿಂದ ಬಾಂಗ್ಲಾದೇಶ ಹೊರಗುಳಿಯಿತು. ಎದ್ದೆನೋ ಬಿದ್ದೆನೋ ಎಂಬಂತೆ ಪಾಕಿಸ್ತಾನ ಅಲ್ಲಿಗೆ ಓಡಿಹೋಗಿ ಬೆಂಕಿಗೆ ಗಾಳಿ ಹಾಕಿತು. ಸೈದ್ಧಾಂತಿಕವಾದಿಗಳ ಹಣೆಬರಹ ಏನೆಂದರೆ ಅವರಿಗೆ ಯಾವಾಗಲೂ ಜನಸಾಮಾನ್ಯರ ಮನಸ್ಸನ್ನು ಅರ್ಥಮಾಡಿಕೊಳ್ಳುವ ಸಾಮಾನ್ಯ ಜ್ಞಾನ ಇರುವುದಿಲ್ಲ. ಹೀಗಾಗಿ ಬಾಂಗ್ಲಾದೇಶದ ಮತದಾರರು ಬಂಗಾಳಿ ರಾಷ್ಟ್ರೀಯವಾದವನ್ನು ಹೆಮ್ಮೆಯಿಂದ ಎತ್ತಿ ಮೆರೆಸುವ ಬಾಂಗ್ಲಾದೇಶ್ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ)ಯನ್ನು ಚುನಾವಣೆಯಲ್ಲಿ ಗೆಲ್ಲಿಸಿದರು.

ಬಿಎನ್‌ಪಿಯ ಸಂಸ್ಥಾಪಕ ಜಿಯಾವುರ್ ರೆಹಮಾನ್. ಅವರು ಸೇನೆಯಲ್ಲಿ ಮೇಜರ್ ಹುದ್ದೆಯಲ್ಲಿದ್ದವರು. ತಮ್ಮ ದೇಶವನ್ನು ಪಾಕಿಸ್ತಾನವು ಒಂದು ವಸಾಹತಾಗಿ ಮಾಡಿಕೊಳ್ಳುತ್ತಿರುವುದರ ವಿರುದ್ಧ ಸಿಡಿದೆದ್ದು ಬಾಂಗ್ಲಾ ವಿಮೋಚನೆಗಾಗಿ ಪಣತೊಟ್ಟಿದ್ದರು. 1971ರ ಮಾರ್ಚ್‌ನಲ್ಲಿ ಚಿತ್ತಗಾಂಗ್‌ನ ರೇಡಿಯೋ ಕೇಂದ್ರದಲ್ಲಿ ಕುಳಿತು 'ಬಾಂಗ್ಲಾದೇಶ ಸ್ವತಂತ್ರವಾಗಿದೆ' ಎಂದು ಘೋಷಿಸಿದವರೂ ಅವರೇ. ನಂತರ ಜನರಲ್ ಜಿಯಾವುರ್ ರೆಹಮಾನ್ ಆಗಿ 1977ರಲ್ಲಿ ಬಾಂಗ್ಲಾದೇಶದ ಅಧ್ಯಕ್ಷರಾದರು. 1981ರಲ್ಲಿ ಹತ್ಯೆಯಾಗುವವರೆಗೂ ಅವರು ಅಧ್ಯಕ್ಷರಾಗಿದ್ದರು. ಅವರ ಹೆಂಡತಿಯೇ ಬೇಗಂ ಖಲೀದಾ ಜಿಯಾ. ಪತಿಯ ಮರಣಾನಂತರ ಆಕೆ ಬಿಎನ್‌ಪಿಯನ್ನು ಮುನ್ನಡೆಸಿದರು. ತೀರಾ ಇತ್ತೀಚೆಗೆ ಅವರು ನಿಧನರಾದರು. ಈಗ ಹೊಸತಾಗಿ ಪ್ರಧಾನಿಯಾಗಿರುವ ತಾರೀಖ್ ರೆಹಮಾನ್ ಈ ದಂಪತಿಯ ಮಗ.

ತಾರೀಖ್ ರೆಹಮಾನ್ ಹೆಚ್ಚುಕಮ್ಮಿ ಎರಡು ದಶಕದ ಕಾಲ ವಿದೇಶದಲ್ಲಿ ಅಜ್ಞಾತವಾಸ ಅನುಭವಿಸುತ್ತಿದ್ದರು. ಬಾಂಗ್ಲಾದೇಶಕ್ಕೆ ಬಂದರೆ ಅವರು ಬಂಧಿತರಾಗುವ ಸಾಧ್ಯತೆಯಿತ್ತು. ಶೇಖ್ ಹಸೀನಾರ ಪದಚ್ಯುತಿಯ ಬಳಿಕವೇ ಅವರು ಎಲ್ಲಾ ಸಿದ್ಧತೆ ಮಾಡಿಕೊಂಡು ಸ್ವದೇಶಕ್ಕೆ ಮರಳಿದರು. ಬಾಂಗ್ಲಾದೇಶದ ರಾಜಕೀಯ ವಲಯದಲ್ಲಿರುವ ಬೇರೆಲ್ಲಾ ಹಿರಿಯ ರಾಜಕಾರಣಿಗಳಿಗಿಂತ ಈತ ಹೆಚ್ಚು ಚಾಣಾಕ್ಷ. ತನ್ನ ತಾಯಿಯ ಮರಣಾನಂತರ ಬಿಎನ್‌ಪಿಯ ಚುಕ್ಕಾಣಿ ಹಿಡಿದ ತಾರೀಖ್ ರೆಹಮಾನ್, ಚುನಾವಣಾ ಪ್ರಚಾರದ ಸಮಯದಲ್ಲಿ ನೀಡಿದ 'ಕ್ರಿಕೆಟ್ ಎಂಬುದು ಸೇತುವೆಯಾಗಬೇಕೇ ಹೊರತು ರಣರಂಗವಾಗಬಾರದು' ಎಂಬ ಹೇಳಿಕೆ ಎಲ್ಲರ ಗಮನ ಸೆಳೆದಿತ್ತು.

ಅವರ ರಾಜಕೀಯ ವಿರೋಧಿಗಳು ಜಮಾತ್-ಎ-ಇಸ್ಲಾಮಿ ನೇತೃತ್ವದಲ್ಲಿ ಬಾಂಗ್ಲಾದೇಶಕ್ಕೆ ಪಾಪದಿಂದ ವಿಮೋಚನೆ, ಸ್ವರ್ಗದಲ್ಲಿ ಮುಕ್ತಿ ಹಾಗೂ, ಒಂದು ವೇಳೆ ಇವೆರಡೂ ಸಾಲದೆ ಇದ್ದರೆ, 15,000 ಟಾಕಾ (ಬಾಂಗ್ಲಾದೇಶಿ ಹಣ) ಕೊಡಿಸುವುದಾಗಿ ಭರವಸೆ ನೀಡಿದ್ದರು. ಇಂಥ 'ಅದ್ಭುತವಾದ' ಚುನಾವಣಾ ಪ್ರಣಾಳಿಕೆಯನ್ನು ಸಿದ್ಧಪಡಿಸಲು ಬೇರೆ ಯಾರಿಗೂ ಸಾಧ್ಯವಿಲ್ಲ ಬಿಡಿ! ಆದರೆ, ಬಾಂಗ್ಲಾದೇಶದ ಮತದಾರರಿಗೆ ಇದೇ ಭೂಮಿಯ ಮೇಲೆ ಒಳ್ಳೆಯ ಬದುಕು ಬೇಕಿತ್ತು. ಸತ್ತ ನಂತರದ ಮುಕ್ತಿಗಾಗಿ ಅವರು ಮನೆಯಲ್ಲೋ, ಮಸೀದಿಯಲ್ಲೋ ಕುರಾನ್ ಓದಿಕೊಳ್ಳುತ್ತಿದ್ದರು. ಸ್ವರ್ಗದ ಅಧಿಪತಿಗಳು ತಮ್ಮ ಕೆಲಸವನ್ನು ಭೂಮಿಯ ಮೇಲಿರುವ ಸ್ವಯಂಘೋಷಿತ ಧಾರ್ಮಿಕ ಗುರುಗಳಿಗೆ ಹಸ್ತಾಂತರ ಮಾಡಿಲ್ಲ ಎಂಬುದು ಮತದಾರರಿಗೆ ಗೊತ್ತಿತ್ತು.

ಹೀಗಾಗಿ ಚುನಾವಣೆಯಲ್ಲಿ ಜಮಾತ್‌ಗೆ ಸೋಲಾಗಿ, ಬಿಎನ್‌ಪಿ ಭರ್ಜರಿ ಜಯ ಗಳಿಸಿತು. ವಾಸ್ತವವಾಗಿ ಬಿಎನ್‌ಪಿಯ ಜಯಭೇರಿಯ ಹಿಂದೆ ಇರುವುದು ಮಹಿಳೆಯರು. ಏಕೆಂದರೆ ಧಾರ್ಮಿಕ ಆಮಿಷಗಳ ಹಿಂದೆ ಸ್ತ್ರೀದ್ವೇಷದ ರಹಸ್ಯ ಉದ್ದೇಶಗಳಿರುವುದು ಅವರಿಗೆ ತಿಳಿದಿತ್ತು. ವಿವರವಾದ ಅಂಕಿ-ಅಂಶಗಳು ಇನ್ನೂ ದೊರೆತಿಲ್ಲ, ಆದರೆ ಚುನಾವಣೆಯ ಫಲಿತಾಂಶವನ್ನು ಮೇಲ್ನೋಟಕ್ಕೆ ವಿಶ್ಲೇಷಿಸಿದರೆ ಪುರುಷ ಮತದಾರರಿಗಿಂತ ಮಹಿಳಾ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಿರುವುದು ಕಾಣಿಸುತ್ತದೆ. ಬಾಂಗ್ಲಾದೇಶದ ಮಹಿಳೆಯರ ಕಣ್ಣುಗಳಲ್ಲಿ ಮೌನ ನಿರ್ಧಾರವೊಂದನ್ನು ನೀವು ಮತದಾನಕ್ಕೂ ಮುನ್ನವೇ ಕಾಣಬಹುದಿತ್ತು. ಸಮಸ್ಯೆ ಏನೆಂದರೆ, ಮಾಧ್ಯಮದವರು ಮುಖ ನೋಡುತ್ತಾರೆ, ಆದರೆ ಕಣ್ಣುಗಳನ್ನು ಮರೆತುಬಿಡುತ್ತಾರೆ. ಹೀಗಾಗಿ ಈ ಒಳಸುಳಿ ಹೊರಜಗತ್ತಿಗೆ ಕಾಣಿಸಿರಲಿಲ್ಲ.

ಅತ್ಯಂತ ಅಚ್ಚರಿಯ ಫಲಿತಾಂಶ ಬಂದಿದ್ದು ಢಾಕಾದಲ್ಲಿ. ಜಮಾತ್‌ನವರು ಢಾಕಾ ಮೇಲೆ ಹೆಚ್ಚು ನಿರೀಕ್ಷೆ ಇರಿಸಿಕೊಂಡಿದ್ದರು. ರಾಜಧಾನಿಯಲ್ಲಿರುವ ಜಮಾತ್ ಕ್ಯಾಂಪಸ್‌ಗಳೇ ದೇಶದ ಚುನಾವಣಾ ಫಲಿತಾಂಶವನ್ನು ತಮ್ಮ ಪರವಾಗಿ ತಿರುಗಿಸುತ್ತವೆ ಎಂದು ಅವರು ನಂಬಿದ್ದರು. ಆದರೆ ಢಾಕಾವನ್ನು ಬಿಎನ್‌ಪಿ 'ಕ್ಲೀನ್ ಸ್ವೀಪ್' ಮಾಡಿತು. ಜಮಾತ್‌ಗೆ ಹೆಚ್ಚು ಸೀಟುಗಳು ಬಂದಿದ್ದು ಪಶ್ಚಿಮ ಬಂಗಾಳದ ಗಡಿ ಪ್ರದೇಶದಲ್ಲಿ. ಅಲ್ಲೇಕೆ ಜಮಾತ್ ಪರ ಅಲೆ ಕಾಣಿಸಿಕೊಂಡಿದೆ ಮತ್ತು ಅದರ ಪರಿಣಾಮವೇನು ಎಂಬುದರ ಬಗ್ಗೆ ಅಧ್ಯಯನ ಮಾಡಬೇಕಿದೆ.

ಇಂದು ಅನೇಕ ಮುಸ್ಲಿಂ ದೇಶಗಳಲ್ಲಿ ಮತ್ತು ಮುಸ್ಲಿಂ ಸಮುದಾಯಗಳಲ್ಲಿ ದೊಡ್ಡ ಸಂಘರ್ಷ ನಡೆಯುತ್ತಿದೆ. ಸಾಂಪ್ರದಾಯಿಕ ರಾಜಕೀಯ ವ್ಯವಸ್ಥೆಯ ಬಗ್ಗೆ, ಅದರಲ್ಲಿನ ಸರ್ವಾಧಿಕಾರಿತನದ ಬಗ್ಗೆ, ದೇವಪ್ರಭುತ್ವದ ಬಗ್ಗೆ, ಆಡಳಿತ ವ್ಯವಸ್ಥೆಯ ಮೋಹದ ಬಗ್ಗೆ ಜನರಲ್ಲಿ ಅಸಮಾಧಾನ ಭುಗಿಲೇಳುತ್ತಿದೆ. ಅತ್ಯಂತ ಪ್ರಸಿದ್ಧ ಬಂಗಾಳಿ ನಾಯಕನಾಗಿದ್ದ ಹುಸೇನ್ ಶಹೀದ್ ಸುಹ್ರಾವರ್ದಿ 1940-1950ರ ದಶಕದಲ್ಲಿ ಪ್ರಕಟಿಸಿದ ಅವರ ಆತ್ಮಕತೆಯಲ್ಲಿರುವ ಒಂದು ಘಟನೆ ನನಗೆ ನೆನಪಾಗುತ್ತಿದೆ. ಸುಹ್ರಾವರ್ದಿ ವಿಶಿಷ್ಟ ವ್ಯಕ್ತಿ. ಬೆಂಗಾಲ್ ಮುಸ್ಲಿಂ ಲೀಗ್‌ನ ನಾಯಕರಾಗಿ 1940ರ ದಶಕದಲ್ಲಿ ಅವರು ಪಾಕಿಸ್ತಾನಕ್ಕೂ ಗಾಡ್‌ಫಾದರ್ ಆಗಿದ್ದರು ಮತ್ತು 1950ರ ದಶಕದಲ್ಲಿ ಅವಾಮಿ ಲೀಗ್‌ನ ಮುಖ್ಯಸ್ಥರಾಗಿ ಬಾಂಗ್ಲಾದೇಶಕ್ಕೂ ಗಾಡ್‌ಫಾದರ್ ಆಗಿದ್ದರು. ಕೆಲ ತಿಂಗಳ ಕಾಲ ಅವರು ಪಾಕಿಸ್ತಾನಕ್ಕೆ ಪ್ರಧಾನಿಯೂ ಆಗಿದ್ದರು. ನಂತರ ಆ ದೇಶ ಮತ್ತೆಂದೂ ಸುಧಾರಿಸದ ರೀತಿಯಲ್ಲಿ ಸೇನೆಯ ತೆಕ್ಕೆಗೆ ಹೋಯಿತು. ಅವರು ಪ್ರಧಾನಿಯಾಗಿದ್ದಾಗ ಕೆಲ ದೇಶಗಳ ಜತೆಗೆ ಪಾಕಿಸ್ತಾನ ಮೈತ್ರಿ ಮಾಡಿಕೊಳ್ಳಬೇಕು ಎಂಬ ಸಲಹೆ ಬಂದಿತ್ತು. ಅದಕ್ಕೆ ಸುಹ್ರಾವರ್ದಿ ತಮ್ಮ ಎಂದಿನ ತಮಾಷೆಯ ಶೈಲಿಯಲ್ಲಿ, 'ಜೀರೋಕ್ಕೆ ಜೀರೋ ಸೇರಿಸಿದರೆ ನಿಮಗೆ ಜೀರೋವೇ ಸಿಗುತ್ತದೆ' ಎಂದು ಹೇಳಿದ್ದರು.

ಈಗ ಬಾಂಗ್ಲಾದೇಶ ಆ ಶೂನ್ಯವನ್ನು ಹಿಂದೆ ಬಿಟ್ಟು ಮುಂದೆ ಬಂದಿದೆ. ಅಲ್ಲಿನ ನಾಯಕರು ಸರಿಯಾದ ಬುದ್ಧಿವಂತಿಕೆ ತೋರಿದರೆ ದೇಶ ಪ್ರಗತಿ ಸಾಧಿಸಲು ಸಾಧ್ಯವಿದೆ. ಬಂಗಾಳಿ ರಾಷ್ಟ್ರೀಯವಾದ, ಆರ್ಥಿಕ ಸುಧಾರಣಾವಾದ ಮತ್ತು ಸಾಂಸ್ಕೃತಿಕ ಸೌಹಾರ್ದವನ್ನು ಗಮನದಲ್ಲಿರಿಸಿಕೊಂಡು, ಈ ಮೂರನ್ನೂ ಹದವಾಗಿ ಬೆರೆಸಿ ಆಡಳಿತ ನಡೆಸಿದರೆ ಬಾಂಗ್ಲಾದೇಶ ಅದ್ಭುತವಾಗಿ ಬೆಳೆಯಬಹುದು. ಅಲ್ಲಿನ ಜನರು ತಾವು ಮಾಡಬೇಕಾದ್ದನ್ನು ಮಾಡಿದ್ದಾರೆ. ಈಗ ನಾಯಕರು ಅವರು ಮಾಡಬೇಕಾದ್ದನ್ನು ಮಾಡಬೇಕಿದೆ.

(ಲೇಖಕರು ಹಿರಿಯ ಪತ್ರಿಕೋದ್ಯಮಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 39

ಸಮಾಚಾರ ಸಣ್ಣದಲ್ಲ

ಸೌದಿ: 19 ಸಾವಿರ ಅಕ್ರಮ ವಾಸಿ ಸೆರೆ

ರಿಯಾದ್: ಸೌದಿ ಅರೇಬಿಯ ಆಡಳಿತ ಕಳೆದ ವಾರ ದೇಶಾದ್ಯಂತ ಶೋಧ ಕಾರ್ಯಾಚರಣೆ ನಡೆಸಿ 19 ಸಾವಿರಕ್ಕೂ ಅಧಿಕ ಅಕ್ರಮ ನಿವಾಸಿಗಳನ್ನು ಬಂಧಿಸಿದೆ. ಸೌದಿ ಅರೇಬಿಯದ ಅರಸೊತ್ತಿಗೆಯ ಆದೇಶದ ಮೇರೆಗೆ ಅಧಿಕಾರಿಗಳ ದೊಡ್ಡ ತಂಡ ದೇಶಾದ್ಯಂತ ಫೆ.12ರಿಂದ 18ರವರೆಗೆ ಜಂಟಿ ಶೋಧ ಕಾರ್ಯಾಚರಣೆ ನಡೆಸಿದೆ. ದೇಶದ ರೆಸಿಡೆನ್ಸಿಲಾ(ನಿವಾಸಿ ಕಾಯಿದೆ) ಉಲ್ಲಂಘಿಸಿದ 12,153 ಮಂದಿ, ಗಡಿ ಭದ್ರತಾ ಕಾಯಿದೆ ಉಲ್ಲಂಘಿಸಿದ್ದ 4,103 ಜನರು, ಕಾರ್ಮಿಕ ಕಾಯಿದೆ ಉಲ್ಲಂಘಿಸಿದ ಆರೋಪದಡಿ 2,845 ಜನರನ್ನು ಬಂಧಿಸಿ ಸೆರೆಮನೆಗೆ ದೂಡಿದೆ. ಇವರಷ್ಟೇ ಅಲ್ಲದೇ, ಈಗಾಗಲೇ 14,893 ಅಕ್ರಮ ವಲಸಿಗರನ್ನು ಸೌದಿ ಆಡಳಿತ ದೇಶದಿಂದ ಹೊರಗಟ್ಟಿದೆ. 15,585 ಮಂದಿಯ ದಾಖಲೆಗಳು ಸರಿಯಿರದ ಕಾರಣ, ಅವರಿಗೆ ನೋಟಿಸ್ ನೀಡಿದ್ದು, ಸಮರ್ಪಕ ದಾಖಲೆಗಳನ್ನು ಹಾಜರುಪಡಿಸುವಂತೆ ಸೂಚಿಸಿದೆ.

ಮೇಘಾಲಯ ಅಕ್ರಮ ಕಲ್ಲಿದ್ದಲು ಗಣಿ ಸ್ಥಗಿತ

ಶಿಲ್ಲಾಂಗ್: ಮೇಘಾಲಯ ರಾಜ್ಯದ ಪೂರ್ವ ಜೈಂತಿಯಾ ಹಿಲ್ಸ್ ಜಿಲ್ಲೆಯಲ್ಲಿ ಅಕ್ರಮ ಕಲ್ಲಿದ್ದಲು ಗಣಿಗಾರಿಕೆಯನ್ನು ಪೊಲೀಸರು ಪತ್ತೆ ಮಾಡಿದ್ದಾರೆ. ಫೆ.20ರಂದು ತಡರಾತ್ರಿ ಅಕ್ರಮ ಕಲ್ಲಿದ್ದಲು ಗಣಿಗಾರಿಕೆ- ಅಕ್ರಮ ಸಾಗಣೆ ಜಾಲ ಬಯಲಿಗೆಳೆದು 17,322 ಟನ್ ಕಲ್ಲಿದ್ದಲನ್ನೂ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಜತೆಗೆ 26 ಕಿಲೊ ಗಣಿ ಸ್ಫೋಟಿಸುವ ಸಾಧನಗಳನ್ನೂ ವಶಕ್ಕೆ ಪಡೆಯಲಾಗಿದೆ. ಥಾಂಗ್ಸ್ಕು ಪ್ರದೇಶದಲ್ಲಿ ಫೆ.5ರಂದು ಅಕ್ರಮ ಕಲ್ಲಿದ್ದಲು ಗಣಿಯಲ್ಲಿ ಸ್ಫೋಟವಾಗಿ 34 ಕಾರ್ಮಿಕರು ಬಲಿಯಾದ ಘಟನೆ ಬಳಿಕ ಎಚ್ಚೆತ್ತ ಪೊಲೀಸರು ಅಕ್ರಮ ಕಲ್ಲಿದ್ದಲು ಗಣಿಗಳ ವಿರುದ್ಧ ಕಾರ್ಯಾಚರಣೆ ನಡೆಸಲಾರಂಭಿಸಿದ್ದಾರೆ. ಅಕ್ರಮ ಕಲ್ಲಿದ್ದಲು ಗಣಿಗಳ ವಿರುದ್ಧ ಸಮರ ಸಾರಿರುವ ಪೊಲೀಸರು ಫೆ.5ರ ನಂತರದಲ್ಲಿ ಈವರೆಗೆ 94 ಪ್ರಕರಣಗಳನ್ನು ದಾಖಲಿಸಿ 22 ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ವರದಿಯಾಗಿದೆ.

ತೆಲಂಗಾಣ: ನಕ್ಸಲ್ ದೇವ್‌ಜಿ ಶರಣು

ಹೈದರಾಬಾದ್: ಮಾವೋವಾದಿ ನಕ್ಸಲ್ ಸಂಘಟನೆಯ ಉನ್ನತ ಕಮಾಂಡರ್, ಸಂಘಟನೆಯ ಪ್ರಮುಖ ತಂತ್ರಜ್ಞ 'ತಿಪ್ಪಿರಿ ತಿರುಪತಿ' ಅಲಿಯಾಸ್ ದೇವ್ ಜಿ(62) ಭಾನುವಾರ ತೆಲಂಗಾಣ ಪೊಲೀಸ್ ಎದಿರು ಶರಣಾಗಿದ್ದಾನೆ ಎಂದು ಉನ್ನತ ಪೊಲೀಸ್ ಅಧಿಕಾರಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ತೆಲಂಗಾಣದ ಜಗ್ತಿಯಾಲ್ ಜಿಲ್ಲೆಯ ದೇವ್ ಜಿ, ಈಗ ಶರಣಾಗಿರುವುದರಿಂದ ತೆಲಂಗಾಣದಲ್ಲಿನ ನಕ್ಸಲ್ ಚಟುವಟಿಕೆಗೆ ತೀವ್ರ ಹಿನ್ನಡೆಯಾಗಿದೆ. ತೆಲುಗು ವಲಯದ ನಕ್ಸಲ್ ಸಂಘಟನೆಗೆ ಪ್ರಮುಖ ನಾಯಕರೇ ಇಲ್ಲದಂತಾಗಿದೆ. ಮಾವೋವಾದಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ ನಂಬಲ ಕೇಶವ ರಾವ್ ಅಲಿಯಾಸ್ ಬಸವರಾಜು 2025ರ ಮೇ ತಿಂಗಳಲ್ಲಿ ನಿಧನರಾದರು. ಆ ಬಳಿಕ ದೇವ್ ಜಿಯೇ ಕಮ್ಯುನಿಸ್ಟ್ ಪಕ್ಷದ ಉತ್ತರಾಧಿಕಾರಿಯಾಗಿದ್ದರು. ಮತ್ತೊಬ್ಬ ಹಿರಿಯ ಮಾವೋವಾದಿ ಮಲ್ಲ ರಾಜಿ ರೆಡ್ಡಿ ಹಲವು ಕಾರ್ಯಕರ್ತರ ಸಮೇತ ಈ ಹಿಂದೆಯೇ ಪೊಲೀಸರಿಗೆ ಶರಣಾಗಿದ್ದಾರೆ. ದೇವ್ ಜಿ ವಿರುದ್ಧ 1 ಕೋಟಿ ರು. ಇನಾಮು ಘೋಷಣೆಯಾಗಿತ್ತು. ದೇವ್ ಜಿ ಬಂಧನಕ್ಕೆ ನೆರವಾದವರಿಗೆ ಈ ಮೊತ್ತ ಬಹುಮಾನವಾಗಿ ದೊರೆಯಲಿತ್ತು.

ಬೆತ್ತಲಾಗಿದ್ದವರು ಅಂಗಿ ಬಿಚ್ಚುವ ಅಗತ್ಯವೇನಿತ್ತು

ದೆಹಲಿ: ದೆಹಲಿಯಲ್ಲಿ ಶುಕ್ರವಾರ ಸಮಾಪನಗೊಂಡ 'ಎಐ ಇಂಪ್ಯಾಕ್ಟ್ ಶೃಂಗ'ದಲ್ಲಿ ಯುವ ಕಾಂಗ್ರೆಸ್ಸಿಗರು ಅಂಗಿಬಿಚ್ಚಿ ಪ್ರತಿಭಟಿಸಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ತಿರುಗೇಟು ಕೊಟ್ಟಿದ್ದಾರೆ. 'ಈಗಾಗಲೇ ಬೆತ್ತಲಾದವರು ಮತ್ತೆ ಅಂಗಿ ಕಳಚುವ ಅಗತ್ಯ ಏನಿತ್ತು?' ಎಂದು ಪ್ರಶ್ನೆ ಮಾಡಿದ್ದಾರೆ. ಜಾಗತಿಕ ಮಟ್ಟದ ಕಾರ್ಯಕ್ರಮವನ್ನು ಕಾಂಗ್ರೆಸ್ ಪಕ್ಷ ತನ್ನ ಕೊಳಕು ಮತ್ತು ಬೆತ್ತಲೆ ರಾಜಕೀಯದ ಪ್ರದರ್ಶನಕ್ಕಾಗಿ ಬಳಸಿಕೊಂಡಿದೆ. ಈ ಪ್ರತಿಭಟನೆ ಕಾಂಗ್ರೆಸ್ ಪಕ್ಷ ಸೈದ್ಧಾಂತಿಕವಾಗಿ ಎಷ್ಟು ದಿವಾಳಿಯಾಗಿದೆ ಎಂಬುದನ್ನು ತೋರಿಸಿದೆ. ಕಾಂಗ್ರೆಸ್ ನಾಯಕರು ನನ್ನನ್ನು ದ್ವೇಷಿಸುತ್ತಾರೆ. ಅವರು ನನ್ನ ಸಮಾಧಿ ಅಗೆಯಲು ಬಯಸುತ್ತಾರೆ. ನನ್ನ ತಾಯಿಯನ್ನು ಅವಮಾನಿಸಲು ಹಿಂಜರಿಯುವುದಿಲ್ಲ. ಇನ್ನು ದೇಶವನ್ನು ಬಿಡುವರೇ? ಕಾಂಗ್ರೆಸ್ ತನ್ನದೇ ದೇಶವನ್ನು ದೂಷಿಸುತ್ತಿದೆ. ಈ ರಾಜಕೀಯ ಪಕ್ಷಗಳಿಗೆ ದೇಶದ ಯಶಸ್ಸನ್ನು ಜೀರ್ಣಿಸಿಕೊಳ್ಳಲೂ ಸಾಧ್ಯವಾಗುತ್ತಿಲ್ಲ ಎಂದು ಮೋದಿ ಬೇಸರ ವ್ಯಕ್ತಪಡಿಸಿದ್ದಾರೆ. ಎಐ ಗ್ಲೋಬಲ್ ಶೃಂಗಸಭೆ ಬಿಜೆಪಿ ಕಾರ್ಯಕ್ರಮವಾಗಿರಲಿಲ್ಲ, ಅದು ರಾಷ್ಟ್ರದ ಕಾರ್ಯಕ್ರಮವಾಗಿತ್ತು ಎಂದಿದ್ದಾರೆ.

{ಜೈರಾಮ್ ರಮೇಶ್} ಕಾಂಗ್ರೆಸ್ ಪ್ರ.ಕಾರ್ಯದರ್ಶಿ

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿವಿಧ ದೇಶಗಳ ಮೇಲೆ ವಿಧಿಸಿದ್ದ ಮನಸೋಇಚ್ಛೆ ಪ್ರತಿಸುಂಕಕ್ಕೆ ಅಮೆರಿಕ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿತ್ತು. ಹಾಗಿದ್ದರೂ ಭಾರತ ತರಾತುರಿಯಲ್ಲಿ ಮಧ್ಯಂತರ ವ್ಯಾಪಾರ ಒಪ್ಪಂದ ಮಾಡಿಕೊಂಡಿತು. ಈಗ ಅಂತಿಮ ತೀರ್ಪಿನಲ್ಲಿ ಟ್ರಂಪ್ ಪ್ರತಿಸುಂಕ ಕ್ರಮಗಳೆಲ್ಲಾ ಅಕ್ರಮ ಎಂದಾಗಿದೆ. ಇದು ಮೋದಿ ಸರಕಾರಕ್ಕೆ 'ಅಬ್ ಕಿ ಬಾರ್ ಟ್ರಂಪ್ ಸೆ ಹಾರ್'.

ಕಾಶ್ಮೀರದ ಕಿಶ್ತ್ವಾರ್‌ನಲ್ಲಿ ತೀವ್ರ ಸ್ವರೂಪದ ಕಾರ್ಯಾಚರಣೆ | 2 ಎಕೆ-47 ಬಂದೂಕು-ಗುಂಡುಗಳು ಸೇರಿ ಭಾರೀ ಶಸ್ತ್ರ ವಶ

ಕುಖ್ಯಾತ ಉಗ್ರ ಸೈಫುಲ್ಲಾ ಸೇರಿ ಮೂವರು ಉಗ್ರರು ಹತ

ಕಿಶ್ತ್ವಾರ್: ಜಮ್ಮು-ಕಾಶ್ಮೀರದಲ್ಲಿ ಮತ್ತೆ ಉಗ್ರರು ಕಾಣಿಸಿಕೊಂಡಿದ್ದಾರೆ. ಕಿಶ್ತ್ವಾರ್ ಪ್ರದೇಶದಲ್ಲಿ ರಹಸ್ಯ ಅಡಗುತಾಣದಲ್ಲಿ ಅವಿತುಕೊಂಡಿದ್ದ ಮೂವರು ಭಯೋತ್ಪಾದಕರನ್ನು ಭಾರತೀಯ ಸೇನೆ ಸೇರಿದಂತೆ ಜಂಟಿ ಭಯೋತ್ಪಾದಕ ನಿಗ್ರಹ ಪಡೆ ಭಾನುವಾರ ಹೊಡೆದುರುಳಿಸಿದೆ.

ಪಾಕಿಸ್ತಾನ ಮೂಲದ ಜೈಶ್ ಎ ಮೊಹಮ್ಮದ್ (ಜೆಇಎಂ) ಉನ್ನತ ಕಮಾಂಡರ್, ಭಾರತಕ್ಕೆ ಬೇಕಾಗಿದ್ದ (ಮೋಸ್ಟ್ ವಾಂಟೆಡ್) ಕುಖ್ಯಾತ ಉಗ್ರ ಪ್ರಮುಖ ಸೈಫುಲ್ಲಾ ಸೇರಿದಂತೆ ಮೂವರು ಉಗ್ರರನ್ನು ಭಾರತದ ಜಂಟಿ ಭದ್ರತಾ ಪಡೆಗಳು ಕೊಂದು ಹಾಕಿವೆ.

ಜಮ್ಮು-ಕಾಶ್ಮೀರದ ಕಿಶ್ತ್ವಾರ್‌ನ ಛತ್ರೂ ಪರ್ವತ ಪ್ರದೇಶದಲ್ಲಿ ರಹಸ್ಯ ಅಡಗುತಾಣ ನಿರ್ಮಿಸಿಕೊಂಡು ಅಪಾರ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಟ್ಟುಕೊಂಡು ದೊಡ್ಡ ಮಟ್ಟದಲ್ಲಿ ಭಯೋತ್ಪಾದಕ ದಾಳಿ ನಡೆಸಲು ಹೊಂಚು ಹಾಕಿ ಸಮಯ ಕಾಯುತ್ತಿದ್ದ ಸೈಫುಲ್ಲಾ ಮತ್ತು ಇಬ್ಬರು ಉಗ್ರರಿಗೆ ಭಾರತ ಸೇನೆ ಮತ್ತು ಉಗ್ರ ನಿಗ್ರಹ ಪಡೆ ಯೋಧರು ಭಾನುವಾರ ಬೆಳಗ್ಗೆ ಗುಂಡಿಕ್ಕಿ ಕೊಂದರು. ಬಳಿಕ ಉಗ್ರರ ಅಡಗು ತಾಣದಲ್ಲಿದ್ದ 2 ಎಕೆ-47 ಬಂದೂಕು ಸೇರಿದಂತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡರು. ಆ ನಂತರ ಉಗ್ರರ ಅಡಗುತಾಣವನ್ನು ನಾಶಪಡಿಸಿದರು ಎಂದು ವರದಿಯಾಗಿದೆ.

ಸೈಫುಲ್ಲಾ ಮತ್ತು ಇಬ್ಬರು ಉಗ್ರರು ಛತ್ರೂ ಪರ್ವತ ಪ್ರದೇಶದಲ್ಲಿ ಅಡಗಿರುವ ಮಾಹಿತಿ ಜಮ್ಮು-ಕಾಶ್ಮೀರ ಪೊಲೀಸ್, ಗುಪ್ತಚರ ಬ್ಯೂರೊ ಮತ್ತು ಇತರೆ ಗುಪ್ತಚರ ಮೂಲಗಳಿಂದ ಭಾರತೀಯ ಸೇನೆಗೆ ಸಿಕ್ಕಿದೆ. ತಕ್ಷಣವೇ ಭಾರತೀಯ ಸೇನೆ, ಸಿಐಎಫ್ ಡೆಲ್ಟಾ ಪಡೆ, ಜಮ್ಮು-ಕಾಶ್ಮೀರ ಪೊಲೀಸ್ ವಿಶೇಷ ಪಡೆ ಮತ್ತು ಸಿಆರ್‌ಪಿಎಫ್ 'ಆಪರೇಷನ್ ಟ್ರಾಶಿ-ಐ' ಹೆಸರಿನಲ್ಲಿ ಕಾರ್ಯಾಚರಣೆ ಆರಂಭಿಸಿವೆ. ಜೈಶೆ ಉಗ್ರ ಸಂಘಟನೆ ಕಮಾಂಡರ್ ಸೈಫುಲ್ಲಾ ಮತ್ತು ಇಬ್ಬರು ಅಡಗಿದ್ದ ತಾಣವನ್ನು ಸುತ್ತು ವರಿದಿದೆ. ಕೆಲವು ತಾಸುಗಳ ಕಾಲ ಭದ್ರತಾ ಪಡೆ ಮತ್ತು ಉಗ್ರರ ನಡುವೆ ಗುಂಡಿನ ಚಕಮಕಿ ನಡೆದಿದೆ. ಕಡೆಗೆ ಭದ್ರತಾ ಪಡೆ ಮೂವರು ಉಗ್ರರಿಗೂ ಗುಂಡಿಕ್ಕುವಲ್ಲಿ ಯಶ ಕಂಡಿದೆ.

ಕಾರ್ಯಾಚರಣೆಗೆ ದೊಡ್ಡ ಸವಾಲಿನ ರೀತಿಯಲ್ಲಿದ್ದ ಪರ್ವತ ಪ್ರದೇಶದಲ್ಲಿ ಭಾನುವಾರ ಬೆಳಗ್ಗೆ 11 ಗಂಟೆಗೆ ಆರಂಭವಾದ 'ಆಪರೇಷನ್ ಟ್ರಾಶಿ-ಐ' ಕಾರ್ಯಾಚರಣೆಯಲ್ಲಿ ಉಗ್ರರೊಂದಿಗೆ ಭದ್ರತಾ ಪಡೆಗಳು ಗಂಟೆಗಳ ಕಾಲ ಗುಂಡಿನ ಚಕಮಕಿ ನಡೆಸಿವೆ.

ಉಗ್ರ ಸೈಫುಲ್ಲಾ

ಜೈಶೆ ಉಗ್ರ ಸಂಘಟನೆ ಕಮಾಂಡರ್ ಸೈಫುಲ್ಲಾ ಕಳೆದ ಕೆಲ ವರ್ಷಗಳಿಂದ ಕಿಶ್ತ್ವಾರ್ ಪ್ರದೇಶದಲ್ಲಿ ಭಯೋತ್ಪಾದಕ ಚಟುವಟಿಕೆಗಳಲ್ಲಿ ಸಕ್ರಿಯನಾಗಿದ್ದ. ಭದ್ರತಾ ಪಡೆಗಳ ಮೇಲಿನ ಹಲವು ದಾಳಿಗಳಲ್ಲಿ ಭಾಗಿಯಾಗಿದ್ದ. ಉಗ್ರ ನಿಗ್ರಹ ಪಡೆಗಳು ಈ ಹಿಂದೆ ನಡೆಸಿದ ಹಲವು ಕಾರ್ಯಾಚರಣೆಗಳ ವೇಳೆ ಸ್ವಲ್ಪದರಲ್ಲೇ ತಪ್ಪಿಸಿಕೊಂಡಿದ್ದ.

ಕಿಶ್ತ್ವಾರ್‌ನ ಛತ್ರೂ ಪರ್ವತ ಪ್ರದೇಶದಲ್ಲಿದ್ದ ಉಗ್ರರ ಅಡಗುತಾಣ ಧ್ವಂಸ

ವಿದೇಶಿ ಸಿಗರೇಟ್ ಕಳ್ಳಸಾಗಣೆ: ಇರಾನ್ ನಾಲ್ವರ ಸೆರೆ

ಗಾಂಧಿನಗರ: ಗುಜರಾತ್ ಕರಾವಳಿಯಲ್ಲಿ ಪುಟ್ಟ ನೌಕೆಯಲ್ಲಿ ವಿದೇಶಿ ಸಿಗರೇಟ್‌ಗಳನ್ನು ಕಳ್ಳಸಾಗಣೆ ಮಾಡುತ್ತಿದ್ದ ಜಾಲವನ್ನು ಭಾರತೀಯ ಕರಾವಳಿ ಕಾವಲು ಪಡೆ ಸೆರೆ ಹಿಡಿದಿದೆ. ನಾಲ್ವರು ಇರಾನ್ ಪ್ರಜೆಗಳನ್ನು ಬಂಧಿಸಿ ಅವರಿಂದ 5 ಕೋಟಿ ರು. ಮೌಲ್ಯದ ವಿದೇಶಿ ಸಿಗರೇಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

- ನೌಕೆಯಲ್ಲಿ 5 ಕೋಟಿ ರು. ವಿದೇಶಿ ಸಿಗರೇಟ್ ವಶ
- ಭಾರತೀಯ ಕರಾವಳಿ ಕಾವಲು ಪಡೆ ಕಾರ್ಯಾಚರಣೆ

ಅರಬ್ಬೀ ಸಮುದ್ರದ ಉತ್ತರ ಭಾಗದಲ್ಲಿ ಗುಜರಾತ್ ಕರಾವಳಿಗೆ ಸಮೀಪವಾಗಿ, ದ್ವಾರಕ 'ಯಿಂದ 115 ನಾಟಿಕಲ್ ಮೈಲುಗಳಷ್ಟು ದೂರದಲ್ಲಿ 'ಭಾರತದ ವಿಶೇಷ ಆರ್ಥಿಕ ವಲಯ' (ಇಇಝಡ್)ದಲ್ಲಿ ಸಂಶಯಾಸ್ಪದವಾಗಿ ಶನಿವಾರ ಸಂಚರಿಸುತ್ತಿದ್ದ ವಿದೇಶಿ ಪುಟ್ಟ ನೌಕೆಯನ್ನು ತಡೆದ ಭಾರತೀಯ ಕರಾವಳಿ ಕಾವಲು ಪಡೆ ತಡೆದಿದೆ. ಕರಾವಳಿ ಕಾವಲು ಪಡೆಯ ಮೋಟಾರ್ ಬೋಟ್ ಸಮೀಪಿಸುತ್ತಿರುವುದನ್ನು ಅರಿತ ವಿದೇಶಿ ನೌಕೆಯಲ್ಲಿದ್ದವರು ಪರಾರಿಯಾಗಲು ಯತ್ನಿಸಿದ್ದಾರೆ. ಬಳಿಕ ಕರಾವಳಿ ಕಾವಲು ಪಡೆ ಯೋಧರು ಬೆನ್ನಟ್ಟಿ ವಿದೇಶಿ ನೌಕೆಯನ್ನು ತಡೆದು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ.

ನೌಕೆಯಲ್ಲಿದ್ದ ನಾಲ್ವರು ಇರಾನ್ ಪ್ರಜೆಗಳು ಯಾವುದೇ ಅಧಿಕೃತ ದಾಖಲೆ ಪತ್ರಗಳಿಲ್ಲದೇ ಭಾರತದ ಕಡಲು ಪ್ರದೇಶವನ್ನು ಪ್ರವೇಶಿಸಿದ್ದಕ್ಕೆ ಅವರನ್ನು ಬಂಧಿಸಿದೆ. ಬಳಿಕ ನೌಕೆಯನ್ನು ಪರಿಶೀಲಿಸಿದಾಗ 200 ರಟ್ಟಿನ ಪೆಟ್ಟಿಗೆಗಳಲ್ಲಿ 5 ಕೋಟಿ ರು.ಗಳಷ್ಟು ಬೆಲೆ ಬಾಳುವ ವಿದೇಶಿ ಸಿಗರೇಟ್‌ಗಳು ಇರುವುದು ಪತ್ತೆಯಾಗಿದೆ. ಬಳಿಕ ಇಂಡಿಯನ್ ಕೋಸ್ಟ್ ಗಾರ್ಡ್(ಐಸಿಜಿ) ತಂಡ ವಿದೇಶಿ ನೌಕೆಯನ್ನು, ಅದರಲ್ಲಿದ್ದ ಥುರಾಯ ಸ್ಯಾಟಲೈಟ್ ಸಂಪರ್ಕ ಸಾಧನವನ್ನು ಮತ್ತು 8 ಮೊಬೈಲ್ ಫೋನ್‌ಗಳನ್ನು ವಶಕ್ಕೆ ತೆಗೆದುಕೊಂಡಿದೆ. ಅದರಲ್ಲಿ 4 ಸ್ಮಾರ್ಟ್‌ಫೋನ್‌ಗಳು ಉಪಗ್ರಹ ಸಂಪರ್ಕ ಹೊಂದಿದ್ದವು.

ನೌಕೆಗೆ 'ಎಐ ಮುಖ್ತಾರ್' ಎಂದು ಹೆಸರಿಡಲಾಗಿತ್ತು. ಆದರೆ, ನೌಕೆಯನ್ನು ಶ್ರೀಲಂಕಾದ ಕೊಲಂಬೊದಲ್ಲಿ ನೋಂದಾಯಿಸಲಾಗಿತ್ತು. ಆದರೆ, ಇರಾನ್‌ನ ಕಳ್ಳಸಾಗಣೆ ತಂಡ ಅದನ್ನು ಸಿಗರೇಟ್ ಕಳ್ಳಸಾಗಣೆಗೆ ಬಳಸಿಕೊಂಡಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಬಂಧಿತರು ಮತ್ತು ಸಿಗರೇಟ್ ಸಮೇತ ನೌಕೆಯನ್ನು ಪೋರಬಂದರ್ ಬಂದರಿಗೆ ತರಲಾಗಿದೆ.

ಪ್ರಧಾನಿ ಮೋದಿ ಮನ್ ಕಿ ಬಾತ್ 131ನೇ ಸಂಚಿಕೆ ಭಾನುವಾರ ರೇಡಿಯೊ ಪ್ರಸಾರ

ಎ.ಐ ಶೃಂಗದಲ್ಲಿ ಭಾರತದ ಸಾಮರ್ಥ್ಯ ಅನಾವರಣ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಲು ಇಷ್ಟವಾದ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್'ನ 131 ನೇ ಸಂಚಿಕೆಯು ಫೆ.22ರ ಭಾನುವಾರ ಆಕಾಶವಾಣಿಯಲ್ಲಿ ಪ್ರಸಾರವಾಗಿದೆ.

ದೆಹಲಿಯ ಭಾರತ್ ಮಂಟಪಂನಲ್ಲಿ 5 ದಿನಗಳ ಕಾಲ ಜರುಗಿದ, ಶುಕ್ರವಾರ ಸಂಜೆ ಮುಕ್ತಾಯಗೊಂಡ ಎಐ ಇಂಪ್ಯಾಕ್ಟ್ ಶೃಂಗಸಭೆಯ ಬಗ್ಗೆ ಮನ್ ಕಿ ಬಾತ್‌ನಲ್ಲಿ ಉಲ್ಲೇಖಿಸಿದ ಪ್ರಧಾನಿ ಮೋದಿ, 'ಈ ಶೃಂಗಸಭೆ ಮೂಲಕ ಭಾರತದ ಅದ್ಭುತ ಸಾಮರ್ಥ್ಯಗಳನ್ನು ಜಗತ್ತು ನೋಡುವಂತಾಯಿತು'. ತಂತ್ರಜ್ಞಾನದ ಸಹಾಯದಿಂದ ಭಾರತ ತನ್ನ ಪ್ರಾಚೀನ ಜ್ಞಾನವನ್ನು ಹೇಗೆ ಸಂರಕ್ಷಿಸುತ್ತಿದೆ ಎಂಬುದನ್ನು ನೋಡಿ ಶೃಂಗಸಭೆಯಲ್ಲಿದ್ದ ಜಾಗತಿಕ ನಾಯಕರು ಆಶ್ಚರ್ಯಚಕಿತರಾದರು ಎಂದು ಹೆಮ್ಮೆಯಿಂದ ಹೇಳಿಕೊಂಡರು.

ವಿಶೇಷವಾಗಿ 2 ಉತ್ಪನ್ನಗಳು ಅವರನ್ನು ಬಹಳವಾಗಿ ಪ್ರಭಾವಿಸಿದವು. ಮೊದಲ ಉತ್ಪನ್ನ ಅಮುಲ್‌ನ ಮಳಿಗೆಯಲ್ಲಿತ್ತು. ಸಾಕುಪ್ರಾಣಿಗಳ ಚಿಕಿತ್ಸೆಯಲ್ಲಿ ಎಐ ಹೇಗೆ ನೆರವಾಗುತ್ತಿದೆ ಮತ್ತು ರೈತರು 24 ಗಂಟೆ ವಾರದ 7 ದಿನವೂ ಎಐ ಸಹಾಯದಿಂದ ತಮ್ಮ ಡೇರಿ ಚಟುವಟಿಕೆಗಳನ್ನು ಮತ್ತು ಜಾನುವಾರುಗಳನ್ನು ಹೇಗೆ ನಿರ್ವಹಿಸುತ್ತಿದ್ದಾರೆ ಎಂಬುದನ್ನು ಅಮುಲ್ ಮಳಿಗೆಯಲ್ಲಿ ವಿವರಿಸಲಾಯಿತು.

2ನೇ ಉತ್ಪನ್ನ ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ್ದಾಗಿದೆ. ಪ್ರಾಚೀನ ಗ್ರಂಥಗಳು, ಜ್ಞಾನ ಮತ್ತು ಹಸ್ತಪ್ರತಿಗಳನ್ನು ಸಂರಕ್ಷಿಸಲು ಮತ್ತು ಇಂದಿನ ಪೀಳಿಗೆ ಅದಕ್ಕೆ ಹೊಂದಿಕೊಳ್ಳಲು ಅನುವಾಗುವಂತೆ ಕೃತಕ ಬುದ್ಧಿಮತ್ತೆಯನ್ನು ಹೇಗೆ ಬಳಸಿಕೊಳ್ಳಲಾಗುತ್ತಿದೆ ಎಂಬುದನ್ನು ನೋಡಿ ವಿವಿಧ ದೇಶಗಳ ನಾಯಕರು ಬೆರಗಾದರು ಪ್ರಧಾನಿ ಮೋದಿ ಖುಷಿಯಿಂದ ಹೇಳಿಕೊಂಡಿದ್ದಾರೆ.

ಎಐ ಇಂಪ್ಯಾಕ್ಟ್ ಪ್ರದರ್ಶನದಲ್ಲಿ ಸುಶ್ರುತ ಸಂಹಿತ ಆಯ್ಕೆ ಮಾಡಲಾಗಿತ್ತು. ಮೊದಲ ಹಂತದಲ್ಲಿ, ಹಸ್ತಪ್ರತಿಗಳ ಚಿತ್ರದ ಗುಣಮಟ್ಟವನ್ನು ಸುಧಾರಿಸಲು ಮತ್ತು ಅವನ್ನು ಓದಲು ಸಾಧ್ಯವಾಗುವಂತೆ ಮಾಡಲು ತಂತ್ರಜ್ಞಾನ ಬಳಸಲಾಗಿದೆ. 2ನೇ ಹಂತದಲ್ಲಿ, ಚಿತ್ರಗಳನ್ನು ಯಂತ್ರ-ಓದಬಲ್ಲ ಪಠ್ಯವಾಗಿ ಪರಿವರ್ತಿಸಲಾಗಿದೆ. ನಂತರದ ಹಂತದಲ್ಲಿ, ಯಂತ್ರ-ಓದಬಲ್ಲ ಪಠ್ಯವನ್ನು ಎಐ ರೀತಿಯಲ್ಲಿ ಓದಿಸಲಾಗಿದೆ. ಭಾರತೀಯ ಜ್ಞಾನವನ್ನು ಭಾರತದ ಮತ್ತು ವಿದೇಶಿ ಭಾಷೆಗಳಿಗೆ ಹೇಗೆ ಅನುವಾದಿಸಬಹುದು ಎಂಬುದನ್ನು ಸಹ ಪ್ರದರ್ಶಿಸಲಾಯಿತು ಎಂದು ಮೋದಿ ಮನ್ ಕಿ ಬಾತ್‌ನಲ್ಲಿ ಹೇಳಿದರು.

ಕಿರಿಯ ದಾನಿ

ದೇಶದಲ್ಲೇ ಅತ್ಯಂತ ಕಿರಿಯ ಅಂಗಾಂಗ ದಾನಿ ಎನಿಸಿಕೊಂಡ ಕೇರಳದ 10 ತಿಂಗಳ ಶಿಶು ಆಲಿನ್ ಶೆರಿನ್ ಅಬ್ರಹಾಂಳನ್ನು ಪ್ರಧಾನಿ ಮೋದಿ ಸ್ಮರಿಸಿದರು. ಪುಟ್ಟ ಕಂದಮ್ಮನನ್ನು ಕಳೆದುಕೊಂಡ ನೋವು ಆಳವಾದುದು. ಅಂತಹ ಸಮಯದಲ್ಲೂ ಸಂಯಮ ತೋರಿ ಅಂಗಾಂಗ ದಾನಕ್ಕೆ ಸಮ್ಮತಿಸಿದ ಪೋಷಕರಿಗೆ ನಮಸ್ಕಾರ ಎಂದರು.
ಜಯಲಲಿತಾಗೆ ನಮನ: ಫೆ.24 ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಅವರ ಜನ್ಮದಿನ. ಪ್ರಧಾನಿ ಮೋದಿ ಗೌರವ ನಮನ ಸಲ್ಲಿಸಿದರು. ಜನಕಲ್ಯಾಣಕ್ಕೆ ಜೀವನ ಸಮರ್ಪಿಸಿದ ನಾಯಕರು ಸದಾ ಜನಮನದಲ್ಲಿರುತ್ತಾರೆ. ತಮಿಳುನಾಡಿನ ಜನರು ಇಂದಿಗೂ ಜಯಲಲಿತಾ ಅವರನ್ನು ಸ್ಮರಿಸುತ್ತಾರೆ ಎಂದರು.

ದೆಹಲಿ 'ಎಐ' ಶೃಂಗಸಭೆ ಮತ್ತು ಪ್ರಧಾನಿ ಮೋದಿ ಅವರ ಆಹ್ವಾನದ ಮೇರೆಗೆ ಅಧಿಕೃತ ಭಾರತ ಪ್ರವಾಸ ಹಮ್ಮಿಕೊಂಡಿದ್ದ ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾ ಡಿ.ಸಿಲ್ವಾ ಅವರು ರಾಷ್ಟ್ರಪತಿ ಭವನ ಭೇಟಿ ವೇಳೆ ಸಿಕ್ಕ ಆತಿಥ್ಯಕ್ಕೆ ಮನಸೋತರು. ಆ ಕ್ಷಣ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರೆಲ್ಲರ ಕೈಗಳನ್ನೂ ತಮ್ಮ ಬೊಗಸೆಗೆ ತೆಗೆದುಕೊಂಡು ಒಟ್ಟಿಗೇ ಬೆಸೆದಂತೆ ಮಾಡಿ ಬಾಂಧವ್ಯದ ಬಿಸುಪನ್ನು ಅನುಭವಿಸುತ್ತಾ ಭಾವೋದ್ವೇಗಕ್ಕೆ ಒಳಗಾದ ಕ್ಷಣವಿದು.

ಅಸ್ಸಾಂ ಕಾಂಗ್ರೆಸ್‌ನ ಭೂಪೇನ್ ಬಿಜೆಪಿಗೆ

ಗುವಾಹಟಿ: ಅಸ್ಸಾಂ ರಾಜ್ಯ ಕಾಂಗ್ರೆಸ್ ಸಮಿತಿಯ ಮಾಜಿ ಮುಖ್ಯಸ್ಥ ಭೂಪೇನ್ ಕುಮಾರ್ ಬೋರಾ ಆಡಳಿತಾರೂಢ ಪಕ್ಷವಾದ ಬಿಜೆಪಿಗೆ ಭಾನುವಾರ ಸೇರ್ಪಡೆಗೊಂಡಿದ್ದಾರೆ. ಗುವಾಹಟಿಯಲ್ಲಿರುವ ರಾಜ್ಯ ಬಿಜೆಪಿ ಪ್ರಧಾನ ಕಚೇರಿ 'ವಾಜಪೇಯಿ ಭವನ'ದಲ್ಲಿ ಬೆಳಗ್ಗೆ ನಡೆದ ಸಮಾರಂಭದಲ್ಲಿ ಅಸ್ಸಾಂ ಬಿಜೆಪಿ ರಾಜ್ಯಾಧ್ಯಕ್ಷ ದಿಲೀಪ್ ಸೈಕಿಯಾ ಸಮ್ಮುಖ ಬೋರಾ ಅವರು ಕಮಲ ಪಕ್ಷಕ್ಕೆ ಸೇರ್ಪಡೆಯಾದರು. ಬೋರಾ ಕಾಂಗ್ರೆಸ್ ಪಕ್ಷಕ್ಕೆ ಫೆ.16ರಂದೇ ರಾಜೀನಾಮೆ ನೀಡಿದ್ದು, ಕಾಂಗ್ರೆಸ್ ಹೈಕಮಾಂಡ್ ರಾಜೀನಾಮೆ ಸ್ವೀಕರಿಸಿರಲಿಲ್ಲ. ಕಾಂಗ್ರೆಸ್‌ನ ಹಿರಿಯ ನಾಯಕರು ಬೋರಾ ನಿವಾಸಕ್ಕೆ ಧಾವಿಸಿ ಮಾತುಕತೆ ನಡೆಸಿ ಪಕ್ಷದಲ್ಲೇ ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದರು. ಪಕ್ಷದ ವರಿಷ್ಠ ರಾಹುಲ್ ಗಾಂಧಿ ಕೂಡಾ ಬೋರಾ ಜತೆ ಮಾತನಾಡಿದ್ದರು ಎಂದು ವರದಿಯಾಗಿತ್ತು. 126 ಸದಸ್ಯ ಬಲದ ಅಸ್ಸಾಂ ವಿಧಾನ ಸಭೆಗೆ ಮಾರ್ಚ್-ಏಪ್ರಿಲ್‌ನಲ್ಲಿ ಚುನಾವಣೆ ನಡೆಯಲಿದ್ದು, ಬೋರಾ ನಿರ್ಗಮನದಿಂದ ಕಾಂಗ್ರೆಸ್ ಪಕ್ಷಕ್ಕೆ ರಾಜ್ಯದಲ್ಲಿ ಹಿನ್ನಡೆಯಾಗಿದೆ ಎಂದು ವ್ಯಾಖ್ಯಾನಿಸಲಾಗಿದೆ.

ದಾಳಿಗೆ ಸಜ್ಜಾಗಿ ಕಾಯುತ್ತಿರುವ ಅಮೆರಿಕ

ಇರಾನ್‌ನಲ್ಲಿ ಮತ್ತೆ ಪ್ರತಿಭಟನೆ

ಟೆಹ್ರಾನ್: ಇರಾನ್ ಸುತ್ತ ಯುದ್ಧ ನೌಕೆ, ಯುದ್ಧ ವಿಮಾನಗಳು, ದಾಳಿಯಲ್ಲಿ ನುರಿತ ಸೇನಾಪಡೆಗಳನ್ನು ಗುಡ್ಡೆ ಹಾಕಿಕೊಂಡಿರುವ ಅಮೆರಿಕ ದಾಳಿಗೆ ಸಮಯ ಕಾಯುತ್ತಿದ್ದರೆ, ಇರಾನ್ ದೇಶದೊಳಗೂ ಪರಿಸ್ಥಿತಿ ಬಹಳ ಹದಗೆಡುತ್ತಿದೆ. ಸರ್ವಾಧಿಕಾರಿ ಆಯತುಲ್ಲಾ ಕಮೇನಿ ವಿರುದ್ಧ ಇರಾನ್ ನಾಗರಿಕರು ಮತ್ತೊಮ್ಮೆ ರಸ್ತೆಗಿಳಿದು ಹೋರಾಟ ಆರಂಭಿಸಿದ್ದಾರೆ. ಜನವರಿಯಲ್ಲಿ ಹಿಂಸಾತ್ಮಕ ಪ್ರತಿಭಟನೆ, ಪ್ರತಿಭಟನೆ ಧಮನಕ್ಕೆ ಸೇನಾಪಡೆ ಬಳಕೆ, ನೂರಾರು ಜನರ ಸಾವು ಕಂಡಿದ್ದ ಇರಾನ್, ಈಗ ಮತ್ತೊಮ್ಮೆ ಸಾರ್ವಜನಿಕ ಪ್ರತಿಭಟನೆ ಎದುರಿಸುವಂತಾಗಿದೆ. ವಿವಿಧ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಸರಕಾರದ ವಿರುದ್ಧ ಭಾನುವಾರ ಪ್ರತಿಭಟನೆ ನಡೆಸಿದ್ದಾರೆ. ರಜೆ ಅವಧಿ ಮುಗಿದು ಹೊಸ ಸೆಮಿಸ್ಟರ್ ಶುರುವಾಗುತ್ತಿದ್ದಂತೆ ಟೆಹ್ರಾನ್‌ನ ಷರೀಫ್ ತಂತ್ರಜ್ಞಾನ ವಿಶ್ವವಿದ್ಯಾಲಯ ಸೇರಿದಂತೆ ಹಲವು ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿಗಳಿಂದ ಬೃಹತ್ ಪ್ರತಿಭಟನೆ ಶುರುವಾಗಿದೆ. ಮೊದಲಿಗೆ ಶರೀಫ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಶಾಂತಿಯಿಂದಲೇ ಪ್ರತಿಭಟನಾ ಮೆರವಣಿಗೆ ನಡೆಸಿದ್ದರು. ಬಳಿಕ ಪರಿಸ್ಥಿತಿ ಉದ್ವಿಗ್ನಗೊಂಡಿತು. ಪ್ರತಿಭಟನಾಕಾರರು 'ಸರ್ವಾಧಿಕಾರಿಗೆ ಕಿಕ್ ಔಟ್' ಘೋಷಣೆ ಕೂಗಲಾರಂಭಿಸಿದರು. ಬಳಿಕ ಹಿಂಸೆಗೆ ತಿರುಗಿತು. ಟೆಹ್ರಾನ್‌ನಲ್ಲಷ್ಟೇ ಅಲ್ಲ, ಇರಾನ್‌ನ 2ನೇ ದೊಡ್ಡ ನಗರ ಮಶ್ಹಾದ್‌ನಲ್ಲಿಯೂ ವಿದ್ಯಾರ್ಥಿಗಳು ಬೀದಿಗಿಳಿದು 'ಸ್ವಾತಂತ್ರ್ಯ'ದ ಘೋಷಣೆ ಕೂಗಿದರು.

ನಮೋ ಭಾರತ್ ಕಾರಿಡಾರ್ ಉದ್ಘಾಟಿಸಿದ ಪ್ರಧಾನಿ

ಮೀರತ್‌ನಲ್ಲಿ ಭಾರತದ ಅತಿವೇಗದ ಮೆಟ್ರೊ

ಮೀರತ್: ಉತ್ತರ ಪ್ರದೇಶ ರಾಜ್ಯದ ಮೀರತ್ ನಗರದಲ್ಲಿ 2 ಪ್ರಮುಖ ರೈಲು ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಲೋಕಾರ್ಪಣೆ ಮಾಡಿದರು.

ದೆಹಲಿ-ಮೀರತ್ ರ್‍ಯಾಪಿಡ್ ರೈಲ್ ಕಾರಿಡಾರ್ ಶುರು

23 ಕಿಮೀ ಉದ್ದ ಮಾರ್ಗದ ಮೀರತ್ ಮೆಟ್ರೊ ಸೇವೆಗೆ ಚಾಲನೆ ನೀಡಲಾಗಿದ್ದು, ಇದು ಭಾರತದಲ್ಲೇ ಅತಿವೇಗದ ಮೆಟ್ರೊ ವ್ಯವಸ್ಥೆ ಎನಿಸಿಕೊಂಡಿದೆ. ಅಲ್ಲದೇ, ಪ್ರಧಾನಿ ಮೋದಿ ಮೆಟ್ರೊದಲ್ಲಿ ಪ್ರಯಾಣವನ್ನೂ ಮಾಡಿದರು. ಪ್ರಯೋಗಾರ್ಥ ಸಂಚಾರಕ್ಕೆ ಆಹ್ವಾನಿತರಾಗಿದ್ದ ವಿದ್ಯಾರ್ಥಿಗಳ ಜತೆಗೆ ಸಂವಾದವನ್ನೂ ನಡೆಸಿದರು.

ಮೀರತ್ ಮೆಟ್ರೊ ರೈಲಿನ ಕಾರ್ಯಾಚರಣೆಯ ವೇಗ ಗಂಟೆಗೆ 120 ಕಿಮೀನಷ್ಟಿದೆ. ಹಾಗಾಗಿಯೆ ಇದನ್ನು ಸದ್ಯ ಭಾರತದ ಅತಿವೇಗದ ಮೆಟ್ರೊ ಸೇವೆ ಎನ್ನಲಾಗಿದೆ. 23 ಕಿಮೀ ಉದ್ದವಾಗಿರುವ ಈ ಮೆಟ್ರೊ ಸಂಪರ್ಕ ಜಾಲದಲ್ಲಿ 16 ಕಿಮೀ ಎಲಿವೇಟೆಡ್ ಟ್ರ್ಯಾಕ್ ಇದೆ. 7 ಕಿಮೀ ಟ್ರ್ಯಾಕ್ ನೆಲದಾಳದಲ್ಲಿದೆ. ಈ ಮೆಟ್ರೊ ಕಾರಿಡಾರ್‌ನಲ್ಲಿ 21 ಕಿಮೀಗಳಷ್ಟು ದೂರವನ್ನು 30 ನಿಮಿಷದಲ್ಲಿ ಕ್ರಮಿಸಬಹುದಾಗಿದೆ. ಇದರ ಮಾರ್ಗದಲ್ಲಿ 12 ನಿಲ್ದಾಣಗಳಿವೆ. ಜನದಟ್ಟಣೆ ಅವಧಿಯಲ್ಲಿ ಮೆಟ್ರೊ ರೈಲು ಪ್ರತಿ 5 ನಿಮಿಷಗಳಿಗೊಮ್ಮೆ ಸಂಚರಿಸುತ್ತವೆ. ಉಳಿದ ಸಮಯಗಳಲ್ಲಿ 10ರಿಂದ 15 ನಿಮಿಷಗಳಿಗೊಮ್ಮೆ ಮೆಟ್ರೊ ರೈಲು ಸಂಚಾರ ನಡೆಸುತ್ತವೆ.

ರ್‍ಯಾಪಿಡ್ ರೈಲ್ ಕಾರಿಡಾರ್

ಇದೇ ವೇಳೆ, ರಾಷ್ಟ್ರ ರಾಜಧಾನಿ ನಗರ ದೆಹಲಿ ಮತ್ತು ಮೀರತ್ ನಗರವನ್ನು ಸಂಪರ್ಕಿಸುವ 82 ಕಿಮೀ ಉದ್ದದ 'ನಮೋ ಭಾರತ್ ರೈಲು ಕಾರಿಡಾರ್' ಆರಂಭಗೊಂಡಿದ್ದು, ನಮೋ ಭಾರತ್ ಸೆಮಿ ಸ್ಪೀಡ್ ಟ್ರೈನುಗಳು ಚಲಿಸುತ್ತವೆ. ದೆಹಲಿಯಿಂದ ಮೀರತ್‌ವರೆಗೆ 'ರ್‍ಯಾಪಿಡ್ ರೈಲ್ ಕಾರಿಡಾರ್'ನಲ್ಲಿ ನಮೋ ಭಾರತ್ ಟ್ರೈನ್‌ಗೆ ಶತಾಬ್ದಿ ನಗರ ನಿಲ್ದಾಣದಲ್ಲಿ ಪ್ರಧಾನಿ ಮೋದಿ ಚಾಲನೆ ನೀಡಿದರು. ಮೊದಲು 2 ಗಂಟೆಯಿದ್ದ ಈ ಮಾರ್ಗದ ಪ್ರಯಾಣ ಅವಧಿ ಈಗ 55 ನಿಮಿಷಕ್ಕೆ ಇಳಿಕೆಯಾಗಿದೆ. ಗಂಟೆಗೆ 180 ಕಿಮೀ ವೇಗದಲ್ಲಿ ಚಲಿಸುವಂತೆ ನಮೋ ಭಾರತ್ ರೈಲುಗಾಡಿಗಳನ್ನು ವಿನ್ಯಾಸ ಮಾಡಲಾಗಿದೆ. ಪ್ರಸ್ತುತ ಈ ರೈಲಿನ ಗರಿಷ್ಠ ಆಪರೇಷನಲ್ ಸ್ಪೀಡ್(ಕಾರ್ಯಾಚರಣೆ ವೇಗ) ಗಂಟೆಗೆ 160 ಕಿಮೀಗಳಿಗೆ ಮಿತಿ ಮಾಡಲಾಗಿದೆ.

ರಾಜ್ಯದಲ್ಲಿ ಕೇರಳ-ಕೇಂದ್ರಾಡಳಿತದಲ್ಲಿ ಲಕ್ಷದ್ವೀಪ ಕನಿಷ್ಠ ಹೆಸರು ಡಿಲಿಟ್ | ಒಟ್ಟು 1.70 ಕೋಟಿ ಹೆಸರು ರದ್ದು

ಎಸ್‌ಐಆರ್: ಗುಜರಾತ್‌ನಲ್ಲಿಯೇ ಅಧಿಕ ಮತದಾರರ ಹೆಸರು ಕಡಿತ

ದೆಹಲಿ: ಕೇಂದ್ರ ಚುನಾವಣಾ ಆಯೋಗ 6 ರಾಜ್ಯಗಳು ಮತ್ತು 3 ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ನಡೆಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು, ಪರಿಷ್ಕೃತ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಿದೆ. ಇದರಲ್ಲಿ ಗುಜರಾತ್ ರಾಜ್ಯದಲ್ಲಿಯೇ ಅತ್ಯಧಿಕ ಸಂಖ್ಯೆಯಲ್ಲಿ ಅನರ್ಹ ಮತದಾರರ ಹೆಸರುಗಳು ಮತದಾರರ ಪಟ್ಟಿಯಿಂದ ಡಿಲಿಟ್ ಆಗಿದ್ದರೆ, ಲಕ್ಷದ್ವೀಪದಲ್ಲಿ ಅತ್ಯಂತ ಕಡಿಮೆ ಸಂಖ್ಯೆಯ ಮತದಾರರ ಹೆಸರು ಮತದಾರರ ಪಟ್ಟಿಯಿಂದ ನಿವಾರಣೆ ಮಾಡಲಾಗಿದೆ.

ರಾಜ್ಯಗಳ ಪಟ್ಟಿಯಲ್ಲಿ ಗುಜರಾತ್ ರಾಜ್ಯದಲ್ಲಿಯೇ ಅತ್ಯಧಿಕ ಸಂಖ್ಯೆಯ ಮತದಾರರ ಹೆಸರು ಮತದಾರರ ಪಟ್ಟಿಯಿಂದ ತೆಗೆದು ಹಾಕಲಾಗಿದ್ದರೆ, ಕೇರಳದಲ್ಲಿ ಅತಿ ಕಡಿಮೆ ಸಂಖ್ಯೆಯ ಮತದಾರರು ಅನರ್ಹಗೊಂಡಿದ್ದಾರೆ. ರಾಜ್ಯಾವಾರು ಪಟ್ಟಿ ಪ್ರಕಾರ ಗುಜರಾತ್‌ನಲ್ಲಿದ್ದ 5,08,43,436 ಮತದಾರರಲ್ಲಿ 68,12,711 ಮಂದಿ(ಶೇ.13.40) ಅನರ್ಹರಾಗಿದ್ದಾರೆ. ಅಂದರೆ, ಅಧಿಕೃತ ವಿಳಾಸದಲ್ಲಿ ವಾಸವಿರದ, ಬೇರೆಡೆಗೆ ಸ್ಥಳಾಂತರಗೊಂಡಿರುವ, ಅಥವಾ ನಕಲಿ ಮತದಾರರ ಹೆಸರುಗಳಾಗಿದ್ದು, ಪಟ್ಟಿಯಿಂದ ಕೈಬಿಡಲಾಗಿದೆ. ಕಡೆಗೆ 4,40,30,725 ಮತದಾರರು ಪರಿಷ್ಕೃತ ಪಟ್ಟಿಯಲ್ಲಿ ಉಳಿದಿದ್ದಾರೆ.



ರಾಜ್ಯಗಳು: ಛತ್ತೀಸ್‌ಗಢ ರಾಜ್ಯದಲ್ಲಿನ ಮತದಾರರ ಪಟ್ಟಿಯಲ್ಲಿದ್ದ 2,12,30,737 ಹೆಸರುಗಳಲ್ಲಿ 24,99,823 ಮತದಾರರು(ಶೇ.11.77)ಅನರ್ಹರಾಗಿದ್ದಾರೆ. ಪರಿಷ್ಕೃತ ಮತದಾರರ ಪಟ್ಟಿಯಲ್ಲಿ 1,87,30,914 ಮಂದಿ ಉಳಿದಿದ್ದಾರೆ. ಗೋವಾದಲ್ಲಿನ 11,85,034 ಮತದಾರರಲ್ಲಿ 1,27,468ರ ಹೆಸರು(ಶೇ.10.75) ಡಿಲಿಟ್ ಆಗಿವೆ. ಪರಿಷ್ಕೃತ ಪಟ್ಟಿಯಲ್ಲಿ 10,57,566 ಮತದಾರರಿದ್ದಾರೆ. ಮಧ್ಯಪ್ರದೇಶ ರಾಜ್ಯದ ಮತದಾರ ಪಟ್ಟಿ ಪ್ರಕಾರ ಮೊದಲಿಗೆ 5,74,06,143 ಮತದಾರರಿದ್ದು, ಎಸ್‌ಐಆರ್‌ನಿಂದ 34,25,078 (ಶೇ.5.97) ಮತದಾರರು ದೃಢೀಕರಣಗೊಳ್ಳದ ಕಾರಣ ಕೈಬಿಡಲಾಗಿದೆ. ಕಡೆಗೆ 5,39,81,065 ಮತದಾರರು ಪರಿಷ್ಕೃತ ಪಟ್ಟಿಯಲ್ಲಿದ್ದಾರೆ. ರಾಜಸ್ಥಾನದಲ್ಲಿದ್ದ 5,46,56,215 ಮತದಾರರಲ್ಲಿ 31,36,286 ಮಂದಿ(ಶೇ.5.74) ಅನರ್ಹರಾಗಿದ್ದಾರೆ. ಕಡೆಗೆ 5,15,19,929 ಮತದಾರರು ಪರಿಷ್ಕೃತ ಪಟ್ಟಿಯಲ್ಲಿದ್ದಾರೆ. ಕೇರಳ ರಾಜ್ಯ ಮತದಾರರ ಪಟ್ಟಿಯಲ್ಲಿದ್ದ 2,78,50,855 ಹೆಸರುಗಳಲ್ಲಿ 8,97,211 ಮತದಾರರ(ಶೇ.3.22) ಕೈಬಿಡಲಾಗಿದೆ. ಪರಿಷ್ಕೃತ ಪಟ್ಟಿಯಲ್ಲಿ 2,69,53,644 ಮತದಾರರು ಉಳಿದಿದ್ದಾರೆ. ಕೇರಳದ ಪರಿಷ್ಕೃತ ಪಟ್ಟಿಯಲ್ಲಿ ಪುರುಷ ಮತದಾರರು 1,31,26,048, ಮಹಿಳಾ ಮತದಾರರು 1,38,27,319 ಮತ್ತು ತೃತೀಯ ಲಿಂಗಿ ಮತದಾರರು 277 ಸೇರಿ ಪರಿಷ್ಕೃತ ಪಟ್ಟಿಯಲ್ಲಿ ಒಟ್ಟು 2,69,53,644 ಮತದಾರರಿದ್ದಾರೆ. ಎಸ್‌ಐಆರ್ ದೃಢೀಕರಣಕ್ಕೆ 36.88 ಲಕ್ಷ ಮತದಾರರಿಗೆ ದಾಖಲೆ ಸಮೇತ ಹಾಜರಾಗುವಂತೆ ನೋಟಿಸ್ ನೀಡಲಾಗಿದೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕೇಂದ್ರ ಚುನಾವಣಾ ಆಯೋಗ http://electoralsearch.eci.gov.in ಲಿಂಕ್ ಹಂಚಿಕೊಂಡಿದ್ದು, ಮತದಾರರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದನ್ನು ಪರಿಶೀಲಿಸಿಕೊಳ್ಳಬಹುದಾಗಿದೆ.

ರಾಜ್ಯಗಳು	ಮತದಾರರ ಪಟ್ಟಿ	ಡಿಲಿಟ್ ಆಗಿದ್ದು	ಪರಿಷ್ಕೃತ ಪಟ್ಟಿ	ಕಡಿತ(ಶೇ.)
ಗುಜರಾತ್	5,08,43,436	68,12,711	4,40,30,725	13.40
ಛತ್ತೀಸ್‌ಗಢ	2,12,30,737	24,99,823	1,87,30,914	11.77
ಗೋವಾ	11,85,034	1,27,468	10,57,566	10.75
ಮಧ್ಯಪ್ರದೇಶ	5,74,06,143	34,25,078	5,39,81,065	5.97
ರಾಜಸ್ಥಾನ	5,46,56,215	31,36,286	5,15,19,929	5.74
ಕೇರಳ	2,78,50,855	8,97,211	2,69,53,644	3.22

ಕೇಂದ್ರಾಡಳಿತ	ಮತದಾರರ ಪಟ್ಟಿ	ಡಿಲಿಟ್ ಆಗಿದ್ದು	ಪರಿಷ್ಕೃತ ಪಟ್ಟಿ	ಕಡಿತ(ಶೇ.)
ಅಂಡಮಾನ್	3,10,404	52,364	2,58,040	16.87
ಪುದುಚೇರಿ	10,21,578	77,367	9,44,211	7.57
ಲಕ್ಷದ್ವೀಪ	57,813	206	57,607	0.35

ಸಮಾಚಾರ ಸಣ್ಣದಲ್ಲ

ಕಾಲೇಜಿಗೆ ಉಚಿತ ಕಂಪ್ಯೂಟರ್ ವಿತರಣೆ

ತಿಪಟೂರು: ರೋಟರಿ ಬೆಂಗಳೂರು ಗುಲ್ಮಹರ್ ಸಂಸ್ಥೆಯ ವತಿಯಿಂದ ಬಡ ಮತ್ತು ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಲಿಂಗದಹಳ್ಳಿ ಬಳಿ ಇರುವ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿಗೆ ಅತ್ಯಂತ ಅವಶ್ಯಕವಾಗಿದ್ದ, ಉನ್ನತ ದರ್ಜೆಯ 20 ಕಂಪ್ಯೂಟರ್‌ಗಳನ್ನು ಕೊಡುಗೆಯಾಗಿ ನೀಡಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಅತ್ಯಂತ ಕಲಿಕಾ ವಾತಾವರಣ ನಿರ್ಮಿಸಲು ಸಹಾಯವಾಗಿದೆ. ಕಂಪ್ಯೂಟರ್‌ವಿತರಿಸುವ ಸಂದರ್ಭದಲ್ಲಿ ರೋಟರಿ ಗುಲ್ಮಹರ್‌ಬೆಂಗಳೂರು ವತಿಯಿಂದ ಅಧ್ಯಕ್ಷ ಶ್ರೀ ಮುರಳಿಕೃಷ್ಣ, ಮಂಜುನಾಥ್ ಹಾಗೂ ಕೈವಲ್ಯ ಹಾಜರಿದ್ದರು. ಪ್ರಸ್ತುತ ಕಾಲೇಜು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಉಚಿತವಾಗಿ ಕಂಪ್ಯೂಟರ್‌ಗಳನ್ನು ಕೊಡುಗೆಯಾಗಿ ನೀಡಿದ್ದನ್ನು ಶ್ಲಾಘಿಸಿದ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಪ್ರಕಾಶ್.ಟಿ. ಹೃದಯಪೂರ್ವಕವಾಗಿ ರೋಟರಿ ಸಂಸ್ಥೆಯವರನ್ನು ಅಭಿನಂದಿಸಿದರು.

ನೀರಿನಲ್ಲಿ ಮುಳುಗಿ ಬಾಲಕ ಸಾವು

ಗುಬ್ಬಿ: ಕುರಿ ಮೈ ತೊಳೆಯಲು ಹೋದ ಯುವಕ ನೀರಿನಲ್ಲಿ ಮುಳುಗಿ ಧಾರುಣ ಸಾವನ್ನಪ್ಪಿದ ಘಟನೆ

ತಾಲೂಕಿನ ಚೇಳೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಸಾರಿಗೆಪಾಳ್ಯ ಗ್ರಾಮದಲ್ಲಿ ನಡೆದಿದೆ.ಕುಮಾರ(16) ಎಂಬ ಬಾಲಕ ತಮ್ಮ ಜಮೀನಿನ ಪಕ್ಕದ ಅಂಕಸಂದ್ರ ಕಟ್ಟೆಯಲ್ಲಿ ಕುರಿಗಳ ಮೈ ತೊಳೆಯಲು ಹೋಗಿ ಕಾಲು ಜಾರಿ ಬಿದ್ದು ಹೆತ್ತ ತಾಯಿಯ ಮುಂದೆಯೇ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಹೃದಯವಿದ್ರಾವಕ ಘಟನೆ ನಡೆದಿದೆ. ವಿಷಯ ತಿಳಿದ ಚೇಳೂರು ಪೊಲೀಸರು ಕೂಡಲೇ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ನಾಳೆ ಗುರು ಭಕ್ತಿ ಉತ್ಸವ

ಚಾಮರಾಜನಗರ: ನಗರದ ಶಂಕರಪುರ ಬಡಾವಣೆಯ ವಾದಿರಾಜನಗರದಲ್ಲಿರುವ ಶ್ರೀ ಗುರುರಾಘವೇಂದ್ರ ಸ್ವಾಮಿ ಮಠದಲ್ಲಿ ಫೆ.24 ರಂದು ಗುರು ಭಕ್ತಿ ಉತ್ಸವ ನಡೆಯಲಿದೆ. ಮಂತ್ರಾಲಯ ಪ್ರಭು ಶ್ರೀ ಗುರುರಾಘವೇಂದ್ರಸ್ವಾಮಿಗಳ 431 ನೇ ಜನ್ಮದಿನದ ಪ್ರಯುಕ್ತ ಶ್ರೀ ಮಠದಲ್ಲಿ ಗುರು ಭಕ್ತಿ ಉತ್ಸವ ನಡೆಯಲಿದ್ದು ಬೆಳಗ್ಗೆಯಿಂದಲೇ ವಿಶೇಷ ಪೂಜಾ ಕೈಂಕರ್ಯಗಳು, ಶ್ರೀರಾಘವೇಂದ್ರಸ್ತೋತ್ರ, ಪಂಚಾಮೃತ ಅಭಿಷೇಕ, ಸಾಮೂಹಿಕ ಕನಕಾಭಿಷೇಕ ಸೇರಿದಂತೆ ರಾತ್ರಿ 8 ಕ್ಕೆ ಸಾಮೂಹಿಕ ರಥೋತ್ಸವ ಹಾಗೂ ಪ್ರಸಾದ ವಿನಿಯೋಗ ನಡೆಯಲಿದ್ದು ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಗುರುರಾಯರ ಕೃಪೆಗೆ ಪಾತ್ರರಾಗಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ಅರ್ಚಕರಾದ ಪವನ್ ಮತ್ತು ಶ್ರೀಧರ್‌ಮನವಿ ಮಾಡಿದ್ದಾರೆ.

ತೈಲೂರಮ್ಮನವರ ಜಾತ್ರಾ ಮಹೋತ್ಸವ

ಮದ್ದೂರು: ತಾಲೂಕಿನ ತೈಲೂರು ಗ್ರಾಮದ ಶಕ್ತಿದೇವತೆ ತೈಲೂರಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಪೂಜಾ ಕಾರ್ಯಕ್ರಮಗಳು ಅಪಾರ ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು. ತೈಲೂರಮ್ಮ ಹಬ್ಬದ ಹಿನ್ನೆಲೆಯಲ್ಲಿ ಒಂದು ವಾರಗಳ ಮುಂಚಿತವಾಗಿ ಅಮ್ಮನನ್ನು ಪಟ್ಟಕ್ಕೆ ಕೂರಿಸುವ ರೂಢಿ ಹಲವು ವರ್ಷಗಳಿಂದ ನಡೆದು ಬಂದಿದ್ದು ಅದರಂತೆಯೇ ತೈಲೂರಮ್ಮ ನವರನ್ನು ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ತೈಲೂರಮ್ಮನನ್ನು ಪಟ್ಟಕ್ಕೆ ಕೂರಿಸಿ ಭಕ್ತಿಭಾವ ಮೆರೆದರು. ಪಟ್ಟಲದಮ್ಮ ಟ್ರಸ್ಟ್ ಅಧ್ಯಕ್ಷ ಡಾ. ಚಂದ್ರು ಮಾತನಾಡಿ ಬುಡಕಟ್ಟಿನ ಜನಾಂಗದಲ್ಲಿ ಹಿರಿಯ ಮಗಳಿಗೆ ಪಟ್ಟವನ್ನು ಹಿಂದಿನ ಕಾಲದಿಂದಲೂ ಕಟ್ಟುತ್ತಿದ್ದ ಪದ್ಧತಿಯಿದ್ದು ಅದಕ್ಕಾಗಿಯೇ ಹಬ್ಬದ ಒಂದು ವಾರಗಳ ಮುಂಚಿತವಾಗಿ ತೈಲೂರಮ್ಮನನ್ನು ಪಟ್ಟಕ್ಕೆ ಕೂರಿಸುವುದು ರೂಢಿಯಾಗಿದೆ ಎಂದರು. ''ಒಳ್ಳೆಯವರೆಲ್ಲ ಒಳಗಿರಿ ಹೊರಗಿನವರೆಲ್ಲ ಹೊರಗೆ ಬನ್ನಿ'' ಹರಳನ್ನು ಅಡಬೇಡಿ ಉರುಳಿಯನ್ನು ಹುರಿಬೇಡಿ, ಮೆಣಸಿನಕಾಯಿಯನ್ನು ಸುಡಬೇಡಿ ಕಂಟುಮಟ್ಟು ಮಾಡಬೇಡಿ, ಕೊಂಬಿನ ಟಗರು ಕೊಳಗದ ತಂಬಿಟ್ಟು, ಇನ್ನಿತರ ಪದ್ಧತಿಯನ್ನು ಆಚರಿಸುವಂತೆ ಏಳೂರು ಗ್ರಾಮಗಳ ವ್ಯಾಪ್ತಿಯ ಭಕ್ತಾದಿಗಳು ಅನುಸರಿಸುವುದು ಪದ್ಧತಿಯೆಂದರು. ಪಟ್ಟಕ್ಕೆ ಕೂರಿಸುವ ಪೂಜಾ ಕಾರ್ಯಕ್ರಮದಲ್ಲಿ ವಿವಿಧ ಪೂಜಾ ವಿಧಿ ವಿಧಾನಗಳು ನೆರವೇರಿದವಲ್ಲದೆ ಅಪಾರ ಸಂಖ್ಯೆಯ ಭಕ್ತಾದಿಗಳು ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ವಿರಾಮ
ಪ್ರತಿ ಭಾನುವಾರ

{ಎಚ್.ಡಿ. ಕುಮಾರಸ್ವಾಮಿ} ಕೇಂದ್ರ ಸಚಿವ

ಸಿದ್ದರಾಮಯ್ಯನವರು ಕುರ್ಚಿಗಾಗಿ ಜಾತಿ ಎಳೆದು ತಂದಿದ್ದಾರೆ ಎಂದು ನಾನು ತಮಾಷೆಗೆ ಹೇಳಿದ್ದಲ್ಲ, ಸೀರಿಯಸ್ಸಾಗೇ ಹೇಳಿದ್ದೇನೆ. ತಮಾಷೆಗೆ ಹೇಳಿದ್ದೇನೆ ಎಂದಿಟ್ಟುಕೊಳ್ಳಿ, ನೀವು ಇಷ್ಟುದ್ದ ಉತ್ತರ ಬರೆಯುವ ಅಗತ್ಯವಿರಲಿಲ್ಲ. ಈ ಬಗ್ಗೆ ನೀವು ಸೀರಿಯಸ್ ಆಗಿದ್ದೀರಿ ಎಂಬುದನ್ನು ಬಲ್ಲೆ.

ನರೇಗಾ ಬಚಾವೋ ಬದಲು ಬಯಲು ಸೀಮೆ ಬಚಾವೋ ಆಂದೋಲನ ಮಾಡಬೇಕು: ಸಂಸದ ಸುಧಾಕರ್

ಕಾಂಗ್ರೆಸ್ ನಾಯಕರಿಂದ ಜಿಲ್ಲೆಯ ಅಭಿವೃದ್ಧಿ ಶೂನ್ಯ

ಚಿಕ್ಕಬಳ್ಳಾಪುರ: ಕಾಂಗ್ರೆಸ್ ನಾಯಕರು ಚಿಕ್ಕಬಳ್ಳಾಪುರದಲ್ಲಿ ಫೆ.23 ರಂದು ನರೇಗಾ ಬಚಾವೋ ಆಂದೋಲನ ನಡೆಸುತ್ತಿದ್ದಾರೆ. ಆದರೆ ಈಗ 'ಕಾಂಗ್ರೆಸ್ನಿಂದ ಕರ್ನಾಟಕ ಬಚಾವೋ ಎಂಬ ಆಂದೋಲನದ ಅಗತ್ಯ ಇದೆ ಎಂದು ವ್ಯಂಗ್ಯವಾಡಿದರು. ನಗರದ ಸಂಸದರ ಸ್ವಗೃಹದಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಮತ್ತು ಸಂಸದ ಡಾ.ಕೆ.ಸುಧಾಕರ್‌ಅಭಿಪ್ರಾಯಪಟ್ಟರು. ಕಾಂಗ್ರೆಸ್ ನಾಯಕರು ಹಾಗೂ ಸರಕಾರ ಮಾಡುತ್ತಿರುವ ಅವಾಂತರಗಳಿಂದಾಗಿ ಕರ್ನಾಟಕ ಹಾಗೂ ವಿಶೇಷವಾಗಿ ಚಿಕ್ಕಬಳ್ಳಾಪುರ ಅಪಾಯದ ಸ್ಥಿತಿಯಲ್ಲಿದೆ.ಆದರೆ ಇಂತಹ ಸ್ಥಿತಿಯಲ್ಲಿ ನರೇಗಾ ಬಚಾವೋ ಬದಲು ಬಯಲುಸೀಮೆ ಬಚಾವೋ ಆಂದೋಲನ ಮಾಡಬೇಕು.ಆದರೆ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್,ಜಿಲ್ಲಾ ಉಸ್ತುವಾರಿ ಸಚಿವ ಡಾ.ಸುಧಾಕರ್ ,ಜಿಲ್ಲೆಯ ಅಭಿವೃದ್ಧಿಗೆ ಏನೂ ಮಾಡುತ್ತಿಲ್ಲ ಎಂದು ದೂರಿದ ಅವರು ಶಾಸಕರು ಹಾಗೂ ಸಚಿವರಿಗೆ ಕಾಂಗ್ರೆಸ್ನ ಹೈಕಮಾಂಡ್ ಮೆಚ್ಚಿಸಬೇಕು. ಜನರ ಮೆಚ್ಚುಗೆ ಇವರಿಗೆ ಬೇಕಿಲ್ಲ.ಜನರು ಮೆಚ್ಚುವುದನ್ನು ಮೊದಲು ಮಾಡಿ.

ನಗರದ ಸಂಸದರ ಸ್ವಗೃಹದಲ್ಲಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ಸಂಸದ, ಡಾ.ಕೆ.ಸುಧಾಕರ್‌ಮಾತನಾಡಿದರು.

ಹೈಕಮಾಂಡ್ ಮೆಚ್ಚುವುದು ಬದಿಗಿಡಿ ಎಂದು ಕಿವಿಮಾತು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಮನರೇಗಾ ಯೋಜನೆಗೆ ಹೊಸ ರೂಪ ನೀಡಿ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜ್ ಗಾರ್‌ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ), ಇದನ್ನು ಸಂಕ್ಷಿಪ್ತವಾಗಿ ವಿಬಿ ಜಿ ರಾಮ್ ಜಿ ಎಂದು ಕರೆಯುತ್ತಾರೆ.

ಇದರಲ್ಲಿ ಮಹಾತ್ಮ ಗಾಂಧಿಜಿ ಹೆಸರು ತೆಗೆದುಹಾಕಿದ್ದಾರೆ ಎಂಬುದು ಕಾಂಗ್ರೆಸ್ ಆರೋಪ ಕಳೆದ 60 ವರ್ಷಗಳಲ್ಲಿ 400 ಕ್ಕೂ ಅಧಿಕ ಯೋಜನೆಗಳಿಗೆ, ಸಂಸ್ಥೆಗಳಿಗೆ ನೆಹರು, ರಾಜೀವ್ ಗಾಂಧಿ, ಇಂದಿರಾಗಾಂಧಿ, ಸಂಜಯಗಾಂಧಿ ಹೆಸರು ನಾಮಕರಣ ಮಾಡಿದ್ದಾರೆ. ಆಗ ಇವರಿಗೆ ಮಹಾತ್ಮ ಗಾಂಧೀಜಿಯ ನೆನಪಾಗಲೇ ಇಲ್ಲ ಎಂದು ದೂರಿದರು.

> ಗಲ್ಲಿಗೆ ಒಂದು ಬೀದಿಗೆ ಒಂದು ಬಾರ್ ತೆರೆಯಲು ಅವಕಾಶ ಮಾಡಿದ್ದಾರೆ. ಆ ಗಾಂಧೀಜಿ ನೆನಪಾಗಲಿಲ್ಲ ಗಾಂಧೀಜಿ ಪಾನ ನಿಷೇಧ ಅಂದೋಲನ ಮಾಡಿದ್ದರು.ಗೋ ಹತ್ಯೆಯನ್ನು ಕಾಂಗ್ರೆಸ್ ನಾಯುಕರು ಸಮರ್ಥನೆ ಮಾಡಿಕೊಳ್ಳುತ್ತಾರೆ. ಗಾಂಧೀಜಿ ಗೋ ಸಂರಕ್ಷಣೆ ಮಾಡಿ..
> -ಡಾ.ಕೆ.ಸುಧಾಕರ್, ಸಂಸದ

ಯೋಜನೆಯಲ್ಲಿ ಕೆಂದ್ರ ಸರಕಾರ ಶೇ.80 ರಾಜ್ಯ ಸರಕಾರ ಶೇ.40 ರಷ್ಟು ಅನುದಾನ ಭರಿಸುತ್ತದ. ಆದರೆ ಕಾಂಗ್ರೆಸ್ ಸರಕಾರದ ಬಳಿ ಹಣ ಇಲ್ಲ ಅದಕ್ಕೆ ಇಷ್ಟೊಂದು ವಿರೋಧ ವ್ಯಕ್ತ ಪಡಿಸುತ್ತಿದೆ.

ಜಿಪಿಎಸ್ ಬಳಕೆ ಮಾಡಿ ಫಲಾನುಭವಿಗಳಿಗೆ ನೇರ ಹಣ ಪಾವತಿಯಾಗುತ್ತದೆ ಇದು ಅಕ್ರಮ ತಡಗಟ್ಟಲಾಗುತ್ತದೆ. ಆದರೆ ಕಾಂಗ್ರೆಸ್ ಎಂಜೆಂಟರಿಗೆ ಹಣ ಲೂಟಿ ಮಾಡಲು ಅವಕಾಶ ಸಿಗುವುದಿಲ್ಲಾ ಎಂದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸೀಕಲ್ ರಾಮಚಂದ್ರಗೌಡ, ಚಿಮುಲ್ ನಿರ್ದೇಶಕ ಕೆ.ವಿ.ನಾಗರಾಜ್, ನಗರಸಭೆ ಮಾಜಿ ಅಧ್ಯಕ್ಷ ಎ. ಗಜೇಂದ್ರ, ಮುಖಂಡರಾದ ಮರಳಕುಂಟೆ ಕೃಷ್ಣಮ ಮೂರ್ತಿ,ಅವುಲಕೊಂಡರಾಯಪ್ಪ, ಚನ್ನಪ್ಪರೆಡ್ಡಿ, ಸೀಕಲ್ ಆನಂದಗೌಡ,ಲಿಂಗಾರೆಡ್ಡಿ ಇದ್ದರು.

ಕೋಟ್ಯಂತರ ರು.ಲೂಟಿ

ನರೇಗಾದಲ್ಲಿ ವೇತನ ಪಾವತಿ ಮಾಡಲು ಕಾಲದ ಮಿತಿ ಇರಲಿಲ್ಲ. ಎಷ್ಟೋ ತಿಂಗಳ ನಂತರ ಸಂಬಳ ಕೊಡುತ್ತಿದ್ದರು. ಈಗ 15 ದಿನಗಳ ಒಳಗೆ ವೇತನ ಪಾವತಿಸಬೇಕು ಎಂಬ ನಿಯಮ ಇದೆ. ಇದು ಸುಧಾರಣೆ ಅಲ್ಲವೇ?. ಹಿಂದಿನ ಯೋಜನೆಯಲ್ಲಿ ಫಲಾನುಭವಿ ಅಲ್ಲದವರೂ ಹಣ ಪಡೆಯುತ್ತಿದ್ದರು, ಕೋಟ್ಯಂತರ ರೂಪಾಯಿ ಲೂಟಿ ನಡೆದಿತ್ತು. ಅದನ್ನು ತಡೆಗಟ್ಟಲು ತಂತ್ರ ಜ್ಞಾನ ಬಳಸಲಾಗುತ್ತಿದೆ ಎಂದು ಸಂಸದ, ಡಾ.ಕೆ. ಸುಧಾಕರ್‌ತಿಳಿಸಿದರು.

ಹೆತ್ತೇನಹಳ್ಳಿ ಮಾರಮ್ಮದೇವಿಯ ತಾಳಿ ಕಳ್ಳತನವಾಗಿಲ್ಲ

ತುಮಕೂರು: ಹೆತ್ತೇನಹಳ್ಳಿ ಮಾರಮ್ಮದೇವಿಯ ತಾಳಿ ಕಳವಾಗಿದೆ ಎಂದು ಮಾಜಿ ಶಾಸಕ ಡಿ.ಸಿ.ಗೌರಿಶಂಕರ್‌ಹಾಗೂ ಅವರ ಬಳಗದವರು ಅಪಪ್ರಚಾರ ಮಾಡಿದ್ದಾರೆ. ಆದರೆ ಮಾರಮ್ಮದೇವಿಯ ತಾಳಿ ಕಳವಾಗಿಲ್ಲ. ಕಳವಾಗಿದೆ ಎಂದು ಹೇಳಿ ಹೊಸ ತಾಳಿ ತಂದು ದೇವಿಗೆ ಸಮರ್ಪಣೆ ಮಾಡಿ ವಿವಾದ ಮಾಡಿದ್ದಾರೆ ಎಂದು ಮಾರಮ್ಮ ದೇವಸ್ಥಾನ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ತಿಮ್ಮೇಗೌಡ(ಅಣ್ಣಪ್ಪ), ಈ ಮೂಲಕ ಮಾಜಿ ಶಾಸಕರು ಧಾರ್ಮಿಕ ವಿಚಾರವನ್ನು ರಾಜಕಾರಣ ಮಾಡಿ ತಪ್ಪು ಮಾಹಿತಿ ನೀಡಿ ದೇವಿಯ ಭಕ್ತರಲ್ಲಿ ಗೊಂದಲ ಮೂಡಿಸುತ್ತಿದ್ದಾರೆ. ಅಲ್ಲದೆ ಮಾಜಿ ಶಾಸಕರ ಆಪ್ತರಾದ ಉದ್ಯಮಿ ಜಗದೀಶ್ ದೇವಸ್ಥಾನಕ್ಕೆ 30 ಲಕ್ಷ ರು. ದೇಣಿಗೆ ನೀಡಿರುವುದಾಗಿ ಹೇಳಿದ್ದಾರೆ. ಅವರ ಮಾತು ಸತ್ಯವಾಗಿದ್ದರೆ ದೇವಿಗೆ ಕರ್ಪೂರ ಬೆಳಗಿ ಸಾಬೀತು ಮಾಡಲಿ ಎಂದು ಸವಾಲು ಹಾಕಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಡಿ.ಸಿ.ಗೌರಿಶಂಕರ್‌ಮಾತನಾಡಿದರು.

ದೇವಸ್ಥಾನದಲ್ಲಿ ನಡೆದ ಕಳ್ಳತನ ಪ್ರಕರಣದಲ್ಲಿ ದೇವಿಯ ತಾಳಿ ಕಳವಾಗಿಲ್ಲ. 43 ಗ್ರಾಂ ಚಿನ್ನ ಕಳವಾಗಿದೆ, ಅದರಲ್ಲಿ 20 ಗ್ರಾಂ ಸಿಕ್ಕಿದೆ. ಆದರೆ ತಾಳಿ ಕಳವಾಗಿದೆ ಎಂದು ಮಾಜಿ ಶಾಸಕ ಗೌರಿಶಂಕರ್‌ಹಾಗೂ ಅವರ ಆಪ್ತ ಜಗದೀಶ್ ಅವರು ಹೊಸ ತಾಳಿ ತಂದು ತಹಶೀಲ್ದಾರರ ಸಮ್ಮುಖದಲ್ಲಿ ದೇವಿಗೆ ಸಮರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ತಾಳಿ ಕಳವಾಗಿಲ್ಲ ಎಂದು ತಹಸೀಲ್ದಾರರು ಸ್ಪಷ್ಟನೆ ನೀಡಬೇಕಾಗಿತ್ತು. ಆದರೂ ಆವರು ಏಕೆ ಹೇಳಲಿಲ್ಲ ಎಂದು ಗೊತ್ತಾಗಲಿಲ್ಲ ಎಂದರು.

ದೇವರ ವಿಚಾರದಲ್ಲಿ ರಾಜಕಾರಣ ಮಾಡುವುದು ಸರಿಯಲ್ಲ, ದೇವಿಗೆ ತಾಳಿ ಸಮೇತ ಏನೇನು ಆಭರಣ ಬೇಕು ಎಂಬುದನ್ನು ಕೊಡುವ ಭಕ್ತರು ಸಾಕಷ್ಟು ಜನರಿದ್ದಾರೆ. ಜಗದೀಶ್ ಅವರು ದೇವಿಗೆ ಕೊಡುವ ದೇಣಿಗೆ ಬಗ್ಗೆ ತಮ್ಮದೇನು ತಕರಾರಿಲ್ಲ, ಆದರೆ ಸುಳ್ಳು ಸುದ್ದಿ ಹರಡಿ ದೇವರ ವಿಚಾರದಲ್ಲಿ ಅಪಚಾರ ಮಾಡಬಾರದು ಎಂದು ಹೇಳಿದರು. ಸಮಿತಿ ಸದಸ್ಯರಾದ ಹನುಂತರಾಯಪ್ಪ, ಮಾಯಣ್ಣ, ಗಿರೀಶ್, ಜಗದೀಶ್, ರವಿಕುಮಾರ್ ,ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ನರಸಿಂಹಮೂರ್ತಿ,ವೆಂಕಟೇಶ್, ಶಂಕರಣ್ಣ, ರಾಕೇಶ್ ಇದ್ದರು.

ಕರವೇ ಕಾರ್ಯಕರ್ತರ ಕುಟುಂಬಕ್ಕೆ ಗೌಡರ ನೆರವು

ಕೋಲಾರ: ಇತ್ತೀಚೆಗೆ ಮೃತಪಟ್ಟ ಕರ್ನಾಟಕ ರಕ್ಷಣಾ ವೇದಿಕೆಯ ಇಬ್ಬರು ಕಾರ್ಯಕರ್ತರ ಮನೆಗೆ ಭೇಟಿ ಕೊಟ್ಟಿದ್ದ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣ ಗೌಡರು ಆರ್ಥಿಕ ನೆರವು ವಿತರಿಸಿ ಧೈರ್ಯ ತುಂಬಿದರು.

ಕರವೇ ಜಿಲ್ಲಾ ಸಂಚಾಲಕರಾಗಿದ್ದ ಲೋಕೇಶ್ ಮತ್ತು ಪ್ರಧಾನ ಸಂಚಾಲಕರಾಗಿದ್ದ ಮೆಹಬೂಬ್ ಅವರ ಮನೆಗೆ ಭೇಟಿ ನೀಡಿದ್ದ ನಾರಾಯಣಗೌಡರು ಎರಡೂ ಕುಟುಂಬಗಳ ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿ ವಹಿಸಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಗೌಡರು ಎರಡೂ ಕುಟುಂಬಗಳು ಬಹಳ ವರ್ಷಗಳಿಂದ ಕರವೇ ಹೋರಾಟಗಳಲ್ಲಿ ಗುರುತಿಸಿಕೊಂಡಿದ್ದು ಕನ್ನಡದ ಬಗ್ಗೆ ಇಟ್ಟುಕೊಂಡಿದ್ದ ಪ್ರೀತಿ, ಕಾಳಜಿ ಮಾದರಿಯಾಗಿದೆ. ಇಬ್ಬರೂ ಸಹಾ ಹೃದಯಾಘಾತದಿಂದ ಮೃತಪಟ್ಟಿರುವುದು ಸಂಘಟನೆಗೆ ತುಂಬಲಾರದ ನಷ್ಟ ಉಂಟಾಗಿದೆ

ಕರವೇ ರಾಜ್ಯಾಧ್ಯಕ್ಷ ನಾರಾಯಣಗೌಡರು ಮೃತಪಟ್ಟ ಕಾರ್ಯಕರ್ತರ ಕುಟುಂಬಕ್ಕೆ ನೆರವು ನೀಡಿದರು.

ಎಂದರು. ಕನ್ನಡ ಚಳುವಳಿಗಳಲ್ಲಿ ಪಾಲ್ಗೊಳ್ಳುವವರು ಮಧ್ಯಮ ಅಥವಾ ಕಡುಬಡವರಾಗಿರುತ್ತಾರೆ. ಅನಾಹುತ ಸಂಭವಿಸಿದಾಗ ವೇದಿಕೆ ನುಣುಚುಕೊಳ್ಳುವುದಿಲ್ಲ. ಕೊನೆಯ ತನಕ ಅವರ ಕುಟುಂಬದ ಜತೆಯಿದ್ದು ಸಮಸ್ಯೆಗೆ ಸ್ಪಂದಿಸುವುದು ವೇದಿಕೆಯ ವಾಡಿಕೆಯಾಗಿದೆ ಎಂದು ತಿಳಿಸಿದರು.

ಕರವೇ ಜಿಲ್ಲಾಧ್ಯಕ್ಷ ಮೇಡಿಹಾಳ ರಾಘವೇಂದ್ರ, ಪ್ರಧಾನ ಕಾರ್ಯದರ್ಶಿ ವಿ.ಮುನಿರಾಜು, ಗೌರವಾಧ್ಯಕ್ಷ ಎನ್. ಮುನಿರಾಜು, ಉಪಾಧ್ಯಕ್ಷ ಪ್ರಭಾಕರ್‌ಗೌಡ, ತಾಲೂಕು ಅಧ್ಯಕ್ಷ ಕೋಲಾರ ಶಶಿಕುಮಾರ್ ,ಬಂಗಾರಪೇಟೆ ರಾಮಪ್ರಸಾದ್, ಮಾಲೂರು ಎಂ.ಎಸ್.ಶ್ರೀನಿವಾಸ್, ಕಾರ್ಮಿಕ ಘಟಕದ ಅಧ್ಯಕ್ಷ ಮಂಜುನಾಥಗೌಡ, ಶೇಖರ್‌ಇದ್ದರು.

ಸದಾಕಾಲ ಗುರುಚಿಂತನೆ ಮಾಡುವವರು ಸಹಜಯೋಗಿ

ಚಿಕ್ಕಬಳ್ಳಾಪುರ: ಗುರುವಿಗೆ ಭಕ್ತಿಯಿಂದ ಶರಣಾಗಿ, ಗುರುವಾಕ್ಯದಲ್ಲಿ ನಂಬಿಕೆ ಇಟ್ಟು, ಸದಾಕಾಲ ಗುರುಚಿಂತನೆ ಮಾಡುವವರು ಸಹಜಯೋಗಿಗಳು ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್ ಅಭಿಪ್ರಾಯಪಟ್ಟರು.

ಶ್ರೀಕ್ಷೇತ್ರ ಕೈವಾರದ ಗವಿಯ ಬಳಿಯ ಪ್ರಕೃತಿಯ ಮಡಿಲಲ್ಲಿ ನೆಲೆಸಿರುವ ಯೋಗಾನರಸಿಂಹಸ್ವಾಮಿ ವೈಕುಂಠ ಯಾಗಶಾಲೆಯಲ್ಲಿ ಶ್ರೀರಾಮಭವತಾರಕ ಮಂತ್ರದ ಶ್ರೀರಾಮಕೋಟಿ ಜಪಯಜ್ಞವನ್ನು ಉದ್ಘಾಟಿಸಿ ಮಾತನಾಡಿದರು.

ಆಡಂಬರದಿಂದ ಮುಕ್ತಿಯನ್ನು ಸಾಧಿಸಲು ಸಾಧ್ಯವಿಲ್ಲ. ಮುಕ್ತಿಗೆ ಬೇಕಾದುದು ತತ್ವಚಿಂತನೆ, ಭಕ್ತಿಯ ಸಮರ್ಪಣೆ, ನಿರಂತರ ಸಾಧನೆ ಮಾತ್ರ. ಗುರು ಉಪದೇಶದಲ್ಲಿ ಧೃಡವಾದ ನಂಬಿಕೆಯುಳ್ಳ ಗುರುಭಕ್ತನು ಮಾತ್ರವೇ ಸಾಧನ ಮಾರ್ಗದಲ್ಲಿ ಮುಂದುವರಿದು ಮುಕ್ತಿಯನ್ನು ಪಡೆಯಬಲ್ಲ. ಪ್ರತಿನಿತ್ಯವೂ ಉಸಿರಾಟದಲ್ಲಿಯೇ ಗುರುಸ್ಮರಣೆ ಮಾಡುವಂತಹ ಸಾಧನೆ ಮಾಡಬೇಕು. ಗುರುಪಾದದ ಚಿಂತನೆ ಇರಬೇಕು. ಸಾಧನೆಗೆ ತೊಡಗುವ ಪ್ರತಿ ಸಂದರ್ಭದಲ್ಲೂ ಮೊದಲು ಗುರುವಂದನೆ ಸಲ್ಲಿಸುವುದು ಒಂದು ಬಗೆಯ ಗುರುಸೇವೆಯೇ ಆಗಿದೆ. ಗುರುವನ್ನು ಮರೆತವನ ಸಾಧನೆ ಸಿದ್ಧಿಸುವುದಿಲ್ಲ. ಗುರುಭಕ್ತನಾದ ಸಾಧಕನಿಗೆ ಗುರುಭಕ್ತಿಯೇ ಸಾಧನ ಬಲವಾಗಿ ಪರಿಣಮಿಸಿ ಶೀಘ್ರವಾಗಿ ಲಭಿಸುವ ಸಿದ್ಧಿಯಿಂದ ಮುಕ್ತಿಗೆ ಪಾತ್ರನಾಗುತ್ತಾನೆ ಎಂದರು.

ಶ್ರೀಕ್ಷೇತ್ರ ಕೈವಾರದ ಗವಿಯ ಬಳಿಯ ಪ್ರಕೃತಿಯ ಮಡಿಲಲ್ಲಿ ನೆಲೆಸಿರುವ ಯೋಗಾನರಸಿಂಹಸ್ವಾಮಿ ವೈಕುಂಠ ಯಾಗಶಾಲೆಯಲ್ಲಿ ಶ್ರೀರಾಮಭವತಾರಕ ಮಂತ್ರದ ಶ್ರೀರಾಮಕೋಟಿ ಜಪಯಜ್ಞವನ್ನು ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್ ಮತನಾಡಿದರು.

ಕಾರ್ಯಕ್ರಮಕ್ಕೂ ಮೊದಲಿಗೆ ಘಂಟಾನಾದ, ಸುಪ್ರಭಾತ, ಗೋಪೂಜೆಯನ್ನು ಶ್ರೀಯೋಗಿನಾರೇಯಣ ಮಠದಲ್ಲಿ ನೆರವೇರಿಸಲಾಯಿತು. ನಂತರ ಗವಿಯ ಬಳಿಗೆ ಭಕ್ತರು ಬಂದರು. ಗವಿ ಯಾಗಶಾಲೆಯಲ್ಲಿರುವ ಶ್ರೀಗಣಪತಿ, ಮಹಾಲಕ, ಯೋಗಾನರಸಿಂಹಸ್ವಾಮಿ ಹಾಗೂ ಸದ್ಗುರು ಶ್ರೀಯೋಗಿನಾರೇಯಣ ತಾತಯ್ಯನವರ ವಿಗ್ರಹಗಳಿಗೆ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು. ಶ್ರೀರಾಮಕೋಟಿ ನಡೆಯುವ ಸ್ಥಳದಲ್ಲಿ ವಿಶೇಷ ವೇದಿಕೆಯನ್ನು ಹಾಕಲಾಗಿತ್ತು. ಆ ವೇದಿಕೆಯಲ್ಲಿ ಶ್ರೀಸೀತಾರಾಮರ ವಿಗ್ರಹಗಳನ್ನು, ಕೈವಾರ ತಾತಯ್ಯನವರ ಭಾವಚಿತ್ರಗಳನ್ನು ಹಾಗೂ ಮಧ್ಯದಲ್ಲಿ ದೀಪಸ್ತಂಭವನ್ನು ಇಡಲಾಗಿತ್ತು. ಧರ್ಮಾಧಿಕಾರಿ ದಂಪತಿಗಳು ದೀಪವನ್ನು ಬೆಳಗುವುದರ ಮೂಲಕ ರಾಮಕೋಟಿ ಜಪಯಜ್ಞಕ್ಕೆ ಚಾಲನೆಯನ್ನು ನೀಡಿದರು.

ಕಾರ್ಯಕ್ರಮದಲ್ಲಿ ಶ್ರೀಯೋಗಿನಾರೇಯಣ ಮಠದ ಉಪಾಧ್ಯಕ್ಷರಾದ ಜೆ.ವಿಭಾಕರರೆಡ್ಡಿ, ಖಜಾಂಚಿ ಆರ್ .ಪಿ.ಎಂ.ಸತ್ಯನಾರಾಯಣ್, ಶ್ರೀಯೋಗಿನಾರೇಯಣ ಸಂಕೀರ್ತನಾ ಯೋಜನೆ ಸಂಚಾಲಕರಾದ ವಿದ್ವಾನ್ ವಾನರಾಶಿ ಬಾಲಕೃಷ್ಣ ಭಾಗವತರ್‌ಹಾಗೂ ವಿವಿಧ ಭಾಗಗಳಿಂದ ಬಂದ ಭಕ್ತರು ಭಾಗವಹಿಸಿದ್ದರು.

ವುಡೇ ಪ್ರತಿಷ್ಠಾನ ಸಹಾಯ ಮಾಡುವ ಗುಣ ಹೊಂದಿದೆ : ಕಲ್ಪನಾ ಹಾಲಪ್ಪ

ತುಮಕೂರು: ನಮ್ಮ ದೇಶದಲ್ಲಿ ಹಣವಂತರ ಸಂಖ್ಯೆ ಹೆಚ್ಚಿದೆ. ಅದರೆ ಒಳ್ಳೆಯ ಸಹಾಯ ಮಾಡುವ ಮನಸ್ಥಿತಿ ಇರುವವರು ಕೆಲವರೇ ಮಾತ್ರ. ಅಂತಹವರಲ್ಲಿ ವುಡೇ ಪ್ರತಿಷ್ಠಾನವೂ ಒಂದಾಗಿದೆ ಎಂದು ಹೇರಿಟೇಜ್ ಫೌಂಡೇಷನ್ ಸಿಇಒ ಕಲ್ಪನಾ ಮುರುಳೀಧರ ಹಾಲಪ್ಪ ತಿಳಿಸಿದರು.

ನಗರದ ಕೃಷಿಕ್ ಫೌಂಡೇಷನ್ ಸಭಾಂಗಣದಲ್ಲಿ ವುಡೇ ಪ್ರತಿಷ್ಠಾನ ಬೆಂಗಳೂರು ವತಿಯಿಂದ ನೀಡುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು,ಶಿಕ್ಷಣಕ್ಕೆ ಮಾಡುವ ಸಹಾಯ ಎಲ್ಲ ಸಹಾಯಕ್ಕಿಂತಲೂ ಶ್ರೇಷ್ಠವಾದುದ್ದು ಎಂದರು. ನಾನು ಕೂಡ ಒಂದು ಶಿಕ್ಷಣ ಸಂಸ್ಥೆಯ ಸಿಇಒ ಆಗಿ ಕೆಲಸ ಮಾಡುತ್ತೇನೆ.ಆದರೆ ಹೆಚ್ಚಿನದಾಗಿ ಶ್ರೀಸತ್ಯಸಾಯಿ ಸೇವಾಶ್ರಮದ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡು, ಬಡವರಿಗೆ, ನಿರ್ಗತಿಕರಿಗೆ ತನ್ನ ಕೈಲಾದ ಸಹಾಯ ಹಸ್ತ ಚಾಚುತ್ತಿದ್ದೇನೆ. ವುಡೇ ಪ್ರತಿಷ್ಠಾನದ ಜತೆಗೆ ಮೊದಲಿನಿಂದಲೂ ಸಂಪರ್ಕವಿದೆ.ಶಿಕ್ಷಣಕ್ಕಾಗಿ ಸಾಕಷ್ಟು ಖರ್ಚು ಮಾಡುತಿದ್ದಾರೆ. ಅವರಿಂದ ಸಾವಿರಾರು ಮಕ್ಕಳಿಗೆ, ಅದರಲ್ಲಿಯೂ ಹೆಣ್ಣು ಮಕ್ಕಳಿಗೆ ಅನುಕೂಲವಾಗುತ್ತಿದೆ.ಅವರು ಮಾಡುವ ಸೇವೆಯೂ ಸಾರ್ಥಕ ಎನಿಸುತ್ತದೆ ಎಂದು ನುಡಿದರು. ಕೌಶಲಾಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಮುರುಳೀಧರ ಹಾಲಪ್ಪ ಮಾತನಾಡಿ, ವ್ಯವಸ್ಥೆಯ ವಿರುದ್ಧ ಈಜುವುದನ್ನು ಇಂದಿನ ಮಕ್ಕಳು ಕಲಿಯಬೇಕು. ಎಂಜಿನಿಯರ್‌ಆಗಿದ್ದ ಮಹಿಳೆಯೊಬ್ಬರು ಅಪ್ಪನ ಆಸ್ತಿ ಹಂಚಿಕೆ ವೇಳೆ ಸಬ್ ರಿಜಿಸ್ಟ್ರಾರ್‌ಕಚೇರಿಯಲ್ಲಾದ ಕಹಿ ಅನುಭವವನ್ನೇ ಸವಾಲಾಗಿ ತೆಗೆದುಕೊಂಡು, ಐಎಎಸ್ ಪರೀಕ್ಷೆ ಬರೆದು ಜಿಲ್ಲಾಧಿಕಾರಿಯಾಗಿದ್ದಾರೆ. ಇಂತಹ ಹಲವಾರು ಉದಾಹರಣೆಗಳು ನಮ್ಮ ಮುಂದಿವೆ. ಮಕ್ಕಳು ಮೊಬೈಲ್ನಿಂದ ಹೊರಬಂದು ಬದುಕು ಕಟ್ಟಿಕೊಳ್ಳುವತ್ತ ಗಮನಹರಿಸಬೇಕು ಗುಣಮಟ್ಟದ ಶಿಕ್ಷಣದೊಂದಿಗೆ ಉತ್ತನ ಹುದ್ದೆ ಅಲಂಕರಿಸುವ ಕನಸು ನಿಮ್ಮದಾಗಲಿ ಎಂದರು.

ವೇದಿಕೆಯಲ್ಲಿ ವುಡೇ ಫೌಂಡೇಷನ್ನ ನಾಗರತ್ನಮ್ಮ, ಶೀಲಾ ರಾಜು, ಶುದ್ಧಿ ಚಾರಿಟಬಲ್ ಟ್ರಸ್ಟ್ ಸೌಮ್ಯ ಪ್ರದೀಪ್, ಎಚ್.ವಿ.ಸುಗುಣ, ಉಮಾದೇವಿ ಮತ್ತಿತರರು ಉಪಸ್ಥಿತರಿದ್ದರು. ಪ್ರತಿಭಾಪುರಸ್ಕಾರಕ್ಕೆ ಆಯ್ಕೆಯಾಗಿದ್ದ 32 ಮಕ್ಕಳು ಹಾಗೂ ಅವರ ಪೋಷಕರು ಮತ್ತು ಶಿಕ್ಷಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನಗರದ ಕೃಷಿಕ್ ಫೌಂಡೇಷನ್ ಸಭಾಂಗಣದಲ್ಲಿ ವುಡೇ ಪ್ರತಿಷ್ಠಾನ ಬೆಂಗಳೂರು ವತಿಯಿಂದ ನೀಡುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಪ್ರಶಸ್ತಿ ಪತ್ರ ನೀಡಲಾಯಿತು.

ರಸ್ತೆ ಸುರಕ್ಷಾ ನಿಯಮ ಎಲ್ಲರೂ ಪಾಲಿಸಿ: ನ್ಯಾ.ಶಕುಂತಲಾ

ಚಿಂತಾಮಣಿ: ಲಿಂಗ ಅಸಮಾನತೆ,ನಿರುದ್ಯೋಗ, ಮಾನವ ಹಕ್ಕುಗಳು ಮತ್ತು ಸಾಮಾಜಿಕ ರಕ್ಷಣೆಗಳಂತಹ ಸಮಸ್ಯೆಗಳನ್ನು ನಿಭಾಯಿಸಿ,ಸಾಮಾಜಿಕ ನ್ಯಾಯವನ್ನು ಉತ್ತೇಜಿಸುವ ಉದ್ದೇಶದಿಂದ ವಿಶ್ವ ಸಾಮಾಜಿಕ ನ್ಯಾಯ ದಿನವನ್ನು ಆಚರಿಸಲಾಗುತ್ತದೆ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ನ್ಯಾಯಾಧೀಶರಾದ ಶಕುಂತಲಾ ಆರ್‌ರವರು ಹೇಳಿದರು.

ಚಿಂತಾಮಣಿ ತಾಲೂಕು ಕಾನೂನು ಸೇವಾ ಸಮಿತಿ,ವಕೀಲರ ಸಂಘ,ಸಾರಿಗೆ ಇಲಾಖೆ,ಪೊಲೀಸ್ ಇಲಾಖೆ, ಸೇರಿದಂತೆ ವಿವಿಧ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಚಿಂತಾಮಣಿ ನಗರದ ತಾಲೂಕು ಪಂಚಾಯಿತಿ ಸಾಮರ್ಥ್ಯ ಸೌಧ ಸಭಾಂಗಣದಲ್ಲಿ ವಿಶ್ವ ಸಾಮಾಜಿಕ ನ್ಯಾಯ ದಿನಾಚರಣೆ ಅಂಗವಾಗಿ ರಸ್ತೆ ಸುರಕ್ಷತಾ ಕಾರ್ಯಕ್ರಮ ವನ್ನು ಆಯೋಜಿಸಲಾಗಿತ್ತು

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದವರು ಜೀವನದಲ್ಲಿ ಪ್ರತಿಯೊಬ್ಬರಿಗೆ ಶಿಕ್ಷಣ, ರಾಜಕೀಯ,ಆರ್ಥಿಕ,ಸಾಂಸ್ಕೃತಿಕ ಮತ್ತು ಇನ್ನಿತರ ಎಲ್ಲ ಕ್ಷೇತ್ರಗಳಲ್ಲಿ ಸಮಾಜಿಕ ನ್ಯಾಯದ ಪ್ರಕಾರ ಅವಕಾಶಗಳು ಸಿಗಬೇಕು. ಆಗ ವಿಶ್ವ ಸಾಮಾಜಿಕ ನ್ಯಾಯ ದಿನಕ್ಕೆ ಅರ್ಥ ಬರುತ್ತದೆ ಎಂದರು. ನಂತರ ಎ ಆರ್‌ಟಿ ಒ ಕಚೇರಿಯ ಅಧಿಕಾರಿ ಬೈರಾರೆಡ್ಡಿ ಮಾತನಾಡಿ ವಾಹನ ಚಾಲಕರು ವಾಹನ ಚಲಾಯಿಸುವಾಗ ಜವಾಬ್ದಾರಿಯಿಂದ ಚಲಾಯಿಸಬೇಕು! ಅಜಾಗರೂಕತೆ ಹಾಗೂ ನಿರ್ಲಕ್ಷದಿಂದ ಚಾಲಕರು ವಾಹನವನ್ನು ಚಲಾಯಿಸುವುದರಿಂದ ಅಪಘಾತಗಳು ಸಂಭವಿಸುವ ಸಾಧ್ಯತೆಗಳು ಇರುವುದರಿಂದ ರಸ್ತೆ ಸುರಕ್ಷತಾ ಹಾಗೂ ಕಾನೂನನ್ನು ಪಾಲನೆ ಮಾಡಿ ವಾಹನಗಳನ್ನು ಚಲಾಯಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಎಸ್ ಆನಂದ್,ಮೋಟಾರ್‌ವಾಹನ ನಿರೀಕ್ಷಕರಾದ ನರಸೇಗೌಡ,ಮಾತನಾಡಿದರು.

ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷರಾದ ಶ್ರೀನಿವಾಸ್,ಡಿವೈ ಎಸ್ ಪಿ ಮುರುಳಿಧರ್,ಕೆಎಸ್‌ಆರ್‌ಟಿಸಿ ವಿಭಾಗದ ವ್ಯವಸ್ಥಾಪಕರಾದ ಸುಜಾತ,ಸೇರಿದಂತೆ ಆಟೋ ವಾಹನ ಚಾಲಕರು,ಗೂಡ್ಸ್ ವಾಹನ ಚಾಲಕರು, ಮತ್ತಿತರರು ಇದ್ದರು.

ಕೊಳಚೆ ನಿರ್ಮೂಲನಾ ಮಂಡಳಿ ಹಕ್ಕುಪತ್ರ ನೀಡಿಲ್ಲ: ಶಾಸಕ

ರಾಮನಗರ: ವಸತಿ ಸಚಿವರ ಗಮನಕ್ಕೆ ತಂದು 2016 ರಿಂದ 2026 ರವರೆಗೆ ಕೊಳಚೆ ನಿರ್ಮೂಲನ ಮಂಡಳಿಯವರು ಯಾರಿಗೂ ಹಕ್ಕುಪತ್ರ ನೀಡಿಲ್ಲ. ಸಾಕಷ್ಟು ಬಡವರಿಗೆ ಅನಾನುಕೂಲವಾಗಿತ್ತು. ಇಂದು ನಗರ ವ್ಯಾಪ್ತಿಯ 1500 ಬಡ ಜನರಿಗೆ ಹಕ್ಕುಪತ್ರ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ' ಎಂದು ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ತಿಳಿಸಿದರು.

ನಗರದ ಶಾಸಕರ ಭವನದಲ್ಲಿ ಕರ್ನಾಟಕ ಸರಕಾರದ ವಸತಿ ಇಲಾಖೆ ಕರ್ನಾಟಕ ಕೊಲಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನಗರ ವ್ಯಾಪ್ತಿಯ 1500 ಜನರಿಗೆ ಹಕ್ಕುಪತ್ರ ಕಾರ್ಯಕ್ರಮ ಉದ್ಘಾಟಿಸಿ ಮಾಧ್ಯಮದೊಂದಿಗೆ ಮಾತನಾಡಿ, ಇಂದು ಪ್ರಾಯೋಗಿಕವಾಗಿ 200 ಜನರಿಗೆ ಹಕ್ಕುಪತ್ರ ವಿತರಣೆ ಮಾಡುತ್ತಿದ್ದೇವೆ. ಖಾಸಗಿಯವರ ಹೆಸರಿನಲ್ಲಿ ಪಹಣಿ ಇದೆ. ಅದನ್ನು ಬದಲಾವಣೆ ಮಾಡಿ ತಹಸೀಲ್ದಾರ್ ,ಉಪವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದ ನಂತರ ಅವರು ಕೂಡ ಖಾಸಗಿಯವರ ಹೆಸರಿನ ಪಹಣಿಯನು ಬದಲಾವಣೆ ಮಾಡಿ ಕೊಡಲಾಗುತ್ತದೆ. ಸುಮಾರು 1500 ಜನರಿಗೆ ಇಂದು ಕೊಳಚೆ ನಿರ್ಮೂಲನಾ ಮಂಡಳಿ ವತಿಯಿಂದ ಹಕ್ಕುಪತ್ರ ವಿತರಣೆ ಮಾಡುತ್ತಿದ್ದೇವೆ

ರಾಮನಗರದ ಶಾಸಕರ ಕಚೇರಿಯಲ್ಲಿಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ನಗರ ವ್ಯಾಪ್ತಿಯ 1500 ಜನರಿಗೆ ಹಕ್ಕುಪತ್ರ ವಿತರಣೆ ಮಾಡಲಾಯಿತು.

ಎಂದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉಳಿದ ಎರಡೂವರೆ ವರ್ಷಗಳಿಗೆ ಮುಖ್ಯಮಂತ್ರಿ ಆಗಬೇಕೆಂದು ಕಾಂಗ್ರೆಸ್ ಶಾಸಕರು, ಸಚಿವರ ಬೇಡಿಕೆ ಮತ್ತು ತೀರ್ಮಾನವಾಗಿದೆ. ಗೊಂದಲಕ್ಕೆ ಯಾವುದೇ ಆಸ್ಪದ ನೀಡದೇ ತೆರೆ ಎಳೆಯಿರಿ ಎಂದು ಪಕ್ಷದ ಸೂಚನೆ ನೀಡಿದೆ.

ಸತೀಶ್ ಜಾರಕಿಹೋಳಿಯವರ ಕಾಂಗ್ರೆಸ್ ಪಕ್ಷದ ಹಿರಿಯ ಸಚಿವರು ಅವರೂ ಕೂಡ ಡಿ.ಕೆ. ಶಿವಕುಮಾರ್‌ಮುಖ್ಯಮಂತ್ರಿಯಾಗಬೇಕೆಂದು ಧ್ವನಿಗೂಡಿಸಿದ್ದಾರೆ. ಆದಷ್ಟು ಈ ಗೊಂದಲಗಳಿಗೆ ತೆರೆ ಬೀಳಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ಅಧಿಕಾರಿಗಳು, ನಗರಸಭೆ ಆಯುಕ್ತ ಡಾ.ಸಿ.ಜಯಣ್ಣ, ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಫೈರೋಜ್ಪಾಷ, ನಗರಸಭೆ ಸದಸ್ಯರಾದ ಆಯಿಷಾಬೇಗಂ, ಅಜ್ಮತ್, ನಿಜಾಮುದ್ದೀನ್, ಮುಖಂಡರಾದ ಶಫಿ ಅಹಮದ್, ಗುರುಪ್ರಸಾದ್, ಷಡಕ್ಷರಿ, ಸಿಎನ್‌ಆರ್‌ವೆಂಕಟೇಶ್, ನಾಗೇಶ್, ಜಗದೀಶ್ ಸೇರಿದಂತೆ ನಗರಸಭೆ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

> ಪಕ್ಷದ ಇನ್ನೂ ಹೆಚ್ಚಿನ ಸಂಘಟನೆಗೆ ಅನುಕೂಲವಾಗಬೇಕಾದರೆ ಡಿಕೆಶಿ ಮುಖ್ಯಮಂತ್ರಿಯಾದರೆ ಒಳಿತು. ಅವರು ಕೂಡ ಕಾಂಗ್ರೆಸ್ ಸರಕಾರ ಅಸ್ತಿತ್ವಕ್ಕೆ ಬರಲು ಹಗಲಿರುಳು ಸಾಕಷ್ಟು ಹೋರಾಟ ಮಾಡಿದ್ದಾರೆ. ಅವರಿಗೂ ಕೂಡ ಎರಡೂವರೆ ವರ್ಷ ಅಧಿಕಾರ ಬಿಟ್ಟುಕೊಡಬೇಕೆಂದು ಎಲ್ಲರೂ ಮನವಿ ಮಾಡಿದವರಲ್ಲಿ ನಾನೂ ಒಬ್ಬ ಎಂದರು. ಕುರಿ ಕಾಯುವವರು ಮುಖ್ಯಮಂತ್ರಿಯಾಗಿದ್ದಾರೆ ಎಂದು ಹೊಟ್ಟೆಕಿಚ್ಚುಪಡುತ್ತಿದ್ದಾರೆ ಎಂಬ ಹೇಳಿಕೆಗೆ ಅವರು ಉತ್ತರಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಹಳ ಗೌರವವುಳ್ಳವರು, ಒಳ್ಳೆಯ ಆಡಳಿತ ಕೊಟ್ಟಂತವರು, ಅವರದೇ ಆದ ಗೌರವ ಇಡೀ ರಾಜ್ಯದಾದ್ಯಂತ ಇದೆ.
> -ಎಚ್.ಎ.ಇಕ್ಬಾಲ್ ಹುಸೇನ್ ಶಾಸಕ

ಡಾ.ಅಂಬೇಡ್ಕರ್ ಆದರ್ಶ ಅಳವಡಿಸಿಕೊಳ್ಳಲು ಸಲಹೆ

ರಾಮನಗರ: ಡಾ. ಬಿ. ಆರ್. ಅಂಬೇಡ್ಕರ್‌ಅವರ ಆದರ್ಶ ಗುಣಗಳನ್ನು ಮಾದರಿಯಾಗಿ ತೆಗೆದುಕೊಂಡು ಎಲ್ಲರೂ ಜಾತಿ ಭೇದ-ಭಾವಗಳನ್ನು ಬಿಟ್ಟು ಬಾಳಬೇಕು. ಸಮಾಜದಲ್ಲಿ ಮೇಲರಿಮೆ, ಕೀಳರಿಮೆ ಎಂಬ ಭಾವನೆ ಇರಕೂಡದು, ಇದರಿಂದಾಗಿ ಸಮ ಸಮಾಜದ ನಿರ್ಮಾಣ ಅಸಾಧ್ಯ ಎಂದು ಬರಹಗಾರ ಹಾಗೂ ತಹಸೀಲ್ದಾರ್ ಹೊ.ಬ.ನಾಗ ಸಿದ್ದಾರ್ಥ್ ತಿಳಿಸಿದರು. ಜಾನಪದ ಲೋಕದಲ್ಲಿ ಕರ್ನಾಟಕ ಭೀಮ್ ಸೇನೆಯ 4ನೇ ವರ್ಷದ ವಾರ್ಷಿಕೋತ್ಸವ ಹಾಗೂ ಭೀಮ ರತ್ನ ಪ್ರಶಸ್ತಿ ಪ್ರಧಾನ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು. ಡಾ.ಬಿ.ಆರ್.ಅಂಬೇಡ್ಕರ್‌ಅವರು ಅಸ್ಪೃಶ್ಯತೆ ನಿವಾರಣೆಗಾಗಿ ಹೋರಾಡಿದ ಮಹಾನ್ ಮಾನವತಾವಾದಿ. ಸಮ ಸಮಾಜದ ಕಲ್ಪನೆ ಸಾಕಾರಗೊಳ್ಳಬೇಕಾದರೆ ನಾವೆಲ್ಲ ಅವರ ಆದರ್ಶಗಳನ್ನು ಪಾಲಿಸಬೇಕು ಎಂದರು. ಅಸ್ಪೃಶ್ಯತೆ ನೋವು ತಿಳಿಯಬೇಕಾದರೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ಅವರ ಜೀವನ ಚರಿತ್ರೆಯನ್ನು ಪ್ರತಿಯೊಬ್ಬರೂ ಅಧ್ಯಯನ ಮಾಡುವಂತಾಗಬೇಕು. ಅಂಬೇಡ್ಕರ್‌ಶೋಷಿತ ಸಮುದಾಯದ ಧನಿಯಾಗಿದ್ದರು. ಅವರ ಏಳಿಗೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ಅವರ ಕೆಲಸಗಳು ನಮ್ಮೆಲ್ಲರಿಗೂ ಆದರ್ಶ. ನಾವೆಲ್ಲ ಸ್ವಾತಂತ್ರ್ಯ,ಸಮಾನತೆ ಮತ್ತು ಭ್ರಾತೃತ್ವದ ಭಾವನೆಗಳನ್ನು ಎತ್ತಿಹಿಡಿಯುವ ಜೊತೆಗೆ ಅವುಗಳನ್ನು ಮೈಗೂಡಿಸಿಕೊಳ್ಳಬೇಕು. ಹಾಗಾದಾಗ ಮಾತ್ರ ಅಂಬೇಡ್ಕರ್‌ಕಂಡ ಪ್ರಜಾಪ್ರಭುತ್ವದ ಕನಸು ನನಸಾಗಿಸಲು ಸಾಧ್ಯ ಎಂದರು.

ಟಿ-20 ಮಹೋತ್ಸವ ವಿಶ್ವಕಪ್ 2026

ಭಾರತ ಶ್ರೀಲಂಕಾ
ಫೆಬ್ರವರಿ 7ರಿಂದ ಮಾರ್ಚ್ 8

ICC MEN'S T20 WORLD CUP INDIA & SRI LANKA 2026

ಒಂದ್ ಕಪ್ ಮಾತು

ಇಂದು ವಿಂಡೀಸ್, ಜಿಂಬಾಬ್ವೆ ಸೆಣಸು

ಮುಂಬೈ: ಇಲ್ಲಿನ ವಾಂಖೇಡೆ ಮೈದಾನದಲ್ಲಿ ಸೋಮವಾರ ನಡೆಯಲಿರುವ ಟಿ20 ವಿಶ್ವ ಕಪ್ ಸೂಪರ್-8ರ, ಗುಂಪು-1ರ ಪಂದ್ಯ ದಲ್ಲಿ ಜಿಂಬಾಬ್ವೆ-ವೆಸ್ಟ್ ಇಂಡೀಸ್ ಪರಸ್ಪರ ಮುಖಾಮುಖಿಯಾಗಲಿವೆ. ಸೋಮ ವಾರದ ಈ ಮುಖಾಮುಖಿ ಸೆಮಿಫೈನಲ್ ಗೇರುವ ನಿಟ್ಟಿನಲ್ಲಿ ಎರಡೂ ತಂಡಗಳಿಗೂ ಮಹತ್ವದ್ದಾಗಿದೆ. ಲೀಗ್‌ನಲ್ಲಿ ಅಚ್ಚರಿಯ ಫಲಿತಾಂಶ ನೀಡಿ ಸೂಪರ್-8ಕ್ಕೇರಿರುವ ಜಿಂಬಾಬ್ವೆಗೆ ವಿಂಡೀಸ್‌ಗೆ ಪ್ರಬಲ ಪೈಪೋಟಿಯೊಡ್ಡಲು ಸಿದ್ಧವಾಗಿದೆ. ಆದರೆ ಟಿ20 ಕ್ರಿಕೆಟ್‌ನಲ್ಲಿ ಯಾವಾಗಲೂ ಬಲಿಷ್ಠ ಎನಿಸಿಕೊಂಡಿರುವ ವಿಂಡೀಸ್ ಗೆಲ್ಲುವ ವಿಶ್ವಾಸ ಹೊಂದಿದೆ. ಪಂದ್ಯ ರಾತ್ರಿ 7ಕ್ಕೆ ಆರಂಭವಾಗಲಿದೆ.

ಮಹಿಳಾ ರೈಸಿಂಗ್ ಸ್ಟಾರ್ಸ್: ಭಾರತ ಎಗೆ ಸತತ 2ನೇ ಪ್ರಶಸ್ತಿ

ಬ್ಯಾಂಕಾಕ್: ಮಹಿಳಾ ರೈಸಿಂಗ್ ಸ್ಟಾರ್ಸ್ ಟಿ20 ಏಷ್ಯಾಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಬಾಂಗ್ಲಾದೇಶ ಎ ವಿರುದ್ಧ ಭಾರತ ಎ ತಂಡ 46 ರನ್‌ಗಳಿಂದ ಗೆಲುವು ಸಾಧಿಸಿದೆ. ಸತತ ಎರಡನೇ ಬಾರಿ ಭಾರತ ಪ್ರಶಸ್ತಿ ಗೆದ್ದಿದೆ. ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ದು ಕೊಂಡ ರಾಧಾ ಯಾದವ್ ಪಡೆಯು, ಬ್ಯಾಟಿಂಗ್ ವೈಫಲ್ಯ ಅನುಭವಿಸಿತು. ಆರಂಭಿಕ ಬ್ಯಾಟರ್‌ಗಳ ವೈಫಲ್ಯದಿಂದ 44 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ತಂಡಕ್ಕೆ ತೇಜಲ್ ಹಸಬ್ನಿಸ್ (ಅಜೇಯ 51) ಹಾಗೂ ನಾಯಕಿ ರಾಧಾ ಯಾದವ್ (36) 69 ರನ್ ಜೊತೆಯಾಟ ಆಡುವ ಮೂಲಕ ಆಸರೆಯಾದರು. ಭಾರತ ಎ ತಂಡವು 20 ಓವರ್‌ಗಳ ಅಂತ್ಯಕ್ಕೆ 7 ವಿಕೆಟ್ ನಷ್ಟಕ್ಕೆ 134 ರನ್ ಗಳಿಸಿತು. 135 ರನ್ ಗುರಿ ಬೆನ್ನಟ್ಟಿದ ಬಾಂಗ್ಲಾ ಎ 19.1 ಓವರ್‌ಗೆ 88 ರನ್‌ಗೆ ಆಲೌಟ್ ಆಯಿತು.

ವಿಚ್ಛೇದಿತ ಪತ್ನಿ, ಮಗನಿಗೆ ಹಾರ್ದಿಕ್ 4 ಕೋಟಿ ರು. ಗಿಫ್ಟ್

ದೆಹಲಿ: ಕೆಲ ದಿನಗಳಿಂದ ಹಾರ್ದಿಕ್ ಪಾಂಡ್ಯ ಸಖತ್ ಸುದ್ದಿಯಲ್ಲಿದ್ದಾರೆ. ವಿಚ್ಛೇದನದ ನಂತರ ತಮ್ಮ ಹೊಸ ಗೆಳತಿ ಮಹಿಕಾ ಶರ್ಮಾ ಜೊತೆ ಸುತ್ತಾಡುತ್ತಿರುವ ಹಾರ್ದಿಕ್ ಪಾಂಡ್ಯ,ಆಕೆಯ ಜೊತೆ ಈಜುಕೊಳದಲ್ಲಿರುವ ಚಿತ್ರಗಳು ವೈರಲ್ ಆಗಿವೆ. ಇದರ ನಡುವೆ ಹಾರ್ದಿಕ್ ಮತ್ತೊಂದು ಕಾರಣಕ್ಕೆ ಸುದ್ದಿಯಾಗಿದ್ದಾರೆ. ತಮ್ಮ ಮಾಜಿ ಪತ್ನಿ ಸೈಬೀರಿಯಾ ಮೂಲದ ನತಾಶಾ ಸ್ಟಾಂಕೋವಿಚ್ ಹಾಗೂ ಪುತ್ರ ಅಗಸ್ತ್ಯಗೆ 4 ಕೋಟಿ ರು. ಮೌಲ್ಯದ ಲಕ್ಷುರಿ ಕಾರೊಂದನ್ನು ಉಡುಗೊರೆಯಾಗಿ ನೀಡಿದ್ದಾರೆ. ಲ್ಯಾಂಡ್ ರೋವರ್ ಡಿಫೆಂಡರ್ ಅನ್ನು ನೀಡಿ ಹಾರ್ದಿಕ್ ಸದ್ದು ಮಾಡಿದ್ದಾರೆ. ಇದು ಪುತ್ರನ ಮೇಲಿನ ಪ್ರೀತಿಗೆ ನೀಡಿದ ಉಡುಗೊರೆಯಾಗಿದೆ.

ಸೂಪರ್-8ರ ಪಂದ್ಯದಲ್ಲಿ ಭಾರತವನ್ನು 76 ರನ್‌ಗಳಿಂದ ಮಣಿಸಿದ ದ.ಆಫ್ರಿಕಾ | ಸೂರ್ಯ ಪಡೆ ಇನ್ನೆರಡು ಪಂದ್ಯ ಗೆಲ್ಲಲೇಬೇಕು, ಇನ್ನೊಂದು ಸೋತರೂ ಸೆಮಿಫೈನಲ್ ಕಷ್ಟ

ಮೋದಿ ಮೈದಾನದಲ್ಲಿ ಭಾರತಕ್ಕೆ ಸೋಲಿನ ಆಘಾತ

ಅಹ್ಮದಾಬಾದ್: ಟಿ20 ವಿಶ್ವಕಪ್‌ನ ಸೂಪರ್-8 ಹಂತದಲ್ಲಿ ಭಾರತ ಭಾನುವಾರ ಆಘಾತಕಾರಿ ಸೋಲನುಭವಿಸಿದೆ. ಸೂಪರ್-8ರ ಹಂತದಲ್ಲಿ ತಾನಾಡಿದ ಮೊದಲ ಪಂದ್ಯದಲ್ಲೇ ಸೂರ್ಯಕುಮಾರ್ ಪಡೆ 76 ರನ್‌ಗಳಿಂದ ದ.ಆಫ್ರಿಕಾ ವಿರುದ್ಧ ಸೋತುಹೋಯಿತು. ಟಾಸ್ ಗೆದ್ದ ಬಲಿಷ್ಠ ದ.ಆಫ್ರಿಕಾ ತಂಡ ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭದಲ್ಲಿ ದ.ಆಫ್ರಿಕಾ ಪಟಪಟನೇ ವಿಕೆಟ್ ಕಳೆದುಕೊಂಡರೂ 20 ಓವರ್ ಮುಗಿದಾಗ 7 ವಿಕೆಟ್ ನಷ್ಟಕ್ಕೇ 187 ರನ್ ಪೇರಿಸಿ ಭಾರತಕ್ಕೆ ದೊಡ್ಡ ಗುರಿಯನ್ನೇ ನೀಡಿತು. ಇದನ್ನು ಬೆನ್ನಟ್ಟಿ ಹೊರಟ ಭಾರತ 18.5 ಓವರ್‌ಗಳಲ್ಲಿ 111 ರನ್‌ಗಳಿಗೆ ಆಲೌಟಾಯಿತು.

ಬಹುಶಃ ಸೂರ್ಯಕುಮಾರ್ ನಾಯಕತ್ವದಲ್ಲೇ ಭಾರತಕ್ಕೆದುರಾದ ಅತ್ಯಂತ ಆಘಾತಕಾರಿ ಸೋಲಿದು. ಶೂನ್ಯಕ್ಕೆ 1ನೇ ವಿಕೆಟ್ ಕಳೆದುಕೊಂಡ ಭಾರತ ಅನಂತರ ಚೇತರಿಸಿಕೊಳ್ಳಲೇ ಇಲ್ಲ. ಮಧ್ಯಮಕ್ರಮಾಂಕದಲ್ಲಿ ಶಿವಂ ದುಬೆ ಏಕಾಂಗಿಯಾಗಿ ಹೋರಾಟ ಸಂಘಟಿಸಿದರು. ಅವರು 37 ಎಸೆತಗಳಲ್ಲಿ 42 ರನ್ ಗಳಿಸಿದರು. ಇತರೆಲ್ಲ ಬ್ಯಾಟರ್‌ಗಳು ಕೈಕೊಟ್ಟರು.

ಭಾರತವನ್ನು ಹಿಂಡಿ ಹಾಕಿದ್ದು ದ.ಆಫ್ರಿಕಾದ ಬಲಿಷ್ಠ ಬೌಲಿಂಗ್. ಎಡಗೈ ವೇಗಿ ಮಾರ್ಕೋ ಜಾನ್ಸೆನ್ 22ಕ್ಕೆ 4 ವಿಕೆಟ್ ಪಡೆದರು. ಇನ್ನೊಂದು ಕಡೆ ಎಡಗೈ ಆಫ್ ಸ್ಪಿನ್ನರ್ ಕೇಶವ ಮಹಾರಾಜ್ 24 ರನ್ ನೀಡಿ 3 ವಿಕೆಟ್ ಪಡೆದರು. ಕಾರ್ಬಿನ್ ಬಾಷ್ 12ಕ್ಕೆ 2 ವಿಕೆಟ್ ಪಡೆದು ಭಾರತದ ಆಟವನ್ನು ಮುಗಿಸಿದರು.

ಸ್ಪೈಂತರ
ದ.ಆಫ್ರಿಕಾ ಮೊದಲು ಬ್ಯಾಟಿಂಗ್ ಮಾಡಿದಾಗ 4ನೇ ವಿಕೆಟ್‌ಗೆ ಬ್ರೆವಿಸ್-ಮಿಲ್ಲರ್ 97 ರನ್ ಒಗ್ಗೂಡಿಸಿದರು. ಇಲ್ಲಿಂದ ಪಂದ್ಯ ಭಾರತದ ನಿಯಂತ್ರಣ ತಪ್ಪಿತು.

ಕೊನೆಯಲ್ಲಿ ಸಿಡಿದ ದ.ಆಫ್ರಿಕಾ: ಮೊದಲ ವಿಕೆಟ್ ಜೊತೆಯಾಟದಲ್ಲಿ ದ. ಆಫ್ರಿಕಾ ಪರ ಹೇಳಿಕೊಳ್ಳುವಂತಹ ರನ್ ದಾಖಲಾಗಲಿಲ್ಲ. 4ನೇ ವಿಕೆಟ್ ಜೊತೆಯಾಟದಲ್ಲಿ ಡೇವಿಡ್ ಮಿಲ್ಲರ್ ಹಾಗೂ ಡೆವಾಲ್ಡ್ ಬ್ರೆವಿಸ್ 97 ರನ್ ಒಗ್ಗೂಡಿಸಿ ಪಂದ್ಯವನ್ನು ಹಿಡಿತಕ್ಕೆ ಪಡೆದರು. 5ನೇ ವಿಕೆಟ್‌ಗೆ ಮಿಲ್ಲರ್ ಹಾಗೂ ಸ್ಟಬ್ಸ್ 35 ರನ್ ಸೇರಿಸಿದರು. ತಂಡದ ಮೊತ್ತ ಉಬ್ಬಿದ್ದು 8ನೇ ವಿಕೆಟ್‌ಗೆ ಕ್ಯಾಗಿಸೊ ರಬಾಡ ಹಾಗೂ ಟ್ರಿಸ್ಟನ್ ಸ್ಟಬ್ಸ್ ಸ್ಫೋಟಕ 20 ರನ್ ಸೇರಿಸಿದಾಗ.

ದ.ಆಫ್ರಿಕಾ 10 ರನ್‌ಗೆ ಮೊದಲ ವಿಕೆಟ್ ಕಳೆದುಕೊಂಡಿತ್ತು. 12ನೇ ರನ್‌ಗೆ 2ನೇ ವಿಕೆಟ್ ಉದುರಿಸಿಕೊಂಡು ಚಿಂತೆಗೊಳಗಾಯಿತು. ಈ ವೇಳೆ ಬಿರುಸಾಗಿ ಬ್ಯಾಟ್ ಮಾಡಿದ ಬ್ರೆವಿಸ್ 29 ಎಸೆತಗಳಲ್ಲಿ 45 ರನ್ ಚಚ್ಚಿದ್ದರು. ಇದರಲ್ಲಿ ತಲಾ 3 ಸಿಕ್ಸರ್, ಬೌಂಡರಿಗಳು ಸೇರಿದ್ದವು. ಇನ್ನೊಂದು ಕಡೆ ಅನುಭವಿ ಬ್ಯಾಟರ್ ಡೇವಿಡ್ ಮಿಲ್ಲರ್ 35 ಎಸೆತಗಳಲ್ಲಿ 7 ಬೌಂಡರಿ, 3 ಸಿಕ್ಸರ್ ಸಮೇತ 63 ರನ್ ಚಚ್ಚಿದರು. ಕೊನೆಯ ಹಂತದಲ್ಲಿ ಆಕ್ರಮಣಕಾರಿ ಬ್ಯಾಟರ್ ಟ್ರಿಸ್ಟನ್ ಸ್ಟಬ್ಸ್ ಒಂದರ ಹಿಂದೆ ಒಂದರಂತೆ 3 ಸಿಕ್ಸರ್ ಚಚ್ಚಿ 24 ಎಸೆತಗಳಲ್ಲಿ 44 ರನ್ ಗಳಿಸಿದರು.

ಭಾರತದ ಪರ ಅನುಭವಿ ವೇಗಿ ಜಸ್‌ಪ್ರೀತ್ ಬುಮ್ರಾ ಮಾರಕ ದಾಳಿ ನಡೆಸಿದರು. ಅವರು ಬರೀ 15 ರನ್ ನೀಡಿ 3 ವಿಕೆಟ್ ಪಡೆದರು. ಅರ್ಷದೀಪ್ ಸಿಂಗ್ 28 ರನ್ ನೀಡಿ 2 ವಿಕೆಟ್ ಪಡೆದರು. ವಾಷಿಂಗ್ಟನ್ ಸುಂದರ್ ವಿಕೆಟ್ ಪಡೆಯದಿದ್ದರೂ ರನ್ ನಿಯಂತ್ರಿಸಿದರು.

ಸಂಕ್ಷಿಪ್ತ ಸ್ಕೋರ್: ದ.ಆಫ್ರಿಕಾ 20 ಓವರ್, 187/7 (ಡೆವಾಲ್ಡ್ ಬ್ರೆವಿಸ್ 45, ಮಿಲ್ಲರ್ 63, ಟ್ರಿಸ್ಟನ್ ಸ್ಟಬ್ಸ್ 44, ಬುಮ್ರಾ 15ಕ್ಕೆ 3, ಅರ್ಷದೀಪ್ 28ಕ್ಕೆ 2). ಭಾರತ 18.5 ಓವರ್, 111/10 (ದುಬೆ 42, ಸೂರ್ಯ 18, ಹಾರ್ದಿಕ್ 18, ಜಾನ್ಸೆನ್ 22ಕ್ಕೆ 4, ಕೇಶವ್ 24ಕ್ಕೆ 3).

ಜಿಂಬಾಬ್ವೆ, ವಿಂಡೀಸ್ ವಿರುದ್ಧ ಗೆದ್ದರಷ್ಟೇ ಸೆಮಿಫೈನಲ್

ಭಾರತ ಈ ಸೋಲಿನೊಂದಿಗೆ ಇನ್ನೆರಡು ಪಂದ್ಯಗಳಲ್ಲಿ ಆಡಬೇಕಿದೆ. ಜಿಂಬಾಬ್ವೆ ಮತ್ತು ವೆಸ್ಟ್ ಇಂಡೀಸ್ ಇನ್ನೆರಡು ತಂಡಗಳು. ಭಾರತ ಇವೆರಡನ್ನೂ ಗೆಲ್ಲಬೇಕಿದೆ. ಹಾಗೆಯೇ ಮೈನಸ್‌ನಲ್ಲಿರುವ ರನ್‌ರೇಟನ್ನು ಏರಿಸಿಕೊಳ್ಳಬೇಕಿದೆ. ಒಂದು ಪಂದ್ಯ ಸೋತರೂ ಕಷ್ಟವಿದೆ. ಒಂದು ವೇಳೆ ಪಂದ್ಯ ರದ್ದಾದರೂ ಸಂಕಷ್ಟವಿದೆ.

ಅಕ್ಷರ್‌ಗೆ ಜಾಗವಿಲ್ಲ

ಭಾನುವಾರ ಭಾರತದ ಉಪನಾಯಕ ಅಕ್ಷರ್ ಪಟೇಲ್ ಅವರಿಗೇ ಸ್ಥಾನ ಸಿಕ್ಕಿರಲಿಲ್ಲ. ಅವರ ಬದಲಿಗೆ ಮತ್ತೊಬ್ಬ ಸ್ಪಿನ್ ಬೌಲಿಂಗ್ ಆಲ್ರೌಂಡರ್ ವಾಷಿಂಗ್ಟನ್ ಸುಂದರ್ ಅವರು 11ರ ಬಳಗದಲ್ಲಿ ಸ್ಥಾನ ಗಿಟ್ಟಿಸಿಕೊಂಡಿದ್ದರು.

ತುಂಬಿದ್ದ ಮೈದಾನ

ವಿಶ್ವದ ಬೃಹತ್ ಕ್ರೀಡಾಂಗಣ ಮೋದಿ ಮೈದಾನದಲ್ಲಿ 1.32 ಲಕ್ಷ ಮಂದಿ ಕೂರಬಹುದು. ಭಾನುವಾರವೂ ಮೈದಾನ ಮೈದುಂಬಿಕೊಂಡಿತ್ತು. ಕ್ರಿಕೆಟ್ ತಜ್ಞ ಜಾನ್ಸ್ ಎಕ್ಸ್ ಪೋಸ್ಟ್ ಪ್ರಕಾರ, 80000ಕ್ಕೂ ಅಧಿಕ ಪ್ರೇಕ್ಷಕರು ಆಗಮಿಸಿದ್ದರು.

ಸೂಪರ್-8 2ನೇ ಗುಂಪಿನ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ 51 ರನ್ ಸೋಲು
ಲಂಕಾ ಇನ್ನೊಂದು ಪಂದ್ಯ ಸೋತರೂ, ಪಂದ್ಯ ರದ್ದಾದರೂ ಕೂಟದಿಂದ ಹೊರಕ್ಕೆ

ಸ್ಪಿನ್ ಖೆಡ್ಡಾಗೆ ಬಿದ್ದ ಲಂಕಾ

ಪಲ್ಲೇಕೆಲೆ: ಟಿ20 ವಿಶ್ವಕಪ್ ಅಂತಿಮ ಲೀಗ್ ಪಂದ್ಯದಲ್ಲಿ ಜಿಂಬಾಬ್ವೆ ವಿರುದ್ಧ ಸೋಲನುಭವಿಸಿದ್ದ ಶ್ರೀಲಂಕಾ ಇದೀಗ ಸೂಪರ್ 8 ಹಂತದಲ್ಲಿ ತಾನಾಡಿದ ಮೊದಲ ಪಂದ್ಯದಲ್ಲೇ ಮುಗ್ಗರಿಸಿದೆ. ಭಾನುವಾರ ತನ್ನದೇ ನೆಲದಲ್ಲಿ ನಡೆದ ಸೂಪರ್-8 2ನೇ ಗುಂಪಿನ ಪಂದ್ಯದಲ್ಲಿ ಅದು ಇಂಗ್ಲೆಂಡ್ ವಿರುದ್ಧ 51 ರನ್‌ಗಳಿಂದ ಸೋತುಹೋಗಿದೆ. ನಿಧಾನಗತಿಯ ಪಿಚ್‌ನಲ್ಲಿ ಎಲ್ಲಾ ತಂಡಗಳನ್ನು ಒದ್ದಾಡುವಂತೆ ಮಾಡಿದ್ದ ಲಂಕನ್ನರು ಇದೀಗ ತಮ್ಮ ಬಲೆಯಲ್ಲಿ ತಾವೇ ಬಿದ್ದಿದ್ದಾರೆ. ಈ ಸೋಲಿನ ಬಳಿಕ ಶ್ರೀಲಂಕಾದ ಸೆಮಿಫೈನಲ್ ಹಾದಿ ತುಸು ಕಷ್ಟಕರವಾಗಿದೆ. ಇನ್ನೊಂದು ಕಡೆ ಇಂಗ್ಲೆಂಡ್ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ತನ್ನ ಸೆಮಿಫೈನಲ್ ಆಸೆ ಯನ್ನು ಇನ್ನಷ್ಟು ಗಟ್ಟಿ ಮಾಡಿಕೊಂಡಿದೆ.

ಪಲ್ಲೆಕೆಲೆಯಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ತಂಡ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ಗೆ 146 ರನ್ ಪೇರಿಸಿತು. ಇದಕ್ಕುತ್ತರವಾಗಿ ಶ್ರೀಲಂಕಾ ತಂಡ 16.4 ಓವರ್‌ಗಳಲ್ಲಿ 95 ರನ್ ಗಳಿಸುವಷ್ಟರಲ್ಲಿ ಸರ್ವಪತನ ಕಂಡಿತು. ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಸರ್ವಾಂಗೀಣ ಪ್ರದರ್ಶನ ತೋರಿದ ಇಂಗ್ಲೆಂಡ್ ನ ವಿಲ್ ಜ್ಯಾಕ್ಸ್ ಅವರು ಅರ್ಹವಾಗಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ದಸುನ್ ಶನಕ ಏಕಾಂಗಿ ಹೋರಾಟ: ಶ್ರೀಲಂಕಾ ಪರ ಮಧ್ಯಮ ಕ್ರಮಾಂಕದಲ್ಲಿ ನಾಯಕ ದಸುನ್ ಶನಕ ಅವರನ್ನು ಹೊರತುಪಡಿಸಿದರೆ ಬೇರಾವ ಬ್ಯಾಟರ್ ಸಹ ಇಂಗ್ಲೆಂಡ್ ದಾಳಿಗೆ ಪ್ರತಿರೋಧ ತೋರಲಿಲ್ಲ. ಶನಕ ಅರು 24 ಎಸೆತಗಳಿಂದ 1 ಬೌಂಡರಿ ಮತ್ತು 2 ಸಿಕ್ಸರ್‌ಗಳಿದ್ದ 30 ರನ್‌ಗಳನ್ನು ಗಳಿಸಿದರು. ಉತ್ತಮ ಲಯದಲ್ಲಿದ್ದಂತೆ ಕಂಡು ಬಂದ ಅವರು ಆದಿಲ್ ರಶೀದ್ ಅವರ ಎಸೆತವನ್ನು ಸಿಕ್ಸರ್ ಗೆತ್ತುವ ಪ್ರಯತ್ನದಲ್ಲಿ ಎಡವಿ ಬ್ಯಾಂಟನ್‌ಗೆ ಕ್ಯಾಚ್ ನೀಡಿದರು. ಅಲ್ಲಿಗೆ ಲಂಕಾದ ಹೋರಾಟ ಮುಗಿಯಿತು. ಇಂಗ್ಲೆಂಡ್ ಪರ ವಿಲ್ ಜ್ಯಾಕ್ಸ್ 3, ಜೋಫ್ರಾ ಆರ್ಚರ್, ಲಿಯಾಮ್ ಡಾಸನ್, ಆದಿಲ್ ರಶೀದ್ ತಲಾ 2 ವಿಕೆಟ್ ಪಡೆದರು. ಉಳಿದೊಂದು ವಿಕೆಟ್ ಜೇಮಿ ಓವರ್ಟನ್ ಪಡೆದರು.

ಇದಕ್ಕೂ ಮೊದಲು ಟಾಸ್ ಗೆದ್ದು ಫೀಲ್ಡಿಂಗ್ ಆಯ್ದುಕೊಂಡ ಶ್ರೀಲಂಕಾ ತಂಡದ ಬೌಲರ್ ಗಳು ಇಂಗ್ಲೆಂಡ್ ಅನ್ನು ಸಾಧಾರಣ ಮೊತ್ತಕ್ಕೆ ಅದುಮಿದರು. ಆರಂಭಿಕ ಫಿಲ್ ಸಾಲ್ಟ್ (40 ಎಸೆತದಲ್ಲಿ 62) ಅವರನ್ನು ಹೊರತುಪಡಿಸಿದರೆ ಬೇರಾವ ಬ್ಯಾಟರ್ ಸಹ ಹೆಚ್ಚು ಹೊತ್ತು ಕ್ರೀಸಿನಲ್ಲಿ ಕಳೆಯಲು ಸಾಧ್ಯವಾಗಲಿಲ್ಲ. ಅಂತಿಮ ಓವರ್‌ಗಳಲ್ಲಿ ವಿಲ್ ಜ್ಯಾಕ್ಸ್ ಅವರು ಕೆಲ ಬೌಂಡರಿಗಳನ್ನು ಹೊಡೆದರಷ್ಟೇ. ಶ್ರೀಲಂಕಾ ಪರ ಧುನಿತ್ ವೆಲ್ಲಲಗೆ 3, ಮಹೀಶ್ ತೀಕ್ಷಣ ಮತ್ತು ದಿಲ್ಶನ್ ಮದುಶಂಕ ಅವರು ತಲಾ 2 ವಿಕೆಟ್ ಕಬಳಿಸಿದರು.

ಲಂಕಾ ಸೆಮೀಸ್‌ಗೇರಬೇಕಾದರೆ...

ದಸುನ್ ಶನಕ ಬಳಗ ಸೆಮಿಫೈನಲ್ ಹಂತಕ್ಕೇರಬೇಕಾದರೆ ಗುಂಪಿನಲ್ಲಿರುವ ಇನ್ನೆರಡು ತಂಡಗಳಾದ ನ್ಯೂಜಿಲೆಂಡ್ ಮತ್ತು ಪಾಕಿಸ್ತಾನಗಳನ್ನು ಸೋಲಿಸಲೇಬೇಕಾಗಿದೆ. ರನ್‌ರೇಟ್ ಅನ್ನೂ ಕಾಯ್ದುಕೊಳ್ಳಬೇಕು. ಸದ್ಯ ತಂಡದ ರನ್‌ರೇಟ್ ಮೈನಸ್ ಹಂತದಲ್ಲಿದೆ. ಇನ್ನು ಒಂದು ಪಂದ್ಯ ಸೋತರೆ ಅಥವಾ ಮಳೆಯಿಂದಾಗಿ ಪಂದ್ಯ ರದ್ದಾದರೂ ಶ್ರೀಲಂಕಾ ಟೂರ್ನಿಯಿಂದ ನಿರ್ಗಮಿಸುವುದು ಬಹುತೇಕ ಖಚಿತ. ಸೂಪರ್-8 ಹಂತದಲ್ಲಿ ಒಂದು ತಂಡಕ್ಕೆ 3 ಪಂದ್ಯಗಳಿರುತ್ತವೆ. ಲಂಕಾಕ್ಕೆ ಇನ್ನೆರಡು ಪಂದ್ಯ ಬಾಕಿಯಿದೆ.

ಲೀಗ್‌ನಲ್ಲಿ ಬಿ ಗುಂಪಿನಲ್ಲಿದ್ದ ಶ್ರೀಲಂಕಾ ಗುಂಪು ಹಂತದ ಮೊದಲ ಪಂದ್ಯದಲ್ಲಿ ಐರ್ಲೆಂಡ್ ಅನ್ನು 20 ರನ್ ಗಳಿಂದ ಸೋಲಿಸಿತ್ತು. ಬಳಿಕ ಒಮಾನ್ ತಂಡವನ್ನು 105 ರನ್‌ಗಳಿಂದ ಪರಾಭವಗೊಳಿಸಿತ್ತು. 3ನೇ ಪಂದ್ಯದಲ್ಲಿ ಆಸ್ಟ್ರೇಲಿಯಾವನ್ನು 8 ವಿಕೆಟ್‌ಗಳಿಂದ ಮಣಿಸಿತ್ತು. 4ನೇ ಪಂದ್ಯದಲ್ಲಿ ಜಿಂಬಾಬ್ವೆ ವಿರುದ್ಧ ಸೋತಿತ್ತು.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್ 20 ಓವರ್, 146/9 (ಫಿಲ್ ಸಾಲ್ಟ್ 62, ವಿಲ್ ಜ್ಯಾಕ್ಸ್ 21, ದುನಿತ್ ವೆಲ್ಲಲಗೆ 26ಕ್ಕೆ 3, ಮದುಶಂಕ 25ಕ್ಕೆ 2, ಮಹೀಶ್ ತೀಕ್ಷಣ 21ಕ್ಕೆ 2). ಶ್ರೀಲಂಕಾ 16.4 ಓವರ್, 95/10 (ದಸುನ್ ಶನಕ 30, ವಿಲ್ ಜ್ಯಾಕ್ಸ್ 22ಕ್ಕೆ 3, ಜೋಫ್ರಾ ಆರ್ಚರ್ 20ಕ್ಕೆ 2, ಲಿಯಮ್ ಡಾಸನ್ 27ಕ್ಕೆ 2, ಆದಿಲ್ ರಶೀದ್ 13ಕ್ಕೆ 2)

ಮೋದಿ ಮನ್ ಕೀ ಬಾತ್: ಟಿ20 ವಿಶ್ವಕಪ್‌ನ ವಿದೇಶಿ ತಂಡಗಳಲ್ಲಿರುವ ಭಾರತೀಯರಿಗೆ ಮೆಚ್ಚುಗೆ
ಕೆನಡಾ ತಂಡದಲ್ಲೇ ಗರಿಷ್ಠ, ಅಮೆರಿಕ, ಒಮಾನ್ ತಂಡದ ಭಾರತೀಯರ ನೋಡಿ ಖುಷಿ: ಪ್ರಧಾನಿ

ಅವರು ಕೆನಡಾ ಪರ ಆಡಿದ್ರೂ, ಭಾರತವನ್ನು ಬೆಳಗುತ್ತಿದ್ದಾರೆ

ದೆಹಲಿ: ಭಾರತ ಮತ್ತು ಶ್ರೀಲಂಕಾ ಆತಿಥ್ಯದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ತಮ್ಮ ಮನ್ ಕೀ ಬಾತ್‌ನಲ್ಲಿ ವಿಶೇಷ ಮಾತುಗಳನ್ನಾಡಿದ್ದಾರೆ. ನೇಪಾಳ, ಅಮೆರಿಕ, ಒಮಾನ್, ನೆದರ್ಲೆಂಡ್ಸ್, ಕೆನಡಾಗಳೆಲ್ಲ ಇಲ್ಲಿ ಕ್ರಿಕೆಟ್ ಶಿಶುಗಳೆಂದೇ ಕರೆಸಿಕೊಂಡಿದ್ದರೂ, ತಮ್ಮ ಆಟದ ಗುಣಮಟ್ಟದಿಂದ ಅಚ್ಚರಿ ಹುಟ್ಟಿಸಿವೆ. ಇದಕ್ಕೆ ಪರೋಕ್ಷ ಕಾರಣ ಈ ತಂಡಗಳಲ್ಲಿರುವ ಭಾರತೀಯ ಮೂಲದ ಆಟಗಾರರು! ಅದನ್ನೇ ಮೋದಿ ಮನ್ ಕೀ ಬಾತ್‌ನಲ್ಲಿ ಪ್ರಸ್ತಾಪಿಸಿದ್ದಾರೆ.

''ಭಾರತೀಯರು ತಮ್ಮ ಮೂಲನೆಲವನ್ನೂ ಮರೆತಿಲ್ಲ. ಹಾಗೆಯೇ ತಾವು ನೆಲೆಸಿರುವ ದೇಶಗಳ ಅಭಿವೃದ್ಧಿಗೂ ದುಡಿಯುತ್ತಿದ್ದಾರೆ. ಟಿ20 ವಿಶ್ವಕಪ್‌ನಲ್ಲಿ ಕೆನಡಾ ಗರಿಷ್ಠ ಪ್ರಮಾಣದಲ್ಲಿ ಭಾರತೀಯ ಮೂಲದ ಆಟಗಾರರನ್ನು ಆಡಿಸಿದೆ. ಆ ತಂಡದ ನಾಯಕ ದಿಲ್‌ಪ್ರೀತ್ ಬಾಜ್ವಾ ಪಂಜಾಬ್‌ನ ಗುರುದಾಸಪುರದಲ್ಲಿ ಹುಟ್ಟಿದವರು. ನವನೀತ್ ಧಲಿವಾಲ್ ಚಂಡೀಗಢದವರು, ಹರ್ಷ ಠಕ್ಕರ್, ಶ್ರೇಯಸ್ ಮೊವ್ವ ಕೂಡ ಈ ಪಟ್ಟಿಯಲ್ಲಿ ಬರುತ್ತಾರೆ. ಅವರು ಬರೀ ಕೆನಡಾದ ಹೆಸರನ್ನು ಮಾತ್ರವಲ್ಲ, ಭಾರತದ ಹೆಸರನ್ನೂ ಬೆಳಗುತ್ತಿದ್ದಾರೆ'' ಎಂದು ಮೋದಿ ಹೇಳಿದ್ದಾರೆ.

''ಇಂದಿನ ದಿನಮಾನಗಳಲ್ಲಿ ನೀವು ಟಿ20 ವಿಶ್ವಕಪ್ ಪಂದ್ಯಗಳನ್ನು ನೋಡಿರಬಹುದು. ಹೀಗೆ ಪಂದ್ಯ ನೋಡುತ್ತಿರುವಾಗ ಖಂಡಿತವಾಗಿಯೂ ಒಬ್ಬ ವಿಶೇಷ ಆಟಗಾರನ ಕಡೆಗೆ ನೀವು ಗಮನ ಹರಿಸಿರುತ್ತೀರಿ. ಜೆರ್ಸಿ ಬೇರೆ ಯಾವುದೋ ದೇಶದ್ದಾಗಿರುತ್ತದೆ. ಆದರೆ ಹೆಸರು ಕೇಳಿದೊಡನೆ ಅರೇ, ಈತ ನಮ್ಮ ದೇಶದವ ಎಂದು ತಿಳಿಯುತ್ತದೆ. ಆಗ ಮನದ ಮೂಲೆಯಲ್ಲಿ ಸಣ್ಣ ಖುಷಿಯೊಂದು ಮೈದಳೆಯುತ್ತದೆ'' ಎಂದಿದ್ದಾರೆ ಮೋದಿ .

ಗುಜರಾತ್‌ನ ಮೊನಾಂಕ್ ಪಟೇಲ್‌ಗೂ ಮೆಚ್ಚುಗೆ: ''ಇನ್ನು ಅಮೆರಿಕ ತಂಡದಲ್ಲಿರುವ ಅನೇಕ ಆಟಗಾರರು ಭಾರತದಲ್ಲೇ ಪಳಗಿದವರು. ಅಮೆರಿಕ ನಾಯಕ ಮೊನಾಂಕ್ ಪಟೇಲ್ ಅವರಂತೂ ಗುಜರಾತ್ ಅ-16 ಮತ್ತು ಅ-18 ತಂಡದಲ್ಲೂ ಆಡಿದವರಾಗಿದ್ದಾರೆ. ಮುಂಬೈನ ಸೌರಭ್, ಹರ್ಮಿತ್ ಸಿಂಗ್, ದಿಲ್ಲಿಯ ಮಿಲಿಂದ್ ಕುಮಾರ್ ಇವರೆಲ್ಲರೂ ಅಮೆರಿಕದ ಗೌರವವಾಗಿದ್ದಾರೆ. ಇನ್ನು ಭಾರತ ವಿವಿಧೆಡೆಗಳಲ್ಲಿ ಆಟವಾಡಿರುವ ಅನೇಕರು ಒಮಾನ್ ತಂಡದಲ್ಲಿದ್ದಾರೆ'' ಎಂದು ಪ್ರಧಾನಿ ಮೋದಿ ಸಂತೋಷ ವ್ಯಕ್ತಪಡಿಸಿದ್ದಾರೆ.

ಐರ್ಲೆಂಡ್ ಸುಂದರಿ ಸೋಫಿ ಶೈನ್ ಜೊತೆ ಧವನ್ ವಿವಾಹ

ಮುಂಬೈ: 2023ರಲ್ಲೇ ಆಯೇಷಾ ಮುಖರ್ಜಿ ಜೊತೆಗೆ ವಿಚ್ಛೇದನ ಮಾಡಿಕೊಂಡಿರುವ ಭಾರತೀಯ ಕ್ರಿಕೆಟ್ ತಂಡದ ಮಾಜಿ ಬ್ಯಾಟರ್ ಶಿಖರ್ ಧವನ್ ಶನಿವಾರ 2ನೇ ಮದುವೆ ಮಾಡಿಕೊಂಡಿದ್ದಾರೆ. ತಮ್ಮ ದೀರ್ಘಕಾಲದ ಗೆಳತಿ, ಐರ್ಲೆಂಡ್‌ನ ಸೋಫಿ ಶೈನ್‌ರನ್ನು ವಿವಾಹವಾದರು. ಈ ಜೋಡಿ ಕೆಲವು ವರ್ಷಗಳ ಕಾಲ ಡೇಟಿಂಗ್ ಮಾಡುತ್ತಿತ್ತು. ಧವನ್ ಫೌಂಡೇಶನ್ ಮುಖ್ಯಸ್ಥೆಯೂ ಆಗಿರುವ ಸೋಫಿ, 2025ರಲ್ಲಿ ತಮ್ಮ ಸಂಬಂಧವನ್ನು ಬಹಿರಂಗಪಡಿಸಿದ್ದರು. ದುಬೈನಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿ-2025 ಪಂದ್ಯದ ಸಮಯದಲ್ಲಿ ಧವನ್ ಮತ್ತು ಶೈನ್ ಮೊದಲು ಒಟ್ಟಿಗೆ ಕಾಣಿಸಿಕೊಂಡಿದ್ದರು.

ಐಎಸ್‌ಎಲ್: ಇತ್ತಂಡಗಳಿಂದ ಪೈಪೋಟಿ

ಬೆಂಗಳೂರು, ನಾರ್ಥ್ ಈಸ್ಟ್ ಪಂದ್ಯ 1-1 ರೋಚಕ ಡ್ರಾ

ಬೆಂಗಳೂರು: ಬೆಂಗಳೂರು ಎಫ್‌ಸಿ ಮತ್ತು ನಾರ್ಥ್‌ಈಸ್ಟ್ ಯುನೈಟೆಡ್ ನಡುವೆ ಭಾನುವಾರ ಬೆಂಗಳೂರಿನ ಕಂಠೀರವ ಮೈದಾನದಲ್ಲಿ ನಡೆದ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಭಾರೀ ಪೈಪೋಟಿ ಕಂಡುಬಂತು. ಪಂದ್ಯ 1-1ರಿಂದ ಸಮಗೊಂಡಿತು.

ಬೆಂಗಳೂರು ಎಫ್‌ಸಿ ಪರ ವ್ ಊ ದ್ ಲ ಧ್ ರ್ ದ್ ಲ್ಲಿ ಬ್ರಯಾನ್ ಸ್ಯಾಂಚೆಜ್ ಗಳಿಸಿದ ಚೊಚ್ಚಲ ಗೋಲಿನಿಂದ ತಂಡಕ್ಕೆ ಮುನ್ನಡೆ ಲಭಿಸಿತ್ತು. ಆದರೆ ದ್ವಿತೀಯಾರ್ಧದಲ್ಲಿ ನಾರ್ಥ್‌ಈಸ್ಟ್ ಪರ ಬದಲೀ ಆಟಗಾರನಾಗಿ ಕಣಕ್ಕಿಳಿದ ಲಾಲ್ರಿನ್‌ಜುವಾಲಾ ಲಾಲ್ಬಿಯಾಕ್ನಿಯಾ ಗೋಲು ಗಳಿಸಿ, ಪಂದ್ಯವನ್ನು ಸಮಗೊಳಿಸಿದರು. 68ನೇ ನಿಮಿಷದಲ್ಲಿ ಈ ಗೋಲು ದಾಖಲಾಯಿತು. ಪಂದ್ಯ ಮುಕ್ತಾಯದ ಹಂತ ತಲುಪುತ್ತಿದ್ದಂತೆ ತಂಡಗಳು ಗೆಲುವಿಗಾಗಿ ಜಿದ್ದಾಜಿದ್ದಿನ ಹೋರಾಟ ನಡೆಸಿದವು. ಆದರೆ ಯಾವುದೇ ತಂಡಕ್ಕೆ ಹೆಚ್ಚುವರಿ ಗೋಲು ಸಿಗಲಿಲ್ಲ.

ಬಾಲಿವುಡ್‌ನಲ್ಲಿ ಪ್ರಿಯಾಂಕಾ

ನಟಿ ಪ್ರಿಯಾಂಕ ಚೋಪ್ರಾ, ಹಿಂದಿಯ ಹಲವು ಹಿಟ್ ಸಿನಿಮಾಗಳಲ್ಲಿ ನಟಿಸಿದ್ದರು. ಬಾಲಿವುಡ್ ನಲ್ಲಿ ಬೇಡಿಕೆಯ ನಟಿಯಾಗಿದ್ದಾಗಲೇ ಹಾಲಿವುಡ್ ಅಂಗಳಕ್ಕೆ ಹಾರಿದರು. ನಿಕ್ ಜೋನಸ್ ಅವರನ್ನು ವಿವಾಹವಾಗಿ ಅಮೇರಿಕಾದಲ್ಲಿಯೇ ನೆಲೆಸಿದರು. ಅಲ್ಲಿ ಹಲವು ಹಾಲಿವುಡ್ ಸಿನಿಮಾಗಳಲ್ಲಿ ನಟಿಸಿ ಪ್ರಸಿದ್ಧಿ ಪಡೆದರು. ಈಗ ರಾಜಮೌಳಿ ನಿರ್ದೇಶನದ ವಾರಣಾಸಿ ಸಿನಿಮಾದಲ್ಲಿ ಪಿಗ್ಗಿ ನಾಯಕಿಯಾಗಿ ನಟಿಸುವ ಮೂಲಕ ಮತ್ತೆ ಭಾರತೀಯ ಚಿತ್ರರಂಗಕ್ಕೆ ಮರಳಿ ಬಂದಿದ್ದಾರೆ. ಅದು ಪ್ರಿಯಾಂಕಾ ಅಭಿಮಾನಿಗಳಿಗೂ ಖುಷಿಕೊಟ್ಟಿದೆ.

ಮಹೇಶ್ ಬಾಬು ನಾಯಕನಾಗಿ ನಟಿಸುತ್ತಿರುವ ಈ ಚಿತ್ರದಲ್ಲಿ ಪ್ರಿಯಾಂಕಾ ಸಾಹಸ ಪ್ರಧಾನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಹಿಂದೆಯೇ ಬಿಡುಗಡೆಯಾಗಿದ್ದ ಪ್ರಿಯಾಂಕಾ ಫಸ್ಟ್ ಲುಕ್ ಕುತೂಹಲ ಮೂಡಿಸಿದೆ. ವಾರಾಣಾಸಿ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ.

ಈ ಚಿತ್ರದ ಮೂಲಕ ಭಾರತೀಯ ಚಿತ್ರರಂಗಕ್ಕೆ ಮರಳಿರುವುದಕ್ಕೆ ಪ್ರಿಯಾಂಕಾ ಸಂತಸ ವ್ಯಕ್ತಪಡಿಸಿದ್ದಾರೆ. ಇದರ ಜತೆಗೆ ತಾವು ಬಾಲಿವುಡ್ ತೊರೆಯಲು ಕಾರಣ ಏನು ಎಂಬುದನ್ನು ತಿಳಿಸಿದ್ದಾರೆ. ನಾನು ಹಿಂದಿಯ ಹಲವು ಸಿನಿಮಾಗಳಲ್ಲಿ ನಟಿಸುತ್ತಿದ್ದೆ. ಆ ವೇಳೆಗೆ ಮತ್ತಷ್ಟು ಅವಕಾಶಗಳನ್ನು ಹುಡುಕುವ ಮನಸಾಯಿತು. ಆಗ ಹಾಲಿವುಡ್ ನತ್ತ ಮುಖ ಮಾಡಿದೆ. ಅಲ್ಲಿಯೂ ಹಲವು ಸಿನಿಮಾಗಳಲ್ಲಿ ನಟಿಸುವ ಅವಕಾಶಗಳು ಸಿಕ್ಕಿವೆ. ಹಾಲಿವುಡ್‌ನಲ್ಲಿ ಒಳ್ಳೆಯ ಸಿನಿಮಾದ ಭಾಗವಾಗಿರುವುದಕ್ಕೆ ಸಂತಸ ತಂದಿದೆ. ಆದರೂ ಭಾರತೀಯ ಚಿತ್ರರಂಗದತ್ತಲೇ ನನ್ನ ಮನಸು ಸೆಳೆಯುತ್ತಿದೆ. ಈಗ ವಾರಣಾಸಿ ಸಿನಿಮಾದ ಮೂಲಕ ಮತ್ತೆ ಭಾರತೀಯ ಚಿತ್ರರಂಗಕ್ಕೆ ಮರಳಿರುವುದು ಖುಷಿ ಕೊಟ್ಟಿದೆ ಎಂದು ಪ್ರಿಯಾಂಕಾ ಸಂತಸ ವ್ಯಕ್ತಪಡಿಸಿದ್ದಾರೆ.

ಭಾರತೀಯ - ಭಾರತೀಯ - ಕ್ರಿಶ್ 3 ಯಲ್ಲಿ ಪಿಗ್ಗಿ: ಹೃತಿಕ್ ರೋಷನ್ ಅಭಿನಯದ ಕ್ರಿಶ್ 3 ಇನ್ನೇನು ಸೆಟ್ಟೇರಲಿದೆ. ಈ ಚಿತ್ರದಲ್ಲಿ ಪ್ರಿಯಾಂಕಾ ನಟಿಸುವುದು ಬಹುತೇಕ ಖಚಿತವಾಗಿದೆ. ಈಗಾಗಲೇ ಕಥೆ ಸಿದ್ಧವಾಗಿದ್ದು, ಪಿಗ್ಗಿ ಕಥೆ ಕೇಳಿ ಮೆಚ್ಚಿಕೊಂಡಿದ್ದಾರೆ. ಹೃತಿಕ್ ರೋಷನ್ ನಾಯಕನಾಗಿ ನಟಿಸುವ ಜತೆಗೆ ಚಿತ್ರವನ್ನು ನಿರ್ದೇಶನ ಮಾಡಲಿದ್ದಾರೆ. ಹಾಗಾಗಿ ಪ್ರಿಯಾಂಕಾ ಮತ್ತೊಮ್ಮೆ ಮೋಡಿ ಮಾಡಲು ಸಜ್ಜಾಗಿದ್ದಾರೆ.

ಬೆಳ್ಳಿತೆರೆಗೆ ಭೀಮಾತೀರದ ಹಂತಕರು

ಭೀಮಾತೀರದ ಗ್ರಾಮದಲ್ಲಿ ನಡೆದ ಘನಘೋರ ರಕ್ತಚರಿತ್ರೆಯನ್ನು ಸಿನಿಮಾ ರೂಪದಲ್ಲಿ ತೆರೆಗೆ ಬರಲಿದೆ. ಸಂತೆಯಲ್ಲಿ ನಿಂತ ಕಬೀರ, ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಮುಂತಾದ ಚಿತ್ರಗಳನ್ನು ನಿರ್ದೇಶನ ಮಾಡಿರುವ ನರೇಂದ್ರಬಾಬು ಈ ಚಿತ್ರದ ಸಾರಥ್ಯ ವಹಿಸಿಕೊಂಡಿದ್ದಾರೆ.

ಭೀಮಾತೀರದ ಹಂತಕರು ಪತ್ರಕರ್ತ ರವಿ ಬೆಳಗೆರೆ ರಚಿತ ಕೃತಿಯಾಗಿದ್ದು ಇದೇ ಪುಸ್ತಕವನ್ನಾಧರಿಸಿ ಬಾಬು ಈ ಚಿತ್ರವನ್ನು ಕಟ್ಟಿಕೊಡಲು ಹೊರಟಿದ್ದಾರೆ. ಭಾವನಾ ಬೆಳಗೆರೆ ಈ ಚಿತ್ರದಲ್ಲಿ ಪತ್ರಕರ್ತೆಯಾಗಿ ನಟಿಸುತ್ತಿದ್ದಾರೆ. ನಟ ಲಿಖಿತ್, ಚಂದಪ್ಪ ಹರಿಜನ ಪಾತ್ರ ಮಾಡುತ್ತಿದ್ದಾರೆ. ಉಳಿದಂತೆ ಜಯವರ್ಧನ, ಸಯ್ಯಾಜಿ ಶಿಂಧೆ, ಶರತ್ ಲೋಹಿತಾಶ್ವ, ಸೋನು ಸೂದ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಶ್ರೀ ಗವಿ ರಂಗನಾಥಸ್ವಾಮಿ ಪಿಕ್ಚರ್ಸ್ ಹಾಗೂ ಆಂಜನೇಯ ಪ್ರೊಡಕ್ಷನ್ಸ್ ನಲ್ಲಿ ಶ್ರುತಿ ಅನಿಲ್ ಕುಮಾರ್ ಹಾಗೂ ಸುಮಾ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ.

ಶತಮಾನದಿಂದಲೂ ಭೀಮಾ ತ್ವೀರದಲ್ಲಿ ಯುದ್ಧಗಳು ನಡೆಯುತ್ತಲೇ ಇದೆ. ಒಂದು ಸಣ್ಣ ಬದುವಿಗೋಸ್ಕರ ಚಂದಪ್ಪ ಹರಿಜನ ಹಾಗೂ ಕೇಶಪ್ಪ ತಾವರಖೇಡ ಕುಟುಂಬಗಳ ನಡುವೆ ಶುರುವಾಗುವ ಗಲಾಟೆ, ದೊಡ್ಡ ಮಟ್ಟದಲ್ಲಿ ಮುಂದುವರಿದುಕೊಂಡು ಹೋಗಿ ಘೋರ ಕೊಲೆಗಳೇ ನಡೆದು ಹೋಗುತ್ತವೆ. ರವಿ ಬೆಳಗೆರೆ ಅವರು ಘಟನೆ ನಡೆದ ಸ್ಥಳಕ್ಕೇ ಹೋಗಿ ವಸ್ತುಸ್ಥಿತಿ ಅಧ್ಯಯನ ಮಾಡಿ ಬರೆದ ಕೃತಿಯನ್ನು ಯಥಾವತ್ತಾಗಿ ತೆರೆಯ ಮೇಲೆ ತರುತ್ತಿದ್ದೇವೆ. ಈ ಚಿತ್ರವನ್ನು ಎರಡು ಭಾಗದಲ್ಲಿ ತೆರೆಗೆ ಬರಲಿದೆ. ಮೊದಲ ಭಾಗದ ಸ್ಕ್ರಿಪ್ಟ್ ಈಗಾಗಲೇ ಸಿದ್ಧವಾಗಿದೆ. ಸದ್ಯದಲ್ಲಿಯೇ ಚಿತ್ರೀಕರಣ ಆರಂಭವಾಗಲಿದೆ ಎಂದು ನಿರ್ದೇಶಕ ನರೇಂದ್ರ ಬಾಬು ಹೇಳಿದರು.

ಈ ಚಿತ್ರದಲ್ಲಿ ನಾನು ಪತ್ರಕರ್ತೆಯ ಪಾತ್ರ ನಿರ್ವಹಿಸುತ್ತಿದ್ದೇನೆ. ಹಿಂದೆ ಬಂದಿದ್ದ ಚಿತ್ರಕ್ಕೂ ಈ ಚಿತ್ರಕ್ಕೂ ತುಂಬಾ ವ್ಯತ್ಯಾಸವಿರಲಿದೆ. ಒಂದು ಕಾಲದಲ್ಲಿ ಭೀಮೆಯ ತಟದಲ್ಲಿ ರಕ್ತದೋಕುಳಿಯೇ ಹರಿದಿತ್ತು. ಆ ಘಟನೆಯಲ್ಲಿ ಹಲವರು ಪ್ರಾಣ ಕಳೆದುಕೊಂಡಿದ್ದರು. ಅಪ್ಪ ಬರೆದ ಪುಸ್ತಕದಲ್ಲಿ ಹೇಗಿದೆಯೋ ಹಾಗೆಯೇ ಚಿತ್ರ ಮೂಡಿಬರಬೇಕು ಎಂಬುದು ನನ್ನ ಆಸೆ ಎಂದು ಭಾವನಾ ಬೆಳೆಗೆರೆ ಹೇಳಿದರು.

ಈ ಮೊದಲು ಕಾದಂಬರಿ ಆಧಾರಿತ ಚಿತ್ರ ನಿರ್ಮಿಸಿದ್ದೆವು. ಈಗ ರವಿ ಬೆಳೆಗೆರೆ ಅವರು ರಚಿಸಿರುವ ಕೃತಿ ಆಧರಿಸಿ ಈ ಸಿನಿಮಾ ನಿರ್ಮಾಣವಾಗುತ್ತಿದೆ ಎಂದು ನಿರ್ಮಾಪಕಿ ಸುಮಾ ತಿಳಿಸಿದರು. ಕೆ.ಎಸ್.ಚಂದ್ರಶೇಖರ್ ಛಾಯಾಗ್ರಹಣ, ಲೋಕಿ ತವಸ್ಯ ಸಂಗೀತ ನಿರ್ದೇಶನ, ಹರೀಶ್ ಕೊಮ್ಮೆ ಸಂಕಲನ, ರವಿವರ್ಮ ಸಾಹಸ ನಿರ್ದೇಶನ, ಈ ಚಿತ್ರಕ್ಕಿದೆ.

ಅಂಜನಾದ್ರಿಯಲ್ಲಿ ಜೈ ಹನುಮಾನ್

ಕಾಂತಾರ ಚಾಪ್ಟರ್ 1 ಯಶಸ್ಸಿನ ಬಳಿಕ ರಿಷಬ್ ಶೆಟ್ಟಿ ಜೈ ಹನುಮಾನ್ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿರುವ ಅಂಜನಾದ್ರಿ ಬೆಟ್ಟದಲ್ಲಿ ಚಿತ್ರದ ಮುಹೂರ್ತ ಸಮಾರಂಭ ನೆರವೇರಿತು.

ಟೀ ಸಿರೀಸ್ ಮುಖ್ಯಸ್ಥ ಭೂಷಣ್ ಕುಮಾರ್ ಚಿತ್ರಕ್ಕೆ ಕ್ಲ್ಯಾಪ್ ಮಾಡಿದರು. ವಿತರಕ ಅನಿಲ್ ಥಡಾನಿ ಕ್ಯಾಮೆರಾಗೆ ಚಾಲನೆ ನೀಡಿದರು. ನಿರ್ಮಾಪಕರಾದ ನವೀನ್ ಯೆರ್ನೇನಿ ಮತ್ತು ವೈ ರವಿ ಶಂಕರ್, ನಟ ತೇಜ್ ಸಜ್ಜಾ ಮುಹೂರ್ತ ಸಮಾರಂಭದಲ್ಲಿ ಭಾಗಿಯಾಗಿದ್ದರು. ಹನುಮ ಹುಟ್ಟಿದ ಸ್ಥಳ ಅಂಜನಾದ್ರಿಯಲ್ಲಿಯೇ ಜೈ ಹನುಮಾನ್ ಸಿನಿಮಾಗೆ ಪೂಜೆ ಮಾಡಿರುವುದು ವಿಶೇಷ.

ಎರಡು ವರ್ಷಗಳ ಹಿಂದೆ ಹನುಮಾನ್ ಚಿತ್ರವನ್ನು ನಿರ್ದೇಶಿಸಿದ್ದ ಪ್ರಶಾಂತ್ ವರ್ಮ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ತೆಲುಗು ಚಿತ್ರರಂಗದ ಪ್ರಸಿದ್ಧ ನಿರ್ಮಾಣ ಸಂಸ್ಥೆ ಮೈತ್ರಿ ಮೂವಿ ಮೇಕರ್ಸ್‌ನಲ್ಲಿ ನವೀನ್ ಯೆರ್ನೇನಿ ಮತ್ತು ವೈ ರವಿ ಶಂಕರ್ ಈ ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದಾರೆ. ಈಗ ರಿಷಬ್ ಶೆಟ್ಟಿ ಅವರ ಜೈ ಹನುಮಾನ್ ಸಿನಿಮಾವೂ ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ. ಎಂ.ಎಂ. ಕೀರವಾಣಿ ಸಂಗೀತ ನಿರ್ದೇಶನ, ಎಸ್. ತಿರುನಾವುಕ್ಕರಸು ಛಾಯಾಗ್ರಹಣ, ಶ್ರೀನಾಗೇಂದ್ರ ತಂಗಳ ನಿರ್ಮಾಣ ವಿನ್ಯಾಸ ಚಿತ್ರಕ್ಕಿದೆ. ಶೀಘ್ರದಲ್ಲಿಯೇ ಜೈಹನುಮಾನ್ ಶೂಟಿಂಗ್ ಆರಂಭವಾಗಲಿದೆ. ಈ ಚಿತ್ರದಲ್ಲಿನ ರಿಷಬ್ ಶೆಟ್ಟಿ ಫಸ್ಟ್ ಲುಕ್ ಬಿಡುಗಡೆಯಾಗಿದ್ದು ಕುತೂಹಲ ಮೂಡಿಸಿದೆ.